ಪ್ರಜಾ ವಾ

₹5 ಲಕ್ಷ ಲಂಚ: ಮನೆಯಲ್ಲೂ ಶೋಧ– ಮೂರು ಕಾರು, ಸ್ಥಿರಾಸ್ತಿ ಪತ್ತೆ

ಆರ್‌ಐ ಸೇರಿ ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇತ್ತೀಚೆಗಷ್ಟೇ ನಿರ್ಮಾಣವಾಗಿರುವ ಅಪಾರ್ಟ್‌ಮೆಂಟ್ ಒಂದರಲ್ಲಿನ ಫ್ಲ್ಯಾಟ್‌ಗಳಿಗೆ ಖಾತೆ ಸಂಖ್ಯೆ ನೀಡಲು ₹ 5 ಲಕ್ಷ ಲಂಚ ಪಡೆಯುತ್ತಿದ್ದ ಬಿಬಿಎಂಪಿ ಮಹದೇವಪುರ ವಲಯದ ಕಂದಾಯ ನಿರೀಕ್ಷಕ ನಟರಾಜ್ ಮತ್ತು ಅವರ ಪರವಾಗಿ ಹಣ ಪಡೆದ ಪವನ್ ಎಂಬ ಖಾಸಗಿ ವ್ಯಕ್ತಿಯನ್ನು ಲೋಕಾಯುಕ್ತ ಪೊಲೀಸರು ಶುಕ್ರವಾರ ಮಧ್ಯಾಹ್ನ ಬಂಧಿಸಿದ್ದಾರೆ.

ಮುಕುಂದ್ ಡೆವಲಪರ್ಸ್ ಕಂಪನಿಯು ಕೊಡಿಗೆಹಳ್ಳಿಯಲ್ಲಿ ಬೃಂದಾವನ ಹೆಸರಿನ ಅಪಾರ್ಟ್‌ಮೆಂಟ್ ನಿರ್ಮಿಸಿದೆ. ಅದರಲ್ಲಿನ ಫ್ಲ್ಯಾಟ್‌ಗಳಿಗೆ ಖಾತೆ ಸಂಖ್ಯೆ ಕೋರಿ ಕಂಪನಿಯ ಪರವಾಗಿ ಮಂಜುನಾಥ್ ಎಂಬುವವರು ಅರ್ಜಿ ಸಲ್ಲಿಸಿದ್ದರು. ಪ್ರತಿ ಖಾತಾ ಸಂಖ್ಯೆಗೆ ₹ 10,000ದಂತೆ ₹ 7.90 ಲಕ್ಷ ಲಂಚ ನೀಡುವಂತೆ ಕಂದಾಯ ನಿರೀಕ್ಷಕ ಬೇಡಿಕೆ ಇಟ್ಟಿದ್ದರು.

₹ 5 ಲಕ್ಷವನ್ನು ಮುಂಗಡವಾಗಿ ಕೊಡುವಂತೆ, ಉಳಿದ ₹ 2.90 ಲಕ್ಷವನ್ನು ಖಾತಾ ಸಂಖ್ಯೆ ನೀಡಿದ ಬಳಿಕ ತಲುಪಿಸುವಂತೆ ಆರೋಪಿ ಸೂಚಿಸಿದ್ದರು. ಈ ಕುರಿತು ಮಂಜುನಾಥ್ ಲೋಕಾಯುಕ್ತದ ಬೆಂಗಳೂರು ನಗರ ಪೊಲೀಸ್ ಘಟಕಕ್ಕೆ ದೂರು ನೀಡಿದ್ದರು.

ನಟರಾಜ್ ಮನೆಯಲ್ಲಿ ಪತ್ತೆಯಾಗಿರುವ ಚಿನ್ನಾಭರಣ

ಪವನ್

ನಟರಾಜ್

‘ಬಿಬಿಎಂಪಿಯ ಮಹದೇವಪುರ ವಲಯ ಕಚೇರಿಗೆ ಶುಕ್ರವಾರ ಮಧ್ಯಾಹ್ನ ₹ 5 ಲಕ್ಷ ತಲುಪಿಸುವಂತೆ ನಟರಾಜ್ ಸೂಚಿಸಿದ್ದರು. ಮಧ್ಯಾಹ್ನ ಅಲ್ಲಿಗೆ ತೆರಳಿದ ಮಂಜುನಾಥ್, ಕಂದಾಯ ನಿರೀಕ್ಷಕರನ್ನು ಭೇಟಿ ಮಾಡಿದರು. ಕಚೇರಿಯಲ್ಲಿದ್ದ ಪವನ್ ಎಂಬ ಖಾಸಗಿ ವ್ಯಕ್ತಿಗೆ ಹಣ ನೀಡುವಂತೆ ಸೂಚಿಸಿದರು. ದೂರುದಾರರಿಂದ ಹಣ ಪಡೆದ ಖಾಸಗಿ ವ್ಯಕ್ತಿ ಅದನ್ನು ನಟರಾಜ್‌ಗೆ ತಲುಪಿಸಿದ. ತಕ್ಷಣ ದಾಳಿಮಾಡಿದ ತನಿಖಾ ತಂಡ ಇಬ್ಬರನ್ನೂ ಬಂಧಿಸಿತು’ ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

ಮನೆಯಲ್ಲೂ ಶೋಧ: ಬಂಧನದ ಬಳಿಕ ಗಿರಿನಗರ ಸಮೀಪದ ಆವಲಹಳ್ಳಿಯಲ್ಲಿರುವ ನಟರಾಜ್ ಮನೆ ಮೇಲೂ ದಾಳಿ ನಡೆಸಿದ ಲೋಕಾಯುಕ್ತ ಪೊಲೀಸರು ಶೋಧ ನಡೆಸಿದರು. 900 ಗ್ರಾಂ. ಚಿನ್ನ, 7 ಕೆ.ಜಿ. ಬೆಳ್ಳಿ, ಔಡಿ, ಇನ್ನೋವಾ ಕ್ರಿಸ್ಟಾ, ಹುಂಡೈ ವರ್ಣಾ ಮತ್ತು ಕಿಯಾ ಸಾನೆಟ್ ಕಾರುಗಳು ಆರೋಪಿ ಮನೆಯಲ್ಲಿ ಪತ್ತೆಯಾಗಿವೆ.

‘ಆವಲಹಳ್ಳಿಯಲ್ಲಿ ನೆಲ ಅಂತಸ್ತು ಸೇರಿದಂತೆ ನಾಲ್ಕು ಅಂತಸ್ತಿನ ಮನೆ ಇದೆ. ಪತ್ನಿಯ ಹೆಸರಿನಲ್ಲಿ ಕೊಡಿಗೆ-ಹಳ್ಳಿಯಲ್ಲಿ ನಿವೇಶನ ಹೊಂದಿರುವ ದಾಖಲೆಯನ್ನೂ ವಶಕ್ಕೆ ಪಡೆಯಲಾಗಿದೆ’ ಎಂದು ಲೋಕಾಯುಕ್ತ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಶೋಧದ ಮಧ್ಯದಲ್ಲೇ ಬಂಧನ!

ಬಿಬಿಎಂಪಿ ಕಚೇರಿಗಳ ಮೇಲೆ ಗುರುವಾರ ದಾಳಿಮಾಡಿದ್ದ ಲೋಕಾಯುಕ್ತ ಪೊಲೀಸರು, ಶುಕ್ರವಾರವೂ ಶೋಧ ಮುಂದುವರಿಸಿದ್ದರು. ಮಹದೇವಪುರ ವಲಯ ಕಚೇರಿಯಲ್ಲೂ ಶುಕ್ರವಾರ ಶೋಧ ನಡೆಯುತ್ತಿತ್ತು.

ಲೋಕಾಯುಕ್ತ ಪೊಲೀಸರ ತಂಡ ಅಲ್ಲಿರುವ ಮಾಹಿತಿ ಇದ್ದರೂ ನಟರಾಜ್ ಅಲ್ಲಿಗೆ ಬಂದು ಲಂಚದ ಹಣ ಪಡೆದಿದ್ದರು. ಕಚೇರಿ ಶೋಧದ ಮಧ್ಯದಲ್ಲೇ ಈ ಕಾರ್ಯಾಚರಣೆ ನಡೆಸಿ ಇಬ್ಬರನ್ನು ಬಂಧಿಸಲಾಗಿದೆ ಎಂದು ಲೋಕಾಯುಕ್ತ ಪೊಲೀಸ್ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಬಿಬಿಎಂಪಿ ವಾರ್ಡ್‌ಗಳ ಸಂಖ್ಯೆ 225

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವಾರ್ಡ್‌ಗಳ ಸಂಖ್ಯೆಯನ್ನು 243ರಿಂದ 225ಕ್ಕೆ ಇಳಿಸಿ ಸರ್ಕಾರ ಶುಕ್ರವಾರ ಅಧಿಸೂಚನೆ ಹೊರಡಿಸಿದೆ.

2021ರ ಜ.29ರಂದು ಬಿಬಿಎಂಪಿಯ ಸದಸ್ಯರುಗಳ ಸಂಖ್ಯೆಯನ್ನು 243ಕ್ಕೆ ನಿಗದಿಪಡಿಸಿ ಅಧಿಸೂಚನೆ ಹೊರಡಿಸಲಾಗಿತ್ತು. ಇದನ್ನು ತಕ್ಷಣದಿಂದ ಜಾರಿಗೆ ಬರುವಂತೆ ವಾಪಸ್ ಪಡೆದುಕೊಳ್ಳಲಾಗಿದೆ.

ಬಿಬಿಎಂಪಿ ಅಧಿನಿಯಮ-2020ರ 7ನೇ ಪ್ರಕರಣದಂತೆ ಅಧಿಕಾರ ಚಲಾಯಿಸಿ, ತತ್‌ಕ್ಷಣದಿಂದ ಜಾರಿಗೆ ಬರುವಂತೆ ಕಾರ್ಪೊರೇಟರ್‌ಗಳ ಸಂಖ್ಯೆಯನ್ನು 225ಕ್ಕೆ ನಿಗದಿಪಡಿಸಲಾಗಿದೆ.

ವಾರ್ಡ್‌ಗಳ ಪುನರ್ ವಿಂಗಡಣೆಗೆ ಆಯೋಗವನ್ನು ಸರ್ಕಾರ ಜೂನ್ 23ರಂದು ಪುನರ್ ರಚಿಸಿತ್ತು. ಈ ಸಮಿತಿ ಜೂನ್ 25ರಂದು ಮೊದಲ ಸಭೆ ನಡೆಸಿತ್ತು. ನಂತರ ಪ್ರಕ್ರಿಯೆಗಳು ಆಗಿರಲಿಲ್ಲ.

ಈ ಮಧ್ಯೆ ಸಚಿವ ರಾಮಲಿಂಗಾರೆಡ್ಡಿ, ‘ವಾರ್ಡ್‌ಗಳ ಸಂಖ್ಯೆ 225 ಆಗಬಹುದು’ ಎಂದು ಹೇಳಿದ್ದರು. ಇದೀಗ ಅದರಂತೆಯೇ ವಾರ್ಡ್‌ಗಳ ಪುನರ್‌ವಿಂಗಡಣೆ ಆಯೋಗದ ಶಿಫಾರಸು ಇಲ್ಲದೆಯೇ ಸಂಖ್ಯೆಯನ್ನು ಕಡಿಮೆ ಮಾಡಲಾಗಿದೆ.

ಬಿಬಿಎಂಪಿ ಕಾಯ್ದೆಯ ಪ್ರಕಾರ 250 ವಾರ್ಡ್‌ಗಳನ್ನು ರಚಿಸಬಹುದು. ಬಿಜೆಪಿ ಸರ್ಕಾರ 243 ವಾರ್ಡ್‌ಗಳನ್ನು ರಚಿಸಿ ಅಧಿಸೂಚಿಸಿತ್ತು. ಮೀಸಲಾತಿಯನ್ನೂ ನಿಗದಿಮಾಡಿ ಅಧಿಸೂಚಿಸಲಾಗಿತ್ತು. ಆದರೆ, ವಾರ್ಡ್ ಪುನರ್‌ವಿಂಗಣೆ ಅಧಿ-ಸೂಚನೆಯನ್ನು ಪ್ರಶ್ನಿಸಿದ್ದ ಅರ್ಜಿಯನ್ನು ಹೈಕೋರ್ಟ್ 2022ರ ಸೆ.16ರಂದು ವಜಾಗೊಳಿಸಿತ್ತು. ಹೈಕೋರ್ಟ್ ನೀಡಿದ್ದ ಆದೇಶದ ವಿರುದ್ಧ ಬಿ.ಎನ್. ಮಂಜುನಾಥ ರೆಡ್ಡಿ ಮತ್ತು ಇತರರು ಹೈಕೋರ್ಟ್ ವಿಭಾಗೀಯ ಪೀಠದ ಮುಂದೆ ಅರ್ಜಿ ಸಲ್ಲಿಸಿದ್ದರು. ವಿಚಾರಣೆ ಸಂದರ್ಭದಲ್ಲಿ 2023ರ ಜೂನ್ 19ರಂದು ಹೈಕೋರ್ಟ್ ವಾರ್ಡ್‌ಗಳ ಪುನರ್ ವಿಂಗಡಣೆಗೆ 12 ವಾರಗಳ ಕಾಲಾವಕಾಶ ನೀಡಿದೆ.

ಚುನಾವಣೆಗೆ ಸಿದ್ಧ: ಸಿದ್ದರಾಮಯ್ಯ

‘12 ವಾರಗಳ ಒಳಗೆ ವಾರ್ಡ್ ವಿಂಗಡಣೆ ಮಾಡುವಂತೆ ನ್ಯಾಯಾಲಯವು ಆದೇಶ ನೀಡಿತ್ತು. ಬಿಬಿಎಂಪಿ ಚುನಾವಣೆ ನಡೆಸುವಂತೆ ಸಹ ಬಹುತೇಕ ಸೂಚಿಸುತ್ತದೆ. ಹಾಗಾಗಿ ನಾವು ಚುನಾವಣೆ ನಡೆಸಲು ಸಿದ್ಧ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಶುಕ್ರವಾರ ಸುದ್ದಿಗಾರರಿಗೆ ತಿಳಿಸಿದರು.

‘ಸೇಫ್ ಸಿಟಿ’ ಅನುಷ್ಠಾನ: ಬೆಂಗಳೂರು ಮುಂಚೂಣಿ

ಎಫ್‌ಕೆಸಿಸಿಐ ಸಂವಾದದಲ್ಲಿ ಪೊಲೀಸ್ ಕಮಿಷನರ್ ಬಿ.ದಯಾನಂದ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಷ್ಟ್ರದ ಮಹಾನಗರಗಳ ಪೈಕಿ, ಬೆಂಗಳೂರು ನಗರವು ‘ಸೇಫ್ ಸಿಟಿ’ (ಸುರಕ್ಷತಾ ನಗರ) ಯೋಜನೆ ಅನುಷ್ಠಾನದಲ್ಲಿ ಮುಂಚೂಣಿಯಲ್ಲಿದೆ. ಸದ್ಯದಲ್ಲೇ ಈ ಯೋಜನೆ ಅನುಷ್ಠಾನ ಪೂರ್ಣಗೊಳಿಸಿದ ಮೊದಲ ನಗರ ಎನ್ನುವ ಹೆಗ್ಗಳಿಕೆಗೂ ಪಾತ್ರವಾಗಲಿದೆ’ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಹೇಳಿದರು.

ನಗರದಲ್ಲಿ ಶುಕ್ರವಾರ ಕರ್ನಾಟಕ ವಾಣಿಜ್ಯ ಹಾಗೂ ಕೈಗಾರಿಕಾ ಮಹಾಸಂಸ್ಥೆ ಆಯೋಜಿಸಿದ್ದ ಸಂವಾದದಲ್ಲಿ ಅವರು ಮಾತನಾಡಿದರು.

‘ಸೇಫ್ ಸಿಟಿ ಯೋಜನೆ ಅಡಿ ಇದುವರೆಗೂ 4,500 ಸಿಸಿಟಿವಿ ಕ್ಯಾಮೆರಾ ಅಳವಡಿಸಲಾಗಿದೆ. ಮೂರು ಸಾವಿರ ಕ್ಯಾಮೆರಾ ಅಳವಡಿಕೆ ಬಾಕಿ ಇದೆ. ಕೃತಕ ಬುದ್ಧಿಮತ್ತೆ ಕ್ಯಾಮೆರಾ ವ್ಯವಸ್ಥೆ ನೆರವಿನಿಂದ ಸಂಚಾರ ನಿಯಮ ಉಲ್ಲಂಘಿಸಿದ ವಾಹನಗಳ ಫೋಟೊ ತೆಗೆದು ದಂಡ ವಿಧಿಸಲಾಗುತ್ತಿದೆ. ಇನ್ನೂ ಕೆಲವು ಸ್ಥಳಗಳಲ್ಲಿ ಕೃತಕ ಬುದ್ಧಿಮತ್ತೆ ಕ್ಯಾಮೆರಾ ಅಳವಡಿಕೆ ಕೆಲಸಗಳು ಬಾಕಿಯಿದೆ. ಅದನ್ನು ಪೂರ್ಣಗೊಳಿಸಿದರೆ ಬೆಂಗಳೂರು ಈ ಯೋಜನೆ ಅನುಷ್ಠಾನದಲ್ಲಿ ಮೊದಲ ಸ್ಥಾನಕ್ಕೇರಲಿದೆ. ಇತರೆ ಮಹಾನಗರಗಳಲ್ಲಿ ಯೋಜನೆ ಇನ್ನೂ ಟೆಂಡರ್ ಹಂತದಲ್ಲಿವೆ’ ಎಂದು ಹೇಳಿದರು.

‘ಸಮಾಜಘಾತುಕ ಕೃತ್ಯಗಳನ್ನು ಹತ್ತಿಕ್ಕಲು ಬೆಂಗಳೂರು ಪೊಲೀಸರು ಸಮರ್ಥರಿದ್ದಾರೆ. ಉತ್ತಮ ಬೆಂಗಳೂರು ನಿರ್ಮಾಣದತ್ತ ಪೊಲೀಸ್ ಇಲಾಖೆ ಹಲವು ಕ್ರಮ ಕೈಗೊಂಡಿದೆ. ನಗರ ಸುರಕ್ಷಿತವಾಗಿದ್ದರೆ ಮಾತ್ರ ಕೈಗಾರಿಕೆಗಳನ್ನು ಸೆಳೆಯಲು ಸಾಧ್ಯ’ ಎಂದು ಹೇಳಿದರು.

ತಂತ್ರಜ್ಞಾನ ಬಳಕೆ: ನಗರದಲ್ಲಿ ಜನಸ್ನೇಹಿ ಪೊಲೀಸ್ ವ್ಯವಸ್ಥೆಯ ಜತೆಗೆ ತಂತ್ರಜ್ಞಾನವನ್ನೂ ಉತ್ತಮವಾಗಿ ಬಳಸಿಕೊಳ್ಳುತ್ತಿದ್ದೇವೆ. ತಂತ್ರಜ್ಞಾನದ ನೆರವಿನಿಂದ ಸಾಕಷ್ಟು ಪ್ರಕರಣಗಳನ್ನು ಪತ್ತೆ ಮಾಡಲು ಸಾಧ್ಯವಾಗಿದೆ. ಕಂಪನಿಗಳ ದತ್ತಾಂಶ ಕಳವು ಪ್ರಕರಣಗಳು ಹೆಚ್ಚುತ್ತಿವೆ. ದತ್ತಾಂಶ ಕಳವು ಪ್ರಕರಣದ ಆರೋಪಿಗಳ ಪತ್ತೆಗೆ ಸೈಬರ್ ವಿಭಾಗವನ್ನು ಬಲ ಪಡಿಸಲಾಗುತ್ತಿದೆ’ ಎಂದು ಮಾಹಿತಿ ನೀಡಿದರು.

‘ವ್ಯಾಪಾರಿಗಳು ತಮ್ಮ ಮಳಿಗೆಯಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಕೆ ಮಾಡಿಕೊಂಡರೆ ಪ್ರಕರಣಗಳನ್ನು ಸುಲಭವಾಗಿ ಪತ್ತೆ ಮಾಡಲು ಸಾಧ್ಯ. ಪಾದಚಾರಿ ಮಾರ್ಗದಲ್ಲಿ ವಾಹನ ನಿಲುಗಡೆ ಮಾಡಿದ್ದರೆ ತೆರವು ಮಾಡಲಾಗುತ್ತಿದೆ. ಬೀದಿಬದಿ ವ್ಯಾಪಾರಿಗಳ ಕಾಯ್ದೆಯಿದ್ದು, ಅವರ ಬದುಕು ಮುಖ್ಯ. ಎಲ್ಲರಿಗೂ ನ್ಯಾಯ ಸಿಗುವ ರೀತಿಯಲ್ಲಿ ಕ್ರಮ ಕೈಗೊಳ್ಳಲಾಗುವುದು’ ಎಂದು ಭರವಸೆ ನೀಡಿದರು.

ಅಸೋಸಿಯೇಷನ್ ಸಮಿತಿ ಮುಖ್ಯಸ್ಥ ಪಿ.ಎಚ್.ರಾಜ್ ಪುರೋಹಿತ್ ಮಾತನಾಡಿ, ‘ಕೆಲವು ಠಾಣೆಗಳಲ್ಲಿ ಎಫ್‌ಐಆರ್ ದಾಖಲಿಸಲು ಪೊಲೀಸರು ಹಿಂದೇಟು ಹಾಕುತ್ತಿದ್ದಾರೆ. ತಕ್ಷಣವೇ ಎಫ್‌ಐಆರ್ ದಾಖಲಿಸಿದರೆ ಜನರಲ್ಲಿ ಪೊಲೀಸ್ ವ್ಯವಸ್ಥೆಯ ಬಗ್ಗೆ ನಂಬಿಕೆ ಮೂಡಲಿದೆ. ಜೆಸಿ ರಸ್ತೆ, ಚಿಕ್ಕಪೇಟೆ, ಮಲ್ಲೇಶ್ವರದಲ್ಲಿ ಫುಟ್‌ಪಾತ್‌ಗಳನ್ನು ಅತಿಕ್ರಮಿಸಿ ವ್ಯಾಪಾರ ನಡೆಸಲಾಗುತ್ತಿದೆ. ಬೀದಿಬದಿಯ ವ್ಯಾಪಾರಸ್ಥರನ್ನು ತೆರವುಗೊಳಿಸಬೇಕು’ ಎಂದರು.

‘ಉದ್ಯಮಿಗಳು ಜಿಎಸ್‌ಟಿ ಪಾವತಿಸಿಯೇ ವ್ಯಾಪಾರ ನಡೆಸುತ್ತಿದ್ದರೂ ಅನವಶ್ಯಕ ದಾಳಿಗಳು ನಡೆಯುತ್ತಿವೆ. ನೋಟಿಸ್ ಜಾರಿಗೊಳಿಸಿ ದಾಳಿ ನಡೆಸುವ ವ್ಯವಸ್ಥೆ ಜಾರಿಗೆ ಬರಬೇಕು’ ಎಂದು ಕೋರಿದರು.

ಎಫ್‌ಕೆಸಿಸಿಐ ಅಧ್ಯಕ್ಷ ಬಿ.ವಿ. ಗೋಪಾಲ ರೆಡ್ಡಿ ಹಾಜರಿದ್ದರು.

ನಗರ ಪೊಲೀಸ್ ಕಮಿಷನರ್ ಬಿ. ದಯಾನಂದ ಅವರಿಗೆ ಎಫ್‌ಕೆಸಿಸಿಐ ಅಧ್ಯಕ್ಷ ಬಿ.ವಿ.ಗೋಪಾಲ ರೆಡ್ಡಿ ನೆನಪಿನ ಕಾಣಿಕೆ ನೀಡಿದರು. ಹಿರಿಯ ಉಪಾಧ್ಯಕ್ಷ ರಮೇಶ್ ಚಂದ್ರ ಲಾಹೋಟಿ, ಉಪಾಧ್ಯಕ್ಷ ಎಂ.ಜಿ.ಬಾಲಕೃಷ್ಣ ಇದ್ದರು – ಪ್ರಜಾವಾಣಿ ಚಿತ್ರ

‘ಎಫ್‌ಐಆರ್ ದಾಖಲಿಸಿಯೇ ತನಿಖೆ’

‘ಎಲ್ಲ ಸಿವಿಲ್ ಪ್ರಕರಣಗಳಲ್ಲೂ ಎಫ್‌ಐಆರ್ ದಾಖಲಿಸಿಯೇ ತನಿಖೆ ನಡೆಸಬೇಕು ಎಂದು ಸೂಚಿಸಲಾಗಿದೆ. ಪೊಲೀಸ್ ಠಾಣೆಗಳು ಯಾವುದೇ ರೀತಿಯಾದ ಸೆಟಲ್‌ಮೆಂಟ್ ಕೇಂದ್ರಗಳು ಅಲ್ಲ. ನಿಯಮ ಉಲ್ಲಂಘಿಸುವ ಸಿಬ್ಬಂದಿ ವಿರುದ್ಧ ಕಠಿಣ ಕ್ರಮ ಕೈಗೊಳ್ಳುತ್ತೇವೆ’ ಎಂದು ಪೊಲೀಸ್ ಕಮಿಷನರ್ ಎಚ್ಚರಿಸಿದರು.

ಕೇಳಿ ಬಂದ ಅಹವಾಲುಗಳು...

- ಕೈಗಾರಿಕಾ ವಲಯದಲ್ಲಿ ಹೆಚ್ಚಿನ ಭದ್ರತೆ ಕಲ್ಪಿಸಬೇಕು. ವಸತಿಯುತ ಪ್ರದೇಶದಲ್ಲಿ ಪೊಲೀಸ್ ಗಸ್ತು ಹೆಚ್ಚಿಸಬೇಕು.
- ಸಿಟಿ ಮಾರುಕಟ್ಟೆ ಪ್ರದೇಶದಲ್ಲಿ ಪಾದಚಾರಿಗಳು ಮಾರ್ಗಗಳು ಒತ್ತುವರಿಯಾಗಿವೆ. ಮಳಿಗೆಗಳಲ್ಲಿ ವ್ಯಾಪಾರ ನಡೆಸುವವರಿಗೆ ತೊಂದರೆಯಾಗಿದೆ.
- ಕೆಲವು ಠಾಣೆಗಳಲ್ಲಿ ಸಿವಿಲ್ ಪ್ರಕರಣಗಳನ್ನು ಪೊಲೀಸರೇ ಇತ್ಯರ್ಥ ಪಡಿಸುತ್ತಿದ್ದಾರೆ. ಇದು ತಪ್ಪಬೇಕು. ಎಫ್‌ಐಆರ್ ದಾಖಲಿಸಿಯೇ ತನಿಖೆ ನಡೆಸಬೇಕು.
- ಕೆಲವು ಠಾಣೆಗಳು ಗೋದಾಮುಗಳಂತೆ ಕಾಣಿಸುತ್ತಿವೆ. ಸಿಎಸ್‌ಆರ್ ನಿಧಿಯಡಿ ದುರಸ್ತಿ ಪಡಿಸಬೇಕು.
- ಚಿಕ್ಕಪೇಟೆ, ಮೆಜೆಸ್ಟಿಕ್‌ನಲ್ಲಿ ಭಯದ ವಾತಾವರಣ ಇದೆ. ಈ ಸ್ಥಳದಲ್ಲಿ ಹೆಚ್ಚಿನ ಪೊಲೀಸರನ್ನು ನೇಮಿಸಬೇಕು.
- ಸಂಚಾರ ವಿಭಾಗಕ್ಕೆ ಹಿಂದಿನಂತೆಯೇ ‘ವಿಶೇಷ ಕಮಿಷನರ್’ ನೇಮಿಸಬೇಕು.
- ನಿಯಮಿತವಾಗಿ ಸಾರ್ವಜನಿಕ ಕುಂದುಕೊರತೆ ಸಭೆ ನಡೆಸಬೇಕು. ಎರಡು ತಿಂಗಳಿಗೊಮ್ಮೆ ಉದ್ಯಮಿಗಳ ಜತೆಗೆ ಪೊಲೀಸರು ಸಭೆ ನಡೆಸಬೇಕು.
- ಆರ್‌ಎಂಸಿ ಯಾರ್ಡ್ ಎಪಿಎಂಸಿ ಆವರಣದಲ್ಲಿ ಗಾಂಜಾ ವ್ಯಸನಿಗಳ ಕಾಟ ಹೆಚ್ಚಾಗಿದೆ.

2 ಪೆಗ್ ಮದ್ಯ ಸೇವಿಸಿ ವಾಹನ ಚಾಲನೆಗೆ ಅವಕಾಶಕ್ಕೆ ಮನವಿ

‘ಎರಡು ಪೆಗ್‌ನಷ್ಟು ಮದ್ಯ ಸೇವಿಸಿ ವಾಹನ ಚಾಲನೆಗೆ ಅವಕಾಶ ನೀಡುವಂತೆ’ ಲಿಕ್ಕರ್ ಅಸೋಸಿಯೇಷನ್ ಸದಸ್ಯ ವಾಸನ್ ಅವರು ಕಮಿಷನರ್ ಬಿ.ದಯಾನಂದ ಅವರಿಗೆ ಸಂವಾದದಲ್ಲಿ ಮನವಿ ಮಾಡಿದರು. ಆದರೆ, ಕಮಿಷನರ್ ಈ ಮನವಿ ತಳ್ಳಿ ಹಾಕಿದರು.

ರಾಜಧಾನಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿದೆ. ಸಿಟಿ ನೈಟ್ ಲೈಫ್‌ಗೂ ಪ್ರಸಿದ್ಧಿಯಾಗಿದೆ. ಸರ್ಕಾರಕ್ಕೆ ವಾಣಿಜ್ಯ ತೆರಿಗೆ ಹೊರತುಪಡಿಸಿ ಅಬಕಾರಿ ಇಲಾಖೆಯಿಂದ ಹೆಚ್ಚು ಆದಾಯ ಬರುತ್ತಿದೆ. ವಾಹನ ಚಾಲಕರಿಗೆ ಪೊಲೀಸರ ಭಯವಿದೆ. ಇದರಿಂದ ಮದ್ಯ ಮಾರಾಟ ಸಾಕಷ್ಟು ಕುಂಠಿತವಾಗಿದ್ದು, ಎರಡು ಪೆಗ್ ಮದ್ಯ ಸೇವಿಸಲು ವಾಹನ ಚಾಲನೆಗೆ ಅವಕಾಶ ನೀಡುವಂತೆ ಕೋರಿದರು.

ಬಿಬಿಎಂಪಿ ಬಿಲ್ ಪಾವತಿ ವಿಳಂಬ ಕಾಮಗಾರಿ ಸ್ಥಗಿತದ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಮಗಾರಿ ಪೂರ್ಣಗೊಂಡಿರುವ ಬಿಲ್‌ಗಳ ಹಣ ಪಾವತಿ ಮಾಡಲು ಬಿಬಿಎಂಪಿ ವಿಳಂಬ ಮಾಡುತ್ತಿರುವುದನ್ನು ವಿರೋಧಿಸಿ ಪ್ರಗತಿಯಲ್ಲಿರುವ ಎಲ್ಲ ಕಾಮಗಾರಿಗಳನ್ನೂ ಸ್ಥಗಿತಗೊಳಿಸುವುದಾಗಿ ಬಿಬಿಎಂಪಿ ಗುತ್ತಿಗೆದಾರರ ಸಂಘ ಮತ್ತೊಮ್ಮೆ ಎಚ್ಚರಿಕೆ ನೀಡಿದೆ.

ಬಾಕಿ ಬಿಲ್ ಪಾವತಿಸುವಂತೆ ಒತ್ತಾಯಿಸಿ ಜೂನ್‌ನಲ್ಲಿ ಕಾಮಗಾರಿ ನಿಲ್ಲಿಸುವುದಾಗಿ ಸಂಘ ಹೇಳಿತ್ತು. ನಂತರ ಜುಲೈ 15ರಿಂದ ಸ್ಥಗಿತಗೊಳಿಸುವುದಾಗಿ ತಿಳಿಸಿತ್ತು. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡಿದ ನಂತರ, ಪ್ರತಿಭಟನೆ, ಕಾಮಗಾರಿ ಸ್ಥಗಿತ ಯಾವುದನ್ನೂ ಮಾಡುವುದಿಲ್ಲ ಎಂದು ಜುಲೈ 22ರಂದು ಹೇಳಿದ್ದರು. ಆದರೆ, ಡಿಸಿಎಂ ಭರವಸೆಯೂ ಈಡೇರಲಿಲ್ಲ. ಬಾಕಿ ಬಿಲ್ ಪಾವತಿಯಾಗದ್ದರಿಂದ ಮತ್ತೆ ಎಲ್ಲ ಕಾಮಗಾರಿಗಳನ್ನು ಆ.7ರಿಂದ ಸ್ಥಗಿತಗೊಳಿಸುವುದಾಗಿ ಸಂಘ ತಿಳಿಸಿದೆ.

‘ಬಿಬಿಎಂಪಿ ಬಾಕಿ ಬಿಲ್ ಪಾವತಿ ಮಾಡದೇ ಹಣ ಪಾವತಿ ವಿಳಂಬ ಮಾಡುತ್ತಿರುವ ಕಾರಣ ಸೋಮವಾರದಿಂದ ಎಲ್ಲ ವಿಭಾಗಗಳ ವ್ಯಾಪ್ತಿಯಲ್ಲಿ ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ಸ್ಥಗಿತಗೊಳಿಸಲು ಗುತ್ತಿಗೆದಾರರು ನಿರ್ಧರಿಸಿದ್ದಾರೆ. ಹಣ ಬಿಡುಗಡೆ ಮಾಡುವವರೆಗೂ ಎಲ್ಲಾ ಕಾಮಗಾರಿಗಳೂ ಸಂಪೂರ್ಣ ಸ್ಥಗಿತಗೊಳಿಸಲಾಗುವುದು’ ಎಂದು ಬಿಬಿಎಂಪಿ ಗುತ್ತಿಗೆದಾರರ ಸಂಘದ ಪ್ರಕಟಣೆ ತಿಳಿಸಿದೆ.

ವರದಿಯಿಂದ ಇನ್ನಷ್ಟು ವಿಳಂಬ: ಬಿಬಿಎಂಪಿ ಕಾಮಗಾರಿಗಳ ಕುರಿತಂತೆ ಟೆಂಡರ್, ಕಾಮಗಾರಿ, ರನ್ನಿಂಗ್ ಬಿಲ್, ಕೆಲಸ ಪೂರ್ಣಗೊಂಡಿರುವ ಬಗ್ಗೆ 2019ರಿಂದ ಎಲ್ಲ ಕಾಮಗಾರಿಗಳ ಮಾಹಿತಿಯನ್ನು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕೇಳಿದ್ದಾರೆ. ಆ.15ರೊಳಗೆ ವರದಿ ಸಲ್ಲಿಸಲು ಸೂಚಿಸಿದ್ದಾರೆ.

ಪ್ರತಿಯೊಂದು ಕಾಮಗಾರಿಯ 26 ಮಾಹಿತಿಯನ್ನು ಪರಿಶೀಲಿಸಿದ ನಂತರ ಬಿಲ್ ಪಾವತಿಯ ಪ್ರಕ್ರಿಯೆ ಆರಂಭವಾಗುತ್ತದೆ.

ಕಾಮಗಾರಿಗೆ ಶಿಫಾರಸು ಮಾಡಿದವರು ಯಾರು, ಸ್ಥಳ ಪರಿಶೀಲನೆ, ತಾಂತ್ರಿಕ ವರದಿ ದಿನಾಂಕ, ತಯಾರಿಸಿದವರು, ಯೋಜನಾ ವರದಿ ತಯಾರಿಸಿದ ಸಮಾಲೋಚಕರು, ಡಿಪಿಆರ್, ಟೆಂಡರ್‌ಗೆ ನೀಡಿದ ಕಾಲಾವಕಾಶ, ಪೂರಕ ನಕ್ಷೆ, ವಿವರಣೆ, ತಾಂತ್ರಿಕ ವರದಿ, ವಿನ್ಯಾಸ, ಇವುಗಳಿಗೆ ಅನುಮೋದನೆ ನೀಡಿದ ಅಧಿಕಾರಿ, ರಸ್ತೆ ಇತಿಹಾಸ ಪುಸ್ತಕದಲ್ಲಿ ಮಾಹಿತಿ ನಮೂದಿಸಿರುವುದು, ದೋಷಮುಕ್ತ ಅಥವಾ ನಿರ್ವಹಣೆ ಅವಧಿಯಲ್ಲಿರುವ ರಸ್ತೆಯ ಕಾಮಗಾರಿ, ಕಾಲುವೆಗಳಲ್ಲಿ ಹೂಳು ವಿಲೇವಾರಿ, ಮುಖ್ಯ ಹಾಗೂ ಉಪಮುಖ್ಯ ರಸ್ತೆಗಳ ಯೋಜನಾ ವರದಿ ಮೊದಲು ಕೈಗೊಂಡಿರುವ ಮಾನದಂಡಗಳು, ಐಆರ್‌ಸಿ ಪ್ರಕಾರ ನಿರ್ಮಾಣವಾಗಿರುವ ವರದಿ, ಚರಂಡಿ ವಿನ್ಯಾಸಗಳನ್ನು ತಯಾರಿಸಿದವರು, ಅದಕ್ಕೆ ಅನುಮೋದನೆ ನೀಡಿದವರ ಹೆಸರು, ಪದನಾಮವನ್ನು ದಿನಾಂಕ ಸಹಿತ ನೀಡುವಂತೆ ಡಿಸಿಎಂ ಕೇಳಿದ್ದಾರೆ.

ಟೆಂಡರ್ ಪ್ರಕ್ರಿಯೆಯಲ್ಲಿ ಅವುಗಳ ಅವಧಿ, ಬಿಡ್ಡುದಾರರು, ಅನುಮೋದನೆಗಳ ವಿವರ ಪ್ರತ್ಯೇಕವಾಗಿ ಕೇಳಿದ್ದಾರೆ. ಗುತ್ತಿಗೆದಾರರ ಅರ್ಹತೆ, ವಿನಾಯಿತಿ, ನಿಯಮಾವಳಿಯಲ್ಲಿ ಬದಲಾವಣೆ ಮಾಡಿದರುವುದು, ಹೆಚ್ಚುವರಿ ಮೊತ್ತಕ್ಕೆ ಅನುಮೋದನೆ, ಕಾರ್ಯಾದೇಶ, ಕಾಮಗಾರಿ ಪ್ರಾರಂಭ, ಪೂರ್ಣಗೊಳಿಸಿದ ದಿನ, ಅಂತಿಮ ಬಿಲ್ಲು ನೀಡಿದ ವಿವರವನ್ನು ಕೇಳಿದ್ದಾರೆ.

ಕಾಮಗಾರಿಯ ಗುಣಮಟ್ಟವನ್ನು ಯಾವಾಗ, ಯಾವ ಅಧಿಕಾರಿ ಮಾಡಿದ್ದಾರೆ, ಅದರ ವರದಿ, ನಿಯಮಾವಳಿಗಳನ್ನು ಪಾಲಿಸಲಾಗಿದೆಯೇ, ಸ್ಥಳ ಪರಿಶೀಲನೆ ಫೋಟೊ, ವಿಡಿಯೊ, ಡಾಂಬರು ಉಷ್ಣಾಂಶ ಪರೀಕ್ಷೆ ಮಾಡಿದವರು ಯಾರು, ಕಾಮಗಾರಿಗಳ ಆರಂಭದಿಂದ ಕೊನೆಯವರೆಗೆ ನಿರ್ವಹಣೆ ಮಾಡಿದ ಅಧಿಕಾರಿಗಳ ಹೆಸರು ಹಾಗೂ ವಿವರ ನೀಡುವಂತೆ ಡಿಸಿಎಂ ಸೂಚಿಸಿದ್ದಾರೆ.

‘ಈ ಎಲ್ಲ ಮಾಹಿತಿಗಳನ್ನು ಬಿಬಿಎಂಪಿ ಮುಖ್ಯ ಆಯುಕ್ತರು ಆ.15ರೊಳಗೆ ನೀಡುವುದು ಅನುಮಾನ. ಅದಕ್ಕೆ ಸಾಕಷ್ಟು ಸಮಯ ಬೇಕಾಗುತ್ತದೆ. ಅಲ್ಲಿಯವರೆಗೆ ಬಿಲ್ ಪಾವತಿಸುವುದಿಲ್ಲ. ಹೀಗಾಗಿ ನಾವು ಹೋರಾಟ ಮಾಡಲೇಬೇಕಿದೆ’ ಎಂದು ಗುತ್ತಿಗೆದಾರರು ತಿಳಿಸಿದರು.

ಬಿಬಿಎಂಪಿ: ನೂರಾರು ಕಡತ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯ ಕಂದಾಯ ಮತ್ತು ನಗರ ಯೋಜನಾ ಕಚೇರಿಗಳಲ್ಲಿ ಸತತ ಎರಡನೇ ದಿನವೂ ಶೋಧ ನಡೆಸಿರುವ ಲೋಕಾಯುಕ್ತದ ಅಧಿಕಾರಿಗಳು ನೂರಾರು ಕಡತಗಳನ್ನು ವಶಪಡಿಸಿಕೊಂಡಿದ್ದಾರೆ.

ಬಿಬಿಎಂಪಿ ಕಚೇರಿಗಳಲ್ಲಿ ಅವ್ಯವಹಾರ, ಭ್ರಷ್ಟಾಚಾರ ಮತ್ತು ಜನರಿಗೆ ಕಿರುಕುಳದ ಕುರಿತು ವ್ಯಾಪಕ ದೂರುಗಳು ಬಂದಿರುವುದನ್ನು ಆಧರಿಸಿ ಕರ್ನಾಟಕ ಲೋಕಾಯುಕ್ತ ಕಾಯ್ದೆಯಡಿ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ವಿಚಾರಣೆ ಆರಂಭಿಸಿದ್ದಾರೆ. ಅದಕ್ಕೆ ಪೂರಕವಾಗಿ 20ಕ್ಕೂ ಹೆಚ್ಚು ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಬಿಬಿಎಂಪಿಯ 45 ಕಚೇರಿಗಳಲ್ಲಿ ಗುರುವಾರ ಮತ್ತು ಶುಕ್ರವಾರ ನಿರಂತರ ಶೋಧ ನಡೆಸಲಾಗಿದೆ.

ಲೋಕಾಯುಕ್ತದ ನೂರಾರು ಅಧಿಕಾರಿಗಳು ಗುರುವಾರ ಮಧ್ಯಾಹ್ನ ಏಕಕಾಲಕ್ಕೆ 45 ಕಚೇರಿಗಳ ಮೇಲೆ ದಾಳಿಮಾಡಿದ್ದರು. ತನಿಖಾ ಸಂಸ್ಥೆಯ ಪೊಲೀಸ್ ವಿಭಾಗದ ಅಧಿಕಾರಿಗಳ ಜತೆ ನ್ಯಾಯಾಂಗ ವಿಭಾಗದ ಅಧಿಕಾರಿಗಳೂ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಲೋಕಾಯುಕ್ತ ಬಿ.ಎಸ್. ಪಾಟೀಲ ಮತ್ತು ಉಪ ಲೋಕಾಯುಕ್ತ ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ ಕೂಡ ಕೆಲವೆಡೆ ಭೇಟಿನೀಡಿ ಪರಿಶೀಲನೆ ನಡೆಸಿದ್ದರು.

‘ಆಸ್ತಿಗಳಿಗೆ ಖಾತೆ ಸಂಖ್ಯೆ ನೀಡುವುದು, ತೆರಿಗೆ ನಿಗದಿ ಮತ್ತು ಸಂಗ್ರಹ, ಕಟ್ಟಡ ನಕ್ಷೆ ಅನುಮೋದನೆ, ಕಟ್ಟಡ ಸ್ವಾಧೀನತಾ ಪ್ರಮಾಣಪತ್ರ ವಿತರಣೆ ಸೇರಿದಂತೆ ಹಲವು ವಿಷಯಗಳಲ್ಲಿ ವ್ಯಾಪಕ ನಿಯಮ ಉಲ್ಲಂಘನೆ ನಡೆಯುತ್ತಿರುವುದು ಶೋಧದ ವೇಳೆ ಪತ್ತೆಯಾಗಿದೆ. ಅಂತಹ ಎಲ್ಲ ಕಡತಗಳನ್ನೂ ವಶಕ್ಕೆ ಪಡೆಯಲಾಗಿದೆ. ಅವುಗಳನ್ನು ಪರಿಶೀಲಿಸಿದ ಬಳಿಕ ಲೋಕಾಯುಕ್ತರಿಗೆ ವಿಸ್ತೃತವಾದ ವರದಿ ಸಲ್ಲಿಸಲಾಗುವುದು’ ಎಂದು ಲೋಕಾಯುಕ್ತದ ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ.

ಬೃಹತ್ ಸಂಖ್ಯೆಯ ಕಡತಗಳನ್ನು ದೀರ್ಘ ಕಾಲದಿಂದ ಬಾಕಿ ಇರಿಸಿಕೊಂಡಿರುವುದು ಕೆಲವು ಕಚೇರಿಗಳಲ್ಲಿ ಪತ್ತೆಯಾಗಿದೆ. ಅಂತಹ ಕಡತಗಳ ಪಟ್ಟಿಯನ್ನು ತನಿಖಾ ತಂಡಗಳು ಪಡೆದುಕೊಂಡಿವೆ. ವಿಳಂಬದ ಹಿಂದಿನ ಕಾರಣ ಕುರಿತು ಸಂಬಂಧಿಸಿದ ಅಧಿಕಾರಿಗಳ ವಿಚಾರಣೆ ನಡೆಯಲಿದೆ ಎಂದು ಮೂಲಗಳು ಹೇಳಿವೆ.

ಕೆಲವೆಡೆ ನಗದು ವಶ: ಬಹುತೇಕ ಕಚೇರಿಗಳಲ್ಲಿ ಅಧಿಕಾರಿಗಳು ಮತ್ತು ಸಿಬ್ಬಂದಿ ತಮ್ಮ ಬಳಿ ಇರುವ ನಗದು ಘೋಷಣೆ ಮಾಡದಿರುವುದು ಕಂಡುಬಂದಿದೆ. ಕೆಲವು ಕಚೇರಿಗಳಲ್ಲಿ ನಗದು ವಶಕ್ಕೆ ಪಡೆಯಲಾಗಿದೆ. ಪಾಲಿಕೆ ಕಚೇರಿಯೊಂದರ ಆವರಣದಲ್ಲಿದ್ದ ಕಾರಿನಲ್ಲಿ ₹ 60,000 ನಗದು ಪತ್ತೆಯಾಗಿದೆ ಎಂದು ಮೂಲಗಳು ತಿಳಿಸಿವೆ.

ವಶಕ್ಕೆ ಪಡೆದ ದಾಖಲೆಗಳ ಪರಿಶೀಲನೆ ಬಳಿಕ ತನಿಖಾ ತಂಡಗಳು ಲೋಕಾಯುಕ್ತರಿಗೆ ವರದಿ ಸಲ್ಲಿಸಲಿವೆ. ಭ್ರಷ್ಟಾಚಾರ ಮತ್ತು ಅಕ್ರಮಕ್ಕೆ ನೇರ ಸಾಕ್ಷ್ಯವಿರುವ ಪ್ರಕರಣಗಳಲ್ಲಿ ಎಫ್‌ಐಆರ್ ದಾಖಲಿಸಿ ತನಿಖೆ ಆರಂಭಿಸುವ ಸಾಧ್ಯತೆ ಇದೆ. ಉಳಿದ ಪ್ರಕರಣಗಳಲ್ಲಿ ಲೋಕಾಯುಕ್ತ ಕಾಯ್ದೆಯಡಿ ವಿಚಾರಣೆ ಆರಂಭವಾಗಲಿದೆ ಎಂಬ ಮಾಹಿತಿ ಲಭ್ಯವಾಗಿದೆ.

ಮುಖ್ಯಾಂಶಗಳು

- ಲೋಕಾಯುಕ್ತ ಅಧಿಕಾರಿಗಳಿಂದ ಎರಡನೇ ದಿನವೂ ಶೋಧ
- ಕಚೇರಿಯಲ್ಲಿ ಅವ್ಯವಹಾರ, ಭ್ರಷ್ಟಾಚಾರದ ಬಗ್ಗೆ ಸಾರ್ವಜನಿಕರಿಂದ ದೂರು
- ಶೋಧ ವೇಳೆ ಹಲವು ವಿಷಯಗಳಲ್ಲಿ ನಿಯಮ ಉಲ್ಲಂಘನೆ ಪತ್ತೆ

ಎರಡು ತಿಂಗಳ ಒಳಗೆ ಸಭೆ ಕರೆಯಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎರಡು ತಿಂಗಳ ಒಳಗಾಗಿ ಸಭೆ ಕರೆಯುವಂತೆ ಸಹಕಾರ ಸಂಘಗಳ ಜಿಲ್ಲಾ ನೋಂದಣಾಧಿಕಾರಿಗಳು ಬೆಂಗಳೂರು ವಕೀಲರ ಸಾಹಿತ್ಯ ಒಕ್ಕೂಟಕ್ಕೆ ಸೂಚಿಸಿ ಆದೇಶ ನೀಡಿದ್ದಾರೆ.

ವಕೀಲರ ಸಾಹಿತ್ಯ ಕೂಟದಲ್ಲಿ ಸಂಘದ ಉದ್ದೇಶಕ್ಕೆ ಹಣ ಬಳಸದೇ ಹಣ ದುರುಪಯೋಗ ಮಾಡಲಾಗಿದೆ. ಸಂಘಕ್ಕೆ ಪ್ರಧಾನ ಕಾರ್ಯದರ್ಶಿ ಹುದ್ದೆಯನ್ನು ಕಾನೂನು ಬಾಹಿರವಾಗಿ ನೇಮಕ ಮಾಡಲಾಗಿದೆ. ಆದ್ದರಿಂದ, ಸಂಘಕ್ಕೆ ಆಡಳಿತಾಧಿಕಾರಿ ನೇಮಿಸಬೇಕು ಹಾಗೂ ತನಿಖೆ ನಡೆಸಬೇಕು ಎಂದು ವಕೀಲರಾದ ಜೆ.ವಿ.ಶ್ರೀನಿವಾಸ್ ಅವರು ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯ ವಿಚಾರಣೆ ನಡೆಸಲಾಗಿತ್ತು.

ಪ್ರಾಧಿಕಾರಕ್ಕೆ ಸಲ್ಲಿಸಿರುವ ದಾಖಲೆಗಳಲ್ಲಿನ ನ್ಯೂನತೆಗಳನ್ನು ಸರಿಪಡಿಸಿಕೊಂಡು ತುರ್ತಾಗಿ ಸಾಮಾನ್ಯ ಸಭೆಯನ್ನು ಕರೆಯಬೇಕು. 2021–22 ಹಾಗೂ 2022–23ನೇ ಸಾಲಿನ ಸ್ವೀಕೃತಿ ಪತ್ರವನ್ನು ಕರ್ನಾಟಕ ಸಂಘಗಳ ನೋಂದಣಿ ಕಾಯಿದೆ 1960ರ ಕಲಂ 13ರ ಅನ್ವಯ ಪಡೆಯಲು ಸೂಚಿಸಿ ಅರ್ಜಿಯನ್ನು ವಿಲೇ ಮಾಡಲಾಗಿದೆ. ಅರ್ಜಿದಾರರಿಗೆ ಮೇಲ್ಮನವಿ ಸಲ್ಲಿಸಲು ಅವಕಾಶ ನೀಡಲಾಗಿದೆ.

ಶನಿವಾರ, ಆಗಸ್ಟ್ 5, 2023 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪ್ರಚಾರ

ನವದೆಹಲಿಯಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ 'ಅಕೇಲಿ' ಸಿನಿಮಾದ ಪ್ರಚಾರ ಕಾರ್ಯಕ್ರಮದಲ್ಲಿ ಬಾಲಿವುಡ್ ನಟಿ ನುಸ್ರತ್ ಭರೂಚಾ ಪಾಲ್ಗೊಂಡಿದ್ದರು

ಪ್ರಕಟಣೆ: ಇಂಧನ ಇಲಾಖೆ, ಬೆಂಗಳೂರು

ದೇಶದಾದ್ಯಂತ ಕಾಂಗ್ರೆಸ್ ಕಾರ್ಯಕರ್ತರ ಸಂಭ್ರಮ • ಲೋಕಸಭಾ ಸದಸ್ಯತ್ವ ವಿಚಾರ: ವಿಳಂಬ ಧೋರಣೆ ಸರಿಯಲ್ಲ–ಕಾಂಗ್ರೆಸ್

ಸದನಕ್ಕೆ ಹೊರಡಲು 'ಕೈ' ನಾಯಕ ರಾಹುಲ್ ಸನ್ನದ್ಧ

ಪ್ರಕರಣದ ಮೈಲುಗಲ್ಲುಗಳು

- **ಏಪ್ರಿಲ್ 13, 2019:** ಕರ್ನಾಟಕದ ಕೋಲಾರದಲ್ಲಿ ನಡೆದ ಚುನಾವಣಾ ರ್‍ಯಾಲಿಯಲ್ಲಿ ರಾಹುಲ್ ಗಾಂಧಿ ಅವರು, 'ನೀರವ್ ಮೋದಿ, ಲಲಿತ್ ಮೋದಿ ಅಥವಾ ನರೇಂದ್ರ ಮೋದಿ... ಎಲ್ಲಾ ಕಳ್ಳರು ಮೋದಿ ಎಂಬ ಸಾಮಾನ್ಯ ಉಪನಾಮ ಹೊಂದಿರುವುದು ಏಕೆ' ಎಂದು ಪ್ರಶ್ನಿಸಿದ್ದರು
- **ಏಪ್ರಿಲ್ 15, 2019:** ರಾಹುಲ್ ಹೇಳಿಕೆಗೆ ಸೂರತ್‌ನ ಬಿಜೆಪಿ ಶಾಸಕ ಪೂರ್ಣೇಶ್ ಮೋದಿ ಅವರು ಕ್ರಿಮಿನಲ್ ಮಾನನಷ್ಟ ಮೊಕದ್ದಮೆ ದಾಖಲಿಸಿದರು
- **ಜುಲೈ 7, 2019:** ರಾಹುಲ್ ಗಾಂಧಿ ಮೊದಲ ಬಾರಿಗೆ ಸೂರತ್ ಮೆಟ್ರೋಪಾಲಿಟನ್ ನ್ಯಾಯಾಲಯಕ್ಕೆ ಹಾಜರಾದರು
- **ಮಾರ್ಚ್ 23, 2023:** ರಾಹುಲ್ ಗಾಂಧಿ ಅವರನ್ನು ತಪ್ಪಿತಸ್ಥರೆಂದು ಪರಿಗಣಿಸಿ ಸೂರತ್ ಮೆಟ್ರೋಪಾಲಿಟನ್ ನ್ಯಾಯಾಲಯ ಎರಡು ವರ್ಷಗಳ ಜೈಲು ಶಿಕ್ಷೆ ವಿಧಿಸಿತು
- **ಮಾರ್ಚ್ 24, 2023:** ಎರಡು ವರ್ಷಗಳ ಜೈಲು ಶಿಕ್ಷೆಯ ಪರಿಣಾಮ ರಾಹುಲ್ ಲೋಕಸಭಾ ಸದಸ್ಯತ್ವದಿಂದ ಅನರ್ಹಗೊಂಡರು
- **ಏಪ್ರಿಲ್ 2, 2023:** ಮೆಟ್ರೋಪಾಲಿಟನ್ ನ್ಯಾಯಾಲಯದ ಆದೇಶವನ್ನು ರಾಹುಲ್, ಸೂರತ್‌ನ ಸೆಷನ್ಸ್ ನ್ಯಾಯಾಲಯದಲ್ಲಿ ಪ್ರಶ್ನಿಸಿದರು. ಇದರ ವಿಚಾರಣೆ ಇನ್ನೂ ಬಾಕಿ ಇದೆ
- **ಏಪ್ರಿಲ್ 20, 2023:** ಸೂರತ್ ಸೆಷನ್ಸ್ ನ್ಯಾಯಾಲಯ ರಾಹುಲ್‌ಗೆ ಜಾಮೀನು ನೀಡಿತು, ಆದರೆ ಶಿಕ್ಷೆಗೆ ತಡೆ ನೀಡಲು ನಿರಾಕರಿಸಿತು
- **ಏಪ್ರಿಲ್ 25, 2023:** ಕೆಳ ನ್ಯಾಯಾಲಯದ ಆದೇಶದ ವಿರುದ್ಧ ರಾಹುಲ್ ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದರು
- **ಜುಲೈ 7, 2023:** ಶಿಕ್ಷೆಗೆ ತಡೆ ಕೋರಿ ರಾಹುಲ್ ಸಲ್ಲಿಸಿದ್ದ ಮೇಲ್ಮನವಿ ಅರ್ಜಿಯನ್ನು ಗುಜರಾತ್ ಹೈಕೋರ್ಟ್ ವಜಾಗೊಳಿಸಿತು
- **ಜುಲೈ 15, 2023:** ಗುಜರಾತ್ ಹೈಕೋರ್ಟ್‌ನ ಆದೇಶವನ್ನು ಪ್ರಶ್ನಿಸಿ ರಾಹುಲ್, ಸುಪ್ರೀಂ ಕೋರ್ಟ್ ಮೊರೆ ಹೋದರು. ಒಂದು ವೇಳೆ ತೀರ್ಪಿಗೆ ತಡೆ ನೀಡದಿದ್ದರೆ ವಾಕ್ ಸ್ವಾತಂತ್ರ್ಯಕ್ಕೆ ಧಕ್ಕೆಯುಂಟಾಗುತ್ತದೆ ಎಂದು ಅವರು ಅರ್ಜಿಯಲ್ಲಿ ತಿಳಿಸಿದ್ದರು
- **ಜುಲೈ 21, 2023:** ರಾಹುಲ್ ಮೇಲ್ಮನವಿ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, ಪೂರ್ಣೇಶ್ ಮೋದಿ ಮತ್ತು ಗುಜರಾತ್ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಿತು
- **ಆಗಸ್ಟ್ 4, 2023:** ರಾಹುಲ್ ಗಾಂಧಿ ಅವರಿಗೆ ನೀಡಲಾಗಿದ್ದ ಶಿಕ್ಷೆಗೆ ಸುಪ್ರೀಂ ಕೋರ್ಟ್ ತಡೆ ನೀಡಿತು. ಇದು ಅವರ ಲೋಕಸಭಾ ಸದಸ್ಯತ್ವದ ಮರು ಸ್ಥಾಪನೆಗೆ ದಾರಿ ಮಾಡಿಕೊಟ್ಟಿದೆ

ಹೈದರಾಬಾದಿನ ಗಾಂಧಿ ಭವನದ ಬಳಿ ಕಾಂಗ್ರೆಸ್ ಕಾರ್ಯಕರ್ತರು ಶುಕ್ರವಾರ ರಾಹುಲ್ ಗಾಂಧಿ ಅವರ ಕಟೌಟ್‌ಗೆ ಹಾಲಿನ ಅಭಿಷೇಕ ಮಾಡಿ ಸಂಭ್ರಮಿಸಿದರು – ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಲೋಕಸಭಾ ಸದಸ್ಯತ್ವವನ್ನು ಮರು ಸ್ಥಾಪಿಸುವ ವಿಚಾರದಲ್ಲಿ ಸರ್ಕಾರ ವಿಳಂಬ ಧೋರಣೆ ಅನುಸರಿಸಿದರೆ ಅನ್ಯಾಯ ಮಾಡಿದಂತೆ ಆಗುತ್ತದೆ. ಅಲ್ಲದೆ ಸಂಸದೀಯ ಪ್ರಜಾಪ್ರಭುತ್ವದ ಆಶಯಕ್ಕೆ ಸಂಪೂರ್ಣ ವಿರುದ್ಧವಾಗಿ ನಡೆದುಕೊಂಡಂತೆ ಆಗುತ್ತದೆ ಎಂದು ಕಾಂಗ್ರೆಸ್ ಶುಕ್ರವಾರ ದೂರಿದೆ.

ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾಂಗ್ರೆಸ್ ವಕ್ತಾರ ಮತ್ತು ರಾಹುಲ್ ಪರ ವಕೀಲ ಅಭಿಷೇಕ್ ಸಿಂಘ್ವಿ, 'ಶೀಘ್ರದಲ್ಲಿಯೇ ರಾಹುಲ್ ಅವರ ಧ್ವನಿ ಸಂಸತ್ತಿನಲ್ಲಿ ಕೇಳಿ ಬರಲಿದೆ. ಅವರು ದೇಶದ ಜನರ ಒಳಿತಿಗಾಗಿ ಅಲ್ಲಿ ಮಾತನಾಡುತ್ತಾರೆ' ಎಂದರು.

'ರಾಹುಲ್ ಗಾಂಧಿ ಅವರು ನ್ಯಾಯಾಂಗ ಪ್ರಕ್ರಿಯೆಯಲ್ಲಿ ಅನುಕರಣೀಯ ಧೈರ್ಯ, ಸಂಯಮ ಮತ್ತು ನಂಬಿಕೆ ತೋರಿಸಿದ್ದಾರೆ. ಈ ಪ್ರಕರಣದಲ್ಲಿ ಪೂರ್ಣವಾಗಿ ಪ್ರತಿಪಕ್ಷದ ಪ್ರಾಮುಖ್ಯತೆ ಪ್ರದರ್ಶನಗೊಂಡಿದೆ. ಅಲ್ಲದೆ ಯಾವುದೇ ಕಾರಣಕ್ಕೂ ಹಿಂದೆ ಸರಿಯಬಾರದು ಎಂಬ ಬದ್ಧತೆಯನ್ನು ತೋರಿದೆ' ಎಂದು ಅವರು ಹೇಳಿದರು.

'ರೈತರ ಸಮಸ್ಯೆಗಳು ಮತ್ತು ನಿರುದ್ಯೋಗದಂತಹ ಪ್ರಮುಖ ವಿಷಯಗಳಲ್ಲಿ ರಾಹುಲ್ ಅವರ ಧ್ವನಿ ಮಣಿಯುವುದಿಲ್ಲ ಎಂಬುದನ್ನೂ ಇದು ತೋರಿಸಿದೆ' ಎಂದು ಅವರು ತಿಳಿಸಿದರು.

ಎನ್‌ಸಿಪಿ ನಾಯಕ ಮೊಹಮ್ಮದ್ ಫೈಜಲ್‌ಗೆ ಅವರಿಗೆ ಲೋಕಸಭಾ ಸದಸ್ಯತ್ವ ಮರು ಸ್ಥಾಪನೆ ವಿಳಂಬವಾದಂತೆ ರಾಹುಲ್ ಅವರಿಗೂ ವಿಳಂಬವಾದರೆ ಏನು ಮಾಡುತ್ತೀರಿ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಇದಕ್ಕೆ ನೀವು ಹಲವು ನೆಪಗಳನ್ನು ಹೇಳಬಹುದು... ನಾನೂ 10ಕ್ಕು ಹೆಚ್ಚು ನೆಪಗಳನ್ನು ಹೇಳಬಲ್ಲೆ... ಇದು ದುರುದ್ದೇಶವನ್ನು ಪ್ರದರ್ಶಿಸುತ್ತದೆ' ಎಂದರು.

ಫೈಜಲ್ ಅವರ ಅನರ್ಹತೆಯು 10 ವಾರಗಳ ಬಳಿಕ ಹಿಂತೆಗೆದುಕೊಳ್ಳಲಾಗಿತ್ತು. ಅವರು ಮಾರ್ಚ್‌ನಲ್ಲಿ ಲೋಕಸಭೆಗೆ ಮರಳಿದ್ದರು.

ಸ್ಪೀಕರ್ ಕುರಿತು ಕಾನೂನು ಸಚಿವಾಲಯ ಅಭಿಪ್ರಾಯ ಕೇಳಬೇಕೇ ಎಂಬ ಪ್ರಶ್ನೆಗೆ ಸಿಂಘ್ವಿ, 'ಇಲ್ಲ' ಎಂದು ಪ್ರತಿಕ್ರಿಯಿಸಿದರು.

'ತೀರ್ಪಿನ ಪ್ರತಿ ಲೋಕಸಭಾ ಸಚಿವಾಲಯಕ್ಕೆ ಸಲ್ಲಿಸಬೇಕು'

ನವದೆಹಲಿ: ಶಿಕ್ಷೆಗೆ ತಡೆಯಾಜ್ಞೆ ದೊರೆತಿರುವ ಕುರಿತ ಸುಪ್ರೀಂ ಕೋರ್ಟ್ ಆದೇಶದ ಪ್ರತಿಯನ್ನು ರಾಹುಲ್ ಗಾಂಧಿ ಅವರ ಪ್ರತಿನಿಧಿಯು ಲೋಕಸಭಾ ಸಚಿವಾಲಯಕ್ಕೆ ಸಲ್ಲಿಸಬೇಕು ಎಂದು ಲೋಕಸಭೆಯ ಮಾಜಿ ಪ್ರಧಾನಿ ಕಾರ್ಯದರ್ಶಿ ಪಿ.ಡಿ.ಟಿ. ಆಚಾರಿ ತಿಳಿಸಿದರು.

ಸಚಿವಾಲಯವು ಆದೇಶವನ್ನು ಪಡೆದ ನಂತರ, ರಾಹುಲ್ ಅವರ ಅನರ್ಹತೆಯನ್ನು ರದ್ದುಗೊಳಿಸುವ ಕುರಿತ ಅಧಿಸೂಚನೆ ಹೊರಡಿಸುವ ಪ್ರಕ್ರಿಯೆಗೆ ಚಾಲನೆ ದೊರೆಯುತ್ತದೆ ಎಂದು ಪ್ರತಿಕ್ರಿಯಿಸಿದರು.

'ತೆಳುಮಂಜಿನ ಪದರದಂತೆ!'

ನವದೆಹಲಿ (ಪಿಟಿಐ): 'ಸದ್ಯಕ್ಕೆ ಕೊಂಚ ನಿರಾಳ ಎನಿಸಿರಬಹುದು. ಆದರೆ ಕಾಂಗ್ರೆಸ್ ನಾಯಕನ ಸ್ಥಿತಿ ತೆಳುವಾದ ಮಂಜಿನ ಪರದೆಯಂತೆ. ಇವರ ವಿರುದ್ಧ ಇನ್ನೂ ಹಲವು ಮಾನಹಾನಿ ಪ್ರಕರಣಗಳಿವೆ' ಎಂದು ರಾಹುಲ್ ಗಾಂಧಿಗೆ ವಿಧಿಸಿದ್ದ ಶಿಕ್ಷೆಗೆ ಸುಪ್ರೀಂಕೋರ್ಟ್ ತಡೆ ನೀಡಿದ ಬೆಳವಣಿಗೆಗೆ ಸಂಬಂಧಿಸಿದಂತೆ ಬಿಜೆಪಿ ಪ್ರತಿಕ್ರಿಯಿಸಿದೆ.

'ರಾಹುಲ್ ಗಾಂಧಿ ಎಷ್ಟು ದಿನ ಬಚಾವಾಗಬಹುದು? ವೀರ ಸಾವರ್ಕರ್ ಕುಟುಂಬ ದಾಖಲಿಸಿರುವ ಕ್ರಿಮಿನಲ್ ಮಾನನಷ್ಟ ಮೊಕದ್ದಮೆಯೂ ಬಾಕಿಯಿದೆ. ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ತಾಯಿ ಸೋನಿಯಾಗಾಂಧಿ ಜೊತೆ ಜಾಮೀನಿನ ಮೇಲೆ ಹೊರಗಿದ್ದಾರೆ. ಯಾವುದಾದರೊಂದು ಪ್ರಕರಣದಲ್ಲಿ ಶಿಕ್ಷೆಯಾದರೆ ಮತ್ತೆ ಅನರ್ಹರಾಗಲಿದ್ದಾರೆ' ಎಂದು ಬಿಜೆಪಿಯ ಐಟಿ ವಿಭಾಗದ ಮುಖ್ಯಸ್ಥ ಅಮಿತ್ ಮಾಳವೀಯ ಟ್ವೀಟ್ ಮಾಡಿದ್ದಾರೆ.

ಸುಪ್ರೀಂ ಕೋರ್ಟ್‌ನ ಆದೇಶವನ್ನು ಗೌರವಿಸುತ್ತೇವೆ. ಆದರೆ, ಕಾನೂನು ಹೋರಾಟವನ್ನು ಮುಂದುವರಿಸುತ್ತೇವೆ.

ಪೂರ್ಣೇಶ್ ಮೋದಿ
(ರಾಹುಲ್ ಗಾಂಧಿ ವಿರುದ್ಧ ಪ್ರಕರಣ ದಾಖಲಿಸಿದ್ದ ಗುಜರಾತ್ ಬಿಜೆಪಿ ಶಾಸಕ)



ರಾಹುಲ್ ಗಾಂಧಿ ವಿರುದ್ಧದ ನ್ಯಾಯಸಮ್ಮತವಲ್ಲದ ಮಾನನಷ್ಟ ಪ್ರಕರಣದಲ್ಲಿ ಮಧ್ಯಪ್ರವೇಶಿಸಿದ ಸುಪ್ರೀಂ ಕೋರ್ಟ್‌ನ ನಿರ್ಧಾರವನ್ನು ಸ್ವಾಗತಿಸುತ್ತೇನೆ. ಪ್ರಜಾಪ್ರಭುತ್ವ ಮತ್ತು ನ್ಯಾಯಾಂಗ ವ್ಯವಸ್ಥೆ ಮೇಲಿನ ಜನರ ನಂಬಿಕೆಯನ್ನು ಈ ತೀರ್ಪು ಬಲಪಡಿಸಿದೆ. ರಾಹುಲ್ ಮತ್ತು ವಯನಾಡು ಜನತೆಗೆ ಅಭಿನಂದನೆ.

ಅರವಿಂದ ಕೇಜ್ರಿವಾಲ್, ದೆಹಲಿ ಮುಖ್ಯಮಂತ್ರಿ

ರಾಹುಲ್ ಗಾಂಧಿ ಸಂಸತ್ ಸದಸ್ಯತ್ವಕ್ಕೆ ಸಂಬಂಧಿಸಿದ ಸುದ್ದಿ ಕೇಳಿ ಖುಷಿಯಾಗಿದೆ. ಮಾತೃಭೂಮಿಗಾಗಿ ಒಟ್ಟಾಗಿ ಹೋರಾಡುವ ಮತ್ತು ಜಯ ಸಾಧಿಸುವ 'ಇಂಡಿಯಾ'ದ ಸಂಕಲ್ಪಕ್ಕೆ ಬಲ ಸಿಕ್ಕಿದೆ. ಇದು ನ್ಯಾಯಾಂಗದ ಗೆಲುವು.

ಮಮತಾ ಬ್ಯಾನರ್ಜಿ, ಪಶ್ಚಿಮ ಬಂಗಾಳದ ಮುಖ್ಯಮಂತ್ರಿ

ಸೂರ್ಯ, ಚಂದ್ರ ಮತ್ತು ಸತ್ಯ... ಈ ಮೂರು ವಿಷಯಗಳನ್ನು ತುಂಬಾ ದಿನ ಅದುಮಿಡಲು ಸಾಧ್ಯವಿಲ್ಲ– ಗೌತಮ ಬುದ್ಧ; ನ್ಯಾಯಯುತ ತೀರ್ಪು ನೀಡಿದ ಸರ್ವೋಚ್ಚ ನ್ಯಾಯಾಲಯಕ್ಕೆ ಧನ್ಯವಾದಗಳು. ಸತ್ಯಮೇವ ಜಯತೇ.

ಪ್ರಿಯಾಂಕಾ ಗಾಂಧಿ ವಾದ್ರಾ, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ನ್ಯಾಯಾಂಗ ಮೇಲುಗೈ ಸಾಧಿಸಿದೆ. ರಾಹುಲ್ ಗಾಂಧಿಯವರನ್ನು ವಯನಾಡು ಉಳಿಸಿಕೊಂಡಿದೆ. ಸೋದರ ರಾಹುಲ್‌ಗೆ ವಿಧಿಸಿದ್ದ ಶಿಕ್ಷೆಗೆ ತಡೆ ನೀಡಿದ ಸುಪ್ರೀಂ ಕೋರ್ಟ್ ನಿರ್ಧಾರವನ್ನು ನಾನು ಸ್ವಾಗತಿಸುತ್ತೇನೆ. ಈ ತೀರ್ಪು ನ್ಯಾಯಾಂಗದ ಶಕ್ತಿಯ ಮೇಲಿನ ನಮ್ಮ ನಂಬಿಕೆಯನ್ನು ಮತ್ತೆ ದೃಢಪಡಿಸಿದೆ. ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ರಕ್ಷಿಸಬೇಕಾದ ಅಗತ್ಯವನ್ನು ಸಾರಿದೆ.

ಎಂ.ಕೆ ಸ್ಟಾಲಿನ್, ತಮಿಳುನಾಡು ಮುಖ್ಯಮಂತ್ರಿ

ಬಿಜೆಪಿ ಮತ್ತು ಅದರ ಹಿಂಬಾಲಕರಿಗೆ ಇದೊಂದು ಪಾಠವಾಗಲಿ. ನೀವು ಸಂಪೂರ್ಣ ಕೆಟ್ಟದ್ದನ್ನೇ ಮಾಡುತ್ತಿದ್ದರೂ, ನಾವು ಹಿಂದೆ ಸರಿಯುವುದಿಲ್ಲ. ಸರ್ಕಾರವಾಗಿ ಮತ್ತು ಪಕ್ಷವಾಗಿ ನಿಮ್ಮ ವೈಫಲ್ಯಗಳನ್ನು ಜಗತ್ತಿಗೆ ಹೇಳುತ್ತೇವೆ. ಸಾಂವಿಧಾನಿಕ ಆದರ್ಶಗಳನ್ನು ಎತ್ತಿಹಿಡಿಯುವ ಕಾರ್ಯ ಮುಂದುವರಿಸುತ್ತೇವೆ. ನೀವು ನಾಶಮಾಡುತ್ತಿರುವ ಸಂಸ್ಥೆಗಳ ಮೇಲಿನ ನಮ್ಮ ನಂಬಿಕೆ ಬಲವಾಗಲಿದೆ. ಸತ್ಯಮೇವ ಜಯತೇ!"

ಜೈರಾಮ್ ರಮೇಶ್, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ



ನ್ಯಾಯಾಲಯದ ತೀರ್ಪನ್ನು ಸ್ವಾಗತಿಸುತ್ತೇವೆ. ನ್ಯಾಯಕ್ಕೆ ಜಯವಾಗಿದೆ. ಜನರ ಧ್ವನಿ ಅಡಗಿಸಲು ಯಾವುದೇ ಶಕ್ತಿಗೆ ಸಾಧ್ಯವಿಲ್ಲ.

ಕೆ.ಸಿ ವೇಣುಗೋಪಾಲ್, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ಇದು ದ್ವೇಷದ ವಿರುದ್ಧ ಪ್ರೀತಿಗೆ ಸಿಕ್ಕ ಗೆಲುವು. ಸತ್ಯಮೇವ ಜಯತೇ. ಜೈಹಿಂದ್

ಕಾಂಗ್ರೆಸ್ ಟ್ವೀಟ್

ವಯನಾಡಿನಲ್ಲಿ ಕಾರ್ಯಕರ್ತರ ಸಂಭ್ರಮ

ವಯನಾಡ್ (ಪಿಟಿಐ): ಕ್ರಿಮಿನಲ್ ಮಾನನಷ್ಟ ಮೊಕದ್ದಮೆ ಪ್ರಕರಣದಲ್ಲಿ ರಾಹುಲ್ ಗಾಂಧಿ ಅವರಿಗೆ ವಿಧಿಸಲಾಗಿದ್ದ ಶಿಕ್ಷೆಗೆ ಸುಪ್ರೀಂ ಕೋರ್ಟ್ ತಡೆ ನೀಡಿದ ಬೆನ್ನಲ್ಲೇ, ಕೇರಳದ ವಯನಾಡು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರು ಸಿಹಿ ಹಂಚಿ ಸಂಭ್ರಮಿಸಿದರು.

ಲೋಕಸಭಾ ಸಚಿವಾಲಯವು ಆದಷ್ಟು ಬೇಗ ರಾಹುಲ್ ಅವರ ಸದಸ್ಯತ್ವವನ್ನು ಮರು ಸ್ಥಾಪನೆ ಮಾಡುತ್ತದೆ ಎಂಬ ವಿಶ್ವಾಸವನ್ನು ಇಲ್ಲಿನ ಜನರು ವ್ಯಕ್ತಪಡಿಸಿದರು.

'ನಾವು ನಮ್ಮ ನಾಯಕನನ್ನು (ಲೋಕಸಭಾ ಕ್ಷೇತ್ರದ) ವಾಪಸ್ ಪಡೆದಿದ್ದೇವೆ' ಎಂದು ಕಾಂಗ್ರೆಸ್ ಕಾರ್ಯಕರ್ತರು ಹರ್ಷ ವ್ಯಕ್ತಪಡಿಸಿದರು.

'ರಾಹುಲ್ ಅವರಿಗೆ ಅಂತಿಮವಾಗಿ ಸುಪ್ರೀಂ ಕೋರ್ಟ್‌ನಲ್ಲಿ ನ್ಯಾಯ ಸಿಕ್ಕಿದೆ. ಬಿಜೆಪಿಯ ಸೇಡಿನ ರಾಜಕೀಯದ ವಿರುದ್ಧ ಬಂದಿರುವ ತೀರ್ಪು' ಎಂದು ಕಾಂಗ್ರೆಸ್ ಕಾರ್ಯಕರ್ತ ಸಾಲಿಹ್ ಎಂಬುವರು ಪ್ರತಿಕ್ರಿಯಿಸಿದರು.

'ಪ್ರಜಾಪ್ರಭುತ್ವದ ಮೇಲೆ ನಂಬಿಕೆ ಹೊಂದಿರುವ ಎಲ್ಲರಿಗೂ ಸುಪ್ರೀಂ ಕೋರ್ಟ್‌ನ ಈ ತೀರ್ಪು ಹೆಚ್ಚು ಸಂತಸ ತಂದಿದೆ. ಇದು ಮೋದಿ ವಿರುದ್ಧ ಬಂದಿರುವ ತೀರ್ಪು' ಎಂದು ಮತ್ತೊಬ್ಬ ಕಾರ್ಯಕರ್ತ ವಿನೋದ್ ಕುಮಾರ್ ಸಂತಸ ಹಂಚಿಕೊಂಡರು.

ಸದಸ್ಯತ್ವ ಮರು ಸ್ಥಾಪನೆಗೆ ಎಷ್ಟು ಸಮಯ ಬೇಕೋ?: ಖರ್ಗೆ

'ರಾಹುಲ್ ಅವರ ವಿರುದ್ಧ ಶಿಕ್ಷೆಗೆ ಆದೇಶವಾದ 24 ಗಂಟೆಗಳಲ್ಲಿ ಅವರನ್ನು ಲೋಕಸಭಾ ಸದಸ್ಯತ್ವದಿಂದ ಅನರ್ಹಗೊಳಿಸಲಾಯಿತು. ಈಗ ಆ ಶಿಕ್ಷೆಗೆ ಸುಪ್ರೀಂ ಕೋರ್ಟ್ ತಡೆಯಾಜ್ಞೆ ನೀಡಿದೆ. ಅವರ ಲೋಕಸಭಾ ಸದಸ್ಯತ್ವ ಮರು ಸ್ಥಾಪನೆಗೆ ಎಷ್ಟು ಸಮಯ ತೆಗೆದುಕೊಳ್ಳಲಾಗುತ್ತದೆಯೋ ನೋಡೋಣ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಪ್ರತಿಕ್ರಿಯಿಸಿದರು.

'ಇದು ಸಂತಸದ ದಿನ. ಇದು ಕೇವಲ ರಾಹುಲ್ ಗಾಂಧಿ ಅವರ ಗೆಲುವಲ್ಲ, ಇಡೀ ದೇಶದ ಜನರ ಮತ್ತು ಪ್ರಜಾಪ್ರಭುತ್ವದ ಗೆಲುವು' ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ಸಂವಿಧಾನ ಜೀವಂತವಾಗಿದೆ ಮತ್ತು ಈ ಮೂಲಕ ನ್ಯಾಯ ಪಡೆಯಬಹುದು ಎಂಬುದಕ್ಕೆ ಇದು ನಿದರ್ಶನ. ಇದು ಸಾಮಾನ್ಯ ಜನರ ಮತ್ತು ಸಾಂವಿಧಾನಿಕ ತತ್ವಗಳ ವಿಜಯ' ಎಂದು ಖರ್ಗೆ ಬಣ್ಣಿಸಿದರು.

'ಸದನಕ್ಕೆ ಹಾಜರಾಗಲು ಅವಕಾಶ ನೀಡಿ'

ನವದೆಹಲಿ (ಪಿಟಿಐ): ಕ್ರಿಮಿನಲ್ ಮಾನನಷ್ಟ ಮೊಕದ್ದಮೆ ಪ್ರಕರಣದಲ್ಲಿ ರಾಹುಲ್ ಗಾಂಧಿ ಅವರಿಗೆ ವಿಧಿಸಲಾಗಿದ್ದ ಶಿಕ್ಷೆಗೆ ಸುಪ್ರೀಂ ಕೋರ್ಟ್ ತಡೆ ನೀಡಿದ ಬೆನ್ನಲ್ಲೇ, ರಾಹುಲ್ ಅವರಿಗೆ ಸದನಕ್ಕೆ ಹಾಜರಾಗಲು ಅವಕಾಶ ನೀಡಬೇಕು ಎಂದು ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ ಶುಕ್ರವಾರ ಲೋಕಸಭಾ ಸ್ಪೀಕರ್ ಅನ್ನು ಒತ್ತಾಯಿಸಿದರು. ಸದಸ್ಯರು ಖಾಸಗಿ ಮಸೂದೆ ಮಂಡಿಸುವ ವೇಳೆ ಚೌಧರಿ, ಸ್ಪೀಕರ್ ಪೀಠದಲ್ಲಿದ್ದ ರಾಜೇಂದ್ರ ಅಗ್ರವಾಲ್ ಅವರನ್ನು ಆಗ್ರಹಿಸಿದರು. ಈ ಕುರಿತ ಬೆಳವಣಿಗೆಯನ್ನು ಸ್ಪೀಕರ್ ಸ್ವಾಭಾವಿಕವಾಗಿಯೇ ಗಮನಿಸುತ್ತಾರೆ ಎಂದು ಅಗ್ರವಾಲ್ ಪ್ರತಿಕ್ರಿಯಿಸಿದರು.

'ಕೈ' ಪಾಳಯದಲ್ಲಿ ಹರ್ಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾನನಷ್ಟ ಮೊಕದ್ದಮೆಯಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ನೀಡಿದ್ದ ಶಿಕ್ಷೆಗೆ ಸುಪ್ರೀಂ ಕೋರ್ಟ್ ತಡೆಯಾಜ್ಞೆ ನೀಡಿರುವುದಕ್ಕೆ ಪಕ್ಷದ ರಾಜ್ಯ ನಾಯಕರು ಸಂತಸ ವ್ಯಕ್ತಪಡಿಸಿದ್ದಾರೆ. 'ಇದು ಪ್ರಜಾಪ್ರಭುತ್ವದ ಗೆಲುವು' ಎಂದು ಬಣ್ಣಿಸಿದ್ದಾರೆ.

ಸುಪ್ರೀಂ ಕೋರ್ಟ್ ಆದೇಶದ ಕುರಿತು ಪ್ರತಿಕ್ರಿಯಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, 'ಸುಪ್ರೀಂ ಕೋರ್ಟ್‌ನಿಂದ ರಾಹುಲ್ ಗಾಂಧಿಯವರಿಗೆ ನ್ಯಾಯ ದೊರಕಿದೆ. ಇದು ಪ್ರಜಾಪ್ರಭುತ್ವಕ್ಕೆ ಸಿಕ್ಕಿರುವ ಜಯ. ನೆಲದ ಕಾನೂನನ್ನು ಎಲ್ಲರೂ ಗೌರವಿಸಬೇಕು. ಆ ಕೆಲಸವನ್ನು ಸುಪ್ರೀಂ ಕೋರ್ಟ್ ಮಾಡಿದೆ' ಎಂದು ಹೇಳಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, 'ಸುಪ್ರೀಂ ಕೋರ್ಟ್‌ನ ಆದೇಶವು ನೈತಿಕತೆಯ ಗೆಲವು ಮಾತ್ರ ಅಲ್ಲ, ರಾಹುಲ್ ಗಾಂಧಿಯವರ ಶಕ್ತಿ ಕುಗ್ಗಿಸಲು ಯತ್ನಿಸಿದ ಆಡಳಿತ ಪಕ್ಷದ ವಿರುದ್ಧದ ಕಾನೂನಾತ್ಮ ಮತ್ತು ರಾಜಕೀಯ ಗೆಲುವು ಕೂಡ ಹೌದು. ರಾಜಕೀಯ ದ್ವೇಷದ ಕ್ರಮವನ್ನು ಸುಪ್ರೀಂ ಕೋರ್ಟ್ ತಿರಸ್ಕರಿಸಿದೆ' ಎಂದಿದ್ದಾರೆ.

ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಕೂಡ ಟ್ವಿಟರ್‌ನಲ್ಲಿ ಪ್ರತಿಕ್ರಿಯಿಸಿದ್ದು, 'ದ್ವೇಷದ ರಾಜಕಾರಣ ಯಾವತ್ತೂ ಗೆಲ್ಲುವುದಿಲ್ಲ. ಈ ಆದೇಶದಿಂದಾಗಿ ದೇಶದ ನ್ಯಾಯಾಂಗ ವ್ಯವಸ್ಥೆಯ ಮೇಲೆ ಜನರ ನಂಬಿಕೆ ಮತ್ತಷ್ಟು ಬಲಗೊಳ್ಳಲಿದೆ' ಎಂದು ಹೇಳಿದ್ದಾರೆ.

ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್, 'ದ್ವೇಷದ ರಾಜಕಾರಣದಿಂದ ರಾಹುಲ್ ಗಾಂಧಿ ಅವರನ್ನು ಅನರ್ಹಗೊಳಿಸಲಾಗಿತ್ತು. ಬಿಜೆಪಿಯ ಸುಳ್ಳಿನ ಸಿದ್ಧಾಂತದ ರಾಜಕೀಯಕ್ಕೆ ಈಗ ಸೋಲಾಗಿದೆ. ಗುಜರಾತ್ ಮಾದರಿ ವಿಫಲವಾಗಿದೆ' ಎಂದರು.

'ಗುಜರಾತ್ ನ್ಯಾಯಾಲಯದ ತೀರ್ಮಾನಕ್ಕೆ ಸುಪ್ರೀಂ ಕೋರ್ಟ್ ತಡೆ ನೀಡಿದೆ. ಸತ್ಯಕ್ಕೆ ಗೆಲುವು ಖಚಿತ ಎಂಬುದು ಇದರಿಂದ ಸಾಬೀತಾಗಿದೆ' ಎಂದು ವಸತಿ ಸಚಿವ ಬಿ.ಜೆಡ್. ಜಮೀರ್ ಅಹಮದ್ ಖಾನ್ ಪ್ರತಿಕ್ರಿಯಿಸಿದ್ದಾರೆ.

ಜಮ್ಮು ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನ ರದ್ದು ಬಳಿಕ ಬದಲಾವಣೆ

ಭಯೋತ್ಪಾದನೆ ಇಳಿಕೆ, ಅಭಿವೃದ್ಧಿಯತ್ತ ದಾಪುಗಾಲು

ಪ್ರಜಾವಾಣಿ ವಾರ್ತೆ

ಶ್ರೀನಗರ: 2019ರ ಆಗಸ್ಟ್ 5ರಂದು ಕೇಂದ್ರ ಸರ್ಕಾರವು 370ನೇ ವಿಧಿ ಅಡಿ ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನ ರದ್ದು ಮಾಡಿದ ಬಳಿಕ ಕಣಿವೆ ರಾಜ್ಯದಲ್ಲಿ ಶಾಂತಿ ಮರುಸ್ಥಾಪನೆ ಮತ್ತು ಅಭಿ ವೃದ್ಧಿ ಚಟುವಟಿಕೆಗಳು ವೇಗ ಪಡೆದುಕೊಂಡಿವೆ.

ಮೂರು ದಶಕಗಳಿಗೂ ಹೆಚ್ಚು ಸಮಯದ ನಂತರ, ಕಣಿವೆಯಲ್ಲಿ ಸಾರ್ವಜನಿಕ ಮತ್ತು ಸಾಮಾಜಿಕ ಜೀವನವು ಸಹಜ ಸ್ಥಿತಿಗೆ ಮರಳಿದೆ.

2016ರ ಆ.5 ರಿಂದ 2019ರ ಆ.5ರ ವರೆಗೆ ಪ್ರತಿಭಟನೆ ಮತ್ತು ಕಲ್ಲು ತೂರಾಟದ ಘಟನೆಗಳಲ್ಲಿ ಪೊಲೀಸರು ಮತ್ತು ಭದ್ರತಾ ಪಡೆಗಳಿಂದ 124 ನಾಗರಿಕರು ಮೃತಪಟ್ಟಿದ್ದರೆ, ಕಳೆದ ನಾಲ್ಕು ವರ್ಷಗಳಲ್ಲಿ ಅಂತಹ ಒಂದೂ ಘಟನೆ ವರದಿಯಾಗಿಲ್ಲ ಎಂದು ಅಧಿಕೃತ ಅಂಕಿ ಅಂಶಗಳು ತಿಳಿಸಿವೆ.

ಭಯೋತ್ಪಾದನೆ ಮತ್ತು ಸ್ವಜನಪಕ್ಷಪಾತದಲ್ಲಿ ಗಣನೀಯ ಇಳಿಕೆಯಾಗಿದೆ. ಹಿಂದಿನ ವರ್ಷಗಳಿಗೆ ಹೋಲಿಸಿದರೆ 2023ರಲ್ಲಿ ಸ್ಥಳೀಯರನ್ನು ಭಯೋತ್ಪಾ ದಕ ಚಟುವಟಿಕೆಗಳಿಗಾಗಿ ನೇಮಕ ಮಾಡಿಕೊಳ್ಳುವುದು ಮತ್ತು ಭಯೋ ತ್ಪಾದಕರ ಹತ್ಯೆಯಲ್ಲಿ ಗಣನೀಯ ಕುಸಿತವಾಗಿದೆ.

ಪ್ರಸಕ್ತ ವರ್ಷದ ಜ. 1 ರಿಂದ ಆ. 5 ರವರೆಗೆ ಭದ್ರತಾ ಪಡೆಗಳು ನಡೆಸಿದ ವಿವಿಧ ಕಾರ್ಯಾಚರಣೆಗಳಲ್ಲಿ 35 ಉಗ್ರರು ಹತ್ಯೆಯಾಗಿದ್ದಾರೆ. ಕಳೆದ ವರ್ಷ ಇದೇ ಅವಧಿಯಲ್ಲಿ ಈ ಸಂಖ್ಯೆ 120 ಕ್ಕಿಂತ ಹೆಚ್ಚು. 2022ರಲ್ಲಿ 56 ವಿದೇಶಿಯರು ಸೇರಿದಂತೆ 186 ಉಗ್ರರನ್ನು ಭದ್ರತಾ ಪಡೆಗಳು ಹತ್ಯೆ ಮಾಡಿವೆ.

ಅಧಿಕೃತ ಅಂಕಿ ಅಂಶ ಪ್ರಕಾರ, ಈ ವರ್ಷ ಹಲವು ಒಳನುಸುಳುವಿಕೆ ಪ್ರಯತ್ನ ವಿಫಲಗೊಳಿಸಲಾಗಿದೆ ಮತ್ತು ಜುಲೈ ಅಂತ್ಯದವರೆಗೆ 12ಕ್ಕಿಂತ ಹೆಚ್ಚು ಸ್ಥಳೀಯರು ಉಗ್ರ ಸಂಘಟನೆಗೆ ಸೇರಿಲ್ಲ. ಇದು ಸಕ್ರಿಯ ಉಗ್ರರ ಸಂಖ್ಯೆಯನ್ನು ಎರಡಂಕಿಗೆ ಇಳಿಸಿದೆ.

ಜಮ್ಮು, ಕಾಶ್ಮೀರದ ಸುರಕ್ಷಿತ ವಾತಾವರಣದಿಂದ ಕೇಂದ್ರಾಡಳಿತ ಪ್ರದೇಶದಲ್ಲಿ ಸುಮಾರು ₹25 ಸಾವಿರ ಕೋಟಿ ಹೂಡಿಕೆ ಯೋಜನೆಗಳು ಜಾರಿಯಲ್ಲಿವೆ ಮತ್ತು ₹ 80 ಸಾವಿರ ಕೋಟಿಗೂ ಹೆಚ್ಚಿನ ಪ್ರಸ್ತಾವಗಳು ಪ್ರಕ್ರಿಯೆಯಲ್ಲಿವೆ.

ಸ್ವಾತಂತ್ರ್ಯದ ನಂತರ ಜಮ್ಮು, ಕಾಶ್ಮೀರದಲ್ಲಿ ಕೇವಲ ₹ 14,000 ಕೋಟಿ ಖಾಸಗಿ ಹೂಡಿಕೆಯಾಗಿತ್ತು. ವಿಶೇಷ ಸ್ಥಾನಮಾನ ರದ್ದುಪಡಿಸಿದ ಬಳಿಕ ಹಾಗೂ ಹೊಸ ಕೈಗಾರಿಕಾ ಅಭಿವೃದ್ಧಿ ಯೋಜನೆ ಪರಿಚಯಿಸಿದ ನಂತರ, ಕೇಂದ್ರಾಡಳಿತ ಪ್ರದೇಶವು ಎರಡು ವರ್ಷಗಳಲ್ಲಿ ₹ 81,122 ಕೋಟಿ ಹೂಡಿಕೆ ಪ್ರಸ್ತಾವ ಸ್ವೀಕರಿಸಿದೆ.

ಪ್ರಮುಖ ಘಟಕಗಳನ್ನು ಸ್ಥಾಪಿಸಲು ಕೋರಲಾದ ಒಟ್ಟು 4,877 ಎಕರೆ ಭೂಮಿಗೆ ಬದಲಾಗಿ ಸುಮಾರು 2,250 ಎಕರೆ ಭೂಮಿಯನ್ನು ಈಗಾಗಲೇ ಜಮ್ಮು ಮತ್ತು ಕಾಶ್ಮೀರ ವಿಭಾಗಗಳಲ್ಲಿ ಹಂಚಿಕೆ ಮಾಡಲಾಗಿದೆ. ದೇಶಿ ಮತ್ತು ವಿದೇಶಿ ಪ್ರವಾಸಿಗರ ಸಂಖ್ಯೆ ಹೆಚ್ಚಳದೊಂದಿಗೆ ಪ್ರವಾಸೋದ್ಯಮ ಚಟುವಟಿಕೆಯೂ ಗರಿಗೆದರಿದೆ. ಕಳೆದ ವರ್ಷ ಕೇಂದ್ರಾಡಳಿತ ಪ್ರದೇಶಕ್ಕೆ 1.88 ಕೋಟಿ ಪ್ರವಾಸಿಗರು ಭೇಟಿ ನೀಡಿದ್ದರೆ, ಈ ವರ್ಷ ಎರಡು ಕೋಟಿ ದಾಟುತ್ತದೆ ಎಂಬುದು ಆಡಳಿತದ ನಿರೀಕ್ಷೆಯಾಗಿದೆ.

ವಿಶೇಷ ಸ್ಥಾನಮಾನ ರದ್ದತಿಗೆ ಮೊದಲು ಆಗಾಗ್ಗೆ ಮುಷ್ಕರ, ಕಲ್ಲು ತೂರಾಟದ ಘಟನೆಗಳು ಮತ್ತು ಹಿಂಸಾಚಾರದಿಂದಾಗಿ ವಾಣಿಜ್ಯ ಚಟುವಟಿಕೆ ಮಾತ್ರವಲ್ಲದೆ ಶಿಕ್ಷಣ ಕ್ಷೇತ್ರಕ್ಕೂ ತೊಂದರೆ ಆಗಿತ್ತು.

ಲೋಕಸಭೆ, ವಿಧಾನಸಭೆ ಉಮೇದುವಾರಿಕೆ

ವಯೋಮಿತಿ 25ರಿಂದ 18ಕ್ಕಿಳಿಸಲು ಸಲಹೆ

ನವದೆಹಲಿ (ಪಿಟಿಐ): ಲೋಕಸಭೆ ಮತ್ತು ವಿಧಾನಸಭಾ ಚುನಾವಣೆಗಳಲ್ಲಿ ಸ್ಪರ್ಧಿಸಲು ಕನಿಷ್ಠ ವಯಸ್ಸು ಕಡಿಮೆ ಮಾಡಲು ಶುಕ್ರವಾರ ಸಲಹೆ ನೀಡಿರುವ ಸಂಸದೀಯ ಸಮಿತಿ, ಇದು ಯುವ ಜನರಿಗೆ ಪ್ರಜಾಪ್ರಭುತ್ವದಲ್ಲಿ ತೊಡಗಿಸಿಕೊಳ್ಳಲು ಸಮಾನ ಅವಕಾಶ ನೀಡುತ್ತದೆ ಎಂದು ಹೇಳಿದೆ.

ರಾಷ್ಟ್ರೀಯ ಚುನಾವಣೆ ಅಥವಾ ಲೋಕಸಭೆ ಚುನಾವಣೆಗೆ ಸ್ಪರ್ಧಿಸುವ ಕನಿಷ್ಠ ವಯಸ್ಸನ್ನು ಪ್ರಸ್ತುತ 25 ವರ್ಷದಿಂದ 18ಕ್ಕೆ ಇಳಿಸಲು ಬಿಜೆಪಿಯ ಸುಶೀಲ್ ಮೋದಿ ನೇತೃತ್ವದ ಕಾನೂನು ಮತ್ತು ಸಿಬ್ಬಂದಿ ಕುರಿತ ಸಂಸದೀಯ ಸ್ಥಾಯಿ ಸಮಿತಿ ಶಿಫಾರಸು ಮಾಡಿದೆ.

ಕೆನಡಾ, ಬ್ರಿಟನ್ ಮತ್ತು ಆಸ್ಟ್ರೇಲಿಯಾದಂತಹ ವಿವಿಧ ದೇಶಗಳಲ್ಲಿ ಪರಿಶೀಲಿಸಿದ ಬಳಿಕ, ರಾಷ್ಟ್ರೀಯ ಚುನಾವಣೆಗಳಲ್ಲಿ ಉಮೇದುವಾರಿಕೆಗೆ ಕನಿಷ್ಠ ವಯಸ್ಸು 18 ವರ್ಷ ಇರಬೇಕು. ಕನಿಷ್ಠ ವಯಸ್ಸಿನ ಅಗತ್ಯ ಕಡಿಮೆ ಮಾಡುವುದರಿಂದ ಯುವಜನರು ಪ್ರಜಾಪ್ರಭುತ್ವದಲ್ಲಿ ತೊಡಗಿಸಿಕೊಳ್ಳಲು ಸಮಾನ ಅವಕಾಶ ನೀಡುತ್ತದೆ ಎಂದು ಸಮಿತಿ ಅಭಿಪ್ರಾಯಪಟ್ಟಿದೆ.

ಪ್ರಸ್ತುತ ಕಾನೂನು ಚೌಕಟ್ಟಿನ ಪ್ರಕಾರ, ಲೋಕಸಭೆ ಮತ್ತು ವಿಧಾನಸಭಾ ಚುನಾವಣೆಗೆ ಸ್ಪರ್ಧಿಸಲು ಕನಿಷ್ಠ 25 ವರ್ಷ ಆಗಿರಬೇಕು. ರಾಜ್ಯಸಭೆ ಮತ್ತು ರಾಜ್ಯ ವಿಧಾನ ಪರಿಷತ್ ಸದಸ್ಯರಾಗಲು ಕನಿಷ್ಠ ವಯಸ್ಸು 30 ವರ್ಷ. ಮತದಾರರಾಗಿ ನೋಂದಾಯಿಸಲು 18 ವರ್ಷ ಆಗಿರಬೇಕು.

ಚುನಾವಣಾ ಆಯೋಗದ ಪ್ರಕಾರ, ಸಂವಿಧಾನದ ನಿಬಂಧನೆ ಬದಲಿಸಲು ಬಲವಾದ ಕಾರಣಗಳು ಇಲ್ಲವಾದರೆ ಅದು ಬದಲಾಗದೆ ಉಳಿಯಬೇಕು.

ಸಂಸತ್ತು, ರಾಜ್ಯ ಶಾಸಕಾಂಗ ಮತ್ತು ಸ್ಥಳೀಯ ಸಂಸ್ಥೆಗಳಿಗೆ ಮತದಾನ ಮಾಡಲು ಮತ್ತು ಸ್ಪರ್ಧಿಸಲು ಕನಿಷ್ಠ ವಯಸ್ಸು ನಿಗದಿಪಡಿಸುವ ವಿಷಯವನ್ನು ಆಯೋಗ ಈಗಾಗಲೇ ಪರಿಗಣಿಸಿದೆ ಮತ್ತು 18 ವರ್ಷ ವಯಸ್ಸಿನವರು ಈ ಜವಾಬ್ದಾರಿಗೆ ಅಗತ್ಯ ಅನುಭವ ಮತ್ತು ಪ್ರಬುದ್ಧತೆ ಹೊಂದಿರುತ್ತಾರೆ ಎಂದು ನಿರೀಕ್ಷಿಸುವುದು ಅವಾಸ್ತವಿಕವಾಗಿದೆ.

ಆದ್ದರಿಂದ, ಮತದಾನ ಮತ್ತು ಚುನಾವಣೆಯಲ್ಲಿ ಸ್ಪರ್ಧಿಸಲು ಕನಿಷ್ಠ ವಯಸ್ಸು ಸೂಕ್ತವಾಗಿದೆ. ಸಂಸತ್ತು ಮತ್ತು ರಾಜ್ಯ ಶಾಸಕಾಂಗಗಳ ಸದಸ್ಯತ್ವದ ವಯಸ್ಸಿನ ಅವಶ್ಯಕತೆಯನ್ನು ಕಡಿಮೆ ಮಾಡಲು ಆಯೋಗವು ಒಲವು ಹೊಂದಿಲ್ಲ ಎಂದು ಸಮಿತಿ ಹೇಳಿದೆ.

ರಾಜಕೀಯದಲ್ಲಿ ತೊಡಗಿಸಿಕೊಳ್ಳುವಿಕೆಗೆ ಅಗತ್ಯವಾದ ಜ್ಞಾನ ಮತ್ತು ಕೌಶಲಗಳೊಂದಿಗೆ ಯುವಜನರನ್ನು ಸಜ್ಜುಗೊಳಿಸಲು ಸಮಗ್ರ ನಾಗರಿಕ ಶಿಕ್ಷಣ ಕಾರ್ಯಕ್ರಮ ಒದಗಿಸಲು ಚುನಾವಣಾ ಆಯೋಗ ಮತ್ತು ಸರ್ಕಾರ ಆದ್ಯತೆ ನೀಡಬೇಕು ಎಂದು ಸಮಿತಿ ಸಲಹೆ ನೀಡಿದೆ.

ಹರಿಯಾಣ ಗೃಹಸಚಿವ ಅನಿಲ್ ವಿಜ್ ಹೇಳಿಕೆ

202 ಜನರ ಬಂಧನ, 102 ಎಫ್‌ಐಆರ್

ಚಂಡೀಗಢ (ಪಿಟಿಐ): ಹರಿಯಾಣದಲ್ಲಿ ಇತ್ತೀಚೆಗೆ ನಡೆದ ಹಿಂಸಾಚಾರಕ್ಕೆ ಸಂಬಂಧಿಸಿದಂತೆ ಒಟ್ಟಾರೆ 202 ಜನರನ್ನು ಇದುವರೆಗೆ ಬಂಧಿಸಲಾಗಿದ್ದು, ಮುನ್ನೆಚ್ಚರಿಕೆ ಕ್ರಮವಾಗಿ 80 ಜನರನ್ನು ವಶಕ್ಕೆ ಪಡೆಯಲಾಗಿದೆ ಎಂದು ಹರಿಯಾಣದ ಗೃಹಸಚಿವ ಅನಿಲ್ ವಿಜ್ ಶುಕ್ರವಾರ ಹೇಳಿದ್ದಾರೆ.

ಘರ್ಷಣೆಗೆ ಸಂಬಂಧಿಸಿದಂತೆ ಇದುವರೆಗೆ 102 ಎಫ್‌ಐಆರ್‌ಗಳು ದಾಖಲಾಗಿದ್ದು, ಅದರಲ್ಲಿ ಅರ್ಧದಷ್ಟು ಎಫ್‌ಐಆರ್‌ಗಳು ನೂಹ್ ಜಿಲ್ಲೆಯಲ್ಲೇ ದಾಖಲಾಗಿವೆ. ಉಳಿದವು ಗುರುಗ್ರಾಮ, ಫರಿದಾಬಾದ್ ಮತ್ತು ಪಲ್ವಾಲ್ ಸೇರಿದಂತೆ ಇತರ ಜಿಲ್ಲೆಗಳಲ್ಲಿ ದಾಖಲಾಗಿವೆ ಎಂದೂ ತಿಳಿಸಿದ್ದಾರೆ.

ಶುಕ್ರವಾರದ ನಮಾಜ್‌ಗೆ ಸಂಬಂಧಿಸಿದಂತೆ ' ನೂಹ್, ಫರಿದಾಬಾದ್ ಮತ್ತು ಗುರುಗ್ರಾಮದ ಜಿಲ್ಲಾಧಿಕಾರಿಗಳೊಂದಿಗೆ ಮಾತನಾಡಿದ್ದೇನೆ. ಕೆಲ ಧರ್ಮಗುರುಗಳು ಮನೆಯಿಂದಲೇ ನಮಾಜ್ ಮಾಡಲು ಕರೆ ನೀಡಿದ್ದಾರೆ' ಅವರು ಹೇಳಿದ್ದಾರೆ.



ಬುಲ್ಡೋಜರ್‌ನಿಂದ ಗುಡಿಸಲುಗಳನ್ನು ನೆಲಸಮಗೊಳಿಸಲಾಯಿತು

ನೆಲಸಮ

ಗುರುಗ್ರಾಮ (ಪಿಟಿಐ): 'ಜಿಲ್ಲೆಯ ತಾವಡೂ ಪಟ್ಟಣದ ಸರ್ಕಾರಿ ಜಮೀನಿನಲ್ಲಿ ಅತಿ ಕ್ರಮವಾಗಿ ನಿರ್ಮಿಸಿಕೊಂಡಿದ್ದ ಅಕ್ರಮ ವಲಸಿಗರ 250 ಗುಡಿಸಲುಗಳನ್ನು ಬುಲ್‌ಡೋಜರ್ ಮೂಲಕ ನೆಲಸಮ ಮಾಡಲಾಗಿದೆ' ಎಂದು ಪೊಲೀಸ್ ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ.

ಟೈಟ್ಲರ್‌ಗೆ ಜಾಮೀನು

ನವದೆಹಲಿ(ಪಿಟಿಐ): 1984ರ ಸಿಖ್ ವಿರೋಧಿ ಗಲಭೆಯ ಸಂದರ್ಭ ಪುಲ್ ಭಂಗಶ್‌ನಲ್ಲಿ ನಡೆದ ಹತ್ಯೆಗಳ ಪ್ರಕರಣದ ಆರೋಪಿ, ಕಾಂಗ್ರೆಸ್ ನಾಯಕ ಜಗದೀಶ್ ಟೈಟ್ಲರ್ ಅವರಿಗೆ ದೆಹಲಿ ಕೋರ್ಟ್ ಶುಕ್ರವಾರ ನಿರೀಕ್ಷಣಾ ಜಾಮೀನು ನೀಡಿದೆ.

ವಿಶೇಷ ನ್ಯಾಯಾಧೀಶರ ವಿಕಾಸ್ ಧುಲ್ ಅವರು ನಿರೀಕ್ಷಣಾ ಜಾಮೀನು ಮಂಜೂರು ಮಾಡುವುದಕ್ಕೂ ಮೊದಲು, ಆರೋಪಿಗೆ ನ್ಯಾಯಾಲಯದ ಅನುಮತಿ ಇಲ್ಲದೆ ದೇಶದಿಂದ ಹೊರ ಹೋಗಬಾರದು ಮತ್ತು ಸಾಕ್ಷ್ಯ ನಾಶಪಡಿಸಬಾರದು ಎನ್ನುವುದು ಸೇರಿದಂತೆ ನಿರ್ದಿಷ್ಟ ಷರತ್ತುಗಳನ್ನು ವಿಧಿಸಿದ್ದಾರೆ.

ಮಣಿಪುರ: ಅಕ್ರಮ ಅಡಗುದಾಣ ನಾಶ

ಇಂಫಾಲ್ (ಪಿಟಿಐ): 'ಸಂಘರ್ಷ ಪೀಡಿತ ಮಣಿಪುರದ ಕೌಟ್ರುಕ್ ಬೆಟ್ಟದ ಶ್ರೇಣಿಯಲ್ಲಿ ಜಂಟಿ ಶೋಧ ಕಾರ್ಯಾಚರಣೆ ನಡೆಸಿ, ಏಳು ಅಕ್ರಮ ಅಡುಗುದಾಣಗಳನ್ನು ನಾಶಪಡಿಸಲಾಗಿದೆ' ಎಂದು ಪೊಲೀಸರು ಶುಕ್ರವಾರ ಹೇಳಿದ್ದಾರೆ.

ಮಣಿಪುರದ ವಿವಿಧ ಜಿಲ್ಲೆಗಳಲ್ಲಿ ಮತ್ತೊಮ್ಮೆ ಹಿಂಸಾಚಾರ ಭುಗಿಲೆದ್ದ ಬೆನ್ನಲ್ಲೇ ಪೊಲೀಸರು ಈ ಕಾರ್ಯಾಚರಣೆ ನಡೆಸಿದ್ದಾರೆ. 'ಈ ಮಧ್ಯೆ, ಅಗತ್ಯ ವಸ್ತುಗಳನ್ನು ಖರೀದಿಸಲು ಸಾರ್ವಜನಿಕರಿಗೆ ಅನುವು ಮಾಡಿಕೊಡುವ ದೃಷ್ಟಿಯಿಂದ ಮಣಿಪುರ ಸರ್ಕಾರವು ಇಂಫಾಲ್ ಪೂರ್ವ ಮತ್ತು ಇಂಫಾಲ್ ಪಶ್ಚಿಮ ಜಿಲ್ಲೆಗಳಲ್ಲಿ ಬೆಳಿಗ್ಗೆ 5ಗಂಟೆಯಿಂದ ಮಧ್ಯಾಹ್ನ 12ರವರೆಗೆ ಕರ್ಫ್ಯೂ ಅನ್ನು ಸಡಿಲಗೊಳಿಸಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಣಿಪುರ ಸರ್ಕಾರವು ಮುಂಜಾಗ್ರತಾ ಕ್ರಮವಾಗಿ ಇಂಫಾಲ್‌ನ ಅವಳಿ ಜಿಲ್ಲೆಗಳಲ್ಲಿ ಗುರುವಾರ ಪೂರ್ಣ ಪ್ರಮಾಣದ ಕರ್ಫ್ಯೂ ವಿಧಿಸಿತ್ತು. ಆದರೆ, ಈಗ ಅದನ್ನು ಸಡಿಲಗೊಳಿಸಲಾಗಿದೆ.

'ಬಿಷ್ಣುಪುರದ ಟೆರಾಖೊಂಗ್‌ಸಂಗ್ಬಿಯಲ್ಲಿ ಗುರುವಾರ ತಡರಾತ್ರಿ ಅಪರಿಚಿತ ಬಂಧೂಕುಧಾರಿ ಹಾಗೂ ಪಡೆಗಳ ನಡುವೆ ಗುಂಡಿನ ಚಕಮಕಿ ನಡೆಯಿತು. ಈ ವೇಳೆ 35 ವರ್ಷದ ಮಹಿಳೆಯೊಬ್ಬರು ಗಾಯಗೊಂಡಿದ್ದಾರೆ. ಅವರಿಗೆ ಇಂಫಾಲ್‌ನ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಬಿಷ್ಣುಪುರದ ನರನ್ಸೇನಾದಲ್ಲಿರುವ ಎರಡನೇ ಭಾರತೀಯ ಮೀಸಲು ಪಡೆಯ (ಐಆರ್‌ಬಿ) ಕೇಂದ್ರಕಚೇರಿಗೆ ಗುರುವಾರ ಬೆಳಿಗ್ಗೆ ಪ್ರಬಲ ವರ್ಗದ ಗುಂಪೊಂದು ನುಗ್ಗಿ, ರೈಫಲ್, ಬುಲೆಟ್‌ಗಳನ್ನು ಸೇರಿದಂತೆ ಹಲವಾರು ಶಸ್ತ್ರಾಸ್ತ್ರಗಳನ್ನು ಕಳ್ಳತನ ಮಾಡಿದೆ' ಎಂದರು.

ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಅತ್ತೆ-ಸೊಸೆ ಸಂಬಂಧ ಕದನವಲ್ಲ, ಕವಿತೆ!

ಚರ್ಚೆ
ಪರಿಶಿಷ್ಟ ಸಮುದಾಯಗಳ ಅನುದಾನವನ್ನು 'ಗ್ಯಾರಂಟಿ' ಯೋಜನೆಗಳಿಗೆ ವರ್ಗಾಯಿಸಿದ್ದು ಸರಿಯೇ?
'ಮೊಹಲ್ಲಾಕ್ಕಿಂತ ನಮ್ಮ ಕ್ಲಿನಿಕ್ ಉತ್ತಮ' 6
ಇಪಿಎಸ್ ಕನಿಷ್ಠ ಪಿಂಚಣಿ ಹೆಚ್ಚಳ ಇಲ್ಲ 10

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
65,721 ▲	19,517 ▲	₹61,150 (ಬೆಂಗಳೂರು) ▲	₹74,200 (ಬೆಂಗಳೂರು) ▼	82,82 ▼

ಸದಸ್ಯತ್ವ ಮರುಸ್ಥಾಪನೆ ಹಾದಿ ಸುಗಮ • ಚುನಾವಣೆಯಲ್ಲಿ ಸ್ಪರ್ಧೆಗೂ ಅರ್ಹ • ಕಾಂಗ್ರೆಸ್ ನಿರಾಳ

ರಾಹುಲ್ ಶಿಕ್ಷೆಗೆ 'ಸುಪ್ರೀಂ' ತಡೆ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: 'ಮೋದಿ ಉಪನಾಮ' ಹೇಳಿಕೆಗೆ ಸಂಬಂಧಿಸಿದ 2019ರ ಮಾನನಷ್ಟ ಮೊಕದ್ದಮೆ ಪ್ರಕರಣದಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ವಿಚಾರಣಾ ನ್ಯಾಯಾಲಯ ವಿಧಿಸಿದ್ದ ಶಿಕ್ಷೆಗೆ ಸುಪ್ರೀಂ ಕೋರ್ಟ್ ಶುಕ್ರವಾರ ತಡೆಯಾಜ್ಞೆ ನೀಡಿದೆ.

ಈ ತೀರ್ಪು, ಲೋಕಸಭಾ ಸದಸ್ಯತ್ವದಿಂದ ಅನರ್ಹರಾಗಿರುವ ರಾಹುಲ್ ಅವರಿಗೆ, ಪುನಃ ಸದಸ್ಯತ್ವ ಪಡೆಯುವ ಹಾದಿಯನ್ನು ಸುಗಮಗೊಳಿಸಿದೆ. ಅಲ್ಲದೆ, ಕಾಂಗ್ರೆಸ್ ಪಕ್ಷದ ಪಾಲಿಗೆ ನಿರಾಳತೆಯನ್ನೂ ಉಂಟುಮಾಡಿದೆ.

ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ, ಪಿ.ಎಸ್.ನರಸಿಂಹ ಮತ್ತು ಸಂಜಯ್ ಕುಮಾರ್ ಅವರಿದ್ದ ತ್ರಿಸದಸ್ಯ ಪೀಠವು, 'ವಿಚಾರಣಾ ನ್ಯಾಯಾಲಯದ ನ್ಯಾಯಾಧೀಶರು, ನ್ಯಾಯಾಂಗ ನಿಂದನೆ ಪ್ರಕರಣವೊಂದರಲ್ಲಿ ರಾಹುಲ್ ಅವರಿಗೆ ಸುಪ್ರೀಂ ಕೋರ್ಟ್ ತಾಕೀತು ಮಾಡಿರುವುದನ್ನು ಹೊರತುಪಡಿಸಿ, ತಾವು ಶಿಕ್ಷೆ ನೀಡಿರುವುದಕ್ಕೆ ಬೇರೆ ಯಾವ ಕಾರಣವನ್ನೂ ನೀಡಿಲ್ಲ' ಎಂದು ಹೇಳಿದೆ.

ರಫೇಲ್ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಧಾನಿ ನರೇಂದ್ರ ಮೋದಿ ವಿರುದ್ಧದ 'ಚೌಕಿದಾರ್ ಚೋರ್ ಹೈ' ಎಂದು ರಾಹುಲ್ ಆರೋಪಿಸಿದ್ದಕ್ಕಾಗಿ ಅವರ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕ್ರಿಯೆಯನ್ನು ಸುಪ್ರೀಂ ಕೋರ್ಟ್ 2019ರಲ್ಲಿ ನಡೆಸಿತ್ತು. 'ಭವಿಷ್ಯದಲ್ಲಿ ಈ ರೀತಿ ನಡೆದುಕೊಳ್ಳದೆ, ಜಾಗರೂಕರಾಗಿರಬೇಕು' ಎಂದು ಎಚ್ಚರಿಕೆ ನೀಡಿ ಪ್ರಕರಣವನ್ನು ಮುಕ್ತಾಯಗೊಳಿಸಿತ್ತು. ರಾಹುಲ್ ಅವರೂ ಬೇಷರತ್ ಕ್ಷಮೆ ಕೋರಿದ್ದರು.

ಭಾರತೀಯ ದಂಡ ಸಂಹಿತೆಯ ಸೆಕ್ಷನ್ 499ರ (ಮಾನನಷ್ಟ) ಅಡಿ ಶಿಕ್ಷಾರ್ಹ ಅಪರಾಧಕ್ಕೆ ಗರಿಷ್ಠ ಎರಡು ವರ್ಷಗಳ ಜೈಲು ಶಿಕ್ಷೆ ಅಥವಾ ದಂಡ ಅಥವಾ ಎರಡನ್ನೂ ವಿಧಿಸಬಹುದು. ವಿಚಾರಣಾ ನ್ಯಾಯಾಲಯವು ಎರಡು ವರ್ಷಗಳ ಜೈಲು ಶಿಕ್ಷೆ ವಿಧಿಸಿದೆ. ಆದರೆ, ತನ್ನ ಆದೇಶ ಸಮರ್ಥಿಸುವಂತಹ ಯಾವುದೇ ಕಾರಣವನ್ನೂ ನೀಡಿಲ್ಲ. (ಎರಡು ವರ್ಷಗಳ) ಗರಿಷ್ಠ ಶಿಕ್ಷೆ ವಿಧಿಸಿದ್ದರಿಂದ ರಾಹುಲ್ ಅವರು ಪ್ರಜಾ ಪ್ರಾತಿನಿಧ್ಯ ಕಾಯ್ದೆಯ ಸೆಕ್ಷನ್ 8(3) ಅಡಿ ಲೋಕಸಭಾ ಸದಸ್ಯತ್ವದಿಂದ ಅನರ್ಹಗೊಳ್ಳಬೇಕಾಯಿತು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಎಚ್ಚರ ವಹಿಸಬೇಕಿತ್ತು: ನ್ಯಾಯಾಂಗ ನಿಂದನೆ ಪ್ರಕರಣದಲ್ಲಿ ಈ ಹಿಂದೆ ಅಫಿಡವಿಟ್ ಸಲ್ಲಿಸಿದ್ದ ರಾಹುಲ್ ಅವರು ನಂತರದಲ್ಲಿ ಆರೋಪಗಳನ್ನು ಮಾಡುವಾಗ ಹೆಚ್ಚು ಎಚ್ಚರ ವಹಿಸಬೇಕಿತ್ತು ಎಂದು ಪೀಠ ಅಭಿಪ್ರಾಯಪಟ್ಟಿದೆ.

6ನೇ ಪುಟ ನೋಡಿ

ನ್ಯಾಯಪೀಠ ಹೇಳಿದ್ದೇನು?

ಅರಿವಿಲ್ಲದೆ ಆಗಿರುವ, ಜಾಮೀನು ಪಡೆಯಬಹುದಾದ ಮತ್ತು ಸರಿಪಡಿಸಿಕೊಳ್ಳಬಹುದಾದ ಅಪರಾಧ ಪ್ರಕರಣ ಇದಾಗಿದ್ದರಿಂದ ಶಿಕ್ಷೆಯ ಪ್ರಮಾಣವನ್ನು ಒಂದೇ ಒಂದು ದಿನ ಕಡಿಮೆ ಮಾಡಿದ್ದರೂ (ಸಂಸತ್ ಸದಸ್ಯತ್ವದಿಂದ ಅನರ್ಹಗೊಳಿಸುವ) ನಿಬಂಧನೆಗಳು ಅನ್ವಯವಾಗುತ್ತಿರಲಿಲ್ಲ. ಗರಿಷ್ಠ ಶಿಕ್ಷೆಯನ್ನು ವಿಧಿಸುವಾಗ ವಿಚಾರಣಾ ನ್ಯಾಯಾಲಯದ ನ್ಯಾಯಾಧೀಶರು ಅದಕ್ಕೆ ಕೆಲವಾದರೂ ಕಾರಣಗಳನ್ನೂ ನೀಡಬೇಕೆಂಬ ಕನಿಷ್ಠ ನಿರೀಕ್ಷೆ ಇರುತ್ತದೆ. ಶಿಕ್ಷೆಗೆ ತಡೆಯಾಜ್ಞೆ ನೀಡಲು ನಿರಾಕರಿಸುವಾಗ ಮೇಲ್ಮನವಿ ನ್ಯಾಯಾಲಯ ಮತ್ತು ಹೈಕೋರ್ಟ್ ಭಾರೀ ಸಂಖ್ಯೆಯ ಪುಟಗಳಲ್ಲಿ ತೀರ್ಪುಗಳನ್ನು ಬರೆದಿವೆಯಾದರೂ ಈ ಮೇಲಿನ ಅಂಶಗಳನ್ನು ಅವುಗಳು ಪರಿಗಣಿಸಿಲ್ಲ

(ರಾಹುಲ್ ಗಾಂಧಿ ನೀಡಿದ) ಹೇಳಿಕೆಯು ಸದಭಿರುಚಿಯಿಂದ ಕೂಡಿರಲಿಲ್ಲ ಎನ್ನುವುದರಲ್ಲಿ ಅನುಮಾನವೇ ಇಲ್ಲ. ಸಾರ್ವಜನಿಕ ಜೀವನದಲ್ಲಿರುವ ವ್ಯಕ್ತಿಯು ಸಾರ್ವಜನಿಕವಾಗಿ ಮಾತುಗಳನ್ನು ಆಡುವಾಗ ಎಚ್ಚರದಿಂದ ಇರಬೇಕು ಎಂಬ ನಿರೀಕ್ಷೆ ಇರುತ್ತದೆ. ಈ ಅಂಶ ಮತ್ತು ವಿಚಾರಣಾ ನ್ಯಾಯಾಲಯದ ನ್ಯಾಯಾಧೀಶರು ಗರಿಷ್ಠ ಶಿಕ್ಷೆ ವಿಧಿಸುವಾಗ ಯಾವುದೇ ಕಾರಣ ಕೊಟ್ಟಿಲ್ಲದಿರುವ ಅಂಶ ಎರಡನ್ನೂ ಪರಿಗಣಿಸಲಾಗಿದ್ದು, ಅಂತಿಮ ತೀರ್ಪನ್ನು ಬಾಕಿ ಉಳಿಸಿ, ಶಿಕ್ಷೆಗೆ ತಡೆಯಾಜ್ಞೆ ನೀಡಲಾಗಿದೆ

ಸತ್ಯಕ್ಕೇ ಯಾವಾಗಲೂ ಜಯವಾಗಲಿದೆ. ಇಂದಲ್ಲದಿದ್ದರೆ ನಾಳೆ, ನಾಳೆಯಾಗದಿದ್ದರೆ ಅದರ ನಂತರದ ದಿನ ಸತ್ಯವೇ ಗೆಲ್ಲುವುದು. ನನ್ನ ದಾರಿ ಯಾವುದು, ಕೆಲಸ ಏನು ಎಂಬುದರ ಸ್ಪಷ್ಟತೆ ಇದೆ. ನಮಗೆ ನೆರವು ನೀಡಿದ, ಬೆಂಬಲ ವ್ಯಕ್ತಪಡಿಸಿದ, ಪ್ರೀತಿಯ ಮಳೆ ಸುರಿಸಿದ ಎಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ

ರಾಹುಲ್ ಗಾಂಧಿ
ಕಾಂಗ್ರೆಸ್ ಮುಖಂಡ

ಏನಿದು ಮಾನನಷ್ಟ ಮೊಕದ್ದಮೆ ಪ್ರಕರಣ?

ಕರ್ನಾಟಕದ ಕೋಲಾರದಲ್ಲಿ 2019ರ ಏಪ್ರಿಲ್ 13ರಂದು ಚುನಾವಣಾ ರ‍್ಯಾಲಿಯಲ್ಲಿ ಮಾತನಾಡಿದ್ದ ರಾಹುಲ್ ಗಾಂಧಿ, 'ಎಲ್ಲ ಕಳ್ಳರು ಮೋದಿ ಎಂಬ ಸಾಮಾನ್ಯ ಉಪನಾಮವನ್ನು ಹೇಗೆ ಹೊಂದಿದ್ದಾರೆ' ಎಂದು ಪ್ರಶ್ನಿಸಿದ್ದರು. ಈ ಸಂಬಂಧ ಗುಜರಾತಿನ ಮಾಜಿ ಸಚಿವ ಪೂರ್ಣೇಶ್ ಮೋದಿ ಅವರು ರಾಹುಲ್ ವಿರುದ್ಧ 2019ರಲ್ಲಿ ಸೂರತ್ ನ್ಯಾಯಾಲಯದಲ್ಲಿ ಕ್ರಿಮಿನಲ್ ಮಾನನಷ್ಟ ಮೊಕದ್ದಮೆ ದಾಖಲಿಸಿದ್ದರು.

ಸೂರತ್ ನ್ಯಾಯಾಲಯ ಏನು ತೀರ್ಪು ನೀಡಿತ್ತು?

'ಮೋದಿ ಉಪನಾಮ' ಟೀಕೆ ಕುರಿತ ಮಾನನಷ್ಟ ಮೊಕದ್ದಮೆ ಪ್ರಕರಣಕ್ಕೆ ಸಂಬಂಧಿಸಿದಂತೆ ಗುಜರಾತ್‌ನ ಸೂರತ್ ಮ್ಯಾಜಿಸ್ಟ್ರೇಟ್ ಕೋರ್ಟ್, ರಾಹುಲ್ ತಪ್ಪಿತಸ್ಥ ಎಂದು ತೀರ್ಪು ನೀಡಿ, ಎರಡು ವರ್ಷ ಶಿಕ್ಷೆ ವಿಧಿಸಿತ್ತು. ಶಿಕ್ಷೆಗೆ ತಡೆ ನೀಡಲು ಗುಜರಾತ್ ಹೈಕೋರ್ಟ್ ನಿರಾಕರಿಸಿತ್ತು. ಇದನ್ನು ಪ್ರಶ್ನಿಸಿ ರಾಹುಲ್ ಸಲ್ಲಿಸಿರುವ ಮೇಲ್ಮನವಿ ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ಶಿಕ್ಷೆಗೆ ತಡೆಯಾಜ್ಞೆ ನೀಡಿದೆ.

ಕೋರ್ಟ್ ನೀಡಿದ ತೀರ್ಪಿಗೆ ರಾಹುಲ್ ವಾದ ಏನಾಗಿತ್ತು?

ಸೂರತ್ ನ್ಯಾಯಾಲಯದ ತೀರ್ಪು ಹೊರಬಿದ್ದ ಮೇಲೂ ಹೇಳಿಕೆಗೆ ಕ್ಷಮೆ ಯಾಚಿಸಲು ರಾಹುಲ್ ನಿರಾಕರಿಸಿದ್ದರು. 'ನಾನು ತಪ್ಪು ಮಾಡಿಲ್ಲ, ಕ್ಷಮೆ ಕೇಳುವುದಿಲ್ಲ' ಎಂದು ಬಲವಾಗಿ ಪ್ರತಿಪಾದಿಸಿದ್ದರು. ಅಲ್ಲದೆ, ಸೂರತ್ ನ್ಯಾಯಾಲಯದಿಂದ ನೀಡಲಾಗಿರುವ ಶಿಕ್ಷೆಯನ್ನು ತಡೆಹಿಡಿಯುವಂತೆ ಸುಪ್ರೀಂ ಕೋರ್ಟ್‌ಗೆ ಮನವಿ ಮಾಡಿದ್ದರು. ನ್ಯಾಯ ಸಿಗುವವರೆಗೆ ಕಾನೂನು ಸಮರ ಮುಂದುವರಿಸುವುದಾಗಿ ಪ್ರತಿಪಾದಿಸಿದ್ದರು.

'ಸುಪ್ರೀಂ' ತಡೆಯಾಜ್ಞೆ ಮುಂದೆ ಏನಾಗಲಿದೆ?

17ನೇ ಲೋಕಸಭೆಯ ಅವಧಿ 2024ರ ಮೇ ತಿಂಗಳಲ್ಲಿ ಕೊನೆಗೊಳ್ಳಲಿದ್ದು, ಲೋಕಸಭಾ ಸ್ಪೀಕರ್ ತಾವಾಗಿಯೇ ರಾಹುಲ್ ಅವರ ಲೋಕಸಭಾ ಸದಸ್ಯತ್ವವನ್ನು ಮರು ಸ್ಥಾಪಿಸಬಹುದು ಅಥವಾ ಸುಪ್ರೀಂ ಕೋರ್ಟ್ ಆದೇಶದ ಅನ್ವಯ ತಮ್ಮ ಲೋಕಸಭಾ ಸದಸ್ಯತ್ವವನ್ನು ಪುನರ್ ಸ್ಥಾಪಿಸುವಂತೆ ರಾಹುಲ್ ಗಾಂಧಿ ಮನವಿ ಮಾಡಬಹುದು. ಅವರ ಸದಸ್ಯತ್ವ ಮರುಸ್ಥಾಪನೆಗೆ ಕೆಲವು ದಿನ ಹಿಡಿಯಬಹುದು.

ಜ್ಞಾನವಾಪಿ ಮಸೀದಿಯಲ್ಲಿ ಶುಕ್ರವಾರ ಮುಸ್ಲಿಮರು ಬಿಗಿ ಭದ್ರತೆಯಲ್ಲಿ ಪ್ರಾರ್ಥನೆ ಸಲ್ಲಿಸಿ ಹೊರಬಂದರು –ಪಿಟಿಐ ಚಿತ್ರ

ಜ್ಞಾನವಾಪಿ: ಸಮೀಕ್ಷೆ ಶುರು

ಪ್ರಜಾವಾಣಿ ವಾರ್ತೆ/ಪಿಟಿಐ

ವಾರಾಣಸಿ: ಬಿಗಿ ಭದ್ರತೆ ನಡುವೆ, ಇಲ್ಲಿನ ಜ್ಞಾನವಾಪಿ ಮಸೀದಿ ಆವರಣದಲ್ಲಿ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯು (ಎಎಸ್‌ಐ) ಶುಕ್ರವಾರ ವೈಜ್ಞಾನಿಕ ಸಮೀಕ್ಷೆಯನ್ನು ಆರಂಭಿಸಿತು.

ಈ ಮೊದಲೇ ಇದ್ದ ದೇವಾಲಯದ ಮೇಲೆ 17ನೇ ಶತಮಾನದಲ್ಲಿ ಮಸೀದಿ ನಿರ್ಮಿಸಲಾಗಿದೆಯೇ ಎಂಬುದನ್ನು ನಿರ್ಣಯಿಸುವ ಉದ್ದೇಶದ ಈ ಸಮೀಕ್ಷೆಗೆ ಅಲಹಾಬಾದ್ ಹೈಕೋರ್ಟ್ ಗುರುವಾರ ಅನುಮತಿ ನೀಡಿತ್ತು.

ಸಮೀಕ್ಷೆಯನ್ನು ಪೂರ್ಣಗೊಳಿಸಲು ಎಎಸ್‌ಐಗೆ ಸೆಪ್ಟೆಂಬರ್ 4ರ ವರೆಗೆ ಜಿಲ್ಲಾ ನ್ಯಾಯಾಲಯ ಅವಕಾಶ ನೀಡಿದೆ.

ಬೆಳಿಗ್ಗೆ 7ಕ್ಕೆ ಆರಂಭವಾದ ಸಮೀಕ್ಷೆಯನ್ನು ಅಂಜುಮಾನ್ ಇಂತೆಜಾಮಿಯಾ ಮಸೀದಿ ಸಮಿತಿ ಸದಸ್ಯರು ಬಹಿಷ್ಕರಿಸಿದ್ದರು. ಶುಕ್ರವಾರದ ಪ್ರಾರ್ಥನೆ ಹಿನ್ನೆಲೆಯಲ್ಲಿ ಮಧ್ಯಾಹ್ನ 12ರಿಂದ 2 ಗಂಟೆ ವರೆಗೆ ಸಮೀಕ್ಷೆಯನ್ನು ಸ್ಥಗಿತಗೊಳಿಸಿದ್ದ ಎಎಸ್‌ಐ ಸಿಬ್ಬಂದಿ, ನಂತರ ಮುಂದುವರಿಸಿದರು.

'43 ಜನರಿರುವ ಎಎಸ್‌ಐ ತಂಡ ಸಮೀಕ್ಷೆ ನಡೆಸುತ್ತಿದೆ. ದೂರುದಾರರಾದ ಲಕ್ಷ್ಮಿ ಸಿಂಗ್, ಸೀತಾ ಸಾಹು, ರೇಖಾ ಪಾಠಕ್ ಹಾಗೂ ಮಂಜು ವ್ಯಾಸ್ ಅವರು ತಮ್ಮ ಪರ ವಕೀಲರೊಂದಿಗೆ ಸಮೀಕ್ಷೆ ನಡೆಯುವ ಸಂದರ್ಭದಲ್ಲಿ ಉಪಸ್ಥಿತರಿರುವರು' ಎಂದು ಹಿಂದೂ ಅರ್ಜಿದಾರರ ಪರ ವಕೀಲ ಮದನಮೋಹನ್ ಯಾದವ್ ತಿಳಿಸಿದರು.

ಅರ್ಜಿದಾರರಾದ ರಾಖಿ ಸಿಂಗ್ ಸಮೀಕ್ಷೆ ವೇಳೆ ಹಾಜರಿರಲಿಲ್ಲ. ಅವರ ಪರ ವಕೀಲರಿದ್ದರು. ಹಿಂದೂ ಅರ್ಜಿದಾರರ ಪರ ಮತ್ತೊಬ್ಬ ವಕೀಲ ಸುಭಾಷ್ ಚತುರ್ವೇದಿ ಕೂಡ ಇದ್ದರು.

6ನೇ ಪುಟ ನೋಡಿ

'ಸುಪ್ರೀಂ'ನಿಂದಲೂ ಅಸ್ತು

ನವದೆಹಲಿ (ಪಿಟಿಐ): ವಾರಾಣಸಿಯ ಜ್ಞಾನವಾಪಿ ಮಸೀದಿ ಆವರಣದಲ್ಲಿ ಎಎಸ್‌ಐನಿಂದ ವೈಜ್ಞಾನಿಕ ಸಮೀಕ್ಷೆ ನಡೆಸಲು ಅನುಮತಿ ನೀಡಿ ಅಲಹಾಬಾದ್ ಹೈಕೋರ್ಟ್ ಹೊರಡಿಸಿರುವ ಆದೇಶಕ್ಕೆ ತಡೆ ನೀಡಲು ಸುಪ್ರೀಂಕೋರ್ಟ್ ಶುಕ್ರವಾರ ನಿರಾಕರಿಸಿತು.

ಮುಖ್ಯನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದೀವಾಲಾ ಹಾಗೂ ಮನೋಜ್ ಮಿಶ್ರಾ ಅವರಿದ್ದ ನ್ಯಾಯಪೀಠ, ಅಲಹಾಬಾದ್ ಹೈಕೋರ್ಟ್ ಆದೇಶಕ್ಕೆ ತಡೆ ನೀಡುವಂತೆ ಕೋರಿ ಅಂಜುಮಾನ್ ಇಂತೆಜಾಮಿಯಾ ಮಸೀದಿ ಸಮಿತಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿತು. ಮಸೀದಿ ಕಟ್ಟಡಕ್ಕೆ ಹಾನಿಯಾಗದಂತೆ ಸಮೀಕ್ಷೆ ನಡೆಸಬೇಕು ಎಂದು ಎಎಸ್‌ಐಗೆ ನ್ಯಾಯಪೀಠ ನಿರ್ದೇಶನ ನೀಡಿತು.

'ಸಮೀಕ್ಷೆ ವೇಳೆ ಉತ್ಖನನ ನಡೆಸುವುದಿಲ್ಲ. ಕಟ್ಟಡಕ್ಕೆ ಹಾನಿಯಾಗುವ ರೀತಿಯಲ್ಲಿ ಸಮೀಕ್ಷೆ ನಡೆಸುವುದಿಲ್ಲ' ಎಂದು ಎಎಸ್‌ಐ ಹಾಗೂ ಉತ್ತರ ಪ್ರದೇಶ ಸರ್ಕಾರ ಪರ ಹಾಜರಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ನ್ಯಾಯಪೀಠಕ್ಕೆ ತಿಳಿಸಿದರು.

6ನೇ ಪುಟ ನೋಡಿ

'ಗೃಹ ಜ್ಯೋತಿ'ಗೆ ಇಂದು ಚಾಲನೆ

ಕಲಬುರಗಿ: ಚುನಾವಣೆ ಪ್ರಣಾಳಿಕೆಯಲ್ಲಿ ಘೋಷಿಸಿದ್ದ ಐದು ಗ್ಯಾರಂಟಿಗಳ ಪೈಕಿ ಪ್ರತಿ ಕುಟುಂಬಕ್ಕೆ 200 ಯೂನಿಟ್ ವಿದ್ಯುತ್ ಉಚಿತವಾಗಿ ನೀಡುವ 'ಗೃಹ ಜ್ಯೋತಿ' ಯೋಜನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶನಿವಾರ (ಆಗಸ್ಟ್ 5) ನಗರದಲ್ಲಿ ಚಾಲನೆ ನೀಡಲಿದ್ದಾರೆ.

8

ಚಿನಕುರಳಿ

ಪ್ರಕಾಶ್ ಶೆಟ್ಟಿ

ಸಾವಿನ ಸಂಖ್ಯೆ ಐದಕ್ಕೆ

ಕಲುಷಿತ ನೀರು ಪ್ರಕರಣ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಇಲ್ಲಿನ ಕವಾಡಿಗರಹಟ್ಟಿಯಲ್ಲಿ ಕಲುಷಿತ ನೀರು ಕುಡಿದು ತೀವ್ರವಾಗಿ ಅಸ್ವಸ್ಥರಾಗಿ ಆಸ್ಪತ್ರೆಗೆ ದಾಖಲಾಗಿದ್ದ ರುದ್ರಪ್ಪ (50) ಹಾಗೂ ಚಿಕಿತ್ಸೆ ಪಡೆದು ಮನೆಗೆ ಮರಳಿದ್ದ ಪಾರ್ವತಮ್ಮ (75) ಶುಕ್ರವಾರ ಮೃತಪಟ್ಟಿದ್ದಾರೆ. ಇದರಿಂದ ಕಲುಷಿತ ನೀರಿನಿಂದ ಸಾವಿಗೀಡಾದವರ ಸಂಖ್ಯೆ ಐದಕ್ಕೆ ಏರಿಕೆಯಾಗಿದೆ.

ವಾಂತಿ ಭೇದಿಯಿಂದ ಬಳಲಿದ ರುದ್ರಪ್ಪ ಅವರನ್ನು 2ರಂದು ಇಲ್ಲಿನ ಬಸವೇಶ್ವರ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ದಾಖಲಿಸಲಾಗಿತ್ತು. ನಿರ್ಜಲೀಕರಣ ಹಾಗೂ ರಕ್ತದೊತ್ತಡ ಕಡಿಮೆಯಾಗಿದ್ದರಿಂದ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಮುಂದುವರಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೇ ಅವರು ಶುಕ್ರವಾರ ನಸುಕಿನಲ್ಲಿ ಮೃತಪಟ್ಟಿದ್ದಾರೆ.

ಪಾರ್ಶ್ವವಾಯು ಪೀಡಿತರಾಗಿದ್ದ ಪಾರ್ವತಮ್ಮ ಗುರುವಾರ ಅಸ್ವಸ್ಥರಾಗಿದ್ದರು. ಕವಾಡಿಗರಹಟ್ಟಿಯ ತಾತ್ಕಾಲಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಮನೆಗೆ ಮರಳಿದ್ದರು. ಶುಕ್ರವಾರ ಬೆಳಿಗ್ಗೆ ಇವರು ಮೃತಪಟ್ಟಿದ್ದು, ಸಾವಿಗೆ ಪಾರ್ಶ್ವವಾಯು ಕಾರಣ ಎಂಬುದಾಗಿ ಆರೋಗ್ಯ ಇಲಾಖೆ ಹೇಳುತ್ತಿದೆ. ರಘು ಹಾಗೂ ಪ್ರವೀಣ್ ಎಂಬವರ ಸಾವಿಗೆ ಕುಲುಷಿತ ನೀರು ಕಾರಣ ಎಂಬುದು ಇನ್ನೂ ದೃಢಪಟ್ಟಿಲ್ಲ.

ಅಸ್ವಸ್ಥೆಗೆ ಗರ್ಭಪಾತ: ಕಲುಷಿತ ನೀರು ಕುಡಿದು ಅಸ್ವಸ್ಥರಾಗಿದ್ದ ತುಂಬು ಗರ್ಭಿಣಿಯೊಬ್ಬರಿಗೆ ಗರ್ಭಪಾತವಾಗಿದೆ. ವಾಂತಿ-ಭೇದಿ ಹೆಚ್ಚಾಗಿದ್ದರಿಂದ 8 ತಿಂಗಳ ಶಿಶು ಹೊಟ್ಟೆಯಲ್ಲಿಯೇ ಮೃತಪಟ್ಟಿದೆ.

6ನೇ ಪುಟ ನೋಡಿ

ಬಾಲಕಿ ಮೇಲೆ ಅತ್ಯಾಚಾರ: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹತ್ತು ವರ್ಷ ವಯಸ್ಸಿನ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ ಎಸಗಿರುವ ಆರೋಪದಡಿ ಖಾಸಗಿ ಶಾಲೆಯೊಂದರ ಪ್ರಾಂಶುಪಾಲ ಲ್ಯಾಂಬರ್ಟ್ ಪುಷ್ಪರಾಜ್ (65) ಅವರನ್ನು ವರ್ತೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

ಲ್ಯಾಂಬರ್ಟ್ ಪುಷ್ಪರಾಜ್

'ಆರೋಪಿ ಪುಷ್ಪರಾಜ್, ಸ್ವಂತ ಶಾಲೆ ನಡೆಸುತ್ತಿದ್ದಾನೆ. ಆತನೇ ಶಾಲೆಯ ಪ್ರಾಂಶುಪಾಲನಾಗಿದ್ದಾನೆ. ಸಂತ್ರಸ್ತ ಬಾಲಕಿಯ ಪೋಷಕರು ನೀಡಿರುವ ದೂರು ಆಧರಿಸಿ, ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೊ) ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

'ಪ್ರಕರಣ ದಾಖಲಾಗುತ್ತಿದ್ದಂತೆ ಪ್ರಾಂಶುಪಾಲನನ್ನು ಬಂಧಿಸಲಾಗಿದೆ. ಬಾಲಕಿ ಹಾಗೂ ಆರೋಪಿಯನ್ನು ಪ್ರತ್ಯೇಕವಾಗಿ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗಿದ್ದು, ಅದರ ವರದಿ ಬರಬೇಕಿದೆ' ಎಂದು ತಿಳಿಸಿದರು.

8ನೇ ಪುಟ ನೋಡಿ

₹ 250 ಕೋಟಿ ಸಂಗ್ರಹಿಸಲು ಬಿಡಿಎಗೆ ಗುರಿ: ಎಚ್‌.ಡಿ.ಕುಮಾರಸ್ವಾಮಿ ಆರೋಪ

'ಗುತ್ತಿಗೆದಾರರಿಂದ ಕಮಿಷನ್ ಸಂಗ್ರಹ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ಸಚಿವರು ಹಾಗೂ ಅವರ ಹಿಂಬಾಲಕರು ಗುತ್ತಿಗೆದಾರರಿಂದ ಕಮಿಷನ್ ಕೇಳಲು ಶುರು ಮಾಡಿದ್ದಾರೆ. ಅಲ್ಲದೇ, ₹ 250 ಕೋಟಿ ಸಂಗ್ರಹಿಸಲು ಬಿಡಿಎಗೆ ಗುರಿ ನಿಗದಿ ಮಾಡಲಾಗಿದೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಆರೋಪಿಸಿದರು.



ವಿದೇಶ ಪ್ರವಾಸ ಮುಗಿಸಿ ಬೆಂಗಳೂರಿಗೆ ಮರಳಿದ ಅವರು ಸುದ್ದಿಗಾರರ ಜತೆ ಮಾತನಾಡಿ ಸರ್ಕಾರದ ವಿರುದ್ಧ ಹರಿಹಾಯ್ದರು.

'ಗೃಹ ಇಲಾಖೆಯಲ್ಲಿ, ಪೊಲೀಸ್ ವರ್ಗಾವಣೆಯಲ್ಲಿ 'ವೈಎಸ್‌ಟಿ' ದಂಧೆಕೋರರು ಸಕ್ರಿಯರಾಗಿದ್ದಾರೆ. ಗರುಡ ಮಾಲ್ ಹತ್ತಿರದ ಪೊಲೀಸ್ ಮೆಸ್‌ನಲ್ಲಿ ನಡೆದ ಸಭೆಯಲ್ಲಿ ಮುಖ್ಯಮಂತ್ರಿ, ಗೃಹ ಸಚಿವರು, ಇಲಾಖೆಯ ಉನ್ನತ ಅಧಿಕಾರಿಗಳ ಜತೆಗೆ ಈ 'ವೈಎಸ್‌ಟಿ' ಸಂಗ್ರಹಿಸುವ ಮಧ್ಯವರ್ತಿಗಳನ್ನು ಕೂರಿಸಿಕೊಂಡು ಚರ್ಚೆ ಮಾಡಿದ್ದೇಕೆ' ಎಂದು ಪ್ರಶ್ನಿಸಿದರು.

'ರಾಜ್ಯದಲ್ಲಿ ಶೇಕಡವಾರು ಹಣ ಸಂಗ್ರಹ ಅವ್ಯಾಹತವಾಗಿ ನಡೆಯುತ್ತಿದೆ. ಸಚಿವರೊಬ್ಬರು ಗುತ್ತಿಗೆದಾರರಿಂದ ನೇರವಾಗಿ ಕಮೀಷನ್‌ಗೆ ಬೇಡಿಕೆ ಇಟ್ಟಿದ್ದಾರೆ. ಹಣ ತಂದಿದ್ದರೆ ಒಳಕ್ಕೆ ಬನ್ನಿ. ಇಲ್ಲವಾದರೆ ಹೊರಗೆ ಇರಿ ಎಂದು ಆ ಸಚಿವರ ಹಿಂಬಾಲಕರು ಸಚಿವರನ್ನು ಭೇಟಿಯಾಗಲು ಹೋಗಿದ್ದ ಗುತ್ತಿಗೆದಾರರಿಗೆ ತಾಕೀತು ಮಾಡಿದ್ದಾರೆ. ಇಂಥವರು ಭ್ರಷ್ಟಾಚಾರ ಕಡಿಮೆ ಮಾಡುತ್ತೇವೆ ಎಂದು ರಾಹುಲ್ ಗಾಂಧಿ ಅವರಿಗೆ ಹೇಳುತ್ತಾರೆ' ಎಂದು ಟೀಕಿಸಿದರು.

'ಸಂಗ್ರಹಿಸಿದ ಹಣ ದೆಹಲಿಗೆ ಕಳುಹಿಸಬೇಕು ಎನ್ನುತ್ತಾರೆ. ಪಟ್ಟಿ ಕೊಡುತ್ತಾರೆ. ಕರ್ನಾಟಕವನ್ನು ಈಸ್ಟ್ ಇಂಡಿಯಾ ಕಂಪನಿಯಂತೆ ಲೂಟಿ ಮಾಡುತ್ತಿದ್ದಾರೆ. ಜನರಿಗೆ ಗ್ಯಾರಂಟಿ ತುಪ್ಪ ಸವರಿ ವರ್ಗಾವಣೆ ದಂಧೆಯಲ್ಲಿ ಕೊಳ್ಳೆ ಹೊಡೆಯುತ್ತಿದೆ. ದೇಶಕ್ಕೆ ಸ್ವಾತಂತ್ರ್ಯ ಬಂದಾಗಿನಿಂದಲೂ ವಸೂಲಿ ಮಾಡುವುದೇ ಕಾಂಗ್ರೆಸ್ ಕೆಲಸ' ಎಂದು ಆರೋಪಿಸಿದರು.

34 ಸಚಿವರನ್ನು ದೆಹಲಿಗೆ ಕರೆದುಕೊಂಡು ಹೋಗಿದ್ದರು. ಅವರ ಹೈಕಮಾಂಡ್‌ಗೆ ಕಾರ್ಯಕ್ಷಮತೆಯ ವರದಿ ನೀಡಲು ಹೋಗಿಲ್ಲ. ಭ್ರಷ್ಟಾಚಾರದ ಲೆಕ್ಕಕೊಡಲು ಹೋಗಿದ್ದಾರೆ. ಲೂಟಿ ಮಾಡಲು ಖಜಾನೆ ಖಾಲಿ ಎಂದು ತೋರಿಸುವ ಹುನ್ನಾರ ನಡೆಸಿದ್ದಾರೆ ಎಂದರು.

8ನೇ ಪುಟ ನೋಡಿ

ಹಿಟ್ ಅಂಡ್ ರನ್ ಕೇಸ್: ಸಿ.ಎಂ

ಬೆಂಗಳೂರು: 'ಎಚ್‌.ಡಿ. ಕುಮಾರಸ್ವಾಮಿಯವರದ್ದು ಯಾವಾಗಲೂ ಹಿಟ್ ಅಂಡ್ ರನ್ ಕೇಸ್. ವೃಥಾ ಆರೋಪಗಳನ್ನು ಮಾಡುತ್ತಾರೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

'ಈ ಹಿಂದೆ ಪೆನ್‌ಡ್ರೈವ್ ತೋರಿಸಿದ್ದರು. ಅದನ್ನು ಸಾಬೀತು ಮಾಡಿದ್ರಾ? ಜೇಬಲ್ಲಿ ಇಟ್ಟುಕೊಂಡು ಏನು ಮಾಡ್ತಾರೆ? ಅವರ ಬಳಿ ಪೆನ್‌ಡ್ರೈವ್ ಇದ್ದರೆ ತಾನೇ ಹೊರಗೆ ಬಿಡೋದು' ಎಂದರು.ಅನ್ನಭಾಗ್ಯ ಯೋಜನೆಗೆ ಅಕ್ಕಿ ನೀಡುವ ಬಗ್ಗೆ ಕೇಂದ್ರ ಸರ್ಕಾರದ ಸಚಿವ ಪೀಯೂಷ್ ಗೋಯಲ್ ಅವರೊಂದಿಗೆ ಈಗಾಗಲೇ ಮಾತನಾಡಿದ್ದು, 'ಅಕ್ಕಿ ನೀಡುವುದಿಲ್ಲ' ಎಂದು ಹೇಳಿದ್ದಾರೆ. ಈ ವಿಚಾರದಲ್ಲಿ ಅವರು ರಾಜಕೀಯ ಮಾಡಿದ್ದಾರೆ' ಎಂದು ತಿಳಿಸಿದರು.

ಪ್ರಧಾನಿ ನರೇಂದ್ರ ಮೋದಿ ಅವರೊಂದಿಗಿನ ಭೇಟಿ ಸೌಹಾರ್ದಯುತವಾದದ್ದು. ಯಾವುದೇ ರೀತಿಯ ಬೇಡಿಕೆಗಳಿಗೆ ಮನವಿ ಸಲ್ಲಿಸಿಲ್ಲ ಎಂದು ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

ಹಲವೆಡೆ ವಿದ್ಯುತ್ ವ್ಯತ್ಯಯ

ಬೆಂಗಳೂರು: ಜಿಗಣಿ, ಸಮಂದೂರು ಹಾಗೂ ಆನೇಕಲ್ ವಿದ್ಯುತ್ ನಿರ್ವಹಣಾ ಕೇಂದ್ರದಲ್ಲಿ ತ್ರೈ ಮಾಸಿಕ ನಿರ್ವಹಣೆ ಕಾಮಗಾರಿ ಕೈಗೊಂಡಿರುವುದರಿಂದ ಇದೇ 6ರಂದು ಬೆಳಿಗ್ಗೆ 10ರಿಂದ ಮಧ್ಯಾಹ್ನ 3 ಗಂಟೆವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ತಿಳಿಸಿದೆ.

ಸ್ಥಳಗಳು: ಜಿಗಣಿ, ಕಲ್ಲುಬಾಳು, ಹಾರಗದ್ದೆ, ಮಾದಪಟ್ಟಣ, ಗೊಲ್ಲಹಳ್ಳಿ, ಕೋನಸಂದ್ರ, ಆನೇಕಲ್ ಪಟ್ಟಣ, ಆನೇಕಲ್, ಗ್ರಾಮಾಂತರ, ಕರ್ಪೂರು ಗ್ರಾಮ, ಕಾವಲುಹೊಸಹಳ್ಳಿ, ಕಗ್ಗಲಿಪುರ, ಸಮಂದೂರು, ಮಾಯಸಂದ್ರ, ಗಾಂಧಿನಗರ, ಚೊಕ್ಕಸಂದ್ರ ಮಡಿವಾಳ, ಗುಡ್ಡನಹಳ್ಳಿ, ಹಳೆಹಳ್ಳಿ, ಭಕ್ತಿಪುರ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಕ್ಷತ್ರಿಯ ಮಹಾಸಭಾ ಸಭೆ ನಾಳೆ

ಬೆಂಗಳೂರು: ಅಖಿಲ ಭಾರತ ಭಾವಸಾರ ಕ್ಷತ್ರಿಯ ಮಹಾಸಭಾದ ಸಮಾವೇಶ ಮತ್ತು ಕಾರ್ಯಕಾರಿಣಿ ಸಭೆ ಆಗಸ್ಟ್ 6ರಂದು ವಸಂತನಗರದಲ್ಲಿರುವ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಜರುಗಲಿದೆ.

ಈ ಸಮಾವೇಶವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟಿಸಲಿದ್ದಾರೆ. ಸಚಿವರಾದ ದಿನೇಶ್ ಗುಂಡೂರಾವ್, ವಿಧಾನಸಭೆ ಉಪಸಭಾಪತಿ ರುದ್ರಪ್ಪ ಎಂ. ಲಮಾಣಿ, ಪ್ರಭಾಕರ ದಾದ ಭೋಧಲೆ ಸ್ವಾಮೀಜಿ, ಮಹಾಸಭಾದ ರಾಜ್ಯಧ್ಯಕ್ಷ ಎನ್.ವಿ. ಶ್ರೀನಿವಾಸರಾವ್ ಪಿಸ್ಸೆ, ರಮೇಶ್ ತಾಪ್ಸೆ ಭಾಗವಹಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಹಾಗೂ ಡಾ. ಬಲ್ವಿಂದರ್ ಸಿಂಗ್ ಠಕ್ಕರ್ ಅವರು ಉಭಯ ಕುಶಲೋಪರಿ ವಿಚಾರಿಸಿಕೊಂಡರು. ಡಾ. ಸಂಜಯ್ ಲಾಭ್ ಇದ್ದಾರೆ

‘ಪ್ರತಿ 700 ಮಕ್ಕಳಲ್ಲಿ ಒಂದು ಮಗುವಿಗೆ ಸೀಳು ತುಟಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೇಶದಲ್ಲಿ ಪ್ರತಿ 700 ಮಕ್ಕಳಲ್ಲಿ ತಲಾ ಒಂದು ಮಗು ಸೀಳು ತುಟಿ ಸಮಸ್ಯೆಯಿಂದ ಜನಿಸುತ್ತಿದೆ. ಪ್ರತಿ ವರ್ಷ 35 ಸಾವಿರಕ್ಕೂ ಹೆಚ್ಚು ಮಕ್ಕಳು ಇಂತಹ ಸಮಸ್ಯೆಯೊಂದಿಗೆ ಜನಿಸುತ್ತಾರೆ’ ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ತಿಳಿಸಿದರು.

ದಯಾನಂದ್ ಸಾಗರ್ ದಂತ ವಿಜ್ಞಾನಗಳ ಕಾಲೇಜು ನಗರದಲ್ಲಿ ಶುಕ್ರವಾರ ಹಮ್ಮಿಕೊಂಡ ರಾಷ್ಟ್ರಮಟ್ಟದ ಸೀಳುತುಟಿ ಕಾರ್ಯಾಗಾರ ಉದ್ಘಾಟಿಸಿ, ಮಾತನಾಡಿದರು.

‘ಹುಟ್ಟಿನಿಂದಲೇ ಕಾಣಿಸಿಕೊಳ್ಳುವ ಸೀಳು ತುಟಿ ಸಮಸ್ಯೆಯು ದೈಹಿಕ ಪರಿಣಾಮದ ಜತೆಗೆ ಭಾವನಾತ್ಮಕ, ಸಾಮಾಜಿಕ ಮತ್ತು ಮಾನಸಿಕ ಪರಿಣಾಮವನ್ನೂ ಬೀರಲಿದೆ. ಇಂತಹ ಸಮಸ್ಯೆಗಳಿಗೆ ಆಧುನಿಕ ಚಿಕಿತ್ಸೆ ಜೊತೆಗೆ ಮಾನವೀಯತೆಯ ವೈದ್ಯಕೀಯ ಸೇವೆಯೂ ಅಗತ್ಯ’ ಎಂದು ಹೇಳಿದರು.

ದಯಾನಂದ್ ಸಾಗರ್ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಮತ್ತು ಕುಲಪತಿ ಡಾ. ಹೇಮಚಂದ್ರ ಸಾಗರ್, ‘ಕಾರ್ಯಾಗಾರವು ಭವಿಷ್ಯದ ಚಿಕಿತ್ಸೆಗಳಿಗೆ ಮುನ್ನುಡಿಯಾಗಲಿದ್ದು, ಗುಣಮಟ್ಟದ ವೈದ್ಯಕೀಯ ಸೇವೆ ಒದಗಿಸಲು ಕೂಡ ಸಹಕಾರಿ ಆಗುತ್ತದೆ’ ಎಂದರು.

ಇಂಡಿಯನ್ ಆರ್ಥೋಡಾಂಟಿಕ್ ಸೊಸೈಟಿ ಅಧ್ಯಕ್ಷ ಡಾ. ಬಲ್ವಿಂದರ್ ಸಿಂಗ್ ಠಕ್ಕರ್, ‘ಮಗು ಹುಟ್ಟಿದಾಗಲೇ ಚಿಕಿತ್ಸೆ ನೀಡಿದರೆ ಮುಖ ವಿರೂಪವಾಗುವುದನ್ನು ತಡೆಗಟ್ಟಲು ಸಾಧ್ಯ. ಮಕ್ಕಳ ತಜ್ಞರು, ವಾಕ್-ಶ್ರವಣ ತಜ್ಞರ ನೆರವಿನಿಂದ ಸಮಸ್ಯೆಯನ್ನು ಶಾಶ್ವತವಾಗಿ ನಿವಾರಿಸಬಹುದಾಗಿದೆ’ ಎಂದರು.

ದಯಾನಂದ ಸಾಗರ್ ಶಿಕ್ಷಣ ಸಂಸ್ಥೆಗಳ ಪ್ರಾಂಶುಪಾಲ ಡಾ. ಹೇಮಂತ್, ಕಾರ್ಯದರ್ಶಿ ಗಾಲಿಸ್ವಾಮಿ ಮತ್ತು ಜಂಟಿ ಕಾರ್ಯದರ್ಶಿ ಟಿಂಟಿಶಾ ಎಚ್. ಸಾರ್ಗ್, ಇಂಡಿಯನ್ ಆರ್ಥೋ ಡಾಂಟಿಕ್ ಸೊಸೈಟಿ ಕಾರ್ಯದರ್ಶಿ ಡಾ. ಸಂಜಯ್ ಲಾಭ್ ಇದ್ದರು.

ಸಿಇಟಿ: 9 ಸಾವಿರ ಸೀಟು ಹಂಚಿಕೆಗೆ ಒಪ್ಪಿಗೆ

ಬೆಂಗಳೂರು: ಎಂಜಿನಿಯರಿಂಗ್ ಕೋರ್ಸ್‌ಗಳ ಪ್ರವೇಶಕ್ಕೆ ಸೀಟು ಹಂಚಿಕೆ ಪಟ್ಟಿಯಿಂದ ಕೈಬಿಟ್ಟಿದ್ದ 9 ಸಾವಿರ ಸೀಟುಗಳನ್ನು ಉನ್ನತ ಶಿಕ್ಷಣ ಇಲಾಖೆ ಮತ್ತೆ ಸೇರಿಸಿದ್ದು, ಹಂಚಿಕೆಗೆ ಲಭ್ಯವಾಗಲಿವೆ.

ರಾಜ್ಯದ ಹಲವು ಎಂಜಿನಿಯರಿಂಗ್ ಕಾಲೇಜುಗಳು ನಿರಾಕ್ಷೇಪಣಾ ಪ್ರಮಾಣ ಪತ್ರ ಸೇರಿದಂತೆ ಕೆಲವು ದಾಖಲೆಗಳನ್ನು ಒದಗಿಸಿಲ್ಲ ಎನ್ನುವ ಕಾರಣಕ್ಕೆ ಅವುಗಳನ್ನು ಸೀಟು ಹಂಚಿಕೆ ಪ್ರಕ್ರಿಯೆಯಿಂದ ಹೊರಗಿಡಲಾಗಿತ್ತು. ಶುಕ್ರವಾರ ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳ ಜತೆ ಸಭೆ ನಡೆಸಿದ ನಂತರ ಉನ್ನತ ಶಿಕ್ಷಣ ಇಲಾಖೆ ಕೆಲ ಷರತ್ತುಗಳ ಆಧಾರದಲ್ಲಿ ಸೀಟು ಹಂಚಿಕೆಗೆ ಒಪ್ಪಿಗೆ ಸೂಚಿಸಿದೆ.

ನಿಗದಿತ ಅವಧಿಯ ಒಳಗೆ ಅಗತ್ಯ ಇರುವ ದಾಖಲೆಗಳನ್ನು ಒದಗಿಸಲು ಕಾಲೇಜು ಆಡಳಿತ ಮಂಡಳಿಗಳಿಗೆ ಸೂಚಿಸಲಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್.ರಮ್ಯಾ ಹೇಳಿದರು.

ನೀಟ್: ಇಂದಿನಿಂದ ‘ಆಪ್ಷನ್ ಎಂಟ್ರಿ’: ವೈದ್ಯಕೀಯ, ದಂತ ವೈದ್ಯಕೀಯ, ಎಂಜಿನಿಯರಿಂಗ್ ಸೇರಿದಂತೆ ಎಲ್ಲ ಕೋರ್ಸ್‌ಗಳಿಗೆ ‘ಆಪ್ಷನ್ ಎಂಟ್ರಿ’ ಮಾಡುವ ಪ್ರಕ್ರಿಯೆ ಆಗಸ್ಟ್ 5ರಂದು ಸಂಜೆ ಆರಂಭವಾಗಲಿದೆ. ಆಗಸ್ಟ್ 9ರವರೆಗೆ ಅವಕಾಶ ಇರುತ್ತದೆ. ಎಲ್ಲ ಕೋರ್ಸ್‌ಗಳಿಗೂ ಏಕಕಾಲದಲ್ಲಿ ಆಯ್ಕೆ ಮಾಡುವ ಅವಕಾಶ ಕಲ್ಪಿಸಲಾಗಿದೆ.

ಸಿಇಟಿ, ನೀಟ್‌ಗೆ ಒಂದೇ ರಹಸ್ಯ ಸಂಖ್ಯೆ: ಆಫ್‌ಲೈನ್ ಮೂಲಕ ದಾಖಲೆಗಳನ್ನು ಪರಿಶೀಲಿಸಿದ ಮತ್ತು ಸಿಇಟಿ ಪರಿಶೀಲನೆ ಪೂರ್ಣಗೊಳಿಸಿರುವ ಅಭ್ಯರ್ಥಿಗಳು ವೈದ್ಯಕೀಯ ಕೋರ್ಸುಗಳ ಪ್ರವೇಶಕ್ಕೆ ಅರ್ಹರಾಗಿದ್ದರೆ, ನೀಟ್ ನೋಂದಣಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದ್ದಲ್ಲಿ ಅದೇ ರಹಸ್ಯ ಸಂಖ್ಯೆಯನ್ನು (ಸೀಕ್ರೇಟ್ ಕೀ) ವೈದ್ಯಕೀಯ ಕೋರ್ಸ್‌ಗಳ ‘ಆಪ್ಷನ್ ಎಂಟ್ರಿ’ಗೆ ಬಳಸಬೇಕು ಎಂದು ಮಾಹಿತಿ ನೀಡಿದರು.

ರಾಜ್ಯ ಮೀಸಲಾತಿ ಸಂರಕ್ಷಣಾ ಸಮಾವೇಶ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟದಿಂದ ಆಗಸ್ಟ್ 6ರಂದು ‘ರಾಜ್ಯ ಮೀಸಲಾತಿ ಸಂರಕ್ಷಣಾ ಸಮಾವೇಶ’ವು ಅರಮನೆ ಮೈದಾನದ ವೈಟ್ ಪೆಟಲ್ಸ್ ಗಾರ್ಡೇನಿಯಾ ಸಭಾಂಗಣದಲ್ಲಿ ಆಯೋಜಿಲಾಗಿದೆ.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಅನಂತ್ ನಾಯಕ್, ‘ಈ ಸಮಾವೇಶದಲ್ಲಿ ಸಾಂವಿಧಾನಿಕ ಸಾಧನೆ ಮತ್ತು ಸವಾಲುಗಳ ಬಗ್ಗೆ ಪರಾಮರ್ಶೆ, ಸಂಸ್ಕೃತಿ ಸಮ್ಮಿಲನ ಮತ್ತು ಅಭಿನಂದನಾ ಕಾರ್ಯಕ್ರಮ ನಡೆಯಲಿದೆ’ ಎಂದು ತಿಳಿಸಿದರು.

ಸಮಾವೇಶದಲ್ಲಿ ವಿಧಾನಸಭೆ ಉಪಸಭಾಪತಿ ರುದ್ರಪ್ಪ ಲಮಾಣಿ, ಸಚಿವರಾದ ಶಿವರಾಜ್ ತಂಗಡಗಿ, ಜಮೀರ್ ಅಹಮದ್ ಖಾನ್, ಅರವಿಂದ ಲಿಂಬಾವಳಿ, ಒಕ್ಕೂಟದ ರಾಜ್ಯಾಧ್ಯಕ್ಷ ರವಿ ಮಾಕಳಿ ಭಾಗವಹಿಸಲಿದ್ದಾರೆ.

‘0001’ ನೋಂದಣಿ ಸಂಖ್ಯೆ ₹ 19.25 ಲಕ್ಷಕ್ಕೆ ಹರಾಜು

ಬೆಂಗಳೂರು: ನಗರದ ಎಚ್‌ಎಸ್‌ಆರ್ ಲೇಔಟ್‌ನ ಸಾರಿಗೆ ಇಲಾಖೆ ಪ್ರಾದೇಶಿಕ ಕಚೇರಿಯಲ್ಲಿ ನಡೆದ ಹರಾಜಿನಲ್ಲಿ ಹೊಸ ಎನ್‌ಬಿ ಸರಣಿಯ ನೋಂದಣಿ ಸಂಖ್ಯೆಗೆ ಭಾರೀ ಬೇಡಿಕೆ ಬಂದಿತ್ತು.

‘0001’ ನೋಂದಣಿ ಸಂಖ್ಯೆ ₹ 19.25 ಲಕ್ಷಕ್ಕೆ ಹರಾಜಾಗಿದೆ. ‘ಕೆಎ 01/ಎನ್‌ಬಿ’ ಆಕರ್ಷಕ ಸಂಖ್ಯೆಗಳ ಸಾರ್ವಜನಿಕ ಬಹಿರಂಗ ಹರಾಜಿನಲ್ಲಿ ₹ 61 ಲಕ್ಷ ರಾಜಸ್ವ ಸಂಗ್ರಹವಾಗಿದ್ದು ಬಹಿರಂಗ ಹರಾಜಿನಲ್ಲಿ 28 ಮುಂಗಡ ಸಂಖ್ಯೆಗಳನ್ನು ಹರಾಜು ಮಾಡಲಾಗಿದೆ. ಪ್ರತಿ ನೋಂದಣಿ ಸಂಖ್ಯೆಗೆ ಅರ್ಜಿ ಶುಲ್ಕ ₹ 75 ಸಾವಿರ ನಿಗದಿ ಪಡಿಸಲಾಗಿತ್ತು.

ಎನ್‌ಬಿ ‘0001’ ಸಂಖ್ಯೆಗೆ ₹ 19.25 ಲಕ್ಷ, ಎನ್‌ಬಿ ‘8055’ ಸಂಖ್ಯೆಯು ₹ 5.15 ಲಕ್ಷ, ಎನ್‌ಬಿ ‘9999’ ಸಂಖ್ಯೆಯು ₹ 5.5 ಲಕ್ಷ, ಎನ್‌ಬಿ ‘6666’ ಸಂಖ್ಯೆಗೆ ₹ 4.25 ಲಕ್ಷ, ಎನ್‌ಬಿ ‘0009’ ಸಂಖ್ಯೆಗೆ ₹ 3.70 ಲಕ್ಷ, ಎನ್‌ಬಿ ‘0999’ ಸಂಖ್ಯೆಗೆ ₹ 2 ಲಕ್ಷ, ಎನ್‌ಬಿ ‘0666’ ಸಂಖ್ಯೆಗೆ ₹ 1.80 ಲಕ್ಷಕ್ಕೆ ಹರಾಜು ಮಾಡಲಾಯಿತು ಎಂದು ಸಾರಿಗೆ ಮತ್ತು ರಸ್ತೆ ಸುರಕ್ಷತೆ ಆಯುಕ್ತರು ತಿಳಿಸಿದ್ದಾರೆ.

ಎನ್‌ಬಿ ‘8055’ ಅನ್ನು ‘ಬಾಸ್’ ಎಂದು ಪರಿಗಣಿಸುತ್ತಾರೆ.

ಶಾಸನಶಾಸ್ತ್ರ ಡಿಪ್ಲೊಮಾ ತರಗತಿಗೆ ಅರ್ಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು 2023-24ನೇ ಸಾಲಿನ ‘ಶಾಸನಶಾಸ್ತ್ರ ಡಿಪ್ಲೊಮಾ’ ತರಗತಿಗೆ ಅರ್ಜಿ ಆಹ್ವಾನಿಸಿದೆ.

ಇದು ಒಂಬತ್ತು ತಿಂಗಳ ತರಗತಿಗಳಾಗಿದ್ದು, ವಾರಕ್ಕೆ 4 ದಿನ ತರಗತಿಗಳು ನಡೆಯುತ್ತವೆ. ಶಾಸನಶಾಸ್ತ್ರದಲ್ಲಿ ಶಾಸನಗಳ ಲಿಪಿಗಳನ್ನು ಓದುವ, ಶಾಸನಗಳ ಸಂಗ್ರಹ ವಿಧಾನ, ಅಧ್ಯಯನ, ಸಂಪ್ರಬಂಧ ರಚನೆ ಇತ್ಯಾದಿ ಮೌಲಿಕ ಅಂಶಗಳನ್ನು ತರಗತಿಗಳಲ್ಲಿ ಬೋಧಿಸಲಾಗುತ್ತದೆ.

ಇದೇ 5ರಿಂದ ಇಲ್ಲಿನ ಚಾಮರಾಜಪೇಟೆಯಲ್ಲಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಮಾರಾಟ ಮಳಿಗೆಯಲ್ಲಿ ₹ 25 ಶುಲ್ಕ ಪಾವತಿಸಿ, ಪರೀಕ್ಷಾ ನಿಯಮಾವಳಿ ಹಾಗೂ ಅರ್ಜಿಯ ಪ್ರತಿಯನ್ನು ಪಡೆಯಬಹುದು. ಪರಿಷತ್ತಿನ ಜಾಲತಾಣ www.kasapa.in ಮೂಲಕವೂ ಅರ್ಜಿಗಳನ್ನು ಪಡೆದುಕೊಳ್ಳಬಹುದು. ಅರ್ಜಿ ಸಲ್ಲಿಸಲು ಇದೇ 31 ಕೊನೆಯ ದಿನಾಂಕವಾಗಿದೆ. ಬಳಿಕ ₹ 50 ದಂಡ ಪಾವತಿಸಿ, ಸೆ.15ರವರೆಗೆ ಅರ್ಜಿ ಸಲ್ಲಿಸಬಹುದು ಎಂದು ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದ್ದಾರೆ.

ಸಂಪರ್ಕಕ್ಕೆ: 080 26612991 ಅಥವಾ 26623584

fabindia
60 YEARS OF CELEBRATING INDIA ESTABLISHED 1960
CLEARANCE SALE
FLAT 50%* OFF ON SELECT MERCHANDISE
10 am - 8 pm
Venue :
Hema Chandra Kalyan Mahal, 2nd Block, Jayanagar, (Near Ashoka Pillar), Bangalore – 11
S K R Convention Hall, Thubarahalli, Kundalahalli Gate, Varthur Main Road, Bangalore - 66
fabfamily | fabindia.com | ALL COVID-19 PROTOCOLS WILL BE TAKEN CARE OF *T&C Apply
Surya Agency Private Limited

ರಕ್ಷಣಾ ವಿದ್ಯುನ್ಮಾನ ಮತ್ತು ಅದಕ್ಕೂ ಮೀರಿದ
ಭಾರತ್ ಎಲೆಕ್ಟ್ರಾನಿಕ್ಸ್ BHARAT ELECTRONICS
QUALITY. TECHNOLOGY. INNOVATION.
ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್
(ರಕ್ಷಣಾ ಸಚಿವಾಲಯದಡಿಯ ಭಾರತ ಸರ್ಕಾರದ ಒಂದು ಉದ್ಯಮ)
(CIN: L32309KA1954GOI000787)
ನೋಂದಾಯಿತ ಮತ್ತು ಪ್ರಧಾನ ಕಛೇರಿ: ಹೊರವರ್ತುಲ ರಸ್ತೆ, ನಾಗವಾರ, ಬೆಂಗಳೂರು – 560 045.
ಫೋನ್: 080-25039300, 25039266, ಫ್ಯಾಕ್ಸ್: 080-25039266, ಇ–ಮೇಲ್: secretary@bel.co.in, ವೆಬ್‌ಸೈಟ್: www.bel-india.in

69ನೇ ವಾರ್ಷಿಕ ಸರ್ವಸದಸ್ಯರ ಸಭೆ, ಇ–ಮತದಾನ ಮತ್ತು ಲೆಕ್ಕ ಪುಸ್ತಕ ಅಂತಿಮಗೊಳಿಸುವ ಸೂಚನೆ

ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್‌ನ ಸರ್ವಸದಸ್ಯರ 69ನೇ ವಾರ್ಷಿಕ ಮಹಾಸಭೆಯು (AGM) ಸೋಮವಾರ, 28ನೇ ಆಗಸ್ಟ್, 2023 ರಂದು ಬೆಳಿಗ್ಗೆ 10:00 ಗಂಟೆಗೆ (ಐಎಸ್‌ಟಿ) ವಿಸಿ / ಓಎವಿಎಂ ಮೂಲಕ ನಡೆಯಲಿದೆ ಎಂದು ಈ ಮೂಲಕ ತಿಳಿಸಲಾಗುತ್ತದೆ.

ಕಾರ್ಪೊರೇಟ್ ವ್ಯವಹಾರಿಗಳು (“ಎಮ್.ಸಿ.ಎ”) ಸಾಮಾನ್ಯ ಸುತ್ತೋಲೆಗಳ ಸಂಖ್ಯೆ ದಿನಾಂಕ 8ನೇ ಏಪ್ರಿಲ್ 2020ರ ಸಂಖ್ಯೆ 14/2020, ಅನ್ನು ದಿನಾಂಕ 13ನೇ ಏಪ್ರಿಲ್ 2020ರ ಸಂಖ್ಯೆ 17/2020, 5ನೇ ಮೇ 2020ರ ಸಂಖ್ಯೆ 20/2020, 5ನೇ ಮೇ 2022ರ 2/2022, ನೂತನವಾಗಿ ದಿನಾಂಕ 28ನೇ ಡಿಸೆಂಬರ್ 2022ರ 10/2022 ಅನ್ನು ಜೊತೆ ಓದಲಾಗಿದ್ದು ಮತ್ತು ಭಾರತೀಯ ಭದ್ರತೆಗಳು ಮತ್ತು ವಿನಿಮಯ ಮಂಡಳಿಯ ದಿನಾಂಕ 15ನೇ ಜನವರಿ 2023ರ ಸುತ್ತೋಲೆ ಸಂಖ್ಯೆ ಎಸ್.ಈ.ಬಿ.ಐ./ಎಚ್.ಒ./ಸಿ.ಎಫ್.ಡಿ./ಪಿ.ಒಡಿ–2/ಪಿ./ಸಿ.ಐ.ಆರ್./2023/4 ರಲ್ಲಿ ತಿಳಿಸಿದಂತೆ (ಸಮಗ್ರವಾಗಿ ಸುತ್ತೋಲೆಗಳು ಎಂದು ಉಲ್ಲೇಖವಾಗಿದ್ದು), ಇದಕ್ಕೆ ಸಂಬಂಧಿಸಿದಂತೆ ಇತರೆ ಅನ್ವಯ ಸುತ್ತೋಲೆಗಳಲ್ಲಿ ತಿಳಿಸಿದಂತೆ ವಿಡಿಯೋ ಕಾನ್ಫರೆನ್ಸ್ (ವಿ.ಸಿ.) ಅಥವಾ ಇತರ ಶ್ರವ್ಯ ದೃಶ್ಯ ಮಾಧ್ಯಮ (ಒ.ಎ.ವಿ.ಎಂ) ಮೂಲಕ ಸಾಮಾನ್ಯ ಸ್ಥಳದಲ್ಲಿ ಸದಸ್ಯರ ಭೌತಿಕ ಉಪಸ್ಥಿತಿ ಇಲ್ಲದೆ ವಾರ್ಷಿಕ ಸರ್ವ ಸದಸ್ಯರ ಸಭೆಯನ್ನು (“ಎಜಿಎಂ”) ನಡೆಸಲು ಅನುಮತಿ ನೀಡಿದೆ. ಕಂಪನಿ ಕಾಯ್ದೆ 2013 (“ಕಾಯ್ದೆ”), ಎಸ್.ಈ.ಬಿ.ಐ. (ಬಾಧ್ಯತೆಗಳು ಮತ್ತು ಅವಶ್ಯಕತೆಗಳ ಪ್ರಕಟೀಕರಣ ಪಟ್ಟಿ) ವಿನಿಮಯಗಳು 2015 (“ಪಟ್ಟಿ ವಿನಿಮಗಳು”) ನಿಬಂಧನೆಗಳು ಮತ್ತು ಸುತ್ತೋಲೆಗಳನ್ನು ಪಾಲಿಸುವುದರೊಂದಿಗೆ, ವಾರ್ಷಿಕ ಸರ್ವ ಸದಸ್ಯರ ಸಭೆಯನ್ನು (“ನೋಟಿಸು”) ನೋಟಿಸಿನಲ್ಲಿ ತಿಳಿಸಿದಂತೆ ವ್ಯವಹಾರಗಳನ್ನು ನಡೆಸಲು ವಿಡಿಯೋ ಕಾನ್ಫರೆನ್ಸ್ (ವಿ.ಸಿ.) / ಇತರ ಶ್ರವ್ಯ ದೃಶ್ಯ ಮಾಧ್ಯಮದ (ಒ.ಎ.ವಿ.ಎಂ) ಮೂಲಕ ಕಂಪನಿಯ ವಾರ್ಷಿಕ ಸರ್ವ ಸದಸ್ಯರ ಸಭೆಯನ್ನು ಆಯೋಜಿಸಲಾಗುತ್ತಿದೆ.

2022–23ರ ಹಣಕಾಸು ವರ್ಷದ ಏಕೀಕೃತ ವಾರ್ಷಿಕ ವರದಿಯೊಂದಿಗೆ ಎಜಿಎಂ ಅನ್ನು ಕರೆಯುವ ಸೂಚನೆಯನ್ನು ಎಲೆಕ್ಟ್ರಾನಿಕ್ ಮಾಧ್ಯಮದ ಮೂಲಕ ಎಲ್ಲ ಸದಸ್ಯರಿಗೆ ಅವರ ನೊಂದಾಯಿತ ಇ–ಮೇಲ್ ವಿಳಾಸಗಳಿಗೆ, ಠೇವಣಿಯಲ್ಲಿ ಭಾಗವಹಿಸುವವರು (“ಡಿಪಿಗಳು”) / ಕಂಪನಿಯ ರಿಜಿಸ್ಟ್ರಾರ್ ಮತ್ತು ವರ್ಗಾವಣೆ ಏಜೆಂಟ್ ಅಂದರೆ, ಇಂಟಿಗ್ರೇಟೆಡ್ ರಿಜಿಸ್ಟ್ರಿ ಮ್ಯಾನೇಜ್ಮೆಂಟ್ ಸರ್ವೀಸಸ್ ಪ್ರೈ. ಲಿಮಿಟೆಡ್ ಗೆ (“ಆರ್‌ಟಿಎ”) ಕಳಿಸಲಾಗುತ್ತದೆ. ಈ ಮೇಲೆ ತಿಳಿಸಲಾದ ದಾಖಲೆಗಳನ್ನು ಕಂಪನಿಯ ವೆಬ್‌ಸೈಟ್ www.bel-india.in ನಲ್ಲಿ ಸಹ ‘ಹೂಡಿಕೆದಾರರು’ ಭಾಗದ ಅಡಿಯಲ್ಲಿ ಮತ್ತು ಷೇರು ವಿನಿಮಯಗಳು ಅಂದರೆ, ಬಿ.ಎಸ್.ಇ. ಲಿಮಿಟೆಡ್ ಮತ್ತು ಭಾರತೀಯ ರಾಷ್ಟ್ರ ಷೇರು ವಿನಿಮಯ ಕ್ರಮಾನುಸಾರ www.bseindia.com ಮತ್ತು www.nseindia.com ರಲ್ಲಿ ಕೂಡ ಒದಗಿಸಲಾಗಿದೆ. ಹೆಚ್ಚುವರಿಯಾಗಿ ಸೆಂಟ್ರಲ್ ಡಿಪಾಸಿಟರಿ ಸರ್ವೀಸಸ್ (ಇಂಡಿಯಾ) ಲಿಮಿಟೆಡ್ (ಸಿ.ಡಿ.ಎಸ್.ಎಲ್) ನ ವೆಬ್‌ಸೈಟ್ ನಲ್ಲಿ ಸಹ ನೋಟಿಸ್ ಲಭ್ಯವಿರುತ್ತದೆ.

ಎಜಿಎಂ ಪ್ರಾರಂಭವಾಗುವ ನಿಗದಿತ ಸಮಯಕ್ಕೆ 30 ನಿಮಿಷಗಳ ಮೊದಲು ಮತ್ತು ಎಜಿಎಂ ಸಮಯದಲ್ಲಿ ಸದಸ್ಯರಿಗೆ ಎಜಿಎಂಗೆ ವಿಸಿ / ಒಎವಿಎಂ ಮೂಲಕ ಲಾಗಿನ್ ಬಳಸಿ ಮತ್ತು ಕಂಪನಿಯ ಎಜಿಎಂಗೆ ಇವಿಎಸ್‌ಎನ್ ಆಯ್ಕೆಮಾಡಿ ಸೇರಲು ಅನುಮತಿಸಲಾಗಿದೆ. www.evotingindia.com ವಿಸಿ / ಒಎವಿಎಂ ಮೂಲಕ ಎಜಿಎಂಗೆ ಸೇರುವ ವಿಧಾನವನ್ನು ನೋಟಿಸ್‌ನಲ್ಲಿ ಉಲ್ಲೇಖಿಸಲಾಗಿದೆ.

ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014ರ ನಿಯಮ 10 ಮತ್ತು ನಿಯಮಗಳು ನಿಯಂತ್ರಣ 42ರೊಂದಿಗೆ ಕಾಯ್ದೆಯ ಸೆಕ್ಷನ್ 91ರ ಅನುಸಾರ ನೋಟಿಸ್ ನೀಡಲಾಗಿದ್ದು ಮತ್ತು 2022–23ನೇ ಹಣಕಾಸಿನ ವರ್ಷಕ್ಕೆ 69ನೇ ಏಜಿಎಂ ಹಾಗೂ ಅಂತಿಮ ಡಿವಿಡೆಂಡಅನ್ನು ಪಾವತಿಸುವ ಸಲುವಾಗಿ ಕಂಪನಿಯ ಸದಸ್ಯರ ನೋಂದಣಿ ಮತ್ತು ಷೇರು ವರ್ಗಾವಣೆ ಪುಸ್ತಕಗಳು **ಶುಕ್ರವಾರ 18ನೇ ಆಗಸ್ಟ್, 2023 ರಿಂದ ಭಾನುವಾರ 20ನೇ ಆಗಸ್ಟ್, 2023** (ಎರಡು ದಿನಗಳು ಒಳಗೊಂಡಂತೆ) ಸ್ಥಗಿತಗೊಳಿಸಲಾಗಿದೆ. 2022–23ರ ಹಣಕಾಸು ವರ್ಷದ ಅಂತಿಮ ಡಿವಿಡೆಂಡ್‌ಅನ್ನು ಎಜಿಎಂ ನಲ್ಲಿ ಘೋಷಿಸಿದ್ದಲ್ಲಿ 30 ದಿನಗಳ ಶಾಸನಬದ್ಧ ಅವಧಿ ಒಳಗೆ **17ನೇ ಆಗಸ್ಟ್, 2023ರ** ವರೆಗೆ ನೋಂದಣಿ ಇರುವ ಭೌತಿಕ ಷೇರುಗಳನ್ನು ಹೊಂದಿರುವ ಸದಸ್ಯರಿಗೆ ಪಾವತಿಸಲಾಗುವುದು. ಆದಾಗಿಯೂ ಡಿಮೆಟಿರಿಯಲೈಸ್ಡ್ ರೂಪದಲ್ಲಿ ಹೊಂದಿರುವ ಷೇರುಗಳಿಗೆ ಸಂಬಂಧಿಸಿದಂತೆ **17ನೇ ಆಗಸ್ಟ್, 2023**ರಂತೆ ವ್ಯವಹಾರದ ಸಮಯ ಮುಕ್ತಾಯದವರೆಗೆ ಲಾಭದಾಯಕ ಮಾಲೀಕರಾಗಿರುವ ವ್ಯಕ್ತಿಗಳಿಗೆ ಠೇವಣಿದಾರರು ಒದಗಿಸಿದ ವಿವರಗಳ ಪ್ರಕಾರ ಲಾಭಾಂಶವನ್ನು ಪಾವತಿಸಲಾಗುವುದು.

ಇನ್‌ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರೀಸ್ ಆಫ್ ಇಂಡಿಯಾ (ಐಸಿಎಸ್‌ಐ) ಮತ್ತು ನಿಯಂತ್ರಣ ಹೊರಡಿಸಿದ ಕಾಯ್ದೆಯ ಸೆಕ್ಷನ್ 108 ಮತ್ತು ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014ರ ನಿಯಮಗಳ ಅನುಸಾರವಾಗಿ, ಇನ್‌ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರೀಸ್ ಆಫ್ ಇಂಡಿಯಾ (ಐಸಿಎಸ್‌ಐ) ಜಾರಿಗೊಳಿಸಿದ, ಸಾಮಾನ್ಯ ಸಭೆಗಳ ಸೆಕ್ರೆಟರಿಯಲ್ ಸ್ಟ್ಯಾಂಡರ್ಡ್ (ಎಸ್‌ಎಸ್–2) ಲಿಸ್ಟಿಂಗ್ ರೆಗ್ಯುಲೇಷನ್ಸ್ 44 ರಂತೆ, ಎಜಿಎಂನಲ್ಲಿ ವ್ಯವಹಾರ ನಡೆಸಲು ಸಂಬಂಧಿಸಿದಂತೆ ರಿಮೋಟ್ ಇ–ಮತದಾನದ ಸೌಲಭ್ಯವನ್ನು ಕಂಪನಿಯು ಸಿಡಿಎಸ್‌ಎಲ್ ಮೂಲಕ ಒದಗಿಸಿದೆ. ದೂರಸ್ಥ ಇ–ಮತದಾನಕ್ಕೆ ಅನುಕೂಲವಾಗುವಂತೆ ಕಂಪನಿಯು ಸಿಡಿಎಸ್‌ಎಲ್ ನೊಂದಿಗೆ ಅಗತ್ಯ ವ್ಯವಸ್ಥೆಗಳನ್ನು ಮಾಡಲಾಗಿದೆ. ಎಜಿಎಂ ಸಮಯದಲ್ಲಿ ದೂರಸ್ಥ ಇ–ಮತದಾನ ಮತ್ತು ಇ–ಮತದಾನದ ವಿವರವಾದ ಕಾರ್ಯ ವಿಧಾನ ಮತ್ತು ಸೂಚನೆಗಳನ್ನು ನೋಟಿಸ್‌ನಲ್ಲಿ ಉಲ್ಲೇಖಿಸಲಾಗಿದೆ. ಎಲ್ಲಾ ಸದಸ್ಯರಿಗೆ ಈ ಮೂಲಕ ತಿಳಿಸುವುದೇನೆಂದರೆ:

1. **ಎಜಿಎಂನಲ್ಲಿ ದೂರಸ್ಥ ಇ–ಮತದಾನದ ಅಥವಾ ಇ–ಮತದಾನದ ಮೂಲಕ ಮತ ಚಲಾಯಿಸುವ ಅರ್ಹತೆಯನ್ನು ನಿರ್ಧರಿಸುವ ಕಟ್–ಆಫ್ ಸೋಮವಾರ, 21ನೇ ಆಗಸ್ಟ್, 2023 ಆಗಿರುತ್ತದೆ. ದೂರಸ್ಥ ಇ–ಮತದಾನವು 4 ದಿನಗಳ ಅವಧಿಗೆ ತೆರೆದಿರುತ್ತದೆ. ಗುರುವಾರ 24ನೇ ಆಗಸ್ಟ್ 2023 ಬೆಳಿಗ್ಗೆ 9:00 ಗಂಟೆಗೆ (ಭಾರತೀಯ ಸಮಯ) ದಿಂದ ಪ್ರಾರಂಭವಾಗಿ ಭಾನುವಾರ 27ನೇ ಆಗಸ್ಟ್ 2023 ಸಂಜೆ 5:00ರ ವರೆಗೆ (ಭಾರತೀಯ ಸಮಯ) ಭೌತಿಕ ರೂಪದಲ್ಲಿ ಅಥವಾ ಡಿಮೆಟಿರಿಯಲೈಸ್ಡ್ ರೂಪದಲ್ಲಿ ಹೊಂದಿರುವ ಷೇರುದಾರರ ಸದಸ್ಯರಿಗೆ ತೆರೆದಿರುತ್ತದೆ.** ದೂರಸ್ಥ ಇ–ಮತದಾನದ ಮಾಡ್ಯೂಲ್‌ಅನ್ನು ನಂತರ ಮತದಾನಕ್ಕೆ ಸಿಡಿಎಸ್‌ಎಲ್ ನಿಷ್ಕ್ರಿಯಗೊಳಿಸುತ್ತದೆ. ಮೇಲಿನ ದಿನಾಂಕ ಮತ್ತು ಸಮಯದ ನಂತರ ದೂರಸ್ಥ ಇ–ಮತದಾನವನ್ನು ಅನುಮತಿಸಲಾಗುವುದಿಲ್ಲ. ನಿರ್ಣಯದ ಮೇಲೆ ಮತ ಚಲಾಯಿಸಿದ ನಂತರ, ಸದಸ್ಯರಿಗೆ ಅದನ್ನು ಬದಲಾಯಿಸಲು ಅವಕಾಶವಿರುವುದಿಲ್ಲ.
2. ಡಿಮ್ಯಾಟ್ ಮೋಡ್, ಭೌತಿಕ ಮೋಡ್‌ನಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು ಮತ್ತು ತಮ್ಮ ಇ–ಮೇಲ್ ವಿಳಾಸವನ್ನು ನೋಂದಾಯಿಸಿದ ಸದಸ್ಯರಿಂದ ಎಜಿಎಂನಲ್ಲಿ ದೂರಸ್ಥ ಇ–ಮತದಾನ ಮತ್ತು ಮತದಾನದ ಮಾಡುವ ವ್ಯವಸ್ಥೆಯನ್ನು ಎಜಿಎಂ ಪ್ರಕಟಣೆಯಲ್ಲಿ ನೀಡಲಾಗಿದೆ.
3. ಎಜಿಎಂಗೆ ಮುಂಚಿತವಾಗಿ ದೂರಸ್ಥ ಇ–ಮತದಾನದ ಮೂಲಕ ಮತ ಚಲಾಯಿಸಿದ ಸದಸ್ಯರು ಎಜಿಎಂನಲ್ಲಿ ವಿಸಿ/ಒಎವಿಎಂ ಮೂಲಕ ಹಾಜರಾಗಬಹುದು / ಭಾಗವಹಿಸಬಹುದು ಆದರೆ ಮತ್ತೆ ಮತ ಚಲಾಯಿಸಲು ಅರ್ಹರಾಗಿರುವುದಿಲ್ಲ.
4. ಯಾವುದೇ ವ್ಯಕ್ತಿಯು ಎ.ಜಿ.ಎಂ. ನೋಟಿಸು ಜಾರಿಯಾದ ನಂತರ ಷೇರುದಾರರಾದರೆ ಮತ್ತು ಕಂಪನಿಯ ಷೇರುಗಳನ್ನು ಪಡೆದಿದ್ದರೆ ಮತ್ತು ನಿಗದಿಪಡಿಸಿದ ದಿನಾಂಕದಂತೆ ಷೇರುಗಳನ್ನು ಹೊಂದಿದ್ದರೆ ಎಜಿಎಂ ನೋಟಿಸ್‌ನಲ್ಲಿ ತಿಳಿಸಿದಂತೆ ಸಂಕಲ್ಪಗಳನುಸಾರವಾಗಿ ಮತದಾನಕ್ಕೆ ಸೂಚನೆಗಳನ್ನು ಅನುಕರಿಸತಕ್ಕದ್ದು.
5. ಎಜಿಎಂನಲ್ಲಿ ವಿಸಿ/ಒಎವಿಎಂ ಮೂಲಕ ಹಾಜರಿರುವ ಮತ್ತು ದೂರಸ್ಥ ಇ–ಮತದಾನದ ಮೂಲಕ ನಿರ್ಣಯಗಳ ಮೇಲೆ ಮತ ಚಲಾಯಿಸಿದ ಸದಸ್ಯರುಗಳು ಎಜಿಎಂ ಸಮಯದಲ್ಲಿ ಇ–ಮತದಾನದ ಮೂಲಕ ಮತ ಚಲಾಯಿಸಲು ಅರ್ಹರಾಗಿರುತ್ತಾರೆ. ಎಜಿಎಂ ಸಮಯದಲ್ಲಿ ಇ–ಮತದಾನದ ವಿವರವಾದ ಕಾರ್ಯವಿಧಾನ ಮತ್ತು ಸೂಚನೆಗಳನ್ನು ನೋಟಿಸ್‌ನಲ್ಲಿ ಉಲ್ಲೇಖಿಸಲಾಗಿದೆ.
6. ತಮ್ಮ ಇ–ಮೇಲ್ ವಿಳಾಸವನ್ನು ಇನ್ನು ನೋಂದಾಯಿಸದ ಸದಸ್ಯರು ಷೇರುಗಳನ್ನು ಡಿಮೆಟಿರಿಯಲೈಸ್ಡ್ ರೂಪದಲ್ಲಿ ಮತ್ತು ಕಂಪನಿ / ಆರ್‌ಟಿಎಯೊಂದಿಗೆ ಷೇರುಗಳನ್ನು ಭೌತಿಕ ರೂಪದಲ್ಲಿ ಇಟ್ಟುಕೊಂಡಿದ್ದರೆ ಅದನ್ನು ತಮ್ಮ ಡಿಪಿಯೊಂದಿಗೆ ನೊಂದಾಯಿಸಿಕೊಳ್ಳಲು ವಿನಂತಿಸಲಾಗುತ್ತದೆ. ಇ–ಮೇಲ್ ವಿಳಾಸವನ್ನು ಡಿಪಿಗಳು / ಕಂಪನಿ / ಆರ್‌ಟಿಎಯೊಂದಿಗೆ ನೋಂದಾಯಿಸದಿದ್ದಲ್ಲಿ ನೋಟಿಸು ಮತ್ತು ವಾರ್ಷಿಕ ವರದಿ 2022–23 ಮತ್ತು ಎಲೆಕ್ಟ್ರಾನಿಕ್ ಮೋಡ್ ಮೂಲಕ ಇ–ಮತದಾನ ಸೂಚನೆಗಳನ್ನು ಸ್ವೀಕರಿಸುವ ಸೀಮಿತ ಉದ್ದೇಶಕ್ಕಾಗಿ ಸದಸ್ಯರು ತಮ್ಮ ಇ–ಮೇಲ್ ವಿಳಾಸ ಮತ್ತು ಮೊಬೈಲ್ ಸಂಖ್ಯೆಯನ್ನು ಕಂಪನಿಯ ಆರ್‌ಟಿಎ ಮೆ. ಇಂಟಿಗ್ರೇಟೆಡ್ ರಿಜಿಸ್ಟ್ರಿ ಮ್ಯಾನೇಜ್‌ಮೆಂಟ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್, ಲಿಂಕ್ ಕ್ಲಿಕ್ ಮಾಡುವ ಮೂಲಕ ನೊಂದಾಯಿಸಿಕೊಳ್ಳಬಹುದು: https://www.integratedindia.in/emailupdation.aspx.

ಎಜಿಎಂನ ಇ–ಮತದಾನ ವ್ಯವಸ್ಥೆ ಮತ್ತು ಇ–ಮತದಾನಕ್ಕೆ ಸಂಬಂಧಿಸಿದಂತೆ ನೀವು ಯಾವುದೇ ಪ್ರಶ್ನೆಗಳನ್ನು ಅಥವಾ ಸಮಸ್ಯೆಗಳನ್ನು ಹೊಂದಿದ್ದರೆ, ನೀವು ಆಗಾಗ ಕೇಳಲಾಗುವ ಪ್ರಶ್ನೆಗಳು (“FAQಗಳು”) ಮತ್ತು ಇ–ಮತದಾನ ಕೈಪಿಡಿಯನ್ನು ಸಹಾಯ ಭಾಗದ ಅಡಿಯಲ್ಲಿ ಪಡೆಯಬಹುದು ಅಥವಾ ಸಂಪರ್ಕಿಸಬಹುದು www.evotingindia.com ಅಥವಾ helpdesk.evoting@cdslindia.com ಇ–ಮೇಲ್ ಬರೆಯಬಹುದು ಅಥವಾ 022-23058738 ಅಥವಾ 022-23058542/43 ರ ಮುಖೇನಾ ಸಂಪರ್ಕಿಸಬಹುದು.

ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್‌ನ ಪರವಾಗಿ
ಸಹಿ/-
ಎಸ್. ಶ್ರೀನಿವಾಸ್
ಕಂಪನಿ ಕಾರ್ಯದರ್ಶಿ

ಬೆಂಗಳೂರು
4ನೇ ಆಗಸ್ಟ್ 23

‘ಹರ್ ಏಕ್ ಕಾಮ್ ದೇಶ್ ಕೆ ನಾಮ್’

4 ದಿನಗಳ ಬೃಹತ್ ಮತ್ತು ಭಾರಿ ರಿಯಾಯತಿ ಮಾರಾಟ!
FURNITURE & HOME DESIGN EXPO
• SALE • OFFERS • DISCOUNT
ದಿನಾಂಕ 4 | 5 | 6 | 7 ಆಗಸ್ಟ್ 2023
ಬೆಳಗ್ಗೆ 10.00 – ರಾತ್ರಿ 8.30
ಸ್ಥಳ ತ್ರಿಪುರವಾಸಿನಿ ಅರಮನೆ ಮೈದಾನ
ಮೇಖ್ರಿ ಸರ್ಕಲ್ ಹತ್ತಿರ, ಬೆಂಗಳೂರು
ಲಿವಿಂಗ್ ರೂಮ್ ಫರ್ನೀಚರ್ 45% ವರೆಗೆ ಕಡಿತ
ಬೆಡ್‌ರೂಮ್ ಸೆಟ್ 50% ವರೆಗೆ ಕಡಿತ
ಡೈನಿಂಗ್ ಸೆಟ್ 55% ವರೆಗೆ ಕಡಿತ
ಹೋಮ್ ಡೆಕೋರ್ 40% ವರೆಗೆ ಕಡಿತ
ಔಟ್‌ಡೋರ್ ಫರ್ನೀಚರ್ 40% ವರೆಗೆ ಕಡಿತ
ಸ್ವಾತಂತ್ರ್ಯೋತ್ಸವ ದಿನದಂದು ಬೃಹತ್ ಮಾರಾಟ
UPTO 77% OFF
ಫರ್ನೀಚರ್ ವಿನಿಮಯ ಮೇಳ
ಉತ್ತಮ ಡೀಲ್‌ಗಳು! ಬೃಹತ್ ಉಳಿತಾಯಗಳು!
HDFC BANK We understand your world | BAJAJ FINSERV | EMI
MEDIA PARTNER இந்து தமிழ் திசை
AN EVENT BY iads & events COMPLETE BUSINESS SOLUTIONS
www.iadsandevents.com | exhibitions_iadsnevents | iadsnevents | ಪ್ರವೇಶ ಉಚಿತ | +91 93425 77908

ಕಂಪನಿಯು ತನ್ನ ಹಣಕಾಸು ಅವಶ್ಯಕತೆಗಳಿಗಾಗಿ ತಕ್ಷಣವೇ ಒಂದು ನಿರ್ಧಾರ ತೆಗೆದುಕೊಳ್ಳಬೇಕಾಯಿತು.
ಸುಮಾರು 3 ರಿಂದ 4 ಕೋಟಿ ಮೌಲ್ಯದ ಬ್ರಾಂಡೆಡ್ ಉಡುಪುಗಳು, ಸ್ಪೋರ್ಟ್ಸ್ ಮತ್ತು ಲೆದರ್ ಶೂಗಳು, ಲಗ್ಗೇಜ್, ಟ್ರಾಲಿ ಬ್ಯಾಗ್ಸ್ ಮತ್ತು ಸೀರೆಗಳ ಸಂಪೂರ್ಣ ದಾಸ್ತಾನನ್ನು ಬೆಂಗಳೂರಿನ ರಿಟೇಲ್ ಗ್ರಾಹಕರಿಗೆ
ಕೇವಲ 60 ರಿಂದ 70 ಲಕ್ಷಗಳಲ್ಲಿ ಮಾರಾಟ ಮಾಡಲಾಗುವುದು
ಈಗ, ಮಿಂತ್ರಾದಲ್ಲಿ ಮಾರಾಟ ಮಾಡಲಾಗುವ ಬ್ರಾಂಡೆಡ್ ಉಡುಪುಗಳು ಮತ್ತು ಶೂಗಳನ್ನು ಆನ್‌ಲೈನ್ ಬೆಲೆಗಳಿಗಿಂತ ಕಡಿಮೆ ದರದಲ್ಲಿ ಖರೀದಿಸಿರಿ
ಇದು ಕೇವಲ 2 ದಿನಗಳ ಕೊಡುಗೆ @ ತಾಜ್, ಯಶವಂತಪುರ
ಹಾಫ್ ಸ್ಲೀವ್ ಟಿ-ಷರ್ಟ್ಸ್, ಕಾಟನ್ ಡೆನಿಮ್, ಬ್ರಾ, ಶಾಪಿಂಗ್ ಬ್ಯಾಗ್ಸ್, ಶಾರ್ಟ್ಸ್‌ಗಳನ್ನು 500 ರಿಂದ 1000 ರೂ.ಗಳಲ್ಲಿ ಖರೀದಿಸಿರಿ.
ಪುರುಷರ ಒಳ ಉಡುಪು, ಪ್ಯಾಂಟಿ, ಫ್ಯಾನ್ಸಿ ಗರ್ಲ್ ಸ್ಕರ್ಟ್, ಪಾರ್ಲರ್ ಪೈಜಾಮಾ, ಲೆಗ್ಗಿಂಗ್, ಕಾಟನ್ ಟಾಪ್, ಫ್ರಾಕ್, ಚಪ್ಪಲ್‌ಗಳನ್ನು ಕೇವಲ ರೂ. 100 – 200ಕ್ಕೆ ಖರೀದಿಸಿರಿ
ರೂ. 2000 - 3000 ಮೌಲ್ಯದ ಪ್ರಿಮಿಯಂ ಉಡುಪುಗಳು ಮತ್ತು ಶೂಗಳನ್ನು ಕೇವಲ 200, 300 ಮತ್ತು 500 ರೂಪಾಯಿಗೆ ಖರೀದಿಸಿರಿ
ಎಂಆರ್‌ಪಿ ದರ ರೂ.4000–ರೂ.7000 ಮೌಲ್ಯದ ಪುರುಷರ-ಡೆನಿಮ್, ಷರ್ಟ್, ಟಿ-ಷರ್ಟ್, ಟ್ರೌಸರ್ ಮತ್ತು ಇನ್ನೂ ಅನೇಕ ಕೇವಲ ರೂ.600 – 900ಕ್ಕೆ
ಎಂಆರ್‌ಪಿ ರೂ.5000-ರೂ.7000 ಮೌಲ್ಯದ ಬ್ರಾಂಡೆಡ್ ಜೆಂಟ್ಸ್ ಫುಟ್‌ವೇರ್, ಲೆದರ್ ಮತ್ತು ಸ್ಪೋರ್ಟ್ ಶೂಗಳು
Reebok adidas LOTTO UNITED COLORS OF BENETTON REDTAPE ಕೇವಲ @ ರೂ. 800–ರೂ. 1500
ರೂ. 5000 ಮೌಲ್ಯದ ಕಲರ್ ಪ್ಲಸ್, ರೇಮಂಡ್, ಆರೋವ್, ಪಾರ್ಕ್ ಅವೆನ್ಯೂ, ಫ್ರೆಷ್ ಲೂಸ್ ಪ್ಯಾಕಿಂಗ್ ಜೆಂಟ್ಸ್ ಷರ್ಟ್‌ಗಳನ್ನು ಕೇವಲ ರೂ. 800ಕ್ಕೆ ಖರೀದಿಸಿರಿ
• ಸೌಥ್ ಸಿಲ್ಕ್ • ರಿಚ್ ಪಲ್ಲೂ ಸಿಲ್ಕ್ • ಪಟೋಲಾ ಸಿಲ್ಕ್ • ಸಂಬಲ್‌ಪುರಿ ಸಿಲ್ಕ್
ರೇಷ್ಮೆ ಸೀರೆಗಳನ್ನು ಖರೀದಿಸಿ
ರೇಷ್ಮೆ ಎಳೆಯ ದರ ಕೇವಲ ರೂ. 850ಕ್ಕೆ
ಇವುಗಳಷ್ಟೇ ಅಲ್ಲದೆ, ಸಾವಿರಾರು ಮಾದರಿಯ ಫಾರ್ಮಲ್, ಕ್ಯಾಜುಯಲ್, ಮಾಡರ್ನ್ ಉಡುಪುಗಳ ಕೌಂಟರ್ಸ್ ಕೂಡ ತೆರೆದಿರುತ್ತವೆ
ಸೂಚನೆ :- 1) ಯಾವ ಉಡುಪುಗಳು ನಷ್ಟ ಅನುಭವಿಸುತ್ತವೆ ಎಂಬುದನ್ನು ಪರಿಗಣಿಸುವುದಿಲ್ಲ
2) ಈ ಮಾರಾಟ ಕೇವಲ ರಿಟೇಲ್ ಗ್ರಾಹಕರಿಗಾಗಿ ಮಾತ್ರ
3) ಹೆಚ್ಚಿನ ವಿವರಗಳಿಗಾಗಿ ನಮ್ಮನ್ನು ಅನುಸರಿಸಿ: (ಇನ್‌ಸ್ಟಾಗ್ರಾಮ್ ಲೋಗೊ) Brand.world.outlet
ಕ್ಲೋದಿಂಗ್ ಐಟಂಗಳಂತೆ ಹ್ಯಾಂಡ್‌ಲೂಮ್ ಐಟಮ್ಸ್, ಹೋಮ್ ಲಿನೆನ್, ಟವೆಲ್ಸ್, ಕಾರ್ಪೆಟ್ಸ್, ಕಂಫರ್ಟರ್ಸ್, ಬಾಟಲ್ಸ್, ಪಿಲ್ಲೋ, ಬೆಡ್‌ಶೀಟ್, ಹೋಮ್ ಡೆಕೋರ್, ಸ್ಲಿಪ್ಪರ್ಸ್, ಬ್ಯಾಗ್ಸ್, ಪರ್ಸ್, ಟಾಪ್, ಕುರ್ತಿ, ಲಾಂಡ್ರಿ ಬ್ಯಾಗ್ ಮತ್ತು ಇನ್ನೂ ಅನೇಕ 100ಕ್ಕೂ ಹೆಚ್ಚು ವೆರೈಟಿಗಳು, ನಂಬಲಸಾಧ್ಯ ದರಗಳಲ್ಲಿ ಲಭಿಸುತ್ತವೆ!
ಕೇವಲ 2 ದಿನಗಳು 05, 06 ಆಗಸ್ಟ್
ಸ್ಥಳ TAJ YESHWANTPUR BENGALURU
ಸಮಯ: ಬೆಳಗ್ಗೆ 10:00 ರಿಂದ ರಾತ್ರಿ 10:00 ಗಂಟೆ
ತುಮಕೂರು ರೋಡ್, ಯಶವಂತಪುರ ಕೈಗಾರಿಕಾ ಪ್ರದೇಶ, ಹಂತ-1, ಗೊರಗುಂಟೆಪಾಳ್ಯ ಮೆಟ್ರೊ ನಿಲ್ದಾಣದ ಸಮೀಪ, ಬೆಂಗಳೂರು-560022

Reliance
Growth is Life
ಪ್ರತಿ ದಿನ, ಪ್ರತಿ ವಸ್ತು
ಅತ್ಯಂತ ಕಡಿಮೆ ಬೆಲೆಯಲ್ಲಿ ಬೇಕಾ?
ಸ್ಮಾರ್ಟ್ ಬಜಾರ್‌ಗೆ ಬನ್ನಿರಿ
SMART BAZAAR
ಕನಿಷ್ಠ 5% ಕಡಿಮೆ ಎಂಆರ್‌ಪಿ ಪ್ರತಿದಿನ
ಸಕ್ಕರೆ 1 kg ₹ 9* ಪ್ರತಿದಿನ
*₹1999 ಮತ್ತು ಅದಕ್ಕಿಂತ ಹೆಚ್ಚಿನ ಶಾಪಿಂಗ್‌ನಲ್ಲಿ
SMARTBazaar | @smart_bazaar | @SMARTBazaarIn | @smartbazaarIndia
ಫಾರ್ಚೂನ್ ರಿಫೈನ್ಡ್ ಸೂರ್ಯಕಾಂತಿ ಎಣ್ಣೆ ಲೀ 5 ℓ + ದಾವತ್ ರೋಜಾನಾ ಗೋಲ್ಡ್ ಬಾಸ್ಮತಿ ರೈಸ್ 5 kg
ನಮ್ಮ ಬೆಲೆ ₹959
ಎಮ್ ಆರ್‌ಪಿ ₹1205
ಉಳಿಸಿರಿ ₹246
ಲೂಸ್ ಪಾಪ್ಯುಲರ್ ಸೋನಾ ಸ್ಟೀಮ್ ರೈಸ್ 1 kg
ನಮ್ಮ ಬೆಲೆ ₹47
ಮಾರುಕಟ್ಟೆ ಬೆಲೆ ₹52
ಲೂಸ್ ತೊಗರೆ ಬೇಳೆ ವ್ಯಾಲ್ಯೂ 1 kg
ನಮ್ಮ ಬೆಲೆ ₹145
ಮಾರುಕಟ್ಟೆ ಬೆಲೆ ₹150
ಪ್ಯಾರಿಸ್ ವೈಟ್ ಲೇಬಲ್ ಸಲ್ಫರ್ ಫ್ರೀ ಸಕ್ಕರೆ 5 kg
ನಮ್ಮ ಬೆಲೆ ₹209 (₹41.80/kg)
ಎಮ್‌ಆರ್‌ಪಿ ₹215
ಉಳಿಸಿರಿ ₹6
ಆಶೀರ್ವಾದ ಸುಪೀರಿಯರ್ ಎಂಪಿ ಅಟ್ಟಾ 10 kg
ನಮ್ಮ ಬೆಲೆ ₹461
ಯಾವುದೇ ಖಾದ್ಯ ತೈಲದ ಮೇಲೆ ₹30 ರಿಯಾಯಿತಿ ಪಡೆಯಿರಿ
ಎಮ್‌ಆರ್‌ಪಿ ₹576
ಉಳಿಸಿರಿ ₹115
ಸನ್ ಪ್ಯೂರ್ ಸೂರ್ಯಕಾಂತಿ ಎಣ್ಣೆ 1 ℓ
ನಮ್ಮ ಬೆಲೆ ₹114
ಎಮ್‌ಆರ್‌ಪಿ ₹148
ಉಳಿಸಿರಿ ₹34
ಗುಡ್ ಲೈಫ್ ಬಾದಾಮ್ / ಕ್ಯಾಶೂ (W320) 500 g
ನಮ್ಮ ಬೆಲೆ ₹359/ ₹389
ಎಮ್‌ಆರ್‌ಪಿ ₹549 / ₹499
ಉಳಿಸಿರಿ ₹190 / ₹110
ನಂದಿನಿ ಶುದ್ಧ ತುಪ್ಪ 1 ℓ
ನಮ್ಮ ಬೆಲೆ ₹574
ಎಮ್‌ಆರ್‌ಪಿ ₹610
ಉಳಿಸಿರಿ ₹36
ನಂದಿನಿ ಗುಡ್‌ಲೈಫ್ ಟೋನ್ಡ್ ಮಿಲ್ಕ್ 1 ℓ
ನಮ್ಮ ಬೆಲೆ ₹58
ಎಮ್‌ಆರ್‌ಪಿ ₹64
ಉಳಿಸಿರಿ ₹6
ಬಿಸ್ಕಿಟ್ಸ್ ದೊಡ್ಡ ಪ್ಯಾಕ್ 300 g ರಿಂದ (ಆಯ್ದ ಪ್ರಕಾರಗಳು)
BUY 2 GET 1 FREE
ಎಮ್‌ಆರ್‌ಪಿ ₹120 ರಿಂದ / ಯೂನಿಟ್
ಟಾಟಾ ಗೋಲ್ಡ್ ಲೀಫ್ ಚಹಾ 500 g
ಉಳಿಸಿರಿ ₹64
ಎಮ್‌ಆರ್‌ಪಿ ₹330 ರಿಂದ
ನಮ್ಮ ಬೆಲೆ ₹266 ರಿಂದ
ಸನ್ ಫೀಸ್ಟ್ ಯಿಪ್ಪಿ ನೂಡಲ್ಸ್ ಮ್ಯಾಜಿಕ್ ಮಸಾಲ 420 g
30% ಕಡಿತ
ಎಮ್‌ಆರ್‌ಪಿ ₹85 ರಿಂದ
ನಮ್ಮ ಬೆಲೆ ₹60 ರಿಂದ
ಬೂಸ್ಟ್ 500 g x 2 ಯೂನಿಟ್
ಉಳಿಸಿರಿ ₹165
ಎಮ್‌ಆರ್‌ಪಿ ₹615 ರಿಂದ
ನಮ್ಮ ಬೆಲೆ ₹450 ರಿಂದ
ಮಾಜಾ 1.5 ℓ
ಉಳಿಸಿರಿ ₹20
ಎಮ್‌ಆರ್‌ಪಿ ₹90 ರಿಂದ
ನಮ್ಮ ಬೆಲೆ ₹70 ರಿಂದ
ಕೋಲ್ಗೇಟ್ ಡೆಂಟಲ್ ಕ್ರೀಮ್ ಪೇಸ್ಟ್ 500 g
ಉಳಿಸಿರಿ ₹80
ಎಮ್‌ಆರ್‌ಪಿ ₹294 ರಿಂದ
ನಮ್ಮ ಬೆಲೆ ₹214 ರಿಂದ
ಪಿಯರ್ಸ್ ಪ್ಯೂರ್ ಮತ್ತು ಜೆಂಟಲ್ / ಡವ್ ಕ್ರೀಮ್ ಬ್ಯೂಟಿ ಸೋಪ್ 125 g x 3 ಯುನಿಟ್ಸ್
ಉಳಿಸಿರಿ ₹80
ಎಮ್‌ಆರ್‌ಪಿ ₹252 ರಿಂದ
ನಮ್ಮ ಬೆಲೆ ₹172 ರಿಂದ
ಡವ್ ಶಾಂಪೂ 340 ml ರಿಂದ (ಆಯ್ದ ಪ್ರಕಾರಗಳು)
ಉಳಿಸಿರಿ ₹85
ಎಮ್‌ಆರ್‌ಪಿ ₹345 ರಿಂದ
ನಮ್ಮ ಬೆಲೆ ₹260 ರಿಂದ
ವಿಸ್ಪರ್ ಚಾಯ್ಸ್ ಅಲ್ಟ್ರಾ 20s / ಸೋಫಿ ಬಾಡಿಫಿಟ್ ರೆಗ್ಯುಲರ್ ಕಾಂಬೊ ಪ್ಯಾಕ್ ಆಫ್ 2 (18 x 2 ಯೂನಿಟ್ಸ್)
ನಮ್ಮ ಬೆಲೆ ₹99
ಎಮ್‌ಆರ್‌ಪಿ ₹119 ರಿಂದ
ಉಳಿಸಿರಿ ₹20 ರಿಂದ
ಟೈಡ್ ಪ್ಲಸ್ ಡಿಟರ್ಜಂಟ್ ಪೌಡರ್ 2 kg (ಆಯ್ದ ಪ್ರಕಾರಗಳು)
ಉಳಿಸಿರಿ ₹55
ಎಮ್‌ಆರ್‌ಪಿ ₹260 ರಿಂದ
ನಮ್ಮ ಬೆಲೆ ₹205 ರಿಂದ
ಛತ್ರಿ / ರೇನ್‌ವೇರ್ (ಆಯ್ಕೆ ಶ್ರೇಣಿ)
ಕನಿಷ್ಠ 25% ಕಡಿತ
ಎಮ್‌ಆರ್‌ಪಿ ₹249 ರಿಂದ
HOME ONE
ಇಂಡಕ್ಷನ್ ಬೇಸ್ ನಾನ್ ಸ್ಟಿಕ್ ಕುಕ್‌ವೇರ್ ರೇಂಜ್ (ತವಾ / ಫ್ರೈಪ್ಯಾನ್ / ಕಡಾಯಿ) (28 cm / 24 cm / 24 cm)
ನಮ್ಮ ಬೆಲೆ ₹399 ರಿಂದ
ಎಮ್‌ಆರ್‌ಪಿ ₹699 ರಿಂದ
cello LA OPALA
ಓಪಲ್‌ವೇರ್ / ಮೆಲಮೈನ್ / ಸ್ಟೀಲ್ ಡಿನ್ನರ್‌ವೇರ್ (ಆಯ್ಕೆ ಶ್ರೇಣಿ)
BUY 1 GET 1 FREE
ಎಮ್‌ಆರ್‌ಪಿ ₹62 ರಿಂದ
SMART ಸ್ಟೈಲ್ ಸೇಲ್
8th JUL - 31st AUG
ವರೆಗೆ 60% ಕಡಿತ
ಪುರುಷರ ಉಡುಗೆ | ಮಹಿಳೆಯರ ಉಡುಗೆ | ಮಕ್ಕಳ ಉಡುಗೆ
ಪ್ರಾರಂಭ ₹149
HOME ONE HAPPY LIVING
ಪ್ರಿಂಟೆಡ್ ಗ್ಲಾಸ್ / ಸ್ಟೀಲ್ ಬಾಟಲ್ ಶ್ರೇಣಿ (500 ml / 1000 ml)
ಕನಿಷ್ಠ 50% ಕಡಿತ
ಎಮ್‌ಆರ್‌ಪಿ ₹99 ರಿಂದ
HOME ONE
6 ಘಟಕಗಳು ಸೆರಾಮಿಕ್ ಮಗ್ ಸೆಟ್
ನಮ್ಮ ಬೆಲೆ ₹99
ಎಮ್‌ಆರ್‌ಪಿ ₹199 ರಿಂದ
HAPPY LIVING Ulhaas
ದಿಂಬಿನ ಕವರ್‌ನೊಂದಿಗೆ ಡಬಲ್ ಬೆಡ್‌ಶೀಟ್
ನಮ್ಮ ಬೆಲೆ ₹399
ಎಮ್‌ಆರ್‌ಪಿ ₹1199
ಒಳಾಂಗಣ / ಹೊರಾಂಗಣ ಮ್ಯಾಟ್ ಶ್ರೇಣಿ (ಆಯ್ಕೆ ಶ್ರೇಣಿ)
BUY 1 GET 1 FREE
ಎಮ್‌ಆರ್‌ಪಿ ₹99 ರಿಂದ
ನಿಮ್ಮ ನಗರದಾದ್ಯಂತ 29 ಸ್ಮಾರ್ಟ್ ಸ್ಟೋರ್‌ಗಳು - ನಿಮಗೆ ಹತ್ತಿರ ಯಾವುದು?
SMART BAZAAR
SMART SUPERSTORE
ನಿಮ್ಮ ಹತ್ತಿರದ ಸ್ಟೋರ್ ನ್ನು ಪತ್ತೆಹಚ್ಚಲು ಸ್ಕ್ಯಾನ್ ಮಾಡಿ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

ಸುಭಾಷಿತ

ಇಡೀ ಪ್ರಪಂಚವೇ ಒಂದು ವೇದಿಕೆ ಮತ್ತು ನಾವೆಲ್ಲರೂ ಬರೀ ಪಾತ್ರಧಾರಿಗಳಷ್ಟೇ.

–ವಿಲಿಯಂ ಷೇಕ್ಸ್‌ಪಿಯರ್

ಕಂಪ್ಯೂಟರ್ ಆಮದಿಗೆ ನಿರ್ಬಂಧ ಸದುದ್ದೇಶವಿದ್ದರೂ ಸ್ಪಷ್ಟತೆ ಬೇಕು

ಲ್ಯಾಪ್‌ಟಾಪ್, ಪರ್ಸನಲ್ ಕಂಪ್ಯೂಟರ್, ಟ್ಯಾಬ್ ಸೇರಿದಂತೆ ಪ್ರತಿನಿತ್ಯ ಬಳಸುವ ಕೆಲವು ಎಲೆಕ್ಟ್ರಾನಿಕ್ ಉಪಕರಣಗಳ ಆಮದನ್ನು ಕೇಂದ್ರ ಸರ್ಕಾರ ನಿರ್ಬಂಧಿಸಿದೆ. ಇದು ಈಗಾಗಲೇ ಜಾರಿಗೆ ಬಂದಿದೆ. ಈ ಉಪಕರಣಗಳು ಉದ್ಯೋಗದ ಸ್ಥಳಗಳಲ್ಲಿ, ಶೈಕ್ಷಣಿಕ ಚಟುವಟಿಕೆಗಳಿಗೆ ಹಾಗೂ ವೈಯಕ್ತಿಕ ಬಳಕೆಗೆ ತೀರಾ ಅಗತ್ಯವಾದವು. ಹೀಗಾಗಿ ಇವುಗಳ ಆಮದನ್ನು ಹಠಾತ್ತನೆ ನಿರ್ಬಂಧಿಸಿರುವುದು ಆಶ್ಚರ್ಯ ಮೂಡಿಸುವಂಥದ್ದು. ಈ ಕುರಿತ ಅಧಿಸೂಚನೆಯನ್ನು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುವ ವಿದೇಶ ವ್ಯಾಪಾರಗಳ ಮಹಾನಿರ್ದೇಶನಾಲಯ ಹೊರಡಿಸಿದೆ. ನಿರ್ಬಂಧಕ್ಕೆ ಕೇಂದ್ರ ಸರ್ಕಾರ ನೀಡಿರುವ ಕಾರಣಗಳು ಗಮನಾರ್ಹ. ದೇಶದಲ್ಲಿ ಲ್ಯಾಪ್‌ಟಾಪ್, ಪರ್ಸನಲ್ ಕಂಪ್ಯೂಟರ್, ಟ್ಯಾಬ್‌ಗಳ ಉತ್ಪಾದನೆಗೆ ಉತ್ತೇಜನ ನೀಡುವುದು ಈ ನಿರ್ಧಾರದ ಹಿಂದಿರುವ ಒಂದು ಉದ್ದೇಶ. ತಯಾರಿಕಾ ವಲಯದಲ್ಲಿ ಆತ್ಮನಿರ್ಭರವಾಗುವುದಕ್ಕೆ ಉತ್ತೇಜನ ನೀಡುವುದು ಕೇಂದ್ರ ಸರ್ಕಾರದ ಘೋಷಿತ ನಿಲುವು ಆಗಿರುವಾಗ, ಲ್ಯಾಪ್‌ಟಾಪ್, ಪರ್ಸನಲ್ ಕಂಪ್ಯೂಟರ್‌ನಂತಹ ಅಗತ್ಯ ಉಪಕರಣಗಳ ದೇಶಿ ಉತ್ಪಾದನೆಗೆ ಒತ್ತು ನೀಡುವುದು ಸಹಜ ಹಾಗೂ ನಿರೀಕ್ಷಿತ ಕ್ರಮ. ಆದರೆ, ದೇಶಿ ಉತ್ಪಾದನೆಗೆ ಒತ್ತು ನೀಡಬೇಕು ಎಂದಾದರೆ ಆಮದು ವಹಿವಾಟಿಗೆ ನಿರ್ಬಂಧ ವಿಧಿಸಬೇಕಾದ ಅನಿವಾರ್ಯವೇನೂ ಇರಲಿಲ್ಲ. ದೇಶಿ ಉತ್ಪಾದನೆ ಹೆಚ್ಚಿಸುವುದಕ್ಕೆ ಧನಸಹಾಯ ನೀಡುವುದು ಅಥವಾ ತೆರಿಗೆ ವಿನಾಯಿತಿಯಂತಹ ಕೊಡುಗೆಗಳನ್ನು ನೀಡುವುದು ಸೂಕ್ತ ಕ್ರಮವಾಗುತ್ತಿತ್ತು. ಆಮದಿನ ಮೇಲೆ ದಿಢೀರನೆ ನಿರ್ಬಂಧ ವಿಧಿಸುವುದರಿಂದ ಮಾರುಕಟ್ಟೆಯಲ್ಲಿ ಬೇಡಿಕೆ–ಪೂರೈಕೆ ಸಮತೋಲನಕ್ಕೆ ತಕ್ಷಣಕ್ಕೆ ಧಕ್ಕೆ ಆಗುವ ಸಾಧ್ಯತೆ ಹೆಚ್ಚಿರುತ್ತದೆ. ಇಂತಹ ಪರಿಸ್ಥಿತಿಯ ಲಾಭ ಪಡೆದುಕೊಳ್ಳುವ ಗುಂಪುಗಳು, ಈ ಅಗತ್ಯ ಉಪಕರಣಗಳ ಲಭ್ಯತೆಯನ್ನು ತಗ್ಗಿಸಿ, ಬೆಲೆಯನ್ನು ಕೃತಕವಾಗಿ ಹೆಚ್ಚಿಸುವ ಸಾಧ್ಯತೆ ಇರುತ್ತದೆ.

ದೇಶದ ಸೇವಾ ಮತ್ತು ತಯಾರಿಕಾ ವಲಯಗಳಿಗೆ ಅತ್ಯಗತ್ಯವಾದ ಲ್ಯಾಪ್‌ಟಾಪ್ ಮತ್ತು ಕಂಪ್ಯೂಟರ್‌ಗಳ ಕೊರತೆಯಾಗದಂತೆ ಸರ್ಕಾರ ನೋಡಿಕೊಳ್ಳಬೇಕು

ಭಾರತಕ್ಕೆ ಆಮದಾಗುವ ಲ್ಯಾಪ್‌ಟಾಪ್, ಪರ್ಸನಲ್ ಕಂಪ್ಯೂಟರ್, ಟ್ಯಾಬ್‌ಗಳಲ್ಲಿ ಚೀನಾ ಮೂಲದವು ಹೆಚ್ಚು ಎಂದು ವರದಿಗಳು ಹೇಳುತ್ತವೆ. ಆದರೆ, ಯಾವುದೇ ದೇಶವನ್ನು ನಿರ್ದಿಷ್ಟವಾಗಿ ಗುರಿಯಾಗಿಸಿಕೊಂಡು ಕೇಂದ್ರ ಸರ್ಕಾರವು ಈ ನಿರ್ಬಂಧವನ್ನು ಜಾರಿಗೆ ತಂದಿಲ್ಲ. ಈ ನಿರ್ಬಂಧವು ಎಲ್ಲ ದೇಶಗಳಿಗೂ ಸಮಾನವಾಗಿ ಅನ್ವಯ ಆಗುತ್ತದೆ. ವಾಸ್ತವದಲ್ಲಿ, ನಿರ್ಬಂಧಗಳ ಜಾರಿಯ ಹಿಂದೆ ಇನ್ನೂ ಒಂದು ಮಹತ್ವದ ಕಾರಣ ಇದೆ. 'ನಮ್ಮ ಪ್ರಜೆಗಳ ಭದ್ರತೆಯನ್ನು ಖಾತರಿಪಡಿಸುವುದು ಪ್ರಮುಖ ಕಾರಣ' ಎಂದು ಅಧಿಕಾರಿಯೊಬ್ಬರು ತಿಳಿಸಿರುವುದಾಗಿ ವರದಿಯಾಗಿದೆ. 'ಕೆಲವು ಹಾರ್ಡ್‌ವೇರ್‌ಗಳಲ್ಲಿ ಭದ್ರತೆಗೆ ಸಂಬಂಧಿಸಿದ ಲೋಪಗಳು ಇರಬಹುದು. ಅವು ಸೂಕ್ಷ್ಮ ಮಾಹಿತಿಯನ್ನು, ವೈಯಕ್ತಿಕ ಮಾಹಿತಿಯನ್ನು ಸೋರಿಕೆ ಮಾಡಬಹುದು. ಸುರಕ್ಷತೆಯು ನಮ್ಮ ಅತಿಮುಖ್ಯ ಆದ್ಯತೆ' ಎಂದು ಕೂಡ ಈ ಅಧಿಕಾರಿ ಹೇಳಿದ್ದಾರೆ. ಆದರೆ, ಮಹಾನಿರ್ದೇಶನಾಲಯದ ಅಧಿಸೂಚನೆಯಲ್ಲಿ ಈ ಅಂಶದ ಪ್ರಸ್ತಾಪ ಇಲ್ಲ. ದೇಶದ ಜನರ ವೈಯಕ್ತಿಕ ಮಾಹಿತಿ ಭದ್ರತೆಯ ದೃಷ್ಟಿಯಿಂದ ಆಮದು ನಿರ್ಬಂಧ ಜಾರಿಗೆ ತಂದಿರುವುದು ನಿಜವೇ ಆಗಿದ್ದರೆ, ಅದು ಸೂಕ್ತ ಕ್ರಮ ಆಗಬಹುದು. ಆದರೆ ಈ ಕುರಿತು ಸ್ಪಷ್ಟತೆ ಬೇಕು.

ಭದ್ರತೆಯ ಕಾರಣಗಳನ್ನು ನೀಡಿರುವುದು ಜನರಲ್ಲಿ ಆತಂಕ ಮೂಡಿಸಬಲ್ಲದು ಕೂಡ. ಹತ್ತು ಹಲವು ಕಂಪನಿಗಳ, ಹತ್ತು ಹಲವು ಮಾದರಿಗಳ ಲ್ಯಾಪ್‌ಟಾಪ್, ಕಂಪ್ಯೂಟರ್, ಟ್ಯಾಬ್‌ಗಳನ್ನು ವೈಯಕ್ತಿಕ ಬಳಕೆಗೆ, ನೌಕರಿಯ ಅಗತ್ಯಗಳಿಗೆ ಜನ ಬಳಕೆ ಮಾಡುತ್ತಿದ್ದಾರೆ. ಅದರಲ್ಲಿ ಅವರು ತೀರಾ ಖಾಸಗಿಯಾದ ವಿವರಗಳನ್ನು ಸಂಗ್ರಹಿಸಿ ಇಟ್ಟುಕೊಂಡಿರಬಹುದು. ಯಾವ ಹಾರ್ಡ್‌ವೇರ್‌ನಲ್ಲಿ ಭದ್ರತೆಗೆ ಸಂಬಂಧಿಸಿದ ಲೋಪಗಳು ಕಾಣಿಸಿಕೊಂಡಿವೆ ಎಂಬುದನ್ನು ಸ್ಪಷ್ಟವಾಗಿ ತಿಳಿಸಿದರೆ, ತಾವು ತೆಗೆದುಕೊಳ್ಳಬೇಕಾದ ಸುರಕ್ಷತಾ ಕ್ರಮಗಳು ಯಾವುವು ಎಂಬುದನ್ನು ಜನರು ನಿರ್ಧರಿಸಬಹುದು. ಸೈಬರ್ ಭದ್ರತೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ್ದೇ ಆದ ಪ್ರತ್ಯೇಕ ವಿಭಾಗ ಇದೆ. ಆ ವಿಭಾಗದ ನೆರವು ಪಡೆದು ಅಥವಾ ಇನ್ಯಾವುದೇ ಪರಿಣತ ಸಂಸ್ಥೆಯ ನೆರವು ಪಡೆದು, ಭದ್ರತೆಗೆ ಸಂಬಂಧಿಸಿದ ಲೋಪಗಳ ಬಗ್ಗೆ ಹಾಗೂ ಮುನ್ನೆಚ್ಚರಿಕೆಯ ಕ್ರಮಗಳ ಬಗ್ಗೆ ಮಾಹಿತಿ ನೀಡಬೇಕಾದುದು ಅಗತ್ಯ. ಇಂತಹ ಅಗತ್ಯ ಮಾಹಿತಿಗಳನ್ನು ನೀಡದೇ ಇದ್ದಲ್ಲಿ, 'ಮಾಹಿತಿಯ ಭದ್ರತೆ, ಗೋಪ್ಯತೆ' ಎಂಬ ಪದಗಳು ಜನರಲ್ಲಿ ಆತಂಕವನ್ನಷ್ಟೇ ಮೂಡಿಸಬಲ್ಲವು. ಆಮದು ನಿರ್ಬಂಧದ ಪರಿಣಾಮವು ಮಾರುಕಟ್ಟೆಯಲ್ಲಿ ಇನ್ನಷ್ಟೇ ಕಾಣಿಸಿಕೊಳ್ಳಬೇಕಿದೆ. ಇಂಟರ್ನೆಟ್ ಹಾಗೂ ಕಂಪ್ಯೂಟರ್‌ಗಳು ದೇಶದ ಸೇವಾ ಮತ್ತು ತಯಾರಿಕಾ ವಲಯದ ಪಾಲಿಗೆ ಬೆನ್ನೆಲುಬು ಇದ್ದಂತೆ. ಈ ಉಪಕರಣಗಳ ಕೊರತೆ ಎದುರಾದರೆ ಈ ವಲಯಗಳು ಸೊರಗುತ್ತವೆ. ಹಾಗಾಗದಂತೆಯೂ ನೋಡಿಕೊಳ್ಳಬೇಕಾದ ಜವಾಬ್ದಾರಿ ಸರ್ಕಾರದ ಮೇಲಿದೆ.

ದಿನದ ಟ್ವೀಟ್

ಆರೋಗ್ಯಕರ ಪೈಪೋಟಿ ಇರಲಿ

ಆರೋಗ್ಯ ಸಚಿವರೇ, ಬನ್ನಿ ಬೆಂಗಳೂರಿನ ಎಲ್ಲಾ 'ನಮ್ಮ ಕ್ಲಿನಿಕ್'ಗಳನ್ನು ಭೇಟಿ ಮಾಡೋಣ, ಆಡಿಟ್ ಮಾಡೋಣ, ಯಾವುದಾದರೂ ಒಂದು ಕ್ಲಿನಿಕ್ ದೆಹಲಿಯ ಮಾದರಿಯಲ್ಲಿದೆಯೇ ಅಂತ ನೋಡೋಣ...?

(ಕರ್ನಾಟಕದ 'ನಮ್ಮ ಕ್ಲಿನಿಕ್'ಗಳು ದೆಹಲಿಯ 'ಮೊಹಲ್ಲಾ ಕ್ಲಿನಿಕ್'ಗಳಿಗಿಂತ ಹೆಚ್ಚು ಸೌಲಭ್ಯಗಳನ್ನು ಹೊಂದಿವೆ, ಮೊಹಲ್ಲಾ ಕ್ಲಿನಿಕ್‌ಗಳ ಬಗೆಗಿನ ಹೊಗಳಿಕೆ ಉತ್ಪ್ರೇಕ್ಷಿತ ಎನಿಸುತ್ತದೆ ಎಂಬ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರ ಹೇಳಿಕೆಗೆ ಪ್ರತಿಕ್ರಿಯೆ)

ಮೋಹನ್ ದಾಸರಿ, ಎಂಜಿನಿಯರ್

ಕಿಡಿನುಡಿ

ನಾಗರಿಕರಾದ ನಾವು ಮತ್ತು ನಮ್ಮ ದತ್ತಾಂಶ ಸಂಪೂರ್ಣ ಪಾರದರ್ಶಕವಾಗಿ ಹಾಗೂ ಪ್ರಾಮಾಣಿಕವಾಗಿ ಇರಬೇಕು ಎಂದು ಸರ್ಕಾರ ಬಯಸುತ್ತದೆ. ಆದರೆ, ಆರ್‌ಟಿಐ ಕಾಯ್ದೆಯ ತಿದ್ದುಪಡಿ ಮೂಲಕ, ನಾಗರಿಕರಿಗೆ ಪಾರದರ್ಶಕವಾಗಿ ಇರಬೇಕಾದ ಬದ್ಧತೆಯಿಂದ ತಾನು ಮಾತ್ರ ಸಂಪೂರ್ಣವಾಗಿ ವಿನಾಯಿತಿ ಪಡೆಯಲು ಬಯಸುತ್ತದೆ. ಇದು ವ್ಯಂಗ್ಯವಲ್ಲವೇ?

ಡಾ. ಶ್ರೀನಿವಾಸ ಕಕ್ಕಿಲ್ಲಾಯ, ವೈದ್ಯ

25 ವರ್ಷಗಳ ಹಿಂದೆ

ಬುಧವಾರ, 5-8-1998

- **ಸಿ.ಇ.ಟಿ.- ಕಾಪಿಯಲ್ಲಿ ಮಾಫಿಯಾ ಕೈವಾಡ?**

ಬೆಂಗಳೂರು, ಆ. 4– ಸಾಮಾನ್ಯ ಪ್ರವೇಶ ಪರೀಕ್ಷೆ ನಡೆಸಲಾಗಿದ್ದ ಕೊಪ್ಪಳ ಕೇಂದ್ರದಲ್ಲಿ, ವೈದ್ಯಕೀಯ ಮತ್ತು ಎಂಜಿನಿಯರಿಂಗ್ ಸೀಟುಗಳನ್ನು ಪಡೆದುಕೊಳ್ಳುವ ಆಸೆಯಿಂದ ಸಾಮೂಹಿಕ ಕಾಪಿ ಮಾಡಿರುವ ಪ್ರಕರಣದಲ್ಲಿ ಹೊರರಾಜ್ಯಗಳ ಐವರು ವಿದ್ಯಾರ್ಥಿಗಳೂ ಭಾಗಿಯಾಗಿದ್ದಾರೆಂದು ಶಂಕಿಸಲಾಗಿದೆ.

ಅಷ್ಟೇ ಅಲ್ಲ ಈ ಪ್ರಕರಣದ ಹಿಂದೆ ಮಾಫಿಯಾಗಳ ವ್ಯವಸ್ಥಿತ ಸಂಚು ನಡೆದಿದೆ ಎಂಬ ಶಂಕೆ ವ್ಯಕ್ತಪಡಿಸಲಾಗಿದೆ.

ಈ ಪ್ರಕರಣದಲ್ಲಿ ಭಾಗಿಯಾಗಿದ್ದಾರೆಂದು ಆರೋಪಿಸಲಾಗಿರುವ 16 ಮಂದಿ ವಿದ್ಯಾರ್ಥಿಗಳಿಗೆ ಈಗಾಗಲೇ ಸಾಮಾನ್ಯ ಪ್ರವೇಶ ಪರೀಕ್ಷೆ ಘಟಕದ ವಿಶೇಷಾಧಿಕಾರಿ ಹರೀಶ್ ಗೌಡರು ಸಮಜಾಯಿಷಿ ಕೋರಿ ಷೋಕಾಸ್ ನೋಟಿಸ್ ನೀಡಿದ್ದಾರೆ.

- **ಮಳೆ ಅಬ್ಬರ: ಜನಜೀವನ ಏರುಪೇರು**

ಬೆಂಗಳೂರು, ಆ. 4– ನಗರದಲ್ಲಿ ಕಳೆದ ರಾತ್ರಿಯಿಂದ ಬೆಳಿಗ್ಗೆವರೆಗೆ ಸುರಿದ ಧಾರಾಕಾರ ಮಳೆಯಲ್ಲಿ ಸೈಕಲ್ ಸವಾರ ಯುವಕನೊಬ್ಬ ತುಂಬಿ ಹರಿದ ದೊಡ್ಡ ಚರಂಡಿಯಲ್ಲಿ ಕೊಚ್ಚಿ ಹೋಗಿದ್ದು, ರಸ್ತೆ ಬದಿಯ ಹಲವು ಮರ, ದೂರವಾಣಿ ಹಾಗೂ ವಿದ್ಯುತ್ ಕಂಬಗಳು ನೆಲಕಚ್ಚಿವೆ.

ಮಳೆಯಿಂದಾಗಿ ಜನಜೀವನ ಅಸ್ತವ್ಯಸ್ತಗೊಂಡಿದ್ದು, ಕೆಲವು ಪ್ರದೇಶಗಳಲ್ಲಿ ಹಾಲು ಹಾಗೂ ಸುದ್ದಿ ಪತ್ರಿಕೆಗಳು ಸಹ ಹಂಚಿಕೆಯಾಗಿಲ್ಲ.

50 ವರ್ಷಗಳ ಹಿಂದೆ

ಭಾನುವಾರ, 5-8-1973

- **ಚಳವಳಿ ಫಲ: ಮುಂಬೈನಲ್ಲಿ ಹೋಟೆಲ್ ತಿಂಡಿ ಅಗ್ಗ**

ಮುಂಬೈ, ಆಗಸ್ಟ್ 4– ಅಗತ್ಯ ವಸ್ತುಗಳ ಬೆಲೆ ನಿಗದಿ ಮಾಡುವುದಕ್ಕಾಗಿ ನೇಮಕ ಮಾಡಿದ್ದ ಆರು ಸಮಿತಿಗಳ ಇಂದಿನ ಮಾತುಕತೆಯಿಂದ, ಮುಂಬೈಯಲ್ಲಿ ತಿಂಡಿಗಳ ಬೆಲೆ ಇಳಿಕೆಯಾಗಿದೆ. ಕಪ್ ಟೀ ಬೆಲೆ ಶೇ 12.5 ಮತ್ತು ಇತರ ವಸ್ತುಗಳ ಬೆಲೆ ಶೇ 25ರಷ್ಟು ಇಳಿಮುಖವಾಗಿದೆ.

ಚಿಲ್ಲರೆ ವರ್ತಕರು 1968ರಲ್ಲಿ ಇದ್ದ ಬೆಲೆಗೇ ಪದಾರ್ಥಗಳನ್ನು ಮಾರಬೇಕೆಂದು ಒತ್ತಾಯಪಡಿಸಲು ಕಳೆದ ವಾರ ಶಿವಸೇನಾ ಆರಂಭಿಸಿದ ಚಳವಳಿಯ ಬೆಳಕಿನಲ್ಲಿ ನಿನ್ನೆ ಮುಖ್ಯಮಂತ್ರಿ ವಿ.ಪಿ. ನಾಯಕ್ ಅವರು ಕರೆದಿದ್ದ ಶಾಸಕರ, ಸಗಟು ಮತ್ತು ಚಿಲ್ಲರೆ ವ್ಯಾಪಾರಿಗಳ ಸಭೆಯಲ್ಲಿ ಈ ಸಮಿತಿಗಳನ್ನು ರಚಿಸಲಾಗಿತ್ತು.

- **ಹೆಚ್ಚುವರಿ ಗೋಧಿ ಒಪ್ಪಿಸಲು ಕಾಂಗ್ರೆಸ್ ಎಂ.ಪಿ.ಗಳಿಗೆ ಕರೆ**

ನವದೆಹಲಿ, ಆಗಸ್ಟ್ 4– ಕಾಂಗ್ರೆಸ್ ಸಂಸದೀಯ ಪಕ್ಷವು ತನ್ನ ಸದಸ್ಯರಿಗೆಲ್ಲಾ ಒಂದು ಸುತ್ತೋಲೆ ಕಳುಹಿಸಿ, ತಮ್ಮಲ್ಲಿರುವ ಹೆಚ್ಚುವರಿ ಗೋಧಿಯನ್ನು ತಕ್ಷಣ ಸರ್ಕಾರದ ಗೋಧಿ ಸಂಗ್ರಹಣೆ ಸಂಸ್ಥೆಗಳಿಗೆ ಒಪ್ಪಿಸಬೇಕೆಂದು ತಿಳಿಸಿದೆ.

ಸರ್ಕಾರದ ಗೋಧಿ ಸಗಟು ವ್ಯಾಪಾರಕ್ಕೆ ಕೆಲವರು ಕಾಂಗ್ರೆಸ್ ಸದಸ್ಯರೇ ಸಹಕಾರ ನೀಡುತ್ತಿಲ್ಲ ಎಂಬ ದೂರುಗಳು ಬಂದಿರುವುದರಿಂದ ಈ ಸುತ್ತೋಲೆ ಹೊರಬಿದ್ದಿದೆ.

ಮೂಲಭೂತ ಅಗತ್ಯಗಳ ಸಮಗ್ರ ಶೈಕ್ಷಣಿಕ ಯೋಜನೆ ರೂಪಿಸಬೇಕಾದ ಅಗತ್ಯವಿದೆ

ಯಶಸ್ವಿ ಶಿಕ್ಷಣ: ಭಿನ್ನ ಭಿನ್ನ ಹೂರಣ

ವಿಶ್ಲೇಷಣೆ

ಅರವಿಂದ ಚೊಕ್ಕಾಡಿ

ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದ ಹೊಸ ಹೊಸ ಆಲೋಚನೆಗಳು, ನೀತಿಗಳು, ಯೋಜನೆಗಳು ಬರುತ್ತಿದ್ದ ಹಾಗೆಲ್ಲ ಶಿಕ್ಷಣದ ಮೂಲಭೂತ ಅಗತ್ಯಗಳ ಪರಿಕಲ್ಪನೆಯೇ ಹೊರಟು ಹೋಗುತ್ತಿದೆಯೇ ಎಂದು ಅನಿಸುತ್ತಿದೆ. ಎಲ್ಲಿ, ಏನು, ಏಕೆ, ಹೇಗೆ, ಯಾವಾಗ- ಇವು ಯಾವುದೇ ಕೆಲಸದೊಂದಿಗೆ ಇರಲೇಬೇಕಾದ ಉತ್ತರವನ್ನು ಬಯಸುವ ಪ್ರಶ್ನೆಗಳಾಗಿವೆ. ನಮ್ಮ ಶೈಕ್ಷಣಿಕ ಸನ್ನಿವೇಶಗಳಲ್ಲಿ ಹಳೆಯ ಸಮಸ್ಯೆಗಳನ್ನು ಸರಿಪಡಿಸಿಕೊಳ್ಳದೆಯೇ ಹೊಸದನ್ನು ಸೇರಿಸುತ್ತಾ ಹೋಗುವ ಒಂದು ಪ್ರಕ್ರಿಯೆ ನಡೆಯುತ್ತಿದೆ. ಆಗ, ಬೆಳೆದದ್ದು ಅಗಾಧವಾಗಿ ಬೆಳೆಯಿತು, ಉಳಿದದ್ದು ಹಾಗೆಯೇ ಉಳಿಯಿತು ಎನ್ನುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಈ ದಿಸೆಯಲ್ಲಿ ಪ್ರತಿಯೊಂದು ಶಾಲೆಯಲ್ಲೂ ಇರಲೇಬೇಕಾದ ಮೂಲಭೂತ ಅಗತ್ಯಗಳ ಕುರಿತಾಗಿ ಮರು ಅವಲೋಕನ ನಡೆಸಬೇಕಾಗುತ್ತದೆ.

ಬಿಸಿಲು ಮತ್ತು ಮಳೆ ಎರಡನ್ನೂ ತಡೆದುಕೊಳ್ಳಬಲ್ಲ ಕಟ್ಟಡ, ಅಗತ್ಯ ಪೀಠೋಪಕರಣಗಳು, ಪಾಠೋಪಕರಣಗಳು, ಕ್ರೀಡಾ ಉಪಕರಣಗಳು, ಪ್ರಯೋಗಾಲಯ ಸಾಧನಗಳು, ಸಣ್ಣದಾದರೂ ಒಂದು ಗ್ರಂಥಾಲಯ, ವ್ಯವಸ್ಥಿತ ಶೌಚಾಲಯ, ವಿಶಾಲವಾದ ಆಟದ ಮೈದಾನ, ಶುದ್ಧ ಕುಡಿಯುವ ನೀರಿನ ಪೂರೈಕೆ, ವಿದ್ಯುತ್ ಸಂಪರ್ಕ, ಗಾಳಿ ಬೆಳಕು ಚೆನ್ನಾಗಿರುವ ಕೊಠಡಿಗಳು, ಬರೆಯುವ ಹಲಗೆ ಇವಿಷ್ಟು ಶಾಲೆಯ ಮೂಲ ಭೌತಿಕ ಅಗತ್ಯಗಳಾಗಿವೆ.

ಶಿಕ್ಷಣವೆಂದರೇನೆ ಬೌದ್ಧಿಕ ಕ್ರಿಯೆಯಾಗಿದೆ. ಆದ್ದರಿಂದ ಅದನ್ನು ನಿರ್ವಹಿಸುವ ಶಿಕ್ಷಕರ ವಿಚಾರ ಅತಿ ಅವಶ್ಯವಾದ ಮೂಲಭೂತ ಶೈಕ್ಷಣಿಕ ಅಗತ್ಯವಾಗಿದೆ. ಅಗತ್ಯ ಇರುವಷ್ಟು ಪ್ರಮಾಣದ ಶಿಕ್ಷಕರ ಒದಗಣೆ ಆಗಬೇಕು. ಭೌತಿಕ ಸಂಪನ್ಮೂಲದ ವಿಚಾರ ಬಂದಾಗ ಆಟದ ಮೈದಾನ ಇರುವ ಶಾಲೆಗಳು, ಆಟದ ಮೈದಾನ ಇಲ್ಲದ ಶಾಲೆಗಳು, ಉಪಯೋಗಕ್ಕೇ ಇಲ್ಲದೆ ನಿರ್ವಹಣೆಯ ಹೊಣೆಗಾಗಿ ಇರುವ ಖಾಲಿ ಕೊಠಡಿಗಳ ಶಾಲೆಗಳು, ಕೊಠಡಿಯ ಕೊರತೆ ಇರುವ ಶಾಲೆಗಳು ಎಂದು ಶಾಲೆಗಳ ವರ್ಗೀಕರಣ ಮಾಡಲು ಸಾಧ್ಯವಿರುವ ಹಾಗೆಯೇ ಶಿಕ್ಷಕರಲ್ಲಿ ಸರ್ಕಾರಿ ಶಾಲೆಗಳ ಶಿಕ್ಷಕರು, ಅನುದಾನಿತ ಶಾಲೆಗಳ ಶಿಕ್ಷಕರು, ಅನುದಾನರಹಿತ ಶಾಲೆಗಳ ಶಿಕ್ಷಕರು ಎಂದು ಮೇಲ್ನೋಟಕ್ಕೆ ಕಾಣುವ ವಿಂಗಡಣೆಯ ಆಚೆಗೆ ಇನ್ನೂ ಹಲವು ವಿಂಗಡಣೆಗಳಿವೆ. ಕಾಯಂ ಶಿಕ್ಷಕರು, ಹೊರಗುತ್ತಿಗೆ ಶಿಕ್ಷಕರು, ಅತಿಥಿ ಶಿಕ್ಷಕರು, ದಾನಿಗಳು ನಿಯೋಜಿಸಿದ ಶಿಕ್ಷಕರು- ಹೀಗೆ ತರಹೇವಾರಿ ಭಿನ್ನತೆಗಳಿವೆ.

ಇವು ಬರೀ ಆಡಳಿತಾತ್ಮಕ ಭಿನ್ನತೆಗಳಾದರೆ ಸಮಸ್ಯೆ ಇಲ್ಲ. ಈ ಭಿನ್ನತೆಯ ನಡುವೆ ಅಗಾಧ ತಾರತಮ್ಯಗಳೂ ಇರುತ್ತವೆ. ಮಾಡುವ ಕೆಲಸದಲ್ಲಿ ಯಾವ ವಿನಾಯಿತಿ ಇಲ್ಲದಿದ್ದರೂ ವೇತನದಲ್ಲಿ ಅಪಾರ ಅಂತರವಿದೆ. ಅಕ್ಕಿಯ ದರದಲ್ಲಿ ಕಾಯಂ ಶಿಕ್ಷಕರಿಗೆ ನಲವತ್ತು ರೂಪಾಯಿ, ಅತಿಥಿ ಶಿಕ್ಷಕರಿಗೆ ನಾಲ್ಕು ರೂಪಾಯಿ ಎಂದು ವ್ಯತ್ಯಾಸ ಇರುತ್ತದೆಯೇ? ಸಮಾನ ಕೆಲಸಕ್ಕೆ ಸಮಾನ ವೇತನ ಎನ್ನುವುದು ನಮ್ಮ ರಾಜ್ಯ ನಿರ್ದೇಶಕ ತತ್ವಗಳ ಸಲಹೆಯಾಗಿದೆ. ಇದನ್ನು ಬರೀ ಕೃಷಿರಂಗದಲ್ಲಿರುವ ಹೆಣ್ಣಾಳು, ಗಂಡಾಳು ಎಂಬ ವರ್ಗೀಕರಣಕ್ಕೆ ಮಾತ್ರ ಸೀಮಿತಗೊಳಿಸಬೇಕಾಗಿಲ್ಲ. ಕೈಗಾರಿಕೆ ಮತ್ತು ಸೇವಾ ರಂಗದಲ್ಲಿರುವ ಆಡಳಿತಾತ್ಮಕ ವ್ಯತ್ಯಾಸಗಳು ಉಂಟು ಮಾಡುತ್ತಿರುವ ವೇತನ ತಾರತಮ್ಯಕ್ಕೂ ಇದನ್ನು ಅನ್ವಯಿಸಬೇಕು. ಶಿಕ್ಷಕರಿಗೆ ಕನಿಷ್ಠಪಕ್ಷ ಕುಟುಂಬದ ನಿರ್ವಹಣೆ ಮಾಡಲು ಸಾಧ್ಯವಿರುವಷ್ಟು ವೇತನವನ್ನು ಖಾಸಗಿ ಶಾಲೆಗಳಲ್ಲೂ ಕೊಡಬೇಕು. ಕಾರಣವಿಲ್ಲದೆ ಹಿಂದಿನ ವರ್ಷದ ಶಿಕ್ಷಕರನ್ನು ತೆಗೆದು ಹೊಸದಾಗಿ ನೇಮಕ ಮಾಡಿಕೊಳ್ಳುವಂಥದ್ದನ್ನೆಲ್ಲ ಕೈಬಿಡಬೇಕು.

ಶಿಕ್ಷಣದ ಮೂಲಕ ಸಾಂವಿಧಾನಿಕ ಆಶಯಗಳು ಈಡೇರಬೇಕು, ಸಮಾನತೆ ಬರಬೇಕು ಎಂದೆಲ್ಲ ನಿರೀಕ್ಷೆಗಳಿವೆ. ಮಕ್ಕಳಿಗೆ ಅವರ ಕಣ್ಣೆದುರಿನಲ್ಲಿ ಅವರ ಶಿಕ್ಷಕರಲ್ಲೇ ಅಸಮಾನತೆ ಎದ್ದು ಕಾಣುತ್ತಿದ್ದರೆ, ಸಮಾನತೆಯ ಆಶಯದ ಸಾಧನೆ ಹೇಗೆ ಸಾಧ್ಯ? ಅಲ್ಲದೆ, ಸ್ವತಃ ಅಸಮಾನತೆಯಲ್ಲಿ ಬಳಲುತ್ತಿರುವ ಶಿಕ್ಷಕರು ಸಮಾನತೆ ಸಾಧನೆಯ ಆಕಾಂಕ್ಷೆಯನ್ನು ವಿದ್ಯಾರ್ಥಿಗಳಲ್ಲಿ ಹುಟ್ಟಿಸಲು ಸಾಧ್ಯವೇ?! ಶಿಕ್ಷಕರಲ್ಲಿ ಆತ್ಮವಿಶ್ವಾಸ ಇದ್ದಾಗ ಮಕ್ಕಳಲ್ಲೂ ಅವರು ಆತ್ಮವಿಶ್ವಾಸವನ್ನು ಬೆಳೆಸಬಲ್ಲರು.

ಶಿಕ್ಷಣದ ಯಶಸ್ಸು ಶಿಕ್ಷಕರ ಗುಣಮಟ್ಟವನ್ನೂ ಅವಲಂಬಿಸಿದೆ. ಈಗಿನ ದಿನಗಳಲ್ಲಿ ಗುಣಮಟ್ಟದ ಪರಿಕಲ್ಪನೆಯು ಪರೀಕ್ಷೆಯ ಅಂಕಗಳು, ಡಿಜಿಟಲ್ ಮಾಧ್ಯಮಗಳನ್ನು ಅಳವಡಿಸುವುದು, ಸಾಧನೆಯ ದಾಖಲೆಯನ್ನು ಒದಗಿಸುವುದೇ ಮುಂತಾಗಿ ಬೌದ್ಧಿಕ ವಿಚಾರಗಳಿಗೆ ಸೀಮಿತವಾಗುತ್ತಿದೆ. ಶಿಕ್ಷಕರು ವಿದ್ಯಾರ್ಥಿಗಳಿಗೆ ಅನುಕರಣೆಗೆ ಯೋಗ್ಯರಾದ ಚಾರಿತ್ರ್ಯವಂತರಾಗಿ ಇರಬೇಕು ಎಂಬ ಪರಿಕಲ್ಪನೆ ಸಾರ್ವಜನಿಕ ಪ್ರಜ್ಞೆಯಿಂದ ಕಣ್ಮರೆಯಾದ ಸ್ಥಿತಿಯಲ್ಲಿದೆ. ಚಾರಿತ್ರ್ಯವಂತರಾದ ಶಿಕ್ಷಕರು ಶಿಕ್ಷಣ ಕ್ಷೇತ್ರದ ಮೂಲಭೂತ ಅವಶ್ಯಕತೆಗಳಾಗಿದ್ದಾರೆ.

ಶಿಕ್ಷಕರು ಬಹಳಷ್ಟು ವಿಷಯ ಪರಿಣತರಾಗಿದ್ದು ಅದನ್ನು ಮಕ್ಕಳ ಬೌದ್ಧಿಕ ಮಟ್ಟಕ್ಕೆ ಸೂಕ್ತವಾದ ವಿಧಾನದಲ್ಲಿ ವರ್ಗಾಯಿಸಬಲ್ಲವರಾಗಿರಬೇಕು. ಈ ವಿಷಯ ತಜ್ಞತೆಯ ಪ್ರಶ್ನೆ ಬಂದಾಗೆಲ್ಲ ಯುಟ್ಯೂಬಿನಿಂದ ತೆಗೆದು ತೋರಿಸುವುದು, ಪ್ರೊಜೆಕ್ಟರ್ ಹಾಕುವಂತಹ ತಾಂತ್ರಿಕ ಅಂಶಗಳಿಗೆ ಮಹತ್ವ ಬಂದುಬಿಡುತ್ತದೆ. ಶಿಕ್ಷಕರಿಗೆ ತಮ್ಮ ವಿಷಯದಲ್ಲಿ ಪ್ರಭುತ್ವ ಇರಬೇಕು. ಮಕ್ಕಳಿಗೆ ಅರ್ಥಮಾಡಿಸಬಲ್ಲ ಸಾಮರ್ಥ್ಯ ಶಿಕ್ಷಕರಿಗೆ ಇಲ್ಲದಿದ್ದರೆ ಕಲಿಕೆಯ ದಕ್ಷತೆ ಕುಸಿಯುತ್ತದೆ. ಡಿಜಿಟಲ್ ತಂತ್ರಜ್ಞಾನದಿಂದ ಹೊರಬರುವ ಮಾಹಿತಿಗಳು ಆಕರ್ಷಕ ಹೌದು. ಆದರೆ, ಅದು ಶಿಕ್ಷಕರ ದಕ್ಷತೆಯಿಂದಲೇ ಉಂಟಾಗುವ ಬೋಧನಾ ಆಕರ್ಷಣೆಯನ್ನು ದುರ್ಬಲಗೊಳಿಸುತ್ತದೆ ಎಂದು ಗೊತ್ತಿರಬೇಕು. ಔಚಿತ್ಯಕ್ಕೆ ತಕ್ಕಂತೆ ಡಿಜಿಟಲ್ ಮಾಧ್ಯಮಗಳನ್ನು ಖಂಡಿತವಾಗಿಯೂ ಬಳಸಬೇಕು. ಜೊತೆಗೆ ಸ್ವಂತ ಸಾಮರ್ಥ್ಯವನ್ನೂ ಬಳಸುವಂತಹ ತಜ್ಞತೆ ಇರುವ ಶಿಕ್ಷಕರು ಅಗತ್ಯವಾಗುತ್ತಾರೆ.

ಸಮರ್ಥ ಶಿಕ್ಷಕರನ್ನು ಆರಿಸಲು ನೇಮಕಾತಿ ಪರೀಕ್ಷೆಗಳನ್ನು ಹೆಚ್ಚಿಸಿ ಉಪಯೋಗವಿಲ್ಲ. ಬದಲಾಗಿ ಶಿಕ್ಷಕರು ಸಮರ್ಥರಾಗಿ ಇರುವಂತಹ ಆಡಳಿತಾತ್ಮಕ ಸನ್ನಿವೇಶವನ್ನು ನಿರ್ಮಿಸಬೇಕಾಗಿದೆ. ಒಂದು ಕಲಿಕಾ ವಿಚಾರ ಹೀಗಿದೆ ಎಂದು ತಾವು ಹೇಳಿದರೆ ಅದನ್ನು ಕೇಳಿಸಿಕೊಳ್ಳುವ ತಾಳ್ಮೆ ತಮ್ಮ ಮೇಲಧಿಕಾರಿಗಳಿಗೆ ಇದೆ ಎಂಬ ಭರವಸೆ ಶಿಕ್ಷಕರಿಗೆ ಬಂದರೆ, ಆಗ ಅವರು ಸಮರ್ಥರಾಗುತ್ತಾರೆ. ಖಾಸಗಿ ಆಡಳಿತ ಮಂಡಳಿಗಳು ಶೈಕ್ಷಣಿಕ ಪ್ರಕ್ರಿಯೆಯಲ್ಲಿ ಹೆಚ್ಚು ಮಧ್ಯಪ್ರವೇಶಿಸಿ ಶಿಕ್ಷಕರಿಗೆ ನಿರ್ದೇಶನ ಕೊಡಲು ಹೋಗಬಾರದು.

ಶಾಲೆಗಳು ಸರ್ಕಾರದ್ದಿರಲಿ, ಖಾಸಗಿ ರಂಗದ್ದಿರಲಿ ಪೋಷಕರೂ ಶೈಕ್ಷಣಿಕವಾಗಿ ಸಂವೇದನಾಶೀಲರಾಗುವ ತನಕ ಆಡಳಿತಾತ್ಮಕ ಸನ್ನಿವೇಶವು ಶಿಕ್ಷಣದ ಅವಶ್ಯಕತೆಗೆ ತಕ್ಕ ಹಾಗೆ ರೂಪುಗೊಳ್ಳಲು ಸಾಧ್ಯವಿಲ್ಲ. ಸದ್ಯ ಇರುವ ಎಸ್‌ಡಿಎಂಸಿಗಳು ಅಥವಾ ಖಾಸಗಿ ಶಾಲೆಗಳಲ್ಲಿರುವ ಪೋಷಕರ ಸಮಿತಿಗಳು ಶಾಲೆಗೆ ಅಗತ್ಯವಾದದ್ದನ್ನು ಮಾಡಿಕೊಡಲು ಇರುವ ಪೂರಕ ಘಟಕಗಳಾಗಿ ಅಥವಾ ಪ್ರಶ್ನೆ ಮಾಡುವುದನ್ನಷ್ಟೇ ನಿರ್ವಹಿಸುವ ಘಟಕಗಳಾಗಿ ಇವೆ. ಪೋಷಕರಿಗೂ ಪ್ರಾಥಮಿಕ ಮಟ್ಟದ ಶೈಕ್ಷಣಿಕ ಅರಿವಿನ ತರಬೇತಿಯ ಅಗತ್ಯವಿದೆ. ಪೋಷಕರ ಸಭೆಗಳು ಒಂದಷ್ಟು ಭಾಷಣಗಳಿಗೆ, ಮಕ್ಕಳ ಪ್ರಗತಿಪತ್ರದ ವರದಿ ಸಲ್ಲಿಸುವಿಕೆಗೆ ಸೀಮಿತ ಆಗಬಾರದು. ವರ್ಷದಲ್ಲಿ ಎರಡು ಬಾರಿ ತಜ್ಞ ಸಂಪನ್ಮೂಲ ವ್ಯಕ್ತಿಗಳಿಂದ ಪೋಷಕರಿಗೆ ಶೈಕ್ಷಣಿಕ ತರಬೇತಿ ಕೊಡಿಸಬೇಕು. ಆಗ ಅವರು ಶೈಕ್ಷಣಿಕ ಚಟುವಟಿಕೆಗಳಲ್ಲಿ ಕ್ರಿಯಾತ್ಮಕವಾಗಿ ಪಾಲ್ಗೊಳ್ಳಲು ಸಾಧ್ಯವಾಗುತ್ತದೆ ಮತ್ತು ಶೈಕ್ಷಣಿಕ ಆಡಳಿತದೊಂದಿಗೆ ರಚನಾತ್ಮಕವಾಗಿ ತೊಡಗಿಕೊಳ್ಳುತ್ತಾರೆ. ಅದರಿಂದ ಶೈಕ್ಷಣಿಕ ಆಡಳಿತವೂ ನಿರಾಳವಾಗಲು ಸಾಧ್ಯವಾಗುತ್ತದೆ.

ಮಕ್ಕಳ ಸಾಮರ್ಥ್ಯವರ್ಧನೆಯ ಗುರಿಯನ್ನು ತಲುಪಲು ಇರುವ ಸಾಧನಗಳು ಪಠ್ಯಪುಸ್ತಕಗಳು. ಅಂದರೆ ಪಠ್ಯವೇ ಅಂತಿಮ ಅಲ್ಲ. ನಿಧಾನವಾಗಿಯಾದರೂ ಪಠ್ಯಗಳ ರಚನಾ ಪದ್ಧತಿಯನ್ನು ಬದಲಿಸಬೇಕು. ಇತ್ತೀಚೆಗೆ ಪಠ್ಯಗಳು ಸ್ಥಳೀಯ ಸೊಗಡಿನಿಂದ ಬಹುದೂರ ಹೋಗುತ್ತಿವೆ. ಮಕ್ಕಳು ಅಂತರರಾಷ್ಟ್ರೀಯ ಸ್ಪರ್ಧಾತ್ಮಕತೆಗೂ ಸಮರ್ಥರಾಗಬೇಕೆಂಬುದು ನಿಜವೇ. ಆದರೆ ಆ ಸಾಮರ್ಥ್ಯವನ್ನು ಸ್ಥಳೀಯ ವಿವರಗಳ ಮೂಲಕವೇ ಸಾಧಿಸಲು ಬರುತ್ತದೆ. ವಿವರಗಳು ಸ್ಥಳೀಯತೆಯನ್ನು ಹೊಂದಿರಬೇಕು. ಸಾಮರ್ಥ್ಯವು ಅಂತರರಾಷ್ಟ್ರೀಯ ಮಟ್ಟದ್ದಾಗಿರಬೇಕು. ಆಗ ಮಕ್ಕಳಿಗೆ ವಿಚಾರವನ್ನು ಗ್ರಹಿಸಲು ಸುಲಭವಾಗುತ್ತದೆ. ಇದನ್ನು ಸಾಧಿಸಬೇಕಾದರೆ ಪಠ್ಯಗಳನ್ನು ಜಿಲ್ಲಾ ಮಟ್ಟದಲ್ಲಿ ರಚಿಸಬೇಕು. ಹಾಗೆ ರಚಿಸಲು ಬೇಕಾದ ಮಾನದಂಡಗಳು ರಾಜ್ಯ ಮಟ್ಟದಿಂದ ಸಿಗಬೇಕು. ಅದರಲ್ಲಿ ಸ್ಥಳೀಯತೆಗೆ ಶೇಕಡ ನಲವತ್ತೋ ಐವತ್ತೋ ನಿಗದಿಪಡಿಸಿ ಉಳಿದ ಭಾಗಗಳನ್ನು ಸಾರ್ವತ್ರಿಕವಾಗಿ ತೆಗೆದುಕೊಳ್ಳಬಹುದು.

ಒಟ್ಟಾಗಿ ಹೇಳುವುದಾದರೆ, ಅನೇಕ ಆಲೋಚನೆಗಳು, ಪರಸ್ಪರ ವೈರುಧ್ಯಗಳು, ಅಸ್ಪಷ್ಟತೆಗಳು ತುಂಬಿಹೋಗಿರುವ ಶಿಕ್ಷಣದಲ್ಲಿ ಎಲ್ಲವನ್ನೂ ಕ್ರೋಡೀಕರಿಸಿ, ಮೂಲಭೂತ ಅಗತ್ಯಗಳ ಸಮಗ್ರ ಯೋಜನೆಯೊಂದನ್ನು ರೂಪಿಸಬೇಕಾದ ಅಗತ್ಯವಿದೆ.

ಚುರುಮುರಿ

ಡಯಟ್ ಕಿ ಬಾತ್

• ಆನಂದ

ಹಿಂದೆಲ್ಲ ಯಾರನ್ನಾದರೂ ಊಟಕ್ಕೆ ಕರೆದರೆ ಮೆನು ನಿರ್ಧರಿಸುವುದು ಎಷ್ಟು ಸುಲಭ ಇರ್ತಿತ್ತು ಎಂದು ಮೊನ್ನೆ ನೆನಪಿಸಿಕೊಂಡೆ, ಊಟಕ್ಕೆ ಆಹ್ವಾನಿಸಿದ್ದ ಗೆಳೆಯರಿಗೆ ಏನೇನು ಅಡುಗೆ ಮಾಡುವುದು ಎಂದು ಚರ್ಚಿಸಲು ಮಡದಿಯ ಜತೆ ಕೂತಾಗ.

'ಅಯ್ಯೋ ಬಿಡ್ರಿ. ಮಾಡಿದರಾಯಿತು, ಇದೇನು ಹೊಸತೆ? ಎರಡು ಪಲ್ಯ, ಹುಳಿ, ಒಂದು ಗೊಜ್ಜು, ಚಿತ್ರಾನ್ನ, ಪಾಯಸ, ಒಂದು ಸ್ವೀಟು ತಾನೆ?' ಎಂದು ಲೈಟಾಗಿ ತಗೊಂಡಳು.

ಆಗ ಗೆಳೆಯ ನಂ. 1ನ ಫೋನ್– 'ಥ್ಯಾಂಕ್ಸ್ ಮಗಾ ಊಟಕ್ಕೆ ಕರೆದಿದ್ದು. ನಾನು ಸಕ್ಕರೆ ತಿನ್ನಲ್ಲಪ್ಪಾ, ಗಮನದಲ್ಲಿರಲಿ, ಮೇಡಂಗೂ ಹೇಳು' ಎಂದ. ಈಗ ಸ್ವೀಟೂ ಬೆಲ್ಲದ್ದು ಮಾತ್ರ ಎಂದಾಯಿತು.

'ಸರಿ ಬಿಡಿ, ಹೋಳಿಗೆ ಡಿಸೈಡೆಡ್. ಅದು ಪೂರ್ತಿ ಬೆಲ್ಲದ್ದು ತಾನೆ' ಎಂದಳು ಮಡದಿ.

ಮತ್ತೆ ಮೊಬೈಲ್ ಸದ್ದು. ಕಿಟ್ಟು ಉವಾಚ– 'ನಾನು ಅನ್ನ ತಿನ್ನಲ್ಲಪ್ಪ, ಮೆಡಿಕಲ್ ಅಡ್ವೈಸ್'. ಸರಿ, ಇವನಿಗೆ ಚಪಾತಿ ಲಟ್ಟಿಸಬೇಕು ಅಂದುಕೊಳ್ಳುತ್ತಿದ್ದಂತೆ ಇನ್ನೊಂದು ಫೋನ್.

'ಏನಪ್ಪಾ ನಿಂದೇನು ಕಂಡೀಷನ್?' ಎಂದು ಡೈರೆಕ್ಟಾಗಿ ಕೇಳಿಯೇಬಿಟ್ಟೆ.

'ನಾನು ಏನು ಬೇಕಾದರೂ ತಿಂತೀನಿ. ಆದರೆ ಒಂದು ಕಂಡೀಷನ್. ಅದು ಸಂಜೆ 6ರ ಒಳಗೆ' ಎಂದಾಗ, ಇವನಿಗೆ ಮೊದಲು ಬಡಿಸಿ ನಂತರ ನಿಧಾನವಾಗಿ ಉಳಿದವರಿಗೆ ಎಲೆ ಹಾಕಬೇಕು ಅಂದುಕೊಂಡೆ.

'ಅಲ್ರೀ ನಿಮ್ಮ ಗೆಳೆಯರಲ್ಲಿ ಯಾರೂ ಕೀಟೊ ಡಯಟ್ ಮಾಡ್ತಿಲ್ಲವೇನು?' ಎಂದು ಕೇಳಿದಳು.

'ಕೀಟೊ?'

'ಮೊನ್ನೆ ನಮ್ಮ ಮಹಿಳಾ ಸಮಾಜದಲ್ಲಿ ಅದರ ಬಗ್ಗೆ ಚರ್ಚೆ ನಡೆಯಿತು. ನನಗಂತೂ ಅರ್ಥವಾಗಲಿಲ್ಲ. ಅದೇನೋ ನೋಡಿ. ನಿಮ್ಮಲ್ಲಿ ಯಾರೂ ಕೀಟೊದಾರಿಗರು ಇಲ್ಲ ತಾನೆ?'

'ಇದುವರೆಗೂ ಯಾರೂ ಘೋಷಿಸಿಕೊಂಡಿಲ್ಲ'.

'ಆಮೇಲೆ ಕೆಲವರು ಪ್ಯೂರ್ ಸ್ಟ್ರಿಕ್ಟ್ ವೇಗನ್ ಅಂತೆ, ಇನ್ನು ಕೆಲವರು ಡೈರಿ ಪದಾರ್ಥ ಮುಟ್ಟೊಲ್ಲವಂತೆ. ಅದೇನು ಡಯಟ್ ಪ್ರಜ್ಞೆನೋ ಏನೋ' ಎಂದಳು.

ಹೊರಗಡೆ ಊಟಾನೇ ಮಾಡೋಲ್ಲ ಅಂತ ಎಲ್ಲರೂ ನಿರ್ಧರಿಸಿದರೆ ಸಲೀಸು ಅಲ್ಲವೇ?

ಸಂಗತ

ಅಣುಶಕ್ತಿ ಜನಕಲ್ಯಾಣಕ್ಕೆ, ರಣಾಂಗಣಕ್ಕಲ್ಲ

ಮನುಷ್ಯನ ನಾಗರಿಕತೆಯ ಮುನ್ನಡೆಯು ಪರಮಾಣು ಶಕ್ತಿಯನ್ನು ಸಮಷ್ಟಿಹಿತಕ್ಕಾಗಿ ಉಪಯೋಗಿಸಿಕೊಳ್ಳುವ ಅವನ ಜಾಣತನದಲ್ಲಿದೆ

• ಬಿ.ಎಸ್.ಭಗವಾನ್

ಅಂಥ ಕೇಡು ದುಃಸ್ವಪ್ನಕ್ಕೂ ಬೇಡ. 1945ರ ಆಗಸ್ಟ್ 6 ಮತ್ತು 9ರಂದು ಕ್ರಮವಾಗಿ ಅಮೆರಿಕವು ಜಪಾನಿನ ಹಿರೋಶಿಮ ಮತ್ತು ನಾಗಸಾಕಿ ನಗರಗಳ ಮೇಲೆ ತಲಾ ಒಂದು ಪರಮಾಣು ಬಾಂಬ್ ಹಾಕಿತು. 'ಲಿಟಲ್ ಬಾಯ್' ಮತ್ತು 'ಫ್ಯಾಟ್ ಮ್ಯಾನ್' ಎಂಬ ಹೆಸರುಗಳ, ಬಂದೂಕಿನ ಆಕಾರದ ಬಾಂಬ್‌ಗಳು ಅವು. ಕ್ರಮವಾಗಿ 4,400 ಹಾಗೂ 4,656 ಕಿಲೊಗ್ರಾಂ ತೂಕ. ಅವು 20,000 ಮತ್ತು 22,000 ಟನ್‌ಗಳ ಟ್ರೈನೈಟ್ರೊಟಾಲಿನ್ (ಟಿ.ಎನ್.ಟಿ.) ಸ್ಫೋಟಕಕ್ಕೆ ಕಾರಣವಾಗುವಷ್ಟು ಸಾಮರ್ಥ್ಯದವು. ಹೊಗೆ, ದೂಳು, ಮಸಿಯದ್ದೇ ಕಾರುಬಾರು.

ಬಾಂಬ್ ಬಿದ್ದ 11 ಕಿ.ಮೀ. ಸರಹದ್ದಿನಲ್ಲಿ ಸೂರ್ಯ ಮರೆಯಾಗಿದ್ದ. ಬಾಂಬ್ ಸ್ಫೋಟಿಸುವುದು 10 ಸೆಕೆಂಡುಗಳು ಮಾತ್ರ. ಆದರೆ, ಅದರಿಂದ ಭಾವಿ ಪೀಳಿಗೆಗಳೇ ಯಾತನೆಗೊಳಗಾಗುತ್ತವೆ. ನೆಲದ ತಾಪಮಾನ 4,000 ಡಿಗ್ರಿ ಸೆಲ್ಸಿಯಸ್‌ನಷ್ಟಿತ್ತು. ಅದು ಬಹುತೇಕ ಎಲ್ಲ ವಸ್ತುಗಳೂ ಆವಿಯಾಗುವಂಥ ಉಷ್ಣ ವಿಕಿರಣ. ಕಿವಿ, ಶ್ವಾಸಕೋಶಕ್ಕೆ ಹಾನಿ, ಆಂತರಿಕ ರಕ್ತಸ್ರಾವ, ಅಂದಾಜಿಗೂ ಸಿಗದ ಅಗಾಧ ಸಾವು ನೋವು. ಕಡೆಗೆ ಅಳೆದು ಸುರಿದು ಒಟ್ಟಾರೆ 1.50 ಲಕ್ಷ ಮಂದಿ ಸಾವು, 1 ಲಕ್ಷ ಗಾಯಾಳುಗಳು ಎಂದು ಪ್ರಕಟಿಸಲಾಯಿತು. ಈ ಬಾಂಬ್‌ಗಳನ್ನು ಕ್ರಮವಾಗಿ 9,448 ಮೀಟರ್ ಹಾಗೂ 8,840 ಮೀಟರ್ ಎತ್ತರದಿಂದ ಬೀಳಿಸಲಾಗಿತ್ತು. ಹಿರೋಶಿಮಾದಲ್ಲಂತೂ ಶೇ 90ರಷ್ಟು ವೈದ್ಯರು, ನರ್ಸ್‌ಗಳೇ ಸಾವಿಗೀಡಾಗಿದ್ದಾಗ ಇನ್ನು ವೈದ್ಯೋಪಚಾರ ಹೇಗೆ ತಾನೆ ಸಾಧ್ಯ?

ಹಾರಿ ಬರುತ್ತಿದ್ದ ಅವಶೇಷಗಳಿಂದ ರಕ್ಷಿಸಿಕೊಳ್ಳಲು ಜನ ಹೆಣಗಾಡಿದರು. ಆಸರೆಯಾಗಬೇಕಾದ ಸೂರುಗಳೇ ಛಿದ್ರವಾಗಿ ತಲೆ ಮೇಲೆ ಬೀಳುತ್ತಿದ್ದವು. ನಾಗಸಾಕಿಯಲ್ಲಿ ಭಯಾನಕ ಸ್ಥಿತಿ ಇದಕ್ಕಿಂತ ಭಿನ್ನವಾಗಿರಲಿಲ್ಲ. ಆ ನಗರಗಳಲ್ಲಿ ಇಂದಿಗೂ ದಾಳಿಯ ದುಷ್ಪರಿಣಾಮಗಳು ಮಳೆ ನಿಂತರೂ ಮರದಡಿಯ ಹನಿ ನಿಂತಿಲ್ಲ ಎನ್ನುವಂತೆ ಕಾಡುತ್ತಲೇ ಇವೆ. ಕ್ಯಾನ್ಸರ್ ಮತ್ತು ದೀರ್ಘಕಾಲದ ವ್ಯಾಧಿಗಳು ಹೆಚ್ಚುತ್ತಲೇ ಇವೆ. ವಿಶ್ವ ಸಮರವಾದರೇನು, ಇಷ್ಟು ಅಮಾನವೀಯವಾಗಬೇಕೆ ಎಂದು ಅಮೆರಿಕ ಅರೆಕ್ಷಣ ಯೋಚಿಸಿದ್ದರೂ ಮನುಷ್ಯ ಮನುಷ್ಯರ ನಡುವಿನ ಮಹಾಕ್ರೌರ್ಯವೊಂದು ಇತಿಹಾಸವಾಗುವುದು ತಪ್ಪುತ್ತಿತ್ತು. $E = mc^2$ ಸೂತ್ರದ ಮೂಲಕ, ದ್ರವ್ಯ ಮತ್ತು ಶಕ್ತಿ ಒಂದೇ ಎಂದು ನಿರೂಪಿಸಿದ ಆಲ್ಬರ್ಟ್ ಐನ್‌ಸ್ಟೀನ್, ಈ ಗಂಡಾಂತರಕ್ಕೆ ತಮ್ಮ ಸಂಶೋಧನೆಯೇ ಎಂದು ಮರುಗಿದ್ದರು.

ಟಿ.ಎನ್.ಟಿ. ಹಳದಿ ಬಣ್ಣದ ಸ್ಫಟಿಕೀಯ ಘನವಸ್ತು. ಅದನ್ನು ಕಾಯಿಸಿ ಸ್ಫೋಟಕವಾಗಿ ಬಳಸಲಾಗುತ್ತದೆ. ನಂಜಿನ ಈ ವಸ್ತು ಅದೆಷ್ಟು ವಿನಾಶಕಾರಿ ಗೊತ್ತೇ? ಬರೀ ಒಂದು ಗ್ರಾಂ ಟಿ.ಎನ್.ಟಿ. ಸ್ಫೋಟಿಸಿ 70 ಕೆ.ಜಿ. ತೂಕದ ವ್ಯಕ್ತಿಯೊಬ್ಬನನ್ನು ಆಗಸಕ್ಕೆ 12 ಕಿಲೊಮೀಟರ್‌ಗಳ ತನಕ ಚಿಮ್ಮಿಸಬಹುದು! ಜಗತ್ತಿನ ಯಾವುದೇ ಭಾಗದಲ್ಲಿ ಪ್ರಬಲ ಬಾಂಬ್ ದಾಳಿಯಾದರೆ ಇತರೆಡೆಯಲ್ಲೂ ಬೆಳೆ ವೈಫಲ್ಯ, ತಾಪಮಾನ ಏರಿಕೆ, ಸಾಗರ ವಿಸ್ತರಣೆಯಂಥ ರಂಪಗಳಾದಾವು.

ಪರಮಾಣು ಅಸ್ತ್ರಗಳನ್ನು ಹೊಂದಿರುವುದೇ ಘನತೆ ಎಂದು ಭಾವಿಸುವ ಪ್ರವೃತ್ತಿಯನ್ನು ರಾಷ್ಟ್ರಗಳು ಮೊದಲು ಬಿಡಬೇಕು. ಪರಮಾಣು ಅಥವಾ ಜೈವಿಕ ಅಸ್ತ್ರಗಳ ಬಳಕೆ ಇನ್ನಿಲ್ಲವೆಂಬ ಏಕೈಕ ಖಾತರಿಯೆಂದರೆ ಅವುಗಳ ನಿಷೇಧ ಮತ್ತು ವರ್ಜ್ಯ. ವೈರಿಯ ತೀವ್ರ ಆಕ್ರಮಣದಲ್ಲಿದ್ದರೂ ಜೈವಿಕ ಅಸ್ತ್ರಗಳು ಅನಿವಾರ್ಯ ಆಗಬಾರದು.

ಅಣ್ವಸ್ತ್ರ ನಿಶ್ಶಸ್ತ್ರೀಕರಣದ ದಿಸೆಯಲ್ಲಿ 'ಅಣ್ವಸ್ತ್ರ ಪ್ರಸರಣ ನಿಷೇಧ ಒಪ್ಪಂದ' 1968ರಲ್ಲಿ ನಡೆದ ಅಂತರರಾಷ್ಟ್ರೀಯ ಮಟ್ಟದ ಮಹತ್ತರ ಒಪ್ಪಂದ. ವಿಶ್ವಸಂಸ್ಥೆ ಅದನ್ನು ಪ್ರಾಯೋಜಿಸಿದಾಗ ಹದಿನೆಂಟು ದೇಶಗಳು ಉತ್ಸಾಹ ತೋರಿದವು. ಪರಮಾಣು ಆಯುಧಗಳನ್ನು ಬಳಸುವ ಮಾತಿರಲಿ ಅವನ್ನು ಪ್ರಯೋಗಿಸಲೂ ಕೂಡದು, ಪರಮಾಣು ಅಸ್ತ್ರಪರ ರಾಷ್ಟ್ರಗಳನ್ನು ಪ್ರೋತ್ಸಾಹಿಸಬಾರದು, ಅವುಗಳ ಪರವಾಗಿ ವಕಾಲತ್ತು ವಹಿಸಬಾರದು, ಪರಮಾಣು ಶಕ್ತಿಯನ್ನು ಜನರ ಅಭಿವೃದ್ಧಿ ಮತ್ತು ಕಲ್ಯಾಣಕ್ಕಾಗಿ ವಿನಿಯೋಗಿಸಬೇಕು ಎನ್ನುವುದು ಒಡಂಬಡಿಕೆಯ ಸಾರಾಂಶ.

ರಷ್ಯಾ, ಅಮೆರಿಕ ಸೇರಿದಂತೆ 191 ದೇಶಗಳು ಸಮ್ಮತಿಸಿದ ಈ ಒಪ್ಪಂದ 1970ರಲ್ಲಿ ಜಾರಿಗೆ ಬಂದಿತು. ಪ್ರತಿವರ್ಷ ಆಗಸ್ಟ್ 6ನೇ ತೇದಿ 'ವಿಶ್ವ ಹಿರೋಶಿಮ ದಿನ' ಆಗಿರುವುದರ ಉದ್ದೇಶ ಅಣ್ವಸ್ತ್ರಗಳಿಂದ ಪರಿಣಮಿಸುವ ಕಲ್ಪನಾತೀತ ಘನಘೋರ ಅನಾಹುತಗಳ ಕುರಿತು ಜನಜಾಗೃತಿ ಮೂಡಿಸುವುದು. ಇದರ ಜೊತೆಗೆ ಈ ದಿನವು ಶಾಂತಿ, ನೆಮ್ಮದಿಯ ಮೌಲ್ಯವನ್ನು ಮನಗಾಣಿಸುತ್ತದೆ. ಸಂಯಮ, ಸಮಾಧಾನಶೀಲತೆಯು ಮನುಕುಲದ ಪ್ರಭುತ್ವವಾಗಬೇಕೇ ವಿನಾ ಪರಮಾಣು ಆಯುಧವಲ್ಲ. ಹಿರೋಶಿಮಾದಲ್ಲಿ ಬಾಂಬ್ ಬಿದ್ದ ಸಮಯವಾದ ಬೆಳಿಗ್ಗೆ 8.15ಕ್ಕೆ ಸರಿಯಾಗಿ, ಹಣತೆಯಿರಿಸಿದ ಬಣ್ಣದ ಬುಟ್ಟಿಗಳನ್ನು ನದಿ, ಸರೋವರಗಳಲ್ಲಿ ಶಾಂತಿಯ ದ್ಯೋತಕವಾಗಿ ಆಬಾಲವೃದ್ಧರೆಲ್ಲ ತೇಲಿಬಿಡುತ್ತಾರೆ.

ಪರಮಾಣು ಸಮರೋತ್ಸಾಹಿ ದೇಶಗಳಿಗೆ ನೈತಿಕ ಮತ್ತು ತರ್ಕಬದ್ಧ ಪ್ರತಿಕ್ರಿಯೆಯಾಗಿ ಆಗಸ್ಟ್ 6, ಜಾಗತಿಕ ಜಾಗೃತ ದಿನವಾಗಬೇಕು. ಅಲ್ಲಲ್ಲಿ ಆ ಕುರಿತ ಚರ್ಚೆ, ವಿಚಾರಸಂಕಿರಣ, ಸಭೆ, ರೂಪಕ ಮೇಳೈಸಬೇಕು. ಮನುಷ್ಯನ ನಾಗರಿಕತೆಯ ಮುನ್ನಡೆಯು ಪರಮಾಣು ಶಕ್ತಿಯನ್ನು ಸಮಷ್ಟಿಹಿತಕ್ಕಾಗಿ ಉಪಯೋಗಿಸಿಕೊಳ್ಳುವ ಅವನ ಜಾಣತನದಲ್ಲಿದೆ. ಕಟ್ಟುನಿಟ್ಟಾದ ಸುರಕ್ಷಿತ ವ್ಯವಸ್ಥೆಯಿಲ್ಲದಿದ್ದರೆ ಪರಮಾಣು ವಿದ್ಯುತ್ ಸ್ಥಾವರಗಳೂ ಸೆರಗಿನಲ್ಲಿಟ್ಟ ಬೆಂಕಿಯಂತೆಯೇ. 1986ರಲ್ಲಿ ಚೆರ್ನೊಬಿಲ್, 2011ರಲ್ಲಿ ಫುಕುಶಿಮಾದಲ್ಲಿ ಸಂಭವಿಸಿದ ದುರಂತಗಳು ಇನ್ನೂ ಕಾಡುತ್ತಿವೆ.

ವಾಚಕರ ವಾಣಿ

ಆರೋಗ್ಯಕರ ಆಡಳಿತಕ್ಕೆ ವರ್ಗಾವಣೆ ಪೂರಕವಾಗಲಿ

ಪೊಲೀಸ್ ಇನ್‌ಸ್ಪೆಕ್ಟರ್‌ಗಳ ವರ್ಗಾವಣೆ ಪಟ್ಟಿ ಕಾಂಗ್ರೆಸ್ ಶಾಸಕರಲ್ಲಿ ಅತೃಪ್ತಿಯ ಕಿಡಿ ಹೊತ್ತಿಸಿದೆ ಎಂಬ ಸುದ್ದಿ (ಪ್ರ.ವಾ., ಆ. 3) ಓದಿ ಬೇಸರವಾಯಿತು. ಯಾವುದೇ ವರ್ಗಾವಣೆ ಆರೋಗ್ಯಕರ ಆಡಳಿತದ ಒಂದು ಪ್ರಕ್ರಿಯೆ. ಸರ್ಕಾರಿ ಆಡಳಿತಯಂತ್ರ ನಿಂತ ನೀರಾಗಬಾರದು, ಆಗಾಗ ವರ್ಗಾವಣೆ ಇರಬೇಕು. ಶಾಸಕರು ತಮ್ಮ ಕ್ಷೇತ್ರಕ್ಕೆ ಇಂತಹ ಅಧಿಕಾರಿಗಳೇ ಬೇಕೆಂದು ಪಟ್ಟು ಹಿಡಿಯುವುದರಲ್ಲಿ ಅರ್ಥವಿಲ್ಲ. ಹಾಗೆ ಪಟ್ಟು ಹಿಡಿಯುವುದು ಆ ಶಾಸಕರ ಅಸಮರ್ಥ ನಡೆ ಇಲ್ಲವೇ ಅದೂ ಭ್ರಷ್ಟಾಚಾರದ ಒಂದು ಸಂಕೇತ. ಶಾಸಕರಿಗೆ ತಮ್ಮ ಕ್ಷೇತ್ರದ ಮೇಲೆ ಹಿಡಿತ ಬರುವುದು ಅಧಿಕಾರಿಗಳ ಸಾಮರ್ಥ್ಯದಿಂದ ಅಲ್ಲ, ತಮ್ಮ ಸಂವಿಧಾನಬದ್ಧ ನಡೆ ಮತ್ತು ನುಡಿಯಿಂದ. ಸ್ಪಂದಿಸಿ ಕೆಲಸ ಮಾಡುವ ಅಧಿಕಾರಿ ಉಳಿಯಲಿ, ಇಲ್ಲದವರು ಹೋಗಲಿ. ಅಸಮರ್ಥರಾದವರು ಎಲ್ಲಿಗೆ ಹೋದರೂ ಅವರ ಕಾರ್ಯಕ್ಷಮತೆ ಅಷ್ಟೇ ಇರುತ್ತದೆ.

ಅಧಿಕಾರಿಗಳು ಸಹ ಯಾರದೋ ಒಬ್ಬ ಶಾಸಕರ ವಿಶ್ವಾಸ ಗಳಿಸಿಕೊಂಡು ಅಲ್ಲಿಯೇ ಉಳಿಯುವ ಪ್ರಯತ್ನ ಮಾಡುವುದೂ ಸಲ್ಲದು. ಅಧಿಕಾರಿ ಹಾಗೂ ಶಾಸಕರು ತಮ್ಮ ಕ್ಷೇತ್ರದ ಬಗ್ಗೆ ಬದ್ಧತೆಯನ್ನು ಇಟ್ಟುಕೊಂಡು ಕೆಲಸ ಮಾಡದೆ, ಪರಸ್ಪರ ಅವಲಂಬಿತರಾಗುವುದು ಸ್ವಚ್ಛ ಮತ್ತು ಭ್ರಷ್ಟಾಚಾರರಹಿತ ಆಡಳಿತ ಆಗುವುದಿಲ್ಲ. ವರ್ಗಾವಣೆಯನ್ನು ಆಯಾ ಇಲಾಖೆಯ ಉಸ್ತುವಾರಿ ಹೊಣೆ ಹೊತ್ತವರ ಆಡಳಿತದ ಸಾಮರ್ಥ್ಯಕ್ಕೆ ಬಿಡದೆ ಈ ರೀತಿ ಶಾಸಕರು ಬಹಿರಂಗವಾಗಿ ಮೂಗು ತೂರಿಸುವ ಕೆಲಸಕ್ಕೆ ಅವಕಾಶ ಕೊಟ್ಟರೆ, ಭವಿಷ್ಯದಲ್ಲಿ ಯಾವುದೇ ಪಕ್ಷ ಆಡಳಿತದ ಚುಕ್ಕಾಣಿ ಹಿಡಿದರೂ ವರ್ಗಾವಣೆಯು ದಂಧೆಯಾಗಿಯೇ ಉಳಿಯಲಿದೆ.

ತಾ.ಸಿ.ತಿಮ್ಮಯ್ಯ, ಬೆಂಗಳೂರು

ಇದ್ಯಾವ ನ್ಯಾಯ...?

ಸರ್ಕಾರ ಹಾಲಿನ ಬೆಲೆ ಜಾಸ್ತಿ ಮಾಡಿದ್ದು ಲೀಟರ್‌ಗೆ ₹ 3. ಆದರೆ, ಹೋಟೆಲ್‌ನವರು 100 ಎಂ.ಎಲ್. ಅಥವಾ ಅದಕ್ಕಿಂತ ಕಡಿಮೆ ಪ್ರಮಾಣದಲ್ಲಿ ತಾವು ಕೊಡುವ ಕಾಫಿ, ಚಹಾಕ್ಕೆ ₹ 3 ಜಾಸ್ತಿ ಮಾಡಿದ್ದಾರೆ. ಇದ್ಯಾವ ನ್ಯಾಯ ಮಾರಾಯ್ರೇ...?

ವಿ.ವಿಜಯೇಂದ್ರ ರಾವ್, ಬೆಂಗಳೂರು

ಇಂಟರ್‌ನೆಟ್‌ಗೆ ಕಡಿವಾಣ: ಚೀನಾ ಮಾದರಿ ನಡೆ

ಚೀನಾ ತನ್ನ ಯುವಕರು ಮತ್ತು ಮಕ್ಕಳು ರಾತ್ರಿವೇಳೆ ಇಂಟರ್‌ನೆಟ್ ಬಳಸುವುದಕ್ಕೆ ಕಡಿವಾಣ ಹಾಕಲು ಮುಂದಾಗಿರುವುದನ್ನು ತಿಳಿದು (ಪ್ರ.ವಾ., ಆ. 3) ಸಂತಸವಾಯಿತು. ಮೊಬೈಲ್ ಫೋನ್ ಗೀಳಿನಿಂದ ಮಕ್ಕಳು ಮತ್ತು ಹದಿಹರೆಯದವರನ್ನು ಹೊರತರುವ ಹಿತದೃಷ್ಟಿಯಿಂದ ಚೀನಾ ತಂದಿರುವ ಈ ನಿಯಮ ಸೂಕ್ತವಾಗಿದೆ. ಅತಿಯಾದ ಫೋನ್ ಬಳಕೆಯಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ ಎಂದು ತಜ್ಞರು ಅಭಿಪ್ರಾಯಪಡುತ್ತಾರೆ. ಹೀಗಾಗಿ, ಚೀನಾದ ಇಂತಹ ನಿಯಮವು ನಮ್ಮಲ್ಲೂ ಜಾರಿಯಾದರೆ ಒಳ್ಳೆಯದು.

ನಂಜನಹಳ್ಳಿ ನಾರಾಯಣ, ಬೆಂಗಳೂರು

ದೆಹಲಿ ಮಸೂದೆ: ಪ್ರಜಾಪ್ರಭುತ್ವದ ಅಣಕ

ದೆಹಲಿಯ ಆಡಳಿತ ಸೇವೆಗಳಿಗೆ ಸಂಬಂಧಿಸಿದ ಅಧಿಕಾರವನ್ನು ತನ್ನಲ್ಲಿಯೇ ಉಳಿಸಿಕೊಳ್ಳುವ ಉದ್ದೇಶದಿಂದ ಕೇಂದ್ರ ಸರ್ಕಾರ ಇತ್ತೀಚೆಗೆ ಲೋಕಸಭೆಯಲ್ಲಿ ಮಂಡಿಸಿದ 'ರಾಷ್ಟ್ರ ರಾಜಧಾನಿ ಪ್ರದೇಶ ದೆಹಲಿ ಸರ್ಕಾರದ (ತಿದ್ದುಪಡಿ) ಮಸೂದೆ' ಅಂಗೀಕಾರಗೊಂಡಿರುವುದು ಪ್ರಜಾಪ್ರಭುತ್ವದ ಅಣಕ. ದೆಹಲಿಯು ರಾಷ್ಟ್ರದ ರಾಜಧಾನಿಯಾಗಿರುವುದನ್ನು ಗಮನದಲ್ಲಿ ಇರಿಸಿಕೊಂಡು ಸುಪ್ರೀಂ ಕೋರ್ಟ್ ಸಾರ್ವಜನಿಕ ಭದ್ರತೆ, ಪೊಲೀಸ್ ಹಾಗೂ ಭೂಮಿಗೆ ಸಂಬಂಧಿಸಿದ ವಿಷಯಗಳಲ್ಲಿ ಕೇಂದ್ರಕ್ಕೆ ಅಧಿಕಾರ ನೀಡಿ ತೀರ್ಪು ನೀಡಿದೆ. ಹೀಗಿದ್ದಾಗ್ಯೂ ಅದಕ್ಕೆ ವ್ಯತಿರಿಕ್ತವಾಗಿ ದೆಹಲಿಯ ಆಡಳಿತವನ್ನು ಪರೋಕ್ಷವಾಗಿ ಸಂಪೂರ್ಣ ನಿಯಂತ್ರಣದಲ್ಲಿ ಇಟ್ಟುಕೊಳ್ಳುವ ಸಲುವಾಗಿ ದೆಹಲಿಯ ನಾಗರಿಕರ ತೀರ್ಪಿಗೆ ವಿರುದ್ಧವಾಗಿ ಈ ಮಸೂದೆಯನ್ನು ಕೇಂದ್ರವು ತಂದಿರುವುದು ಪ್ರಜಾಪ್ರಭುತ್ವಕ್ಕೆ ಮಾರಕವಾದ ತೀರ್ಮಾನ.

ದೆಹಲಿಗೆ ಸಂಬಂಧಿಸಿದ ಯಾವುದೇ ವಿಷಯದ ಬಗ್ಗೆ ಕಾನೂನು ರಚಿಸಲು ಸಂಸತ್ತಿಗೆ ಅಧಿಕಾರವಿರುತ್ತದೆ. ಆದರೂ ರಾಜ್ಯ ಸರ್ಕಾರದ ಅನುಮತಿ ಇಲ್ಲದೆ ಅಥವಾ ರಾಜ್ಯ ಸರ್ಕಾರವು ಸಂವಿಧಾನ ವಿರೋಧಿಯಾಗಿ ನಡೆದುಕೊಂಡಿರುವ ಯಾವುದೇ ಪ್ರಕರಣ ಇಲ್ಲದಿದ್ದಾಗ್ಯೂ ಈ ರೀತಿಯ ಸರ್ವಾಧಿಕಾರಿ ಧೋರಣೆ ಪ್ರಬುದ್ಧ ನಡೆಯಲ್ಲ.

ಕೆ.ಎಂ.ನಾಗರಾಜು, ಮೈಸೂರು

ಇದೆಂತಹ ಎಕ್ಸ್‌ಪ್ರೆಸ್ ರೈಲು?

ಎಪ್ಪತ್ನಾಲ್ಕು ವರ್ಷದ ನಾನು ಧಾರವಾಡದಿಂದ ಹೊಸಪೇಟೆಗೆ ಹೋಗಲೆಂದು ಇತ್ತೀಚೆಗೆ ಹರಿಪ್ರಿಯಾ ಎಕ್ಸ್‌ಪ್ರೆಸ್ (ಕೊಲ್ಹಾಪುರ- ತಿರುಪತಿ) ರೈಲಿನಲ್ಲಿ ಪ್ರಯಾಣ ಮಾಡಲು ಟಿಕೆಟ್ ಕಾಯ್ದಿರಿಸಿದೆ. ಧಾರವಾಡದಿಂದ 164 ಕಿ.ಮೀ. ದೂರದಲ್ಲಿರುವ ಹೊಸಪೇಟೆಗೆ ನಾಲ್ಕು ಗಂಟೆಯ ಪ್ರಯಾಣ. ಆದರೆ, ಅಂದು ಧಾರವಾಡದಿಂದ ಸಂಜೆ 6.34ಕ್ಕೆ ಹೊರಡಬೇಕಾದ ರೈಲು ಒಂದು ಗಂಟೆ ತಡವಾಗಿ ಹೊರಟಿತು. ಹಾಗೆಯೇ, ಹೊಸಪೇಟೆಗೆ ಅಂದು ರಾತ್ರಿ 10.15ಕ್ಕೆ ತಲಪುವ ಬದಲು ಮಧ್ಯರಾತ್ರಿ 11.59ಕ್ಕೆ ತಲುಪಿತು. ರೈಲುಗಳ ಸಂಚಾರದಲ್ಲಿ ಸಹಜವಾಗಿ ವಿಳಂಬವಾಗುವುದು ಎಲ್ಲರಿಗೂ ತಿಳಿದಿದ್ದರೂ ರೈಲು ಪ್ರತಿ ಹಂತದಲ್ಲೂ 'ನಿಧಾನವೇ ಪ್ರಧಾನ' ಎಂಬ ನಾಣ್ಣುಡಿಯನ್ನು ಪಾಲಿಸುವಂತೆ ಸಂಚರಿಸಿದ್ದು ಮಾತ್ರ ಬೇಸರ ತರಿಸಿತು.

ಸಾಮಾನ್ಯ ರೈಲಿನಂತೆ ಸಂಚರಿಸಿದ ಈ ಎಕ್ಸ್‌ಪ್ರೆಸ್ ರೈಲು, ನಿಲುಗಡೆ ಇಲ್ಲದ ನಿಲ್ದಾಣದಲ್ಲೂ ಕೆಲಕ್ಷಣ ನಿಲ್ಲಿಸಿ, ಮುನಿರಾಬಾದ್ ನಿಲ್ದಾಣದಲ್ಲಿ ಹೆಚ್ಚಿನ ಸಮಯ ನಿಲ್ಲಿಸಿ, ಯಾವ ಹಂತದಲ್ಲೂ ವೇಗವನ್ನು ಸ್ವಲ್ಪ ಮಟ್ಟಿಗೆ ಹೆಚ್ಚಿಸಿಕೊಳ್ಳುವ ಪ್ರಯತ್ನವನ್ನೇ ಮಾಡಲಿಲ್ಲ. ಹೀಗಾಗಿ, ಎಕ್ಸ್‌ಪ್ರೆಸ್ ರೈಲಿನಲ್ಲಿ ಸಂಚರಿಸಿದರೂ ಸಾಮಾನ್ಯ ರೈಲಿನಲ್ಲಿ ಪ್ರಯಾಣಿಸಿದ ಅನುಭವವೇ ಆಯಿತು.

ರಘುನಾಥರಾವ್ ತಾಪ್ಸೆ, ದಾವಣಗೆರೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಪರಿಶಿಷ್ಟ ಸಮುದಾಯಗಳ ಅನುದಾನವನ್ನು 'ಗ್ಯಾರಂಟಿ' ಯೋಜನೆಗಳಿಗೆ ವರ್ಗಾಯಿಸಿದ್ದು ಸರಿಯೇ?

ಪರಿಶಿಷ್ಟರ ಅಭಿವೃದ್ಧಿಗಷ್ಟೇ ಅನುದಾನ ಬಳಕೆ



ಗ್ಯಾರಂಟಿಗಳಿಂದಾಗಿ ಒಂದು ಕುಟುಂಬಕ್ಕೆ ವರ್ಷಕ್ಕೆ ಗರಿಷ್ಠ ₹52,000 ವರೆಗೆ ದೊರಕಬಹುದು. ಒಂದು ಕುಟುಂಬಕ್ಕೆ ಈ ಮೊತ್ತದ ಉಳಿತಾಯವಾದರೆ, ಅದು ಆ ಕುಟುಂಬದ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸುತ್ತದೆ. ಕುಟುಂಬದ ಜೀವನ ಮಟ್ಟವೇ ಉತ್ತಮಗೊಳ್ಳುತ್ತದೆ. ಹಾಗಾಗಿ, ಪರಿಶಿಷ್ಟರಿಗೆ ಗ್ಯಾರಂಟಿ ಯೋಜನೆಗಳ ಪ್ರಯೋಜನ ಒದಗಿಸಲು ಎಸ್‌ಸಿಎಸ್‌ಪಿ-ಟಿಎಸ್‌ಪಿ ಅನುದಾನದ ಒಂದು ಭಾಗವನ್ನು ಬಳಸಿಕೊಳ್ಳುವುದು ಸಮರ್ಥನೀಯವೇ ಆಗಿದೆ

• ಎಚ್‌.ಸಿ. ಮಹದೇವಪ್ಪ

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಮುದಾಯಗಳಿಗೆ ಮೀಸಲಾದ ಅನುದಾನವನ್ನು ಇತರರಿಗಾಗಿ ವೆಚ್ಚ ಮಾಡಲಾಗುತ್ತಿದೆ ಎಂದು ವ್ಯವಸ್ಥಿತವಾಗಿ ಅಪಪ್ರಚಾರ ನಡೆಸಲಾಗುತ್ತಿದೆ. ಪರಿಶಿಷ್ಟ ಸಮುದಾಯಗಳನ್ನು ತಮ್ಮ ಕೆಟ್ಟ ರಾಜಕೀಯಕ್ಕೆ ವಿರೋಧ ಪಕ್ಷಗಳು ಬಳಸಿಕೊಳ್ಳುತ್ತಿವೆ. ಆದರೆ, ಪರಿಶಿಷ್ಟ ಸಮುದಾಯಗಳ ಕಲ್ಯಾಣಕ್ಕೆ ಕಾಂಗ್ರೆಸ್ ಪಕ್ಷ ಮತ್ತು ಸಿದ್ದರಾಮಯ್ಯ ನೇತೃತ್ವದ ಸರ್ಕಾರದ ಬದ್ಧತೆ ಹೇಗಿದೆ ಎಂಬುದನ್ನು ಅಂಕಿ ಸಂಖ್ಯೆಗಳು ಮತ್ತು ವಾಸ್ತವಾಂಶಗಳೇ ತಿಳಿಸಿ ಹೇಳುತ್ತವೆ.

ಸಿದ್ದರಾಮಯ್ಯ ನೇತೃತ್ವದಲ್ಲಿ 2013-2018ರ ಅವಧಿಯಲ್ಲಿ ಅಧಿಕಾರದಲ್ಲಿದ್ದ ಸರ್ಕಾರವು ಪರಿಶಿಷ್ಟ ಸಮುದಾಯಗಳ ಏಳಿಗೆಗೆ ಹಲವು ಕೆಲಸಗಳನ್ನು ಮಾಡಿತ್ತು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಮುದಾಯಗಳ ಜನಸಂಖ್ಯೆಗೆ ಅನುಗುಣವಾಗಿ ಅನುದಾನ ಹಂಚಿಕೆ ಮಾಡಬೇಕು ಎಂಬ ಉದ್ದೇಶದಿಂದ ಕರ್ನಾಟಕ ಪರಿಶಿಷ್ಟ ಜಾತಿ ಉಪ ಯೋಜನೆ ಮತ್ತು ಪರಿಶಿಷ್ಟ ಪಂಗಡ ಉಪ ಯೋಜನೆ ಕಾಯ್ದೆಯನ್ನು (ಎಸ್‌ಸಿಎಸ್‌ಪಿ-ಟಿಎಸ್‌ಪಿ) ಸಿದ್ದರಾಮಯ್ಯನವರು ಈ ಹಿಂದಿನ ಅವಧಿಯಲ್ಲಿ ಜಾರಿಗೆ ತಂದಿದ್ದರು. ಇಂತಹ ಕಾಯ್ದೆ ದೇಶದಲ್ಲಿ ಅದೇ ಮೊದಲ ಬಾರಿಗೆ ಜಾರಿಗೆ ಬಂದಿತ್ತು. ಪರಿಶಿಷ್ಟ ಸಮುದಾಯಗಳಿಗೆ ಮೀಸಲಾದ ಅನುದಾನವು ಇತರ ಕೆಲಸಗಳಿಗೆ ವಿನಿಯೋಗವಾಗಬಾರದು ಎಂಬ ಕಾಳಜಿ ಮತ್ತು ದೂರದೃಷ್ಟಿಯಿಂದ ಈ ಕಾಯ್ದೆಯನ್ನು ಜಾರಿಗೆ ತರಲಾಯಿತು. ಪರಿಶಿಷ್ಟ ಸಮುದಾಯಗಳಿಗೆ ಮೀಸಲಾದ ಅನುದಾನವನ್ನು ಬೇರೆ ಕೆಲಸಗಳಿಗೆ ವರ್ಗಾಯಿಸುವುದು ಇದರಿಂದ ತಪ್ಪಿ ಹೋಯಿತು.

ಹಾಗಿದ್ದೂ ಕಾಯ್ದೆಯ ಸೆಕ್ಷನ್ 7 (ಡಿ)ಯನ್ನು ಬಳಸಿಕೊಂಡು ಅನುದಾನವನ್ನು ಬೇರೆ ಉದ್ದೇಶಗಳಿಗೆ ವರ್ಗಾಯಿಸುವ ಅವಕಾಶವೂ ಇತ್ತು. ಈ ಸೆಕ್ಷನ್ ಅನ್ನು ರದ್ದು ಮಾಡಬೇಕು ಎಂಬುದು ಪರಿಶಿಷ್ಟ ಸಮುದಾಯಗಳ ಬೇಡಿಕೆಯಾಗಿತ್ತು. ಈ ಬೇಡಿಕೆಗೆ ಅನುಗುಣವಾಗಿ ಸೆಕ್ಷನ್ 7 (ಡಿ)ಯನ್ನು ನಮ್ಮ ಸರ್ಕಾರವು ರದ್ದು ಮಾಡಿದೆ.

ಈ ಹಿಂದೆ ಇದ್ದ ಬಿಜೆಪಿ ಸರ್ಕಾರವು ಸೆಕ್ಷನ್ 7 (ಡಿ)ಯನ್ನು ದುರ್ಬಳಕೆ ಮಾಡಿಕೊಂಡಿತ್ತು ಎಂಬುದು ಸ್ಪಷ್ಟ. ಈ ಸೆಕ್ಷನ್ ಬಳಸಿ ಎಸ್‌ಸಿಎಸ್‌ಪಿ-ಟಿಎಸ್‌ಪಿ ಅನುದಾನವನ್ನು ರಸ್ತೆ ಮತ್ತು ಇತರ ಮೂಲಸೌಕರ್ಯ ಕಾಮಗಾರಿಗಳಿಗೆ ಬಳಸಲಾಗಿತ್ತು. ರಸ್ತೆ ಮತ್ತು ಇತರ ಮೂಲಸೌಕರ್ಯಗಳನ್ನು ಪರಿಶಿಷ್ಟ ಸಮುದಾಯಗಳ ಜನರೂ ಬಳಸುತ್ತಾರೆ. ಹಾಗಾಗಿ, ಅನುದಾನದ ವರ್ಗಾವಣೆ ಸಮಂಜಸ ಎಂಬ ವಿತಂಡವಾದವನ್ನು ಸಮರ್ಥನೆಯಾಗಿ ನೀಡಲಾಗಿತ್ತು.

2023-24ನೇ ಸಾಲಿನ ಬಜೆಟ್ ಅನ್ನು ಉದಾಹರಣೆಯಾಗಿ ತೆಗೆದುಕೊಳ್ಳೋಣ. ಈ ಆರ್ಥಿಕ ವರ್ಷದಲ್ಲಿ ಎಸ್‌ಸಿಎಸ್‌ಪಿ-ಟಿಎಸ್‌ಪಿ ಕಾಯ್ದೆ ಅಡಿಯಲ್ಲಿ ನೀಡಲಾದ ಅನುದಾನವು ₹34,294 ಕೋಟಿ. ಕಳೆದ ವರ್ಷ ನೀಡಿದ ಅನುದಾನಕ್ಕಿಂತ ₹4,031 ಕೋಟಿ ಹೆಚ್ಚು ಅನುದಾನ ಒದಗಿಸಲಾಗಿದೆ. ಅನುದಾನವು ಶೇ 13ರಷ್ಟು ಏರಿಕೆಯಾಗಿದೆ.

ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜನರ ಅಭಿವೃದ್ಧಿಗಾಗಿ ಇನ್ನಷ್ಟು ಕಾರ್ಯಕ್ರಮಗಳನ್ನು ಜಾರಿಗೆ ತರುವ ಆಕಾಂಕ್ಷೆ ಸರ್ಕಾರಕ್ಕೆ ಇದೆ. ಇನ್ನೂ ಹೆಚ್ಚಿನ ಅನುದಾನವನ್ನು ಒದಗಿಸಬೇಕಿದೆ. ಆದರೆ, ಕೇಂದ್ರ ಸರ್ಕಾರವು ರಾಜ್ಯಕ್ಕೆ ಕೊಡಬೇಕಾದ ಅನುದಾನವನ್ನು ಕೊಡದಿರುವುದು ನಮ್ಮ ಕೈಕಟ್ಟಿ ಹಾಕಿದೆ. 2018-19ನೇ ಸಾಲಿನಲ್ಲಿ ಕೇಂದ್ರದ ಬಜೆಟ್ ಗಾತ್ರವು ₹24.42 ಲಕ್ಷ ಕೋಟಿ ಇತ್ತು, ಕರ್ನಾಟಕಕ್ಕೆ ತೆರಿಗೆ ಪಾಲು ಮತ್ತು ಅನುದಾನ ರೂಪದಲ್ಲಿ ₹52,977 ಕೋಟಿ ನೀಡಲಾಗಿತ್ತು. 2023-24ರಲ್ಲಿ ಕೇಂದ್ರದ ಬಜೆಟ್ ಗಾತ್ರವು ₹45.03 ಲಕ್ಷ ಕೋಟಿಗೆ ಏರಿಕೆ ಆಗಿದೆ. ಆದರೆ, ತೆರಿಗೆ ಪಾಲು ಮತ್ತು ಅನುದಾನ ರೂಪದಲ್ಲಿ ಕರ್ನಾಟಕಕ್ಕೆ ₹50,258 ಕೋಟಿ ದೊರೆಯುವ ನಿರೀಕ್ಷೆ ಮಾತ್ರ ಇದೆ. 2018ರಲ್ಲಿ ನೀಡಿದ ತೆರಿಗೆ ಪಾಲು ಮತ್ತು ಅನುದಾನದ ಲೆಕ್ಕಾಚಾರ ಪ್ರಕಾರ, ರಾಜ್ಯಕ್ಕೆ ಈ ಆರ್ಥಿಕ ವರ್ಷದಲ್ಲಿ ₹1 ಲಕ್ಷ ಕೋಟಿ ದೊರೆಯಬೇಕು. ಕೇಂದ್ರವು ಕರ್ನಾಟಕವನ್ನು ತಾರತಮ್ಯದಿಂದ ನೋಡುತ್ತಿರುವುದರಿಂದ ಅನುದಾನ ಕಡಿಮೆ ಆಗುತ್ತಿದೆ. ರಾಜ್ಯವು ಅನಿವಾರ್ಯವಾಗಿ ಸಾಲ ಮಾಡಬೇಕಾದ ಸ್ಥಿತಿ ಇದೆ. ಸಾಲ ಹೆಚ್ಚಾದಂತೆ ಬಡ್ಡಿಯ ಹೊರೆಯೂ ಹೆಚ್ಚಾಗಿ ಪರಿಶಿಷ್ಟ ಸಮುದಾಯಗಳು ಮತ್ತು ಇತರರ ಅಭಿವೃದ್ಧಿಗೆ ಹೆಚ್ಚು ಅನುದಾನ ನೀಡಲು ಸಾಧ್ಯವಾಗದಂತಾಗಿದೆ.

ಪರಿಶಿಷ್ಟ ಸಮುದಾಯಗಳ ಜನರಿಗೆ ಸರ್ಕಾರ ನೀಡಿದ್ದ ಜಮೀನು ಪರಭಾರೆ ತಡೆಗೆ ಸರ್ಕಾರವು ಕ್ರಮ ಕೈಗೊಂಡಿದೆ. ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ (ಕೆಲ ಜಮೀನು ಪರಭಾರೆ ನಿಷೇಧ ಕಾಯ್ದೆ) ಕಾಯ್ದೆಗೆ (ಪಿಟಿಸಿಎಲ್) ತಿದ್ದುಪಡಿ ತರಲಾಗಿದೆ. ಅಕ್ರಮ ಪರಭಾರೆಯನ್ನು ಪ್ರಶ್ನಿಸಿ ನ್ಯಾಯಾಲಯದ ಮೆಟ್ಟಿಲೇರಲು ಕಾಲಮಿತಿಯನ್ನು ನಿಗದಿ ಮಾಡುವ ಮೂಲಕ ಪರಿಶಿಷ್ಟರಿಗೆ ಅನ್ಯಾಯ ಆಗುವುದನ್ನು ತಡೆಯಲಾಗಿದೆ. ಪಿಟಿಸಿಎಲ್ ಕಾಯ್ದೆಗೆ ತಿದ್ದುಪಡಿ ತರಲಾಗುವುದು ಎಂಬುದು ಚುನಾವಣೆಗೂ ಮುಂಚೆ ಕಾಂಗ್ರೆಸ್ ಪಕ್ಷವು ನೀಡಿದ್ದ ಭರವಸೆಯಾಗಿತ್ತು. ಮತ್ತೊಂದು ಭರವಸೆಯನ್ನು ಈ ತಿದ್ದುಪಡಿಯ ಮೂಲಕ ಈಡೇರಿಸಲಾಗಿದೆ.

ಕೇಂದ್ರದಲ್ಲಿ ಇರುವ ಬಿಜೆಪಿ ಸರ್ಕಾರ ಮತ್ತು ರಾಜ್ಯದಲ್ಲಿ ಇದ್ದ ಬಿಜೆಪಿ ಸರ್ಕಾರದ ದುರಾಡಳಿತದಿಂದ ಪರಿಶಿಷ್ಟರೂ ಸೇರಿದಂತೆ ಎಲ್ಲ ಜನವರ್ಗಗಳ ಬದುಕು ದುಸ್ತರವಾಗಿದೆ ಎಂಬುದು ಕಟು ವಾಸ್ತವ. ಜನರ ಜೀವನವನ್ನು ಸಹನೀಯಗೊಳಿಸುವುದಕ್ಕಾಗಿಯೇ ಕಾಂಗ್ರೆಸ್ ಪಕ್ಷವು ಐದು ಗ್ಯಾರಂಟಿಗಳನ್ನು ವಿಧಾನಸಭೆ ಚುನಾವಣೆಗೆ ಮುನ್ನ ಘೋಷಿಸಿತ್ತು. ಅಧಿಕಾರಕ್ಕೆ ಬಂದ ತಕ್ಷಣವೇ ಈ ಗ್ಯಾರಂಟಿಗಳ ಜಾರಿಗೆ ತಾತ್ವಿಕ ಒಪ್ಪಿಗೆ ನೀಡಿ, ನಂತರದ ದಿನಗಳಲ್ಲಿ ಒಂದೊಂದು ಗ್ಯಾರಂಟಿಗಳನ್ನು ಹಂತ ಹಂತವಾಗಿ ಜಾರಿ ಮಾಡಲಾಗಿದೆ.

ಜನರ ಕಾರ್ಯಕ್ರಮಗಳ ಮೂಲಕ ಸರ್ಕಾರದ ಜನಪ್ರಿಯತೆ ದಿನೇದಿನೇ ಏರುತ್ತಲೇ ಇದೆ. ಈ ಜನಪ್ರಿಯತೆಯನ್ನು ಸಹಿಸಿಕೊಳ್ಳಲು ವಿರೋಧ ಪಕ್ಷಗಳಿಗೆ ಆಗುತ್ತಿಲ್ಲ. ಆ ಕಾರಣಕ್ಕಾಗಿಯೇ ಎಸ್‌ಸಿಎಸ್‌ಪಿ-ಟಿಎಸ್‌ಪಿ ಅನುದಾನವನ್ನು ಬೇರೆಡೆಗೆ ವರ್ಗಾಯಿಸಲಾಗಿದೆ ಎಂದು ಗುಲ್ಲೆಬ್ಬಿಸಲಾಗುತ್ತಿದೆ.

ಎಸ್‌ಸಿಎಸ್‌ಪಿ-ಟಿಎಸ್‌ಪಿ ಅನುದಾನದಲ್ಲಿ ₹11,144 ಕೋಟಿಯನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸಲು ನಿರ್ಧರಿಸಲಾಗಿದೆ. ಆದರೆ, ಇಷ್ಟೂ ಮೊತ್ತವನ್ನು ಪರಿಶಿಷ್ಟ ಜಾತಿ ಮತ್ತು ಪಂಗಡದ ಸಮುದಾಯಗಳ ಜನರಿಗೆ ಗ್ಯಾರಂಟಿ ಯೋಜನೆಗಳನ್ನು ಒದಗಿಸಲು ಬಳಸಲಾಗುವುದು. ಈ ಮೊತ್ತದಲ್ಲಿ ಒಂದು ರೂಪಾಯಿ ಕೂಡ ಇತರರಿಗೆ ಹೋಗುವುದಿಲ್ಲ. ಅನುದಾನವು ಸಮಂಜಸವಾಗಿ ಬಳಕೆ ಆಗಿದೆಯೆ ಎಂಬುದನ್ನು ನೋಡಲ್ ಏಜೆನ್ಸಿ ಮೂಲಕ ಪರಿಶೀಲಿಸಿ ಖಚಿತಪಡಿಸಿಕೊಳ್ಳುವ ವ್ಯವಸ್ಥೆಯನ್ನೂ ಮಾಡಲಾಗುವುದು.

ಎಸ್‌ಸಿಎಸ್‌ಪಿ-ಟಿಎಸ್‌ಪಿ ಕಾಯ್ದೆಯ ಪ್ರಕಾರ, ಈ ಸಮುದಾಯಗಳ ವೈಯಕ್ತಿಕ ಅಭಿವೃದ್ಧಿ, ವಾಸಸ್ಥಳ ಅಭಿವೃದ್ಧಿಗೆ ಎಸ್‌ಸಿಎಸ್‌ಪಿ-ಟಿಎಸ್‌ಪಿ ಅನುದಾನವನ್ನು ಬಳಸಿಕೊಳ್ಳಲು ಅವಕಾಶ ಇದೆ. ಗ್ಯಾರಂಟಿ ಯೋಜನೆಗಳು ಪರಿಶಿಷ್ಟರ ವೈಯಕ್ತಿಕ ಅಭಿವೃದ್ಧಿಯ ಭಾಗವೇ ಆಗಿವೆ. ಮಹಿಳೆಯರಿಗೆ ಉಚಿತ ಬಸ್ ಪ್ರಯಾಣದ ಶಕ್ತಿ ಯೋಜನೆ, ಉಚಿತ ವಿದ್ಯುತ್ ಪೂರೈಕೆಯ ಗೃಹಜ್ಯೋತಿ ಯೋಜನೆ, ಮನೆ ಯಜಮಾನಿಗೆ ತಿಂಗಳಿಗೆ ₹2,000 ನೀಡುವ ಗೃಹಲಕ್ಷ್ಮಿ ಯೋಜನೆ, ನಿರುದ್ಯೋಗಿ ಯುವಜನರಿಗೆ ನೀಡಲಾಗುವ ಯುವ ನಿಧಿ ಯೋಜನೆಗಳ ಫಲಾನುಭವಿಗಳಲ್ಲಿ ಪರಿಶಿಷ್ಟರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ.

ಗ್ಯಾರಂಟಿಗಳಿಂದಾಗಿ ಒಂದು ಕುಟುಂಬಕ್ಕೆ ವರ್ಷಕ್ಕೆ ಗರಿಷ್ಠ ₹52,000 ವರೆಗೆ ದೊರಕಬಹುದು. ಒಂದು ಕುಟುಂಬಕ್ಕೆ ಈ ಮೊತ್ತದ ಉಳಿತಾಯವಾದರೆ, ಅದು ಆ ಕುಟುಂಬದ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸುತ್ತದೆ. ಕುಟುಂಬದ ಜೀವನ ಮಟ್ಟವೇ ಉತ್ತಮಗೊಳ್ಳುತ್ತದೆ. ಹಾಗಾಗಿ, ಪರಿಶಿಷ್ಟರಿಗೆ ಗ್ಯಾರಂಟಿ ಯೋಜನೆಗಳ ಪ್ರಯೋಜನ ಒದಗಿಸಲು ಎಸ್‌ಸಿಎಸ್‌ಪಿ-ಟಿಎಸ್‌ಪಿ ಅನುದಾನದ ಒಂದು ಭಾಗವನ್ನು ಬಳಸಿಕೊಳ್ಳುವುದು ಸಮರ್ಥನೀಯವೇ ಆಗಿದೆ.

ಲೇಖಕ: ಸಮಾಜ ಕಲ್ಯಾಣ ಸಚಿವ



ದಲಿತರ ಹಣಕ್ಕೆ 'ಕನ್ನ' ಹಾಕಬೇಡಿ

2013ರ ಕಾಯ್ದೆ ಅಡಿ ಈ ವಿಶೇಷ ಅನುದಾನವನ್ನು ದಲಿತರ ಏಳಿಗೆಗಾಗಿ ಶೈಕ್ಷಣಿಕ, ಸ್ವಯಂ ಉದ್ಯೋಗ, ಅವರ ವಾಸದ ಪ್ರದೇಶಗಳ ಅಭಿವೃದ್ಧಿಗಾಗಿಯೇ ಬಳಸಬೇಕು. ಈ ಮೂಲಕ ಸಮಾಜದ ಮುಖ್ಯವಾಹಿನಿಯಲ್ಲಿ ಇತರ ಎಲ್ಲರಂತೆ ಸಮಾನವಾಗಿ, ಸ್ವಾಭಿಮಾನದಿಂದ ಬದುಕಬೇಕು ಎಂಬುದು ಕಾಯ್ದೆಯ ಆಶಯ. ಆದರೆ ಇವರು ಮಾಡುತ್ತಿರುವುದೇನು? ದಲಿತರು ಆತ್ಮವಿಮರ್ಶೆ ಮಾಡಿಕೊಳ್ಳಬೇಕು. ಒಕ್ಕೊರಲಿನಿಂದ ಖಂಡಿಸಬೇಕು

• ಗೋವಿಂದ ಎಂ. ಕಾರಜೋಳ

ವಿಧಾನಸಭೆ ಚುನಾವಣೆ ವೇಳೆ ಮತದಾರರನ್ನು ಸೆಳೆಯಲು ಕಾಂಗ್ರೆಸ್ ಪಕ್ಷ ಗ್ಯಾರಂಟಿಯ ಆಮಿಷವನ್ನು ಒಡ್ಡಿತ್ತು. ಆ ಆಮಿಷ ಈಡೇರಿಸಲು ಪರಿಶಿಷ್ಟ ಜಾತಿ ಮತ್ತು ಪಂಗಡದವರ ಅಭಿವೃದ್ಧಿಗಾಗಿ ಇರುವ ವಿಶೇಷ ಅನುದಾನವನ್ನು (ಎಸ್‌ಸಿಎಸ್‌ಪಿ- ಟಿಎಸ್‌ಪಿ) ಬಳಸಿದ್ದಾರೆ. ಇದು ಆಘಾತಕಾರಿ. ದಲಿತ ಸಮುದಾಯವನ್ನು ಕಾಂಗ್ರೆಸ್ ಎಷ್ಟು ಲಘುವಾಗಿ ಪರಿಗಣಿಸಿದೆ ಎಂಬುದಕ್ಕೆ ಜ್ವಲಂತ ಸಾಕ್ಷಿ. ಈ ಸಮುದಾಯದ ಸರ್ವಾಂಗೀಣ ಅಭಿವೃದ್ಧಿ ಮತ್ತು ಅವರನ್ನು ಸ್ವಾವಲಂಬಿಗಳನ್ನಾಗಿ ಮಾಡಲು ಬಳಸಬೇಕಾದ ಅಮೂಲ್ಯ ನಿಧಿಗೆ 'ಕನ್ನ' ಹಾಕಿದ್ದಾರೆ. ಈ ರೀತಿ ಕದಿಯುವುದು ಸರ್ಕಾರದ ನೈತಿಕ ಅಧಃಪತನಕ್ಕೆ ನಿದರ್ಶನ.

ಅಷ್ಟಕ್ಕೂ 'ಗ್ಯಾರಂಟಿ' ಚುನಾವಣಾ ಆಮಿಷ. ಇದನ್ನು ವಿಶ್ಲೇಷಣೆಗೊಳಪಡಿಸುವುದೇ ಅಪರಾಧ ಎಂಬ ವಾತಾವರಣ ಸೃಷ್ಟಿಸಿದ್ದಾರೆ. ಇದೊಂದು 'ಮಹಾನ್ ಕ್ರಾಂತಿಕಾರಿ ಹೆಜ್ಜೆ', 'ಅದ್ಭುತ ಪ್ರಯೋಗ' ಎಂದೆಲ್ಲ ಕಾಂಗ್ರೆಸ್ ನಾಯಕರು ಮತ್ತು ಅವರ ಬಾಲಬಡುಕರು ಭಜನೆ ಮಾಡುತ್ತಿದ್ದಾರೆ. ವಾಸ್ತವದಲ್ಲಿ ಅದಕ್ಕೆ ಒದಗಿಸಲು ಖಜಾನೆಯಲ್ಲಿ ಹಣವೇ ಇಲ್ಲ. ಎಲ್ಲೆಲ್ಲಿಂದಲೋ ಕೆರೆದು, ಬಾಚಿ ಕೊಡುವ ಸ್ಥಿತಿ ಇದೆ. ಅದರ ಪರಿಣಾಮವೇ ಎಸ್‌ಸಿಎಸ್‌ಪಿ- ಟಿಎಸ್‌ಪಿ ನಿಧಿಗೆ ಕೈ ಹಾಕಿದ್ದು. 'ಈ ಹಣವನ್ನು ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜನರಿಗೆ ಮಾತ್ರ ಬಳಸುತ್ತೇವೆ. ಬೇರೆ ಯಾರಿಗೂ ಬಳಸುವುದಿಲ್ಲ' ಎಂದು ತೇಪೆ ಹಚ್ಚುವ ಮಾತುಗಳು ಸರ್ಕಾರದಿಂದ ಬರುತ್ತಿದೆ. ಇದು ಸಮರ್ಥನೀಯವಲ್ಲ. ನೈತಿಕವಾಗಿ ಭ್ರಷ್ಟರಾಗಿರು ವುದರಿಂದಲೇ, ಇಂತಹ ಮಾತುಗಳು ಬರುತ್ತಿವೆ. ಎಸ್‌ಸಿಎಸ್‌ಪಿ- ಟಿಎಸ್‌ಪಿ ಪಾಲಿನಲ್ಲಿ ಗ್ಯಾರಂಟಿಗಳಿಗೆ ಎತ್ತಿಕೊಟ್ಟ ₹11,114 ಕೋಟಿ ಸಣ್ಣ ಮೊತ್ತವೇನಲ್ಲ.

2013ರ ಕಾಯ್ದೆ ಅಡಿ ಈ ವಿಶೇಷ ಅನುದಾನವನ್ನು ದಲಿತರ ಏಳಿಗೆಗಾಗಿ ಶೈಕ್ಷಣಿಕ, ಸ್ವಯಂ ಉದ್ಯೋಗ, ಅವರ ವಾಸದ ಪ್ರದೇಶಗಳ ಅಭಿವೃದ್ಧಿಗಾಗಿಯೇ ಬಳಸಬೇಕು. ಈ ಮೂಲಕ ಅವರು ಸಮಾಜದ ಮುಖ್ಯವಾಹಿನಿಯಲ್ಲಿ ಇತರ ಎಲ್ಲರಂತೆ ಸಮಾನವಾಗಿ, ಸ್ವಾಭಿಮಾನದಿಂದ ಬದುಕಬೇಕು ಎಂಬುದು ಕಾಯ್ದೆಯ ಆಶಯ. ಆದರೆ ಇವರು ಮಾಡುತ್ತಿರುವುದೇನು? ದಲಿತರು ಆತ್ಮವಿಮರ್ಶೆ ಮಾಡಿಕೊಳ್ಳಬೇಕು. ಒಕ್ಕೊರಲಿನಿಂದ ಖಂಡಿಸಬೇಕು.

ನಮ್ಮ ಸರ್ಕಾರ ಇದ್ದಾಗ ದಲಿತರ ಶಿಕ್ಷಣಕ್ಕೆ ಅತ್ಯುತ್ತಮ ವ್ಯವಸ್ಥೆ ಕಲ್ಪಿಸಲು ಹಲವು ಕ್ರಮಗಳನ್ನು ತೆಗೆದುಕೊಂಡಿದ್ದೆವು. ರಾಜ್ಯದಲ್ಲಿ 826 ವಸತಿ ಶಾಲೆಗಳಿವೆ. ಸಾಕಷ್ಟು ವಸತಿ ಶಾಲೆಗಳಿಗೆ ಸ್ವಂತ ಕಟ್ಟಡಗಳಿಲ್ಲ. ನಮ್ಮ ಸರ್ಕಾರ 156 ವಸತಿ ಶಾಲೆಗಳಿಗೆ ತಲಾ ₹25 ಕೋಟಿ ವೆಚ್ಚದಲ್ಲಿ ಸ್ವಂತ ಕಟ್ಟಡಗಳನ್ನು ನಿರ್ಮಿಸುವ ಕಾಮಗಾರಿ ಆರಂಭಿಸಿತ್ತು. ಈ ಸರ್ಕಾರ ಅದನ್ನು ಅರ್ಧಕ್ಕೆ ನಿಲ್ಲಿಸಿದೆ. 75 ಹಾಸ್ಟೆಲ್‌ಗಳ ನಿರ್ಮಾಣವನ್ನು ಆರಂಭಿಸಿದ್ದೆವು. ಅದರ ನಿರ್ಮಾಣವನ್ನೂ ನಿಲ್ಲಿಸಿದ್ದಾರೆ. ಈ ಹಾಸ್ಟೆಲ್ ಕಟ್ಟಡಗಳನ್ನು ತಲಾ ₹5 ಕೋಟಿಯಿಂದ ₹8 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗುತ್ತಿತ್ತು. ಗ್ಯಾರಂಟಿ ಪರಿಣಾಮ ದಲಿತರ ಹಣಕ್ಕೇ ಸಂಚಕಾರ ಬಂದಿದೆ. 108 ವಸತಿ ಶಾಲೆಗಳಿಗಾಗಿ ನಮ್ಮ ಸರ್ಕಾರ ತಲಾ 10 ಎಕರೆವರೆಗೆ ಜಮೀನು ಖರೀದಿಸಿ ನೀಡಿತ್ತು. ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಮಾದರಿಯಲ್ಲಿ ಒಂದೇ ಆವರಣದಲ್ಲಿ ವಸತಿ ಮತ್ತು ಶಾಲೆ ಇರಬೇಕು ಎಂಬುದು ನಮ್ಮ ಉದ್ದೇಶವಾಗಿತ್ತು. ಶಿಕ್ಷಣ ಕ್ಷೇತ್ರದಲ್ಲಿ ನಮ್ಮ ಸರ್ಕಾರ ಕೈಗೊಂಡ ಹಲವು ಕ್ರಮಗಳ ಪರಿಣಾಮ ದಲಿತ ವಿದ್ಯಾರ್ಥಿಗಳ ಫಲಿತಾಂಶವೂ ಉತ್ತಮ ಮಟ್ಟದಲ್ಲಿತ್ತು. ಅಂದರೆ, ಶೇ 97ರವರೆಗೆ ಫಲಿತಾಂಶವಿತ್ತು.

ರಾಜ್ಯದಲ್ಲಿ ದಲಿತರ ವಸತಿ ಶಾಲೆಗಳ ಸ್ಥಿತಿ ದಯನೀಯವಾಗಿದೆ. ಒಂದು ಕೊಠಡಿಯಲ್ಲಿ 20ರಿಂದ 30 ವಿದ್ಯಾರ್ಥಿಗಳು ವಾಸವಿರುತ್ತಾರೆ. ಕುಡಿಯುವ ನೀರು, ಶೌಚಾಲಯ, ವಿದ್ಯುತ್ ವ್ಯವಸ್ಥೆಯೂ ಸರಿಯಾಗಿ ಇಲ್ಲ. ಇಂತಹ ಸ್ಥಿತಿಯಲ್ಲಿ ಉತ್ತಮ ಶಿಕ್ಷಣ ಸಾಧ್ಯವೇ? ಆದ್ದರಿಂದಲೇ ಅವುಗಳ ಸಮಗ್ರ ಅಭಿವೃದ್ಧಿಗಾಗಿ ನಮ್ಮ ಅವಧಿಯಲ್ಲಿ ಹೆಚ್ಚಿನ ಅನುದಾನ ನೀಡಿದ್ದೆವು. ಇವರು ಗ್ಯಾರಂಟಿಗೆ ಕೊಟ್ಟಿರುವ ₹11,114 ಕೋಟಿಯಲ್ಲಿ ₹2,500 ಕೋಟಿಯನ್ನು ಇದಕ್ಕೆ ನೀಡಬೇಕು. ಅಪೂರ್ಣ ಕೆಲಸಗಳನ್ನು ಪೂರ್ಣಗೊಳಿಸಲು ಸಾಧ್ಯ. ಅದನ್ನು ಬಿಟ್ಟು ಪುಕ್ಕಟೆ ಬಸ್ಸು, ಪುಕ್ಕಟೆ ವಿದ್ಯುತ್ ಕೊಡುತ್ತೇವೆ ಎನ್ನುತ್ತಾರೆ.

ದಲಿತರ ಸರ್ವಾಂಗೀಣ ಅಭಿವೃದ್ಧಿ ಎಂದರೆ ಅಕ್ಕಿ-ಬೇಳೆ ಕೊಡುವುದು ಅಲ್ಲ. ಶತಮಾನಗಳಿಂದ ಶಿಕ್ಷಣ ಮತ್ತು ಸಾಮಾಜಿಕ ಸ್ಥಾನಮಾನಗಳಿಂದ ವಂಚಿತರಾಗಿರುವ ಈ ಜನಕ್ಕೆ ಉತ್ತಮ ಶಿಕ್ಷಣವೇ ಆದ್ಯತೆ ಎಂದು ಬಾಬಾ ಸಾಹೇಬ್ ಅಂಬೇಡ್ಕರ್ ಹೇಳಿದ್ದರು. ಸಂವಿಧಾನದ ಆಶಯವೂ ಅದೇ ಆಗಿದೆ. ಶೇ 99ರಷ್ಟು ದಲಿತರು ವಾಸವಿರುವುದು ಹಳ್ಳಿಗಳಲ್ಲಿ. ನಗರ ಪ್ರದೇಶಗಳಲ್ಲಿ ದಲಿತರ ಸಂಖ್ಯೆ ಕಡಿಮೆ. ಜಮೀನು ಇಲ್ಲದ ದಲಿತರಿಗೆ ಕೃಷಿಗಾಗಿ ಕಡಿಮೆ ಬೆಲೆಯಲ್ಲಿ ಜಮೀನು ಕೊಡಬೇಕು. ನಾನು ಸಮಾಜ ಕಲ್ಯಾಣ ಸಚಿವನಾಗಿದ್ದ ವೇಳೆ 4,831 ಎಕರೆ ಜಮೀನನ್ನು ಖರೀದಿ ಮಾಡಿ ಹಂಚಿಕೆ ಮಾಡಲಾಗಿತ್ತು. ತುಳಿತಕ್ಕೊಳಗಾದ ಜನ ಸ್ವಾಭಿಮಾನದ ಬದುಕು ಕಟ್ಟಿಕೊಳ್ಳಲು ಇಂತಹ ಕಾರ್ಯಗಳಿಂದಲೇ ಸಾಧ್ಯವಾಗುತ್ತದೆ. ಇಂತಹ ಕೆಲಸಗಳು ನಮ್ಮ ಜವಾಬ್ದಾರಿ ಮತ್ತು ಕರ್ತವ್ಯವಾಗಬೇಕು. ಸರ್ಕಾರ ಕೊಡುವ ಹಣ ವ್ಯರ್ಥವಾಗಬಾರದು. ಈ ಸಮುದಾಯದ ಪಾಲಿಗೆ ಕಾಯಂ ಸ್ವತ್ತುಗಳಾಗಿರಬೇಕು.

ಅಷ್ಟಕ್ಕೂ ರಾಜ್ಯದಲ್ಲಿ ಎಷ್ಟು ಮಂದಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜನ ಇದ್ದಾರೆ ಎಂಬ ಸಂಖ್ಯೆಯನ್ನು ಹೇಳಬೇಕು. ಅವರಲ್ಲಿ ಎಷ್ಟು ಮಂದಿ ಈ ಯೋಜನೆಗಳ ಪ್ರಯೋಜನ ಪಡೆಯುತ್ತಿದ್ದಾರೆ ಎಂಬ ಲೆಕ್ಕ ಮುಂದಿಡಲಿ. ಸುಮ್ಮನೇ ಎಸ್‌ಸಿಎಸ್‌ಪಿ- ಟಿಎಸ್‌ಪಿ ಹಣ ತೆಗೆದು ಗ್ಯಾರಂಟಿಗಳಿಗೆ ಕೊಡುವುದನ್ನು ಎಲ್ಲ ಪ್ರಜ್ಞಾವಂತರೂ ಖಂಡಿಸಬೇಕು. ಸಿದ್ದರಾಮಯ್ಯ ಸರ್ಕಾರದ ಗೊತ್ತುಗುರಿ ಇಲ್ಲದ ಆಡಳಿತಕ್ಕೆ ಇದಕ್ಕಿಂತ ಬೇರೆ ಉದಾಹರಣೆ ಇಲ್ಲ.

ನಮ್ಮ ಅವಧಿಯಲ್ಲೂ ಬೇರೆ ಕಾರ್ಯಕ್ರಮಗಳಿಗೆ ಈ ಹಣ ಬಳಸಲಾಗಿದೆ ಎಂದು ಕಾಂಗ್ರೆಸ್ ಆರೋಪ ಮಾಡಿದೆ. ವಾಸ್ತವದಲ್ಲಿ ಎಸ್‌ಸಿಎಸ್‌ಪಿ-ಟಿಎಸ್‌ಪಿ ಕಾಯ್ದೆಯ ಸೆಕ್ಷನ್ 7-ಡಿ ಅಡಿ ನಿಶ್ಚಿತ ಉದ್ದೇಶಕ್ಕಲ್ಲದೇ ಬೇರೆಯದ್ದಕ್ಕೂ ಬಳಸುವ ಅವಕಾಶ ನೀಡಿದ್ದು ಯಾರ ಅವಧಿಯಲ್ಲಿ ಎಂಬುದನ್ನು ಅವರು ಹೇಳಲಿ. ಕಾಂಗ್ರೆಸ್- ಜೆಡಿಎಸ್ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ರಸ್ತೆ, ಸೇತುವೆ ಮುಂತಾದ ಇತರೆ ಯೋಜನೆಗಳಿಗೂ ಈ ಅನುದಾನವನ್ನು ತಿರುಗಿಸಲಾಗಿತ್ತು. ನಾನು ಲೋಕೋಪಯೋಗಿ ಸಚಿವನಾಗಿದ್ದ ಸಂದರ್ಭದಲ್ಲಿ ಅಂತಹ ಯೋಜನೆಯ ಹಣವನ್ನು ವಾಪಸ್ ಮಾಡಿದ್ದೆ. ಹೀಗಾಗಿ ವೃಥಾ ಆರೋಪ ಸರಿಯಲ್ಲ. ಈ ಸರ್ಕಾರ ಸೆಕ್ಷನ್ 7-ಡಿ ರದ್ದು ಮಾಡಿರುವುದು ಸ್ವಾಗತಾರ್ಹ. ಆ ಕೆಲಸವನ್ನು ಬಿಜೆಪಿ ಸರ್ಕಾರವೇ ಆರಂಭಿಸಿದ್ದು.

ಸಿದ್ದರಾಮಯ್ಯ ಮತ್ತು ಎಚ್‌.ಸಿ.ಮಹದೇವಪ್ಪ ಜೋಡಿ ಮೊದಲಿಗೆ ₹11,114 ಕೋಟಿಯನ್ನು ವಾಪಸ್ ಮಾಡಿ ಮುಖ ಉಳಿಸಿಕೊಳ್ಳಲಿ. ನಿಮ್ಮ ಮತಬ್ಯಾಂಕ್ ರಾಜಕಾರಣಕ್ಕೆ ದಲಿತರ ಹಿತವನ್ನು ಬಲಿ ಕೊಡಬೇಡಿ. ದಲಿತರಿಗೆ ಗ್ಯಾರಂಟಿಗಿಂತ ಸ್ವಾವಲಂಬನೆ ಮತ್ತು ಸ್ವಾಭಿಮಾನದ ಬದುಕು ಮುಖ್ಯ. ಅಸ್ಪೃಶ್ಯ ಸಮಾಜದಲ್ಲಿ ಹುಟ್ಟಿದ ನನಗೆ ಅದರ ಅರಿವು ಇದೆ.

ಲೇಖಕ: ಸಮಾಜ ಕಲ್ಯಾಣ ಖಾತೆಯ ಮಾಜಿ ಸಚಿವ

ರಾಗಿಣಿ

ತುರುಕಿದ ಸರಕಿನ ನೀರಸ ಅನುಭವ

ನಾವು ನೋಡಿದ ಸಿನಿಮಾ

ಶೀಲ

(ಮಲಯಾಳಂ ಮೂಲದಿಂದ ಡಬ್ ಆದದ್ದು)

- **ನಿರ್ಮಾಣ:** ಡಿ.ಎಂ.ಪಿಳ್ಳೈ
- **ನಿರ್ದೇಶನ:** ಬಾಲು ನಾರಾಯಣನ್
- **ತಾರಾಗಣ:** ರಾಗಿಣಿ, ಶೋಭರಾಜ್, ಅವಿನಾಶ್, ಚಿತ್ರಾ ಶೆಣೈ ಮತ್ತಿತರರು.

'ಶೀಲ' ರೆಸಾರ್ಟ್ ಮಾಲಕಿ. ಕೇರಳದಲ್ಲಿ ಅಪ್ಪ ಮಾಡಿಟ್ಟಿರುವ ರೆಸಾರ್ಟ್ ಮಾರಬೇಕೆಂದು ಈಕೆ ಬೆಂಗಳೂರಿನಿಂದ ಕೇರಳಕ್ಕೆ ತೆರಳುತ್ತಾಳೆ ಎಂಬಲ್ಲಿಂದ ಕಥೆ ಪ್ರಾರಂಭವಾಗುತ್ತದೆ. ಕೇರಳದ ಟೀ ಎಸ್ಟೇಟ್‌ನ ಸುಂದರ ದೃಶ್ಯಗಳೊಂದಿಗೆ ಛಾಯಾಗ್ರಾಹಕ ಅರುಣ್ ಮೊದಲ ಫ್ರೇಮ್‌ನಿಂದಲೇ ಸಿನಿಮಾವನ್ನು ಚೆಂದವಾಗಿಸುತ್ತಾರೆ. ಛಾಯಾಗ್ರಹಣ ಮತ್ತು ಅದಕ್ಕೆ ತಕ್ಕ ಹಿನ್ನೆಲೆ ಸಂಗೀತ ಎರಡೂ ಸಿನಿಮಾದುದ್ದಕ್ಕೂ ಆಪ್ತವೆನಿಸುತ್ತವೆ.

ಮಲಯಾಳಂನಲ್ಲಿ ಚಿತ್ರೀಕರಣಗೊಂಡು ಕನ್ನಡಕ್ಕೆ ಡಬ್ ಆದ ಸಿನಿಮಾ ಇದು. ಮೊದಲ ದೃಶ್ಯದಲ್ಲಿಯೇ ಡಬ್ಬಿಂಗ್ ತೀರ ಕಳಪೆಯಾಗಿದೆ ಎಂಬ ಅನುಭವವಾಗುತ್ತದೆ. ರಾಗಿಣಿ ಆಡುವ ಮಾತಿಗೂ ಅವರ ಮುಖದ ಭಾವಕ್ಕೂ ತಾಳೆಯೇ ಆಗುವುದಿಲ್ಲ. ರಾಗಿಣಿ ಹೊರತಾಗಿ ಪ್ರಮುಖ ಪಾತ್ರಧಾರಿಗಳೆಲ್ಲ ಮಲಯಾಳಂನವರು. ಹೀಗಾಗಿ ಅವರ ಹಾವಭಾವಕ್ಕೂ ಆಡುವ ಮಾತಿಗೂ ಎಷ್ಟೋ ಕಡೆ ಸಂಬಂಧವಿಲ್ಲ ಅನ್ನಿಸುತ್ತದೆ. ತುಂಬ ಕಡೆ ಸಿನಿಮಾವನ್ನು ಶೋಭರಾಜ್, ಅವಿನಾಶ್, ಚಿತ್ರಾ ಶೆಣೈ ಅತಿಥಿ ಪಾತ್ರಧಾರಿಗಳಂತೆ ಆಗೊಮ್ಮೆ, ಈಗೊಮ್ಮೆ ಬರುತ್ತಾರೆ.

ಶೀಲ ಆಗಿ ರಾಗಿಣಿ ಅಭಿನಯಕ್ಕೆ ಹಲವು ಆಯಾಮಗಳಿವೆ. ದುಃಖದ ಸನ್ನಿವೇಶಗಳಲ್ಲಿ, ಅಸಹಾಯಕತೆ ಬಿಂಬಿಸುವ ದೃಶ್ಯಗಳಲ್ಲಿ ಅವರ ಅಭಿನಯ ಇನ್ನಷ್ಟು ಉತ್ತಮವಾಗಬಹುದಿತ್ತು. ಬಡ್ಡಿಗೆ ಸಾಲ ನೀಡುವ ಮೀಟರ್ ಮಂಜುನಾಥ್ ಪಾತ್ರದಲ್ಲಿ ಶೋಭರಾಜ್ ಕಾಣಿಸಿಕೊಂಡಿದ್ದಾರೆ. ಸಿಕ್ಕಿರುವ ಸ್ವಲ್ಪ ಅವಧಿಯಲ್ಲಿಯೇ ಖಡಕ್ ಆಗಿ ನಟಿಸಿದ್ದಾರೆ. ಮುಖ್ಯ ಖಳನಾಯಕ ಜಾನ್ ಆಗಿ ಕಾಣಿಸಿಕೊಂಡಿರುವ ಮಲಯಾಳಂನ ಮಹೇಶ್ ನೆನಪಿನಲ್ಲಿ ಉಳಿಯುವಂತಹ ನಟನೆ ಮಾಡಿದ್ದಾರೆ. ಪೊಲೀಸ್ ಕಮಿಷನರ್ ಆಗಿ ಅವಿನಾಶ್, ಶೀಲಳ ತಾಯಿಯಾಗಿ ಚಿತ್ರಾ ಶೆಣೈ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ.

ಸಾಲ ಮಾಡಿಕೊಂಡ ಶೀಲ ಕೇರಳದಲ್ಲಿನ ರೆಸಾರ್ಟ್ ಮಾರಲು ಹೋಗುತ್ತಾಳೆ. ದಾರಿಯಲ್ಲಿ ಕಾರಿಗೆ ಆಟೊ ಅಡ್ಡಬಂದು ಸಣ್ಣ ಜಗಳವಾಗುತ್ತದೆ. ಆಕೆ ರೆಸಾರ್ಟ್ ತಲುಪಿದ ನಂತರವೂ ಸ್ವಲ್ಪ ಹೊತ್ತು ಕಥೆ ಕುತೂಹಲಕಾರಿಯಾಗಿಯೇ ಇದೆ. ಕುತೂಹಲ, ಭಯ ಮೂಡಿಸುವ ಫ್ರೇಮ್‌ಗಳನ್ನು ಛಾಯಾಗ್ರಾಹಕ ಅರುಣ್ ಚೆನ್ನಾಗಿ ಕಟ್ಟಿಕೊಟ್ಟಿದ್ದಾರೆ. ಚಿತ್ರದ ಮೊದಲಾರ್ಧದಲ್ಲಿ ಬರುವ ಹಾಡು ಉತ್ತಮವಾಗಿದ್ದು ಮಲಯಾಳಂನಲ್ಲಿಯೇ ಕೇಳಿದ್ದರೆ ಹಿತ ಎನ್ನಿಸುವ ಭಾವ ಮೂಡುತ್ತದೆ.

ಸ್ಥಳೀಯ ರಾಜಕಾರಣಿ ಜಾನ್ ಮತ್ತು ಸಂಗಡಿಗರು ಶೀಲ ಇರುವ ರೆಸಾರ್ಟ್‌ಗೆ ಬಂದ ನಂತರ ಕಥೆ ದಿಕ್ಕು, ದೆಸೆಯಿಲ್ಲದೆ ಸಾಗುತ್ತದೆ. ಶೀಲಳನ್ನು ಪೊಲೀಸ್ ಅಧಿಕಾರಿಯೇ ಅತ್ಯಾಚಾರ ಮಾಡುವುದು, ಆಕೆಯ ಬ್ಯಾಗ್‌ನಲ್ಲಿ ಡ್ರಗ್ಸ್ ಸಿಗುವುದು, ತನ್ನದಲ್ಲದ ತಪ್ಪಿನಿಂದ ಬ್ಯಾಗ್‌ನೊಳಗೆ ಡ್ರಗ್ಸ್ ಸೇರಿದೆ ಎನ್ನುವುದು...ಒಂದಷ್ಟು ವಿಷಯಗಳನ್ನು ಬಲವಂತವಾಗಿ ತುರುಕಿ ಕಥೆ ನೀರಸವಾಗಿಬಿಡುತ್ತದೆ.

ಮೊದಲಾರ್ಧದಲ್ಲಿ ನಡೆದ ಘಟನೆಗಳಿಗೆ ಅಸಲಿ ಕಾರಣವೇನೆಂದು ಹುಡುಕುವ ಯತ್ನ ದ್ವಿತೀಯಾರ್ಧದಲ್ಲಿ ನಡೆಯುತ್ತದೆ. ಆದರೆ ಮೊದಲಾರ್ಧದ ಕಥೆಯಲ್ಲಿಯೇ ಲಾಜಿಕ್ ಇಲ್ಲದೆ, ಸರಿಯಾದ ಕಾರಣಗಳಿಲ್ಲದೆ ಕಥೆ ಹಳಿ ತಪ್ಪಿ, ದ್ವಿತಿಯಾರ್ಧವೂ ಸಪ್ಪೆ ಎನ್ನಿಸುತ್ತದೆ. ಒಂದು ಗಟ್ಟಿಯಾದ ಎಳೆಯೇ ಇಲ್ಲದೆ ಯಾವುದೋ ಒಂದಷ್ಟು ಘಟನೆಗಳನ್ನು ಹೇಳಲು, ಯಾರನ್ನೋ ನಿರಪರಾಧಿಗಳೆಂದು ಸಾಬೀತುಪಡಿಸಲು ಹೆಣ್ಣು, ಶೀಲ, ಡ್ರಗ್ಸ್ ಎಂಬಿತ್ಯಾದಿ ಅಸ್ತ್ರಗಳನ್ನು ಬಳಸಿಕೊಂಡು ತೆರೆಯ ಮೇಲೆ ತಂದಂತೆ ಭಾಸವಾಗುತ್ತದೆ.

–ವಿನಾಯಕ ಕೆ.ಎಸ್.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪದಬಂಧ 5401

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಹೊಸ ಯುಗ ಈ ತರ ಕಾಣಿಸಿತೇ? (4)
3.ಎಲ್ಲಾ ರಂಗದಲ್ಲೂ ಈತ ನಿಪುಣ! (4)
5.ಮನಸ್ಸಿನ ಅಸ್ವಾಸ್ಥ್ಯವಿದು (3)
6.ವಿಶೇಷ ಕಾರ್ಯಕ್ಕಾಗಿ ನೇಮಿಸಲಾದ ಸಮಿತಿ (3)
8.ಬಾನುಲಿಯ ಹತ್ತಿರವಿರುವ ಗಬ್ಬಿಲ (3)
9.ನಯವಾಗಿ ಗೋಚರಿಸಿದ ಅಕ್ಷಿ (3)
10.ಇಕ್ಕಟ್ಟಿನಲ್ಲಿ ಸಿಲುಕಿರುವ ಸೂರ್ಯ ವಂಶದ ಒಬ್ಬರಾಜ (3)
12.ಹಿಂದಿಯವನು ಧರಿಸಿದ ಕನ್ನಡಕ (3)
14.ಕರದಲ್ಲಿರುವ ಮೃತ ದೇಹ (4)
15.ಮರದೊಳಗೆ ಚಲುವು ಕಂಡೀತೇ (4)

ಮೇಲಿಂದ ಕೆಳಕ್ಕೆ

1.ಉಲ್ಟಾ ಕಾಣುತ್ತಿರುವ ಕಟ್ಟುಪಾಡು (3)
2.ಮನ್ಮಥನ ಪತ್ನಿ (2)
3.ಟಪಾಲು ಬಂದಾಗ ಆಗಿರುವ ಹಿಸ್ಸೆ (2)
4.ನೂಲು ತೆಗೆಯುವ ಸಾಧನ (3)
7.ಆನೆಯ ನಡಿಗೆ (5)
8.ಓಲಗದ ವಾದ್ಯಗಳನ್ನು ನುಡಿಸುವುದು (5)
9.ಈತ ನೃತ್ಯ ಮಾಡುವವನು (3)
11.ಅಷ್ಟದಿಕ್ಪಾಲಕರಲ್ಲಿ ಈತ ಬಲು ಶ್ರೀಮಂತ (3)
12.ಚಾದರನ್ನು ಹಿಡಿದಿರುವ ಸೇವಕ! (2)
13.ಹೂವು ಇಲ್ಲಿದೆ (2)



5400ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಅನುಸ್ವಾರ 3.ಗರ್ಭಕೋಶ 5.ಕನ್ನಡಿ 6.ನೆನಪು 8.ಕಲಹ 9.ಪರಾರಿ 10.ವರಹ 12.ಪಲ್ಲವಿ 14.ರತ್ನಾಕರ 15.ಹತ್ಯಾಕಾಂಡ

ಮೇಲಿಂದ ಕೆಳಕ್ಕೆ: 1.ಅರಮನೆ 2.ರಸಿಕ 3.ಗರಡಿ 4.ಶಯ್ಯಾಗೃಹ 7.ಪುಢಾರಿ 8.ಕಕವ 9.ಪರಿಸರ 11.ಹಳವಂಡ 12.ಪದರ 13.ವಿವಾಹ

ಸುಡೊಕು 5787

	7	9			3		8	
	4			8		2	5	9
8	1		2	6		7		
	8					1		5
	9	2	8	1	5		6	
5						8		
9		7	5					
	5			7	2		4	
4	3		6		1			2

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5786 ಸುಡೊಕು

9	2	8	3	6	7	4	5	1
3	6	4	9	1	5	8	7	2
5	7	1	2	4	8	9	6	3
7	4	2	6	3	9	1	8	5
8	3	9	5	7	1	2	4	6
1	5	6	8	2	4	3	9	7
2	8	5	1	9	6	7	3	4
4	9	3	7	5	2	6	1	8
6	1	7	4	8	3	5	2	9

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಶನಿವಾರ ಆಗಸ್ಟ್ 5, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಅಧಿಕ ಶ್ರಾವಣ ಕೃಷ್ಣ ಚತುರ್ಥಿ ಗಂ. 09-41 ನಕ್ಷತ್ರ: ಉತ್ತರಾಭಾದ್ರ ಗಂ. 26-54 ಯೋಗ: ಸುಕರ್ಮ ಗಂ. 23-12 ಕರಣ: ಬಾಲವ ಗಂ. 09-41, ಕರ್ಕಾಟಕ ಮಾಸದ 19 ನೇ ದಿನ, ಮಳೆನಕ್ಷತ್ರ: ಆಶ್ಲೇಷ 1.
ರಾಹುಕಾಲ : ಬೆಳಗ್ಗೆ 09-00 - 10-30
ಸೂರ್ಯೋದಯ : 06-20 ಸೂರ್ಯಾಸ್ತ : 06-53
ಮುಸ್ಲಿಂ ದಿನಾಂಕ : 17 ಮೊಹರಮ್
ಅದೃಷ್ಟ ಸಂಖ್ಯೆ : 6, 3

ಮೇಷ: ಮಗಳ ಮಾತಿನಂತೆ ನಿಮ್ಮ ನಿತ್ಯ ಕೆಲಸದಲ್ಲಿ ಮಾಡಿಕೊಂಡ ಬದಲಾವಣೆಯು ನಿಮ್ಮ ಆರೋಗ್ಯವನ್ನು ಸರಿ ಮಾಡಿಕೊಳ್ಳಲು ಸಹಕಾರಿಯಾಗುತ್ತದೆ. ಮಾರಕವಾದ ವಸ್ತುಗಳ ಜೊತೆಗಿನ ಕೆಲಸದಲ್ಲಿ ಬಹಳ ಎಚ್ಚರಿಕೆ ವಹಿಸಿ.

ವೃಷಭ: ಆರೋಗ್ಯವನ್ನು ಚೆನ್ನಾಗಿಟ್ಟುಕೊಳ್ಳುವ ಕಾರಣದಿಂದಾಗಿ ತೂಕವನ್ನು ಕಡಿಮೆ ಮಾಡುಕೊಳ್ಳುವ ಸಹಾಸಕ್ಕೆ ಕೈಹಾಕುವಿರಿ. ಆರೋಗ್ಯಕ್ಕಿಂತ ಹಣ ಮುಖ್ಯ ಎನ್ನುವ ನಿಮ್ಮ ಮನಸ್ಥಿತಿಯನ್ನು ಬದಲಾಯಿಸಿಕೊಳ್ಳಬೇಕಾಗುವುದು.

ಮಿಥುನ: ನಿಮ್ಮ ಕೆಲಸಗಳಿಗೆ ನೀವಂದುಕೊಂಡದ್ದಕ್ಕಿಂತ ಹೆಚ್ಚಿನ ಸಾಮಾಜಿಕ ಸಹಕಾರ ಸಿಗುವುದು. ಪ್ರೀತಿಪಾತ್ರರ ಜೊತೆ ಸಂತಸದ ಸಮಯ ಕಳೆಯುವಿರಿ. ಆತುರದ ನಿರ್ಧಾರವನ್ನು ತೆಗೆದುಕೊಳ್ಳಬೇಕಾಗುತ್ತದೆ.

ಕರ್ಕಾಟಕ: ನಿಮಗೆ ಬರುವ ಹೊಸ ವಿವಾಹ ಪ್ರಸ್ತಾಪಗಳು ಆಕರ್ಷಕವಾಗಿ ಕಂಡರೂ ಪರಾಮರ್ಶಿಸದೇ ಒಪ್ಪಿಕೊಳ್ಳಬೇಡಿ. ವಯಸ್ಸಾದವರು ತಮ್ಮ ಆರೋಗ್ಯವನ್ನು ಗಮನದಲ್ಲಿಟ್ಟುಕೊಂಡು ಆಹಾರವನ್ನು ಸ್ವೀಕರಿಸಿ.

ಸಿಂಹ: ಮನೆಯಲ್ಲಿ ಬಾಕಿ ಇರುವ ಗೃಹಕೃತ್ಯಗಳನ್ನು ಪೂರೈಸುವ ಪ್ರಯತ್ನ ಮಾಡುವಿರಿ. ಸಂಗಾತಿಯೊಂದಿಗೆ ಸಂತಸದ ಕ್ಷಣಗಳನ್ನು ಕಳೆಯುವುದರಿಂದ ನೋವನ್ನು ಮರೆಯುವಿರಿ. ಮಾಡಿದ ಕೆಲಸಗಳು ತಕ್ಷಣ ಫಲ ಕೊಡುವುದಿಲ್ಲ.

ಕನ್ಯಾ: ಪ್ರೀತಿ ಪಾತ್ರರಿಗೆ ಏನಾದರು ಉಡುಗೊರೆಯನ್ನು ಕೊಡುವ ಉದ್ದೇಶದಿಂದ ಪೇಟೆಗೆ ಹೋಗುವಿರಿ. ಅನಿವಾರ್ಯ ಕಾರಣದಿಂದಾಗಿ ಕುಟುಂಬದವರೊಂದಿಗೆ ಕಳೆಯಬೇಕೆಂದುಕೊಂಡ ಸಮಯವನ್ನು ತಪ್ಪಿಸಿಕೊಳ್ಳುವಿರಿ.

ತುಲಾ: ಮನೆಯಲ್ಲಿನ ಅನ್ನ ಸಂತರ್ಪಣೆ ಕಾರ್ಯಕ್ರಮಕ್ಕಾಗಿ ಸರಕು ಸಾಮಾನುಗಳನ್ನು ಖರೀದಿಸುವಿರಿ. ಅಗತ್ಯ ವಸ್ತುಗಳ ಖರೀದಿಯನ್ನು ಸಹ ಮಾಡುವಿರಿ. ನಿಮ್ಮ ಕೆಲಸಗಳಿಗೆ ಪ್ರಭಾವಿ ವ್ಯಕ್ತಿಗಳ ಸಹಾಯವು ದೊರಕುವುದು.

ವೃಶ್ಚಿಕ: ಅನಗತ್ಯ ವಸ್ತುಗಳ ಮೇಲಿನ ಭಾರಿ ದೊಡ್ಡ ಮೊತ್ತದ ಖರ್ಚಿನಿಂದಾಗಿ ಮನೆಯವರೆಲ್ಲರ ಕೋಪಕ್ಕೆ ಗುರಿಯಾಗುವಿರಿ. ಚಿನ್ನ ಬೆಳ್ಳಿ ವಸ್ತುಗಳನ್ನು ಖರೀದಿ ಮಾಡುವಿರಿ. ನೆಚ್ಚಿನ ಪುಸ್ತಕವನ್ನು ಓದುವ ಭಾಗ್ಯವಿರುವುದು.

ಧನು: ತಂದೆ-ತಾಯಿಯ ಆರೋಗ್ಯದ ಬಗ್ಗೆ ಕಾಳಜಿವಹಿಸುವುದು ಅನಿವಾರ್ಯವಾಗುತ್ತದೆ. ವಿವಾಹ ವಯಸ್ಕ ಯೋಗ್ಯರಿಗೆ ನೂತನ ಸಂಬಂಧಗಳು ಕಂಡು ಬರಲಿವೆ. ಬಹುಜನರ ಒಡನಾಟದಿಂದ ವಿಶ್ವಾಸ, ಪ್ರೀತಿ ಪಡೆಯುವಂತಾಗಲಿದೆ.

ಮಕರ: ನೊಂದಾಯಿತ ದಾಖಲೆಗಳಿಗೆ ಸಂಬಂಧಿಸಿದಂತೆ ಬಾಕಿ ಇರುವ ಕೆಲಸಗಳನ್ನು ಬೇಗ ಮುಗಿಸಿಕೊಳ್ಳುವುದು ಸೂಕ್ತ. ಮನೆ ಅಥವಾ ಕಟ್ಟಡ ನಿರ್ಮಾಣವು ಯಾವುದೇ ತೊಂದರೆಗಳಿಲ್ಲದೆ ಮುಂದುವರಿಯಲಿದೆ.

ಕುಂಭ: ನಿಮ್ಮ ಜೀವನದ ಅಭಿವೃದ್ಧಿಗೆ ಬೇಕಾದ ಕಾರ್ಯಗಳು ನಿರಂತರವಾಗಿ ಮುಂದುವರಿಯಲಿದೆ. ವಿದ್ಯಾರ್ಥಿಗಳಿಗೆ ಪರಿಶ್ರಮ ಅಗತ್ಯವಾಗುವುದು. ಹೂವು-ಹಣ್ಣು ಮಾರಾಟಗಾರರಿಗೆ ಲಾಭವು ದುಪ್ಪಟ್ಟಾಗಲಿದೆ.

ಮೀನ: ಬಹುಮುಖದ ಖರ್ಚು-ವೆಚ್ಚಗಳನ್ನು ನಿರ್ವಹಿಸುವಲ್ಲಿ ಯಶಸ್ವಿಯಾಗುವಿರಿ. ಭೂ ವ್ಯವಹಾರಗಳಿಂದ ಹೆಚ್ಚಿನ ಲಾಭ ದೊರೆಯಲಿದೆ. ನಿರುದ್ಯೋಗಿಗಳಿಗೆ ಶೀಘ್ರದಲ್ಲಿ ಉದ್ಯೋಗದ ಅವಕಾಶಗಳು ದೊರೆಯುವುದು.

ದೆಹಲಿ ಕ್ಲಿನಿಕ್‌ಗಳನ್ನು ಪರಿಶೀಲಿಸಿದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ವ್ಯಾಖ್ಯಾನ

‘ಮೊಹಲ್ಲಾಕ್ಕಿಂತ ನಮ್ಮ ಕ್ಲಿನಿಕ್ ಉತ್ತಮ’

ಪ್ರಜಾವಾಣಿ ವಾರ್ತೆ

ನವದೆಹಲಿ: ದೆಹಲಿಯ ಆಮ್ ಆದ್ಮಿ ಪಕ್ಷದ (ಎಎಪಿ) ಸರ್ಕಾರದ ಮೊಹಲ್ಲಾ ಕ್ಲಿನಿಕ್‌ಗಳನ್ನು ಮೊದಲು ಹೊಗಳಿದ ಕರ್ನಾಟಕದ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಗಂಟೆಯೊಳಗೆ ನಿಲುವು ಬದಲಿಸಿದರು. ಈ ಕ್ಲಿನಿಕ್‌ಗಳ ವೈಭವೀಕರಣ ಮಾಡಲಾಗಿದೆ ಎಂದೂ ವ್ಯಾಖ್ಯಾನಿಸಿದರು.

ಪಂಚಶೀಲ ಪಾರ್ಕ್‌ನಲ್ಲಿರುವ ಆಮ್ ಆದ್ಮಿ ಮೊಹಲ್ಲಾ ಕ್ಲಿನಿಕ್‌ಗೆ ಶುಕ್ರವಾರ ಭೇಟಿ ನೀಡಿದ ಬಳಿಕ ದೆಹಲಿ ಸರ್ಕಾರದ ಆರೋಗ್ಯ ಸಚಿವ ಸೌರಭ್ ಭಾರದ್ವಾಜ್ ಸಮ್ಮುಖದಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿ, ‘ಈ ಕ್ಲಿನಿಕ್‌ಗಳು ಅತ್ಯುತ್ತಮ ವಾಗಿ ಕಾರ್ಯನಿರ್ವಹಿಸುತ್ತಿವೆ’ ಎಂದೂ ಮೆಚ್ಚುಗೆ ವ್ಯಕ್ತಪಡಿಸಿದರು.

‘ನಾನು ಮೊಹಲ್ಲಾ ಚಿಕಿತ್ಸಾಲಯಗಳ ಬಗ್ಗೆ ಸಾಕಷ್ಟು ಕೇಳಿದ್ದೇನೆ ಮತ್ತು ಅವುಗಳನ್ನು ವೈಯಕ್ತಿಕವಾಗಿ ನೋಡಲು ಬಯಸಿದೆ. ಅವರು (ಎಎಪಿ ಸರ್ಕಾರ) ಆರೋಗ್ಯ ನೀತಿಗಳನ್ನು ಹೇಗೆ ಅನುಷ್ಠಾನಗೊಳಿಸುತ್ತಿದ್ದಾರೆ ಎಂಬುದನ್ನು ನೋಡಲು ಇಲ್ಲಿಗೆ ಬಂದೆ’ ಎಂದರು. ಅಲ್ಲಿಂದ ಮರಳಿದ ಬಳಿಕ ಕರ್ನಾಟಕ ಭವನದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ನಮ್ಮ ಕ್ಲಿನಿಕ್‌ಗಳು ಮೊಹಲ್ಲಾ ಕ್ಲಿನಿಕ್‌ಗಿಂತ ಚೆನ್ನಾಗಿವೆ’ ಎಂದರು.

ನಂತರ ಟ್ವೀಟ್ ಮಾಡಿ, ‘ಈ ಕ್ಲಿನಿಕ್‌ನಲ್ಲಿ ಅಷ್ಟೇನೂ ಜನರಿರಲಿಲ್ಲ. ಕರ್ನಾಟಕದಲ್ಲಿರುವ ನಮ್ಮ ಚಿಕಿತ್ಸಾಲಯಗಳು ರೋಗಿಗಳಿಗೆ ತಕ್ಷಣದ ಪರೀಕ್ಷೆಗಳನ್ನು ಮಾಡಲು ಪ್ರಯೋಗಾಲಯ ಸೇರಿದಂತೆ ಹೆಚ್ಚಿನ ಸೌಲಭ್ಯಗಳನ್ನು ಹೊಂದಿವೆ. ನಾನು ನಿರಾಶೆಯಿಂದ ಹಿಂತಿರುಗಿದೆ’ ಎಂದು ತಿಳಿಸಿದ್ದಾರೆ.

‘ಇಲ್ಲಿನ ಕ್ಲಿನಿಕ್‌ಗಳ ವೈಶಿಷ್ಟ್ಯ ಹಾಗೂ ಸೌಲಭ್ಯಗಳ ಬಗ್ಗೆ ಮಾಹಿತಿ ಪಡೆದಿದ್ದೇನೆ. ರಾಜ್ಯದಲ್ಲಿ ‘ನಮ್ಮ ಕ್ಲಿನಿಕ್’ ಅನ್ನು ಈಗಾಗಲೇ ಆರಂಭಿಸಲಾಗಿದೆ. ಇಲ್ಲಿನ ಕ್ಲಿನಿಕ್‌ಗೂ ನಮ್ಮ ಕ್ಲಿನಿಕ್‌ಗೂ ಏನು ವ್ಯತ್ಯಾಸ ಇದೆ ಎಂದು ನೋಡಲು ಬಂದಿದ್ದೆ ಅಷ್ಟೇ. ಇಲ್ಲಿನ ಕ್ಲಿನಿಕ್‌ಗಿಂತ ನಮ್ಮಲ್ಲಿನ ಕ್ಲಿನಿಕ್ ಉತ್ತಮವಾಗಿದೆ. ನಾವು ಒಂದು ಹೆಜ್ಜೆ ಮುಂದಿದ್ದೇವೆ’ ಎಂದು ಸುದ್ದಿಗಾರರಿಗೆ ತಿಳಿಸಿದರು.

‘ನಮ್ಮ ವ್ಯವಸ್ಥೆಯನ್ನು ಇನ್ನಷ್ಟು ಸುಧಾರಣೆ ಮಾಡುವ ಆಲೋಚನೆ ಇದೆ. ಬೆಂಗಳೂರಿನಲ್ಲಿ ಎಲ್ಲ ವಾರ್ಡ್‌ಗಳಿಗೆ ನಮ್ಮ ಕ್ಲಿನಿಕ್ ವಿಸ್ತರಿಸಲು ಯೋಜಿಸಲಾಗಿದೆ. ಸಂಜೆ ಹೊತ್ತಿನಲ್ಲಿ ಕ್ಲಿನಿಕ್‌ಗಳನ್ನು ತೆರೆಯಲು ಚಿಂತನೆ ನಡೆಸಲಾಗಿದೆ. ಆ ಹೊತ್ತಿನಲ್ಲಿ ಹೆಚ್ಚಿನ ಸಂಖ್ಯೆಯ ರೋಗಿಗಳು ಬರುತ್ತಾರೆ. ಈಗ ದಿನನಿತ್ಯ ಕ್ಲಿನಿಕ್‌ಗೆ 30–40 ಜನರು ಬರುತ್ತಿದ್ದಾರೆ. 100 ರೋಗಿಗಳು ಬರುವಂತಾಗಲು ವ್ಯವಸ್ಥೆಯನ್ನು ಮೇಲ್ದರ್ಜೆಗೆ ಏರಿಸಬೇಕಿದೆ’ ಎಂದು ಅವರು ತಿಳಿಸಿದರು.

‘ಕರ್ನಾಟಕದಲ್ಲಿ ನಮ್ಮ ಕ್ಲಿನಿಕ್ ಅನ್ನು ಇನ್ನಷ್ಟು ಸುಧಾರಿಸಲು ದಿನೇಶ್ ಗುಂಡೂರಾವ್ ಅವರು ಮೊಹಲ್ಲಾ ಕ್ಲಿನಿಕ್‌ಗೆ ಭೇಟಿ ನೀಡಿದ್ದಾರೆ’ ಎಂದು ಭಾರದ್ವಾಜ್ ಟ್ವೀಟ್ ಮಾಡಿದ್ದಾರೆ.

ದೆಹಲಿಯ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಟ್ವೀಟ್ ಮಾಡಿ, ‘ಕರ್ನಾಟಕದ ಆರೋಗ್ಯ ಸಚಿವರು ಮೊಹಲ್ಲಾ ಕ್ಲಿನಿಕ್‌ಗೆ ಭೇಟಿ ನೀಡಿದ್ದಾರೆ. ಅವರಿಗೆ ಸ್ವಾಗತ. ನಾವೆಲ್ಲರೂ ಪರಸ್ಪರ ಕಲಿಯಬೇಕು. ಕರ್ನಾಟಕ ಸರ್ಕಾರ ಮಾಡಿರುವ ಒಳ್ಳೆಯ ಕೆಲಸದಿಂದ ದೆಹಲಿಯೂ ಕಲಿಯಲಿದೆ’ ಎಂದು ತಿಳಿಸಿದ್ದಾರೆ.

ಕಾಂಗ್ರೆಸ್ ಹಾಗೂ ಎಎಪಿ ವಿಪಕ್ಷಗಳ ಮೈತ್ರಿಕೂಟ ‘ಇಂಡಿಯಾ’ದ ಭಾಗವಾಗಿವೆ. ದೂರವಾಣಿ ಕರೆಯೊಂದನ್ನು ಸ್ವೀಕರಿಸಿದ ಬಳಿಕ ದಿನೇಶ್ ಅವರು ಮೊಹಲ್ಲಾ ಕ್ಲಿನಿಕ್ ಅನ್ನು ಟೀಕಿಸಿದರು. ಇದಕ್ಕೆ ಅವರು ಸ್ಪಷ್ಟನೆ ನೀಡಬೇಕು ಎಂದು ಎಎಪಿ ಒತ್ತಾಯಿಸಿದೆ.

ಮೊಹಲ್ಲಾ ಕ್ಲಿನಿಕ್‌ನಲ್ಲಿ ರೋಗಿಯ ಜತೆಗೆ ದಿನೇಶ್ ಗುಂಡೂರಾವ್ ಮಾತುಕತೆ ನಡೆಸಿದರು. ದೆಹಲಿಯ ಆರೋಗ್ಯ ಸಚಿವ ಸೌರಭ್ ಭಾರದ್ವಾಜ್ ಚಿತ್ರದಲ್ಲಿದ್ದಾರೆ

ಜ್ಞಾನವಾಪಿ: ಸಮೀಕ್ಷೆ ಶುರು

ಒಂದನೇ ಪುಟದಿಂದ...

ಸಮೀಕ್ಷೆ ಕಾರ್ಯ ನಡೆಸಲು ಎಎಸ್‌ಐ ಸಿಬ್ಬಂದಿ ಮಸೀದಿ ಆವರಣ ಪ್ರವೇಶಿಸುತ್ತಿದ್ದಂತೆಯೇ, ಹೊರಗಡೆ ‘ಜೈ ಶ್ರೀರಾಮ್’ ಘೋಷಣೆಗಳು ಕೇಳಿಬಂದವು. ನಗರದ ವಿವಿಧೆಡೆ ಬ್ಯಾರಿಕೇಡ್‌ಗಳನ್ನು ಅಳವಡಿಸುವ ಜೊತೆಗೆ ವ್ಯಾಪಕ ಭದ್ರತೆ ಏರ್ಪಡಿಸಲಾಗಿತ್ತು.

‘ವೈಜ್ಞಾನಿಕ ಸಮೀಕ್ಷೆ ನಡೆಸುವ ಕುರಿತು ಅಲಹಾಬಾದ್ ಹೈಕೋರ್ಟ್ ನೀಡಿರುವ ಆದೇಶವನ್ನು ಪ್ರಶ್ನಿಸಿ ಸಮಿತಿಯು ಸುಪ್ರೀಂಕೋರ್ಟ್‌ಗೆ ಈಗಾಗಲೇ ಅರ್ಜಿ ಸಲ್ಲಿಸಿರುವ ಕಾರಣ, ಮುಸ್ಲಿಂ ಪರ ವಕೀಲರು ಸಮೀಕ್ಷೆ ಸಂದರ್ಭದಲ್ಲಿ ಹಾಜರಿರಲಿಲ್ಲ’ ಎಂದು ಸಮಿತಿ ಕಾರ್ಯದರ್ಶಿ ಸೈಯದ್ ಮೊಹಮ್ಮದ್ ಯಾಸಿನ್ ತಿಳಿಸಿದರು.

‘ಸಮಿತಿ ಸಲ್ಲಿಸಿರುವ ಅರ್ಜಿ ವಿಚಾರಣೆ ಸುಪ್ರೀಂಕೋರ್ಟ್‌ನಲ್ಲಿ ನಡೆಯುತ್ತಿದ್ದ ಬಗ್ಗೆ ಜಿಲ್ಲಾಡಳಿತದ ಹಿರಿಯ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದೆವು’ ಎಂದೂ ಹೇಳಿದರು.

‘ಈ ವಿಚಾರವಾಗಿ ಸುಪ್ರೀಂಕೋರ್ಟ್ ಆದೇಶ ಹೊರಡಿಸುವವರೆಗೆ ಸಮೀಕ್ಷೆಯನ್ನು ಮುಂದೂಡಬೇಕು ಎಂಬುದು ನಮ್ಮ ಮನವಿಯಾಗಿತ್ತು. ಇದೇ ವಿಷಯ ಕುರಿತು ದೆಹಲಿಯಲ್ಲಿರುವ ನಮ್ಮ ವಕೀಲರು ಇಲ್ಲಿನ ಅಧಿಕಾರಿಗಳಿಗೆ ಪತ್ರವನ್ನೂ ಬರೆದಿದ್ದರು. ಅಧಿಕಾರಿಗಳಿಂದ ಯಾವುದೇ ಪ್ರತಿಕ್ರಿಯೆ ಬರಲಿಲ್ಲ. ಗುರುವಾರ ಸಭೆ ನಡೆಸಿ, ಸಮೀಕ್ಷೆ ಕಾರ್ಯದಿಂದ ದೂರ ಉಳಿಯುವ ತೀರ್ಮಾನ ಕೈಗೊಂಡೆವು’ ಎಂದು ಯಾಸಿನ್ ಮಾಹಿತಿ ನೀಡಿದರು.

ಹೆಚ್ಚುವರಿ ಕಾಲಾವಕಾಶ: ಮಸೀದಿ ಆವರಣದ ವೈಜ್ಞಾನಿಕ ಸಮೀಕ್ಷೆಯನ್ನು ಪೂರ್ಣಗೊಳಿಸಲು ಹೆಚ್ಚುವರಿಯಾಗಿ ನಾಲ್ಕು ವಾರಗಳ ಅವಕಾಶ ನೀಡುವಂತೆ ಎಎಸ್‌ಐ ಮನವಿಯನ್ನು ಜಿಲ್ಲಾ ನ್ಯಾಯಾಧೀಶ ಎ.ಕೆ.ವಿಶ್ವೇಶ ಪುರಸ್ಕರಿಸಿದ್ದಾರೆ.

‘ಈ ಮೊದಲು ಆಗಸ್ಟ್ 4ರೊಳಗೆ ಸಮೀಕ್ಷೆ ಪೂರ್ಣಗೊಳಿಸಲು ಸೂಚಿಸಲಾಗಿತ್ತು. ಜಿಲ್ಲಾ ನ್ಯಾಯಾಲಯವು ಸೆಪ್ಟೆಂಬರ್ 4ರ ವರೆಗೆ ಗಡುವು ವಿಸ್ತರಿಸಿದೆ’ ಎಂದು ಹಿಂದೂ ಅರ್ಜಿದಾರರ ಪರ ವಕೀಲ ಮದನಮೋಹನ್ ಯಾದವ್ ತಿಳಿಸಿದ್ದಾರೆ.

‘ಸುಪ್ರೀಂ’ನಿಂದಲೂ ಅಸ್ತು

ಒಂದನೇ ಪುಟದಿಂದ...

‘ಎಎಸ್‌ಐ ಸಮೀಕ್ಷೆಯಲ್ಲಿ ಕಂಡುಬರುವ ಸಾಕ್ಷ್ಯಾಧಾರಗಳ ಪರಿಶೀಲನೆ, ಆಕ್ಷೇಪಣೆಗಳಿಗೆ ಹಾಗೂ ಪಾಟಿ ಸವಾಲಿಗೂ ಮುಕ್ತವಾಗಿರಲಿವೆ. ಎಎಸ್‌ಐ ತನ್ನ ವರದಿಯನ್ನು ವಿಚಾರಣಾ ನ್ಯಾಯಾಲಯಕ್ಕೆ ಸಲ್ಲಿಸಬೇಕು. ಜಿಲ್ಲಾ ನ್ಯಾಯಾಧೀಶರು ವರದಿ ಕುರಿತು ನಿರ್ಧಾರ ಕೈಗೊಳ್ಳುವರು’ ಎಂದು ನ್ಯಾಯಪೀಠ ಹೇಳಿತು.

‘ಹಳೆ ಗಾಯಗಳನ್ನು ತೆರೆಯಲಿದೆ’: ‘ಜ್ಞಾನವಾಪಿ ಮಸೀದಿ ಆವರಣದಲ್ಲಿ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯು (ಎಎಸ್‌ಐ) ನಡೆಸುವ ವೈಜ್ಞಾನಿಕ ಸಮೀಕ್ಷೆಯು ಐತಿಹಾಸಿಕ ಸಂಗತಿಗಳನ್ನು ಕೆದಕಲಿದೆ, ಹಳೆಯ ಗಾಯಗಳನ್ನು ಮತ್ತೆ ತೆರೆಯಲಿದೆ’ ಎಂದು ಅಂಜುಮನ್ ಇಂತೆಜಾಮಿಯಾ ಮಸೀದಿ ಸಮಿತಿ ಹೇಳಿದೆ.

ಮಸೀದಿ ಆವರಣದ ವೈಜ್ಞಾನಿಕ ಸಮೀಕ್ಷೆಗೆ ಅನುಮತಿ ನೀಡಿ ಅಲಹಾಬಾದ್ ಹೈಕೋರ್ಟ್ ನೀಡಿರುವ ಆದೇಶಕ್ಕೆ ತಡೆ ನೀಡುವಂತೆ ಕೋರಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ವೇಳೆ ಸಮಿತಿಯು ಈ ಆತಂಕ ವ್ಯಕ್ತಪಡಿಸಿದೆ.

‘ಎಎಸ್‌ಐ ನಡೆಸುವ ಸಮೀಕ್ಷೆಯು ಪೂಜಾಸ್ಥಳಗಳ ಕಾಯ್ದೆ–1991ರ ಉಲ್ಲಂಘನೆಯಾಗಲಿದೆ. 500 ವರ್ಷಗಳ ಹಿಂದೆ ಏನು ನಡೆದಿತ್ತು ಎಂಬುದರ ಕುರಿತು ಪರಿಶೀಲನೆ ನಡೆಸಲಿದೆ. ಇದರಿಂದ ಸಮಾಜದಲ್ಲಿ ಭ್ರಾತೃತ್ವಕ್ಕೆ ಹಾಗೂ ಜಾತ್ಯತೀತತೆಗೆ ಧಕ್ಕೆಯಾಗಲಿದೆ’ ಎಂದು ಸಮಿತಿ ಪರ ವಕೀಲ ಹುಜೇಫಾ ಅಹ್ಮದಿ ಅವರು ನ್ಯಾಯಪೀಠಕ್ಕೆ ತಿಳಿಸಿದರು.

‘ಒಂದೇ ರೀತಿಯ ಕಾರಣಗಳನ್ನು ನೀಡಿ, ವಿಚಾರಣಾ ಕಾಲದ ಪ್ರತಿಯೊಂದು ಆದೇಶಕ್ಕೆ ನೀವು ವಿರೋಧ ವ್ಯಕ್ತಪಡಿಸಬಾರದು’ ಎಂದು ವಕೀಲ ಅಹ್ಮದಿ ಅವರನ್ನು ಉದ್ದೇಶಿಸಿ ನ್ಯಾಯಪೀಠ ಹೇಳಿತು.

ತಲಾ ₹ 5 ಲಕ್ಷ ಪರಿಹಾರ ಬಿಡುಗಡೆ

ಬೆಂಗಳೂರು: ಚಿತ್ರದುರ್ಗ ಜಿಲ್ಲೆಯ ಕವಾಡಿಗರ ಹಟ್ಟಿ ಗ್ರಾಮದ ಪರಿಶಿಷ್ಟ ಜಾತಿ ಕಾಲೋನಿಯಲ್ಲಿ ಕಲುಷಿತ ನೀರು ಕುಡಿದು ಮೃತಪಟ್ಟಿರುವ ಮೂವರ ಕುಟುಂಬಗಳಿಗೆ ಮುಖ್ಯಮಂತ್ರಿ ಪರಿಹಾರ ನಿಧಿಯಿಂದ ತಲಾ ₹ 5 ಲಕ್ಷ ಪರಿಹಾರ ಬಿಡುಗಡೆ ಮಾಡಲಾಗಿದೆ.

‘ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆಯಂತೆ ಹಣ ಬಿಡುಗಡೆ ಮಾಡಲಾಗಿದೆ. ಮೃತರಾದ ಮಂಜುಳಾ, ರಘು ಮತ್ತು ಪ್ರವೀಣ್ ಕುಟುಂಬಕ್ಕೆ ತಲಾ ₹5 ಲಕ್ಷ ಪರಿಹಾರ ಪಾವತಿಗೆ ಆದೇಶಿಸಲಾಗಿದೆ’ ಎಂದು ಮುಖ್ಯಮಂತ್ರಿಯವರ ಕಚೇರಿ ಪ್ರಕಟಣೆ ತಿಳಿಸಿದೆ.

ಸಾವಿನ ಸಂಖ್ಯೆ ಐದಕ್ಕೆ ಏರಿಕೆ

ಒಂದನೇ ಪುಟದಿಂದ...

ಕವಾಡಿಗರಹಟ್ಟಿಯ ಉಷಾ (23) ಹೆರಿಗೆಗಾಗಿ ತವರಿಗೆ ಬಂದಿದ್ದರು. ಇದೇ 12ರಂದು ಸಂಭಾವ್ಯ ಹೆರಿಗೆ ದಿನ ಎಂದು ವೈದ್ಯರು ಸೂಚಿಸಿದ್ದರು. 1ರಂದು ಅಸ್ವಸ್ಥರಾಗಿ ಆಸ್ಪತ್ರೆಗೆ ದಾಖಲಾಗಿದ್ದ ಇವರು, ಗುರುವಾರ ಮಧ್ಯಾಹ್ನ ಹೊಟ್ಟೆಯಲ್ಲಿ ಮಗುವಿನ ಚಲನವಲನ ಸ್ತಬ್ಧವಾಗಿದ್ದರಿಂದ ವೈದ್ಯರು ಸ್ಕ್ಯಾನ್ ಮಾಡಿದ್ದರು. ಮಗು ಗರ್ಭದಲ್ಲಿಯೇ ಮೃತಪಟ್ಟಿದ್ದು ಖಚಿತವಾಗಿದ್ದರಿಂದ ರಾತ್ರಿ ಶಸ್ತ್ರಚಿಕಿತ್ಸೆ ಮೂಲಕ ಹೊರತೆಗೆದಿದ್ದಾರೆ. ಉಷಾ ಸಹೋದರ ರಘು ಎರಡು ದಿನಗಳ ಹಿಂದಷ್ಟೇ ಬೆಂಗಳೂರಿನಲ್ಲಿ ಮೃತಪಟ್ಟಿದ್ದರು.

‘ಕುಟುಂಬಕ್ಕೆ ಆಧಾರವಾಗಿದ್ದ ಪುತ್ರ ರಘು ಮೃತಪಟ್ಟಿದ್ದಾನೆ. ಹೆರಿಗೆಗೆ ಬಂದಿದ್ದ ಪುತ್ರಿಗೆ ಗರ್ಭಪಾತವಾಗಿದೆ. ಈ ನೋವನ್ನು ಹೇಗೆ ಸಹಿಸಿಕೊಳ್ಳಲಿ’ ಎಂದು ಉಷಾ ತಾಯಿ ವಿಮಲಮ್ಮ ಕಣ್ಣೀರಾದರು.

ಲೋಕಾಯುಕ್ತ ನೋಟಿಸ್ ಜಾರಿ

ಕಲುಷಿತ ನೀರು ಕುಡಿದು ಸಾವು ಸಂಭವಿಸಿರುವ ಘಟನೆಗೆ ಸಂಬಂಧಿಸಿದಂತೆ ಏಳು ಅಧಿಕಾರಿಗಳಿಗೆ ನೋಟಿಸ್ ಜಾರಿ ಮಾಡಲು ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ಆದೇಶಿಸಿದ್ದಾರೆ. ನೋಟಿಸ್‌ಗೆ ಇದೇ 24ರ ಒಳಗೆ ಉತ್ತರಿಸಲು ಗಡುವು ನೀಡಲಾಗಿದೆ. ಕಲುಷಿತ ನೀರು ಕುಡಿದು ಸಾವು ಸಂಭವಿಸಿದ ಬಳಿಕ ಲೋಕಾಯುಕ್ತ ಪೊಲೀಸ್ ವರಿಷ್ಠಾಧಿಕಾರಿ ಎನ್. ವಾಸುದೇವರಾಮ ಲೋಕಾಯುಕ್ತ ನ್ಯಾಯಮೂರ್ತಿಗೆ ವರದಿ ಸಲ್ಲಿಸಿದ್ದರು. ವರದಿ ಆಧಾರದ ಮೇರೆಗೆ ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿ, ನಿರ್ದೇಶಕರು, ಚಿತ್ರದುರ್ಗ ಜಿಲ್ಲಾಧಿಕಾರಿ, ಜಿಲ್ಲಾ ಆರೋಗ್ಯಾಧಿಕಾರಿ, ನಗರಸಭೆ ಆಯುಕ್ತ, ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಹಾಗೂ ನಗರಸಭೆ ಆರೋಗ್ಯಾಧಿಕಾರಿ ನೋಟಿಸ್ ಜಾರಿ ಮಾಡಲಾಗಿದೆ.

ಇಬ್ಬರು ಎಂಜಿನಿಯರ್ ಅಮಾನತು

ಕಲುಷಿತ ನೀರಿನ ಪ್ರಕರಣಕ್ಕೆ ಸಂಬಂಧಿಸಿದಂತೆ ನಗರಸಭೆಯ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಮಂಜುನಾಥ ಆರ್.ಗಿರಡ್ಡಿ, ಕಿರಿಯ ಎಂಜಿನಿಯರ್ ಎಸ್.ಆರ್. ಕಿರಣ್ ಕುಮಾರ್ ಎಂಬುವರನ್ನು ಸೇವೆಯಿಂದ ಅಮಾನತುಗೊಳಿಸಿ ನಗರಾಭಿವೃದ್ಧಿ ಇಲಾಖೆ ಆದೇಶ ಹೊರಡಿಸಿದೆ.

‘ಕಲುಷಿತ ನೀರು ಕುಡಿದು ಸಾವು ಸಂಭವಿಸಿರುವ ಹಾಗೂ ಸಾರ್ವಜನಿಕರು ಅಸ್ವಸ್ಥರಾಗಿರುವ ಘಟನೆಯಲ್ಲಿ ಇಬ್ಬರು ಎಂಜಿನಿಯರುಗಳು ಕರ್ತವ್ಯ ನಿರ್ಲಕ್ಷ್ಯ ಹಾಗೂ ಬೇಜವಾಬ್ದಾರಿ ವರ್ತನೆ ತೋರಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ. ಇಬ್ಬರ ವಿರುದ್ಧ ಇಲಾಖಾ ವಿಚಾರಣೆ ಕಾಯ್ದಿರಿಸಿ ಅಮಾನತುಗೊಳಿಸಲಾಗಿದೆ’ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ರಾಹುಲ್ ಶಿಕ್ಷೆಗೆ ‘ಸುಪ್ರೀಂ’ ತಡೆ

ಒಂದನೇ ಪುಟದಿಂದ...

ರಾಹುಲ್ ಅವರಿಗೆ ನ್ಯಾಯಾಲಯ ವಿಧಿಸಿದ ಶಿಕ್ಷೆ ಮತ್ತು ನಂತರ ಸಂಸತ್ತಿನ ಸದಸ್ಯತ್ವದ ಅನರ್ಹತೆಯು ಸಾರ್ವಜನಿಕ ಜೀವನದಲ್ಲಿ ಮುಂದುವರಿಯುವ ಅವರ ಹಕ್ಕಿನ ಮೇಲೆ ಪರಿಣಾಮ ಬೀರಿದೆ. ಅಲ್ಲದೆ, ಇದು ಅವರನ್ನು ಆಯ್ಕೆ ಮಾಡಿದ ಮತದಾರರ ಮೇಲೂ ಪರಿಣಾಮ ಬೀರಿದೆ ಎಂದು ಪೀಠ ಆದೇಶದಲ್ಲಿ ಪ್ರಸ್ತಾಪಿಸಿದೆ.

ರಾಹುಲ್ ಪರ ವಾದ ಮಂಡಿಸಿದ ಹಿರಿಯ ವಕೀಲ ಅಭಿಷೇಕ್ ಸಿಂಘ್ವಿ, ‘ನನ್ನ ಕಕ್ಷಿದಾರರು ಘೋರ ಅಪರಾಧಿಯಲ್ಲ ಮತ್ತು ಅವರ ವಿರುದ್ಧ ಬಿಜೆಪಿ ಕಾರ್ಯಕರ್ತರು ಹಲವು ಪ್ರಕರಣಗಳನ್ನು ದಾಖಲಿಸಿದ್ದರೂ ಯಾವ ಪ್ರಕರಣದಲ್ಲೂ ಅವರಿಗೆ ಶಿಕ್ಷೆಯಾಗಿಲ್ಲ ಎಂದು ಪೀಠಕ್ಕೆ ತಿಳಿಸಿದರು.

ಗುಜರಾತ್ ಮಾಜಿ ಸಚಿವ ಪೂರ್ಣೇಶ್ ಮೋದಿ ಅವರ ಪರ ವಾದ ಮಂಡಿಸಿದ ಹಿರಿಯ ವಕೀಲ ಮಹೇಶ್ ಜೇಠ್ಮಲಾನಿ, ಕಾಂಗ್ರೆಸ್‌ನ ಮಾಜಿ ಅಧ್ಯಕ್ಷರ ವಿರುದ್ಧ ಸಾಕಷ್ಟು ಪುರಾವೆಗಳಿವೆ ಎಂದು ಹೇಳಿದರು.

ತೋಟಗಾರಿಕೆ ಇಲಾಖೆ
ತೋಟಗಾರಿಕೆ ಉಪ ನಿರ್ದೇಶಕರ ಕಛೇರಿ,
ಶ್ರೀ ಚಾಮರಾಜೇಂದ್ರ (ಕಬ್ಬನ್) ಉದ್ಯಾನವನ, ಬೆಂಗಳೂರು.
ಸಂಖ್ಯೆ: ತೋಇ/ತೋಉನಿ/ಕಉ/ಎನ5/03/2021–22 ದಿನಾಂಕ: 31–07–2023
ಪತ್ರಿಕಾ ಪ್ರಕಟಣೆ
ಶ್ರೀ ಜಿ. ಮುನಿರತ್ನಯ್ಯ, ಸಹಾಯಕ ತೋಟಗಾರಿಕೆ ಅಧಿಕಾರಿ (ಪ್ರಸ್ತುತ ವಜಾ) ಆದ ನಿಮ್ಮನ್ನು ಸರ್ಕಾರದ ಆದೇಶ ಸಂಖ್ಯೆ: ತೋಇ 21 ತೋಕಾವಿ 2013 ಬೆಂಗಳೂರು ದಿನಾಂಕ: 21–04–2021 ರ ಸರ್ಕಾರದ ಆದೇಶದಲ್ಲಿ, ಸರ್ಕಾರದ ಆದೇಶ ಸಂಖ್ಯೆ: ತೋಇ 54 ತೋಸೇಪ 2012 ದಿನಾಂಕ: 28–08–2012 ರ ಆದೇಶವನ್ನು ಸ್ಥಿರೀಕರಿಸಿ ಆದೇಶಿಸಲಾಗಿರುತ್ತದೆ. ಸದರಿ ಸರ್ಕಾರದ ಆದೇಶವನ್ನು ತಮಗೆ ಜಾರಿ ಮಾಡಲು ತಮ್ಮ ವಿಳಾಸ: 53ಎ, 8ನೇ ಕ್ರಾಸ್, 4ನೇ ಮುಖ್ಯರಸ್ತೆ, ಸಂಪಂಗಿರಾಮನಗರ, ಬೆಂಗಳೂರು – 560 027, ಇಲ್ಲಿಗೆ ನೋಂದಾಯಿತ ಅಂಚೆ ಮೂಲಕ ಕಳುಹಿಸಲಾಗಿದ್ದು, ಈ ವಿಳಾಸದಲ್ಲಿ ಯಾರೂ ಇರುವುದಿಲ್ಲವೆಂದು ಅಂಚೆ ಇಲಾಖೆಯಿಂದ ವಾಪಸ್ಸು ಬಂದಿರುತ್ತದೆ ಹಾಗೂ ಸದರಿ ಆದೇಶವನ್ನು ತಮ್ಮ ಮೇಲಿನ ವಿಳಾಸದ ಮನೆಯ ಬಾಗಿಲಿಗೆ ಅಂಟಿಸಿ ಬರಲಾಗಿರುತ್ತದೆ.
ಮುಂದುವರೆದು ನಿಮ್ಮನ್ನು ಸರ್ಕಾರದ ಆದೇಶ ಸಂಖ್ಯೆ: ತೋಇ 21 ತೋಕಾವಿ 2013 ಬೆಂಗಳೂರು ದಿನಾಂಕ: 21–04–2021 ರ ಸರ್ಕಾರದ ಆದೇಶದಲ್ಲಿ ಸರ್ಕಾರದ ಆದೇಶ ಸಂಖ್ಯೆ: ತೋಇ 54 ತೋಸೇಪ 2012 ದಿನಾಂಕ: 28–08–2012 ರ ಆದೇಶವನ್ನು ಸ್ಥಿರೀಕರಿಸಿ ಆದೇಶಿಸಲಾಗಿರುತ್ತದೆ ಎಂಬ ಅಂಶವನ್ನು ಈ ಪತ್ರಿಕೆ ಪ್ರಕಟಣೆ ಮೂಲಕ ಅಂತಿಮವಾಗಿ ಜಾರಿ ಮಾಡಲಾಗಿದೆ. ಸದರಿ ಆದೇಶದ ಜಾರಿಯು ಇದೆ ಅಂತಿಮ ಎಂದು ತಾವು ತಿಳಿಯುವುದು.
ಸಹಿ/–
ತೋಟಗಾರಿಕೆ ಉಪ ನಿರ್ದೇಶಕರು,
ಶ್ರೀ ಚಾಮರಾಜೇಂದ್ರ (ಕಬ್ಬನ್)ಉದ್ಯಾನವನ, ಬೆಂಗಳೂರು.
DIPR/CP/785/MAA/23–24

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಚೇರಿ, ನವನಗರ, ಪಿ.ಬಿ.ರಸ್ತೆ, ಹುಬ್ಬಳ್ಳಿ–580 025
E-mail : seepmc.hescom@gmail.com
eep3.hescom@gmail.com, Web site : www.hescom.co.in
(CIN) : U31401KA2002SGC030437
No: HESCOM/SEE(PMC)/EE-P3/AEE-1,2&3/2023-24/CYS-2324 Date : 04-08-2023
ಟೆಂಡರ ಪ್ರಕಟಣೆ (ಕೆ.ಪಿ.ಪಿ.ಪಿ. ಮೂಲಕ ಮಾತ್ರ)
ಅಧೀಕ್ಷಕ ಇಂಜನೀಯರ್ (ವಿ), ಪಿಎಮ್‌ಸಿ, ನಿಗಮ ಕಛೇರಿ, ಹು.ವಿ.ಸ.ಕಂ.ನಿ., ಹುಬ್ಬಳ್ಳಿ ರವರಿಂದ ಪೂರ್ಣ ಗುತ್ತಿಗೆ ಆಧಾರದಡಿಯಲ್ಲಿ ಕೆಳಕಂಡ ಕಾಮಗಾರಿಗೆ ಟೆಂಡರನ್ನು ಆಹ್ವಾನಿಸಲಾಗಿದೆ.

ಅನು ಕ್ರಮ	ಯೋಜನೆಗಳು	ಬಿಡ್ ಇಂಡೆಂಟ್ ಸಂಖ್ಯೆ
1	ಚಿಕ್ಕೋಡಿ ವಿಭಾಗದ ಎಕ್ಸಾಂಬಾ ಮತ್ತು ಕಾಡಾಪುರದಲ್ಲಿ ಎಸ್.ಸಿ.ಪಿ ಕಾಮಗಾರಿಗಳನ್ನು ಕೈಗೊಳ್ಳುವುದು.	HESCOM/2023-24/EL/WORK_INDENT2 and HESCOM/2023-24/EL/WORK_INDENT3
2	ಗೋಕಾಕ ಉಪ ವಿಭಾಗದಲ್ಲಿ ವಿಫಲವಾದ ಪರಿವರ್ತಕಗಳ ದುರಸ್ತಿ ಕೇಂದ್ರವನ್ನು ಸ್ಥಾಪಿಸುವುದು	HESCOM/2023-24/EL/WORK_INDENT1

ಸದರಿ ಟೆಂಡರಗಳ ಪೂರ್ಣ ವಿವರಗಳನ್ನು ವೆಬ್‌ಸೈಟ್, www.kppp.karnataka.gov.in ರಲ್ಲಿ ದಿನಾಂಕ : 05.08.2023 ರಂದು ಅಥವಾ ನಂತರ ಪಡೆಯಬಹುದು.
ಸಹಿ/– ಅಧೀಕ್ಷಕ ಇಂಜನೀಯರರು(ವಿ), (ಪಿಎಮ್‌ಸಿ), ಹೆಸ್ಕಾಂ, ಹುಬ್ಬಳ್ಳಿ.
ವಾಸಾಸಂಇ/ಧಾ/ಕೆಎಸ್‌ಎಂಸಿಎ/137/2023–24

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಕಾನೀನಿನಿ., ಯಗಚಿ ಯೋಜನಾ ವಿಭಾಗ, ಬೇಲೂರು, ಹಾಸನ ಜಿಲ್ಲೆ
ಅಲ್ಪಾವಧಿಟೆಂಡರ್ ಪ್ರಕಟಣೆ ಸಂಖ್ಯೆ: 01/2023–24 ದಿನಾಂಕ: 03–08–2023 (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)
ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಯಗಚಿ ಯೋಜನಾ ವಿಭಾಗ, ಬೇಲೂರು ಇವರು ಕರ್ನಾಟಕ ಲೋಕೋಪಯೋಗಿ/ಕೇಂದ್ರ ಲೋಕೋಪಯೋಗಿ ಇಲಾಖೆಗಳಲ್ಲಿ ದರ್ಜೆ–IV ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಪಾರದರ್ಶಕ ಕಾಯಿದೆ KW-1ರ ಅನ್ವಯ ಐಟಂವಾರು ಅಲ್ಪಾವಧಿ ಟೆಂಡರ್‌ಗಳನ್ನು E-Procurement PlatForm (https://kppp.karnataka.gov.in) ನಲ್ಲಿ ಟೆಂಡರ್‌ಗಳನ್ನು ಕಾರ್ಯಪಾಲಕ ಇಂಜಿನಿಯರ್, ಯಗಚಿ ಯೋಜನಾ ವಿಭಾಗ, ಬೇಲೂರು ಇವರು ಆಹ್ವಾನಿಸಿದ್ದು, ಟೆಂಡರ್ ಪ್ರಕ್ರಿಯೆ ದಿನಾಂಕಗಳು ಈ ಕೆಳಕಂಡಂತಿವೆ. (1)ಟೆಂಡರ್ ಪ್ರೊಸೆಸಿಂಗ್ ಫೀ: https://kppp.karnataka.gov.inನಲ್ಲಿ ನೋಡುವುದು(2)E-Procurement ನಲ್ಲಿ ದಾಖಲಾತಿಗಳನ್ನು ಪಡೆಯುವ ಹಾಗೂ ಅಪ್‌ಲೋಡ್ ಮಾಡುವ ಅವಧಿ:ದಿನಾಂಕ:07–08–2023 ರಿಂದ ದಿನಾಂಕ: 14–08–2023 ವರೆಗೆ ಸಂಜೆ 4.00 ಘಂಟೆವರೆಗೆ(3) ಟೆಂಡರ್ ತೆರೆಯುವ ದಿನಾಂಕ: 16–08–2023 ಬೆಳಿಗ್ಗೆ 11.00 ಘಂಟೆಗೆ(4) ಕಾಮಗಾರಿಗಳ ಸಂಖ್ಯೆ: 13(ಹದಿಮೂರು)(5) ಕೆಲಸದ ಕಾಲಮಿತಿ:45 ದಿನಗಳು(ಮಳೆಗಾಲ ಸೇರಿ)(6) ಕಾಮಗಾರಿಯ ಟೆಂಡರಿಗಿಟ್ಟ ಗರಿಷ್ಠ ಮೊತ್ತ: ರೂ.13.39 ಲಕ್ಷಗಳು (7) ಕಾಮಗಾರಿಯ ಟೆಂಡರಿಗಿಟ್ಟ ಕನಿಷ್ಠ ಮೊತ್ತ: ರೂ.1.75 ಲಕ್ಷಗಳು(8)ಇ.ಎಂ.ಡಿ. ಗರಿಷ್ಠ ಮೊತ್ತರೂ. 0.33 ಲಕ್ಷಗಳು(9)ಇ.ಎಂ.ಡಿ.ಕನಿಷ್ಠ ಮೊತ್ತ ರೂ. 0.04 ಲಕ್ಷಗಳು(10) ಲೋಕೋಪಯೋಗಿ/ಕೇಂದ್ರಲೋಕೋಪಯೋಗಿ ಇಲಾಖೆ ದರ್ಜೆ-IV ಮತ್ತು ಮೇಲ್ಪಟ್ಟ ವರ್ಗ. ಸೂಚನೆ: 1. ಯಾವುದೇ ಸಂದರ್ಭದಲ್ಲಾದರೂ ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿರುವವರು ಕಾಯ್ದಿರಿಸಿಕೊಂಡಿರುತ್ತಾರೆ. 2. ಟೆಂಡರ್ ನಿಬಂಧನೆಗಳು ಹಾಗೂ ಸಂಬಂಧ'ಪಟ್ಟ ವಿವರಗಳನ್ನು e-procurement portal https://kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರಿಗಿಟ್ಟ ಮೊತ್ತವು ಬದಲಾವಣೆಗೆ ಒಳಪಟ್ಟಿರುತ್ತದೆ.
ಸಹಿ/–ಕಾರ್ಯಪಾಲಕ ಇಂಜಿನಿಯರ್, ಕಾನೀನಿನಿ, ಯಗಚಿ ಯೋಜನಾ ವಿಭಾಗ, ಬೇಲೂರು
ವಾಸಾಸಂಇ/ಹಿಸನಿ/ಹಾಸನ/186/ಕೆಎಸ್‌ಎಂಸಿಎ/190/2023–24

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರವರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ.
ಸಂಖ್ಯೆ: ಕಾಇಂ:ಲೋವಿಚಿ:ಜೆಇ–3:ಟೆಂಡರ್–02:2023–24/945 ದಿ: 01.08.2023
ಇ–ಟೆಂಡರ್ ಪ್ರಕಟಣೆ
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅದ್ಯಾದೇಶ 2000 ಹಾಗೂ ಆಕ್ಟ್ 2000 ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ಗಳ ನಿಯಮಗಳನ್ವಯ ಕರ್ನಾಟಕ ರಾಜ್ಯ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ ಇವರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ **ಅರ್ಹ ಗುತ್ತಿಗೆದಾರರಿಂದ** ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗಳಿಗೆ **ದ್ವಿ ಲಕೋಟೆ ಪದ್ಧತಿಯಲ್ಲಿ** ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ವೆಬ್‌ಸೈಟ್ www.eproc.Karnataka.gov.in/eportal/index.seam ನಲ್ಲಿ ಟೆಂಡರ್‌ಗಾಗಿ ವಿವರಗಳನ್ನು ಪಡೆದು ಭಾಗವಹಿಸಬಹುದು.
ಕಾಮಗಾರಿಗಳ ವಿವರ:– ಇ– ಪ್ರೊಕ್ಯೂರ್‌ಮೆಂಟ್ ಮೂಲಕ– ದ್ವಿ ಲಕೋಟೆ ಪದ್ಧತಿ:– ಲೆಕ್ಕ ಶೀರ್ಷಿಕೆ: 8443 ಠೇವಣಿ ವಂತಿಕೆ (ಸಿ.ಇ.ಪಿ.ಎಂ.ಐ.ಜಡ್) ಕೆ.ಎಂ.ಇ.ಆರ್.ಸಿ. ಯೋಜನೆಯಡಿ:–(1) ಹೊಳಲ್ಕೆರೆ ತಾಲ್ಲೂಕು ದುಮ್ಮಿ–ರಾಮಘಟ್ಟ ರಸ್ತೆ ಮಾರ್ಗ ಅಂಜನಪುರ ಕಿ.ಮೀ. 4.50 ರಿಂದ 5.70 ಕಿ.ಮೀ. ರವರೆಗೆ ರಸ್ತೆ ಅಭಿವೃದ್ಧಿ ಮತ್ತು ಸಿ.ಸಿ. ರಸ್ತೆ ನಿರ್ಮಾಣ (ವ.ಇಂ. 37)/2ನೇ ಕರೆ. **ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):**– 200.00 **ಕಾಮಗಾರಿ ಟೆಂಡರ್ ದಿನಾಂಕಗಳು ಈ ಕೆಳಕಂಡಂತಿವೆ.** ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ 14–08–2023 ಸಮಯ 17–30 ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ 16–08–2023 ಸಮಯ 16–00 ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ 17–08–2023 ಸಮಯ 16–15 ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ 19–08–2023 ಸಮಯ 11–00 ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ ಸಂಖ್ಯೆ 08194 222446) ಹಾಗೂ ಹೆಚ್.ಪಿ. ಕಂಪನಿಯ ಸಹಾಯಕ ದೂರವಾಣಿ ಸಂಖ್ಯೆ 080 25501216 ಮತ್ತು 080 25501227 ರಿಂದ ಮಾಹಿತಿ ಪಡೆಯಬಹುದು.
DIPR/CTA/KSMCA/141/2023-24
ಸಹಿ/– ಕಾರ್ಯಪಾಲಕ ಅಭಿಯಂತರರು, ಪಿ.ಡಬ್ಲ್ಯೂ.ಡಿ, ಚಿತ್ರದುರ್ಗ.

RASHTRIYA RAKSHA UNIVERSITY
An Institution of National Importance
Pioneering National Security and Police University of India
Ministry of Home Affairs, Government of India
गृह मंत्रालय MINISTRY OF HOME AFFAIRS
ADMISSION NOTIFICATION FOR THE ACADEMIC YEAR 2023-24
PUDUCHERRY CAMPUS

No.	Programs offered
1.	Diploma in Police Science
2.	Bachelor of Arts in Criminology and Police Administration
3.	Postgraduate Diploma in Cyber Security and Digital Forensics
4.	Postgraduate Diploma in Fitness Management
5.	Postgraduate Diploma in Security and Intelligence Management

SHIVAMOGGA CAMPUS

No.	Programs offered
1.	Diploma in Police Science
2.	Bachelor of Arts in Security Management
3.	Postgraduate Diploma in Police Science and Management

PUDUCHERRY CAMPUS: Pondicherry Institute of Hotel Management & Catering Technology [PIHMCT], Opp. to Mahalakshmi Nagar, Murungapakkam, Puducherry, 605004 https://rru.ac.in/puducherry-campus/ Email: admission.puducherry@rru.ac.in Cont. No. +916357244804, +918122726882
SHIVAMOGGA CAMPUS: Old Kendriya Vidyalaya School Building, Ward No. 03, Shantinagar, Ragigudda, Shivamogga 577204, Karnataka, INDIA https://rru.ac.in/karnataka-campus-director/ Email: admission.karnatak@rru.ac.in Cont. No. +916357244801

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, (ಯೋಜನೆ–ಪೂರ್ವ)
21ನೇ ಮಹಡಿ, ನೇತಾಜಿ ಸುಭಾಷ್‌ಚಂದ್ರ ಬೋಸ್ ಕಟ್ಟಡ, (ಪಿಯುಬಿ) ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560 001.
ಸಂಖ್ಯೆ: ಕಾಪಾಅ(ಯೋಪೂ)ಟೆಂಡರ್/09/2022–23 ದಿನಾಂಕ: 04.08.2023
ತಿದ್ದುಪಡಿ–1
ಟೆಂಡರ್ ಪ್ರಕಟಣೆ ಸಂಖ್ಯೆ: ಕಾಪಾಅ/ಯೋ–ಪೂ/ಟೆಂಡರ್/09/2022–23 ಪ್ರಕಟಣೆ ದಿನಾಂಕ: 01.08.2023 (2ನೇ ಕರೆ)ಯಂತೆ ಈ ಕಚೇರಿಯಿಂದ ಇ–ಪೋರ್ಟಲ್‌ನಲ್ಲಿ ಟೆಂಡರ್ ಆಹ್ವಾನಿಸಲಾಗಿತ್ತು. ಹೊಸ ಕರ್ನಾಟಕ ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಪ್ರೊಫೈಲ್‌ನ ಸೃಜನೆ ಮಾಡಬೇಕಾಗಿದ್ದುದರಿಂದ ಟೆಂಡರ್ ದಾಖಲೆಗಳನ್ನು ಇ–ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲಾಗಿರುವುದಿಲ್ಲ. ಆದ್ದರಿಂದ ಮಾರ್ಪಾಡಾದ ಟೆಂಡರ್ ವೇಳಾಪಟ್ಟಿಯನ್ನು ಈ ಕೆಳಕಂಡಂತೆ ಪ್ರಕಟಿಸಲಾಗಿದೆ.
ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ದಿನಾಂಕ **19.08.2023**ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಆರ್‌ಎಫ್‌ಪಿ ಪ್ರಕಾರ ಬಿಡ್ ಪೂರ್ವಭಾವಿ ಸಭೆಯ ದಿನಾಂಕ **24.08.2023**ರ ಮಧ್ಯಾಹ್ನ **3:00** ಗಂಟೆಗೆ. (3) ಭರ್ತಿ ಮಾಡಿದ ಪ್ರಸ್ತಾವನೆಗಳನ್ನು ದಿನಾಂಕ **28.08.2023**ರ ಸಂಜೆ **4:00** ಗಂಟೆಯೊಳಗೆ ಸಲ್ಲಿಸುವುದು. (4) ತಾಂತ್ರಿಕ ಪ್ರಸ್ತಾವನೆಗಳನ್ನು ದಿನಾಂಕ **30.08.2023**ರ ಸಂಜೆ **4:30** ಗಂಟೆಗೆ ತೆರೆಯಲಾಗುವುದು. (5) ಆರ್ಥಿಕ ಪ್ರಸ್ತಾವನೆ ತೆರೆಯುವುದನ್ನು ತಾಂತ್ರಿಕ ಪ್ರಸ್ತಾವನೆಗಳಿಗೆ ಸಮರ್ಥ ಪ್ರಾಧಿಕಾರರಿಂದ ಅನುಮೋದನೆ ದೊರೆತ ನಂತರ ಬಿಡ್‌ದಾರರಿಗೆ ತಿಳಿಸಲಾಗುವುದು.
ಸಹಿ/– ಕಾರ್ಯಪಾಲಕ ಅಭಿಯಂತರರು (ಯೋಜನೆ ಪೂರ್ವ)

ರಾಣಿ ಚನ್ನಮ್ಮ ವಿಶ್ವವಿದ್ಯಾಲಯ
ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ–೦೪, ಭೂತರಾಮನಹಟ್ಟಿ, ಬೆಳಗಾವಿ–591156
(ನ್ಯಾಕ್ ಮಾನ್ಯತೆ ಬಿ+ಗ್ರೇಡ್–2021)
Website:www.rcub.ac.in E-mail: rcubulding2016@gmail.com
Phone No: 0831-2565242/03 registrar@rcub.ac.in
Office of the Registrar
ಕುಲಸಚಿವರ ಕಾರ್ಯಾಲಯ
ಸಂಖ್ಯೆ:ರಾಚವಿ/ಬೆಳಗಾವಿ/ಕುಸಕಾ/2023-24/1756 Date: 04.08.2023
-:ಟೆಂಡರ್ ಅಧಿಸೂಚನೆ (ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ):-
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿಯ ವಿವಿಧ ವಿಭಾಗಗಳಿಗೆ ಅವಶ್ಯವಿರುವ ಉಪಕರಣಗಳನ್ನು ಖರೀದಿಸಲು e-procurement ಮೂಲಕ ದಿನಾಂಕ 04.08.2023 ರಂದು ಈ ಕೆಳಗಿನ ಎರಡು ಪ್ರತ್ಯೇಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

SN	Name of the Tender	EMD in Rs.
01	Supply of Electrochemical work station and Solid state UV-Visible Spectrometer(RCUB/2023-24/IND0005)	36,000.00
02	Supply of Campus Internet Network Management Firewall Device with 03 years License(RCUB/2023-24/IND0003)	48,750.00

ಆಸಕ್ತರು http://kppp.karnataka.gov.in ಮೂಲಕ ದಿನಾಂಕ 19.08.2023ರ ಸಂಜೆ 04.00 ಗಂಟೆಯೊಳಗಾಗಿ ಸದರಿ ಟೆಂಡರ್‌ಗಳಿಗೆ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಹೆಚ್ಚಿನ ವಿವರಗಳನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್ www.rcub.ac.in ನಲ್ಲಿ ಹಾಗೂ ವಿಶ್ವವಿದ್ಯಾಲಯದ ಎಸ್ಟೇಟ್ ವಿಭಾಗದಿಂದ ಪಡೆಯಬಹುದಾಗಿದೆ.
ಸಹಿ/–
ಕುಲಸಚಿವರು
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ,ಬೆಳಗಾವಿ.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು ಲೋಕೋಪಯೋಗಿ ಇಲಾಖೆ ವಿಭಾಗ ಗದಗ
Phone No : 08372-238782 Fax No. 08372-237268
E.Mail : eepwdgad@gmail.com
ನಂ:ಕಾನಿಇಂಗಃಲೋಇ:ಪಿಬಿ–1 5:ವಿವಿಧ:2023–24/1673 ದಿನಾಂಕ:03–08–2023
ಅಲ್ಪಾವಧಿ ಟೆಂಡರ್ ಪ್ರಕಟಣೆ
ಕರ್ನಾಟಕ ರಾಜ್ಯಪಾಲರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರಿಂದ ಲೋಕೋಪಯೋಗಿ ಇಲಾಖೆ ಗದಗ ವಿಭಾಗದಡಿ ವಿವಿಧ ಲೆಕ್ಕ ಶೀರ್ಷಿಕೆ ಅನುದಾನದ ಅಡಿಯಲ್ಲಿಯ ಒಟ್ಟು **658.63** ಲಕ್ಷ ಮೊತ್ತದಲ್ಲಿ ಒಟ್ಟು 22 ಕಾಮಗಾರಿಗಳಿಗೆ (ಕನಿಷ್ಠ ಮೊತ್ತ ರೂ: **6.05** ಲಕ್ಷ ಗರಿಷ್ಠ ಮೊತ್ತ ರೂ: **98.30** ಲಕ್ಷ) ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ನೊಂದಣಿ ಮಾಡಿಸಿದ ಲೋಕೋಪಯೋಗಿ ಇಲಾಖೆಯ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರಮೆಂಟ್ (E- Procurement) ಸ್ಟಾಂಡರ್ಡ ಬಿಡ್ ಡಾಕುಮೆಂಟ್ ಕೆಡಬ್ಲ್ಯೂ–1, 2 ಹಾಗೂ 3ರ ಪ್ರಕಾರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಸಂಪೂರ್ಣ ವಿವರಗಳಿಗಾಗಿ ಅಂತರ್ ಜಾಲ ವಿಳಾಸ http://www.Kppp.karnataka.gov.in/ ದಲ್ಲಿ ನೋಡಿಕೊಳ್ಳಬಹುದು.
Work Indent No:- "401, 413-SC, 423-SC, 428, 838, 532, 534, 805, 546-ST, 591, 592-ST, 597, 836, 626-ST, 628, 632, 837, 637-SC, 638-SC, 640-SC, 842 and 843"
ಮೇಲಿನ ಕಾಮಗಾರಿಯ ಟೆಂಡರ ವಿವರ ಪಶ್ನೋತ್ತರ ದಿನಾಂಕ : **07–08–2023,** ಟೆಂಡರ್ ಸಲ್ಲಿಸುವ ದಿನಾಂಕ : **14–08–2023** ತಾಂತ್ರಿಕ / ಆರ್ಥಿಕ ಬಿಡ್ ತೆರೆಯುವ ದಿನಾಂಕ : **16–08–2023** ಆರ್ಥಿಕ ಬಿಡ್ ತೆರೆಯುವ ದಿನಾಂಕ : **17–08–2023**
ಜಿ ಎಸ್ ಟಿ ಮೊತ್ತವನ್ನು ಚಾಲ್ತಿಯಲ್ಲಿರುವ ಸರ್ಕಾರದ ಅದೇಶದಂತೆ ಪಾವತಿಸಲಾಗುವದು. ಗುತ್ತಿಗೆ ಅವಧಿಯನ್ನು ಗುತ್ತಿಗೆದಾರರ ವಿಳಂಬದಿಂದ ವಿಸ್ತರಿಸಿದಲ್ಲಿ ವಿಸ್ತೃತ ಗುತ್ತಿಗೆ ಅವಧಿಯಲ್ಲಿ ಆಗುವ ಜಿಎಸ್‌ಟಿ ಹೆಚ್ಚಳವನ್ನು ಗುತ್ತಿಗೆದಾರರಲೇ ಭರಿಸತಕ್ಕದ್ದು.
ಸಹಿ/– ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ವಿಭಾಗ, ಗದಗ
ವಾಸಾಸಂಇ/ಗದಗ/ಕೆಎಸ್‌ಎಂಸಿಎ/98/2023–24

ಮಂಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತ., ಮಂಡ್ಯ
ಪ್ರಧಾನ ಕಛೇರಿ, ಮಂಡ್ಯ–571401. ದೂ.: 08232–226010, 226011
ಸಂಖ್ಯೆ : ಆಡಳಿತ:ಸಿಬ್ಬಂದಿ:150:2023–24 ದಿನಾಂಕ : 04–08–2023
ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)
E-Tender No.:MDCCB/2023-24/SE0012
ಮಂಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತ., ಮಂಡ್ಯ ಇದರ ಪ್ರಧಾನ ಕಛೇರಿ ಹಾಗೂ 60 ಶಾಖೆಗಳಿಗೆ ಮತ್ತು ಹೊಸ ಶಾಖೆಗಳಿಗೆ ಭದ್ರತಾ ಸಿಬ್ಬಂದಿಗಳನ್ನು ತಾತ್ಕಾಲಿಕವಾಗಿ ಹೊರಸಂಪನ್ಮೂಲದಿಂದ ಪೂರೈಸಲು ಆಸಕ್ತಿಯುಳ್ಳ ಟೆಂಡರುದಾರರಿಂದ ಅರ್ಜಿಯನ್ನು ಆಹ್ವಾನಿಸಲಾಗಿದ್ದು, ವಿವರವನ್ನು ಕರ್ನಾಟಕ ಇ–ಪೋರ್ಟಲ್ ಜಾಲತಾಣ https://kppp.karnataka.gov.in/ ಇಲ್ಲಿ ಪಡೆಯಬಹುದಾಗಿರುತ್ತದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 19–08–2023ರ ಸಂಜೆ 5.00 ಗಂಟೆ ಆಗಿರುತ್ತದೆ.
ಸಹಿ/– ಮುಖ್ಯಕಾರ್ಯನಿರ್ವಹಣಾಧಿಕಾರಿ
ಮಂಡ್ಯ ಡಿ.ಸಿ.ಸಿ. ಬ್ಯಾಂಕ್ ನಿ., ಮಂಡ್ಯ

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560001. website: www.kiadb.in
ನಂ. ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಇಪಿ–01/140/2023–24 ದಿನಾಂಕ: 04.08.2023
ಯೋಜನಾ ನಿರ್ವಹಣಾ ಸೇವೆಗಳಿಗಾಗಿ (ಪಿಎಂಸಿ) ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
(ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)
ಕೆ.ಐ.ಎ.ಡಿ.ಬಿ ಯು ಈ ಕೆಳಕಂಡ ಕಾಮಗಾರಿಗಳಿಗೆ ಯೋಜನಾ ನಿರ್ವಹಣಾ ಸೇವೆಗಳಿಗಾಗಿ (ಪಿಎಂಸಿ) ಕ್ವಾಲಿಟಿ ಬೇಸ್ಡ್ ಕನ್ಸಲ್ಟೆನ್ಸಿ ಸಿಸ್ಟಮ್ (ಕ್ಯೂಬಿಸಿಎಸ್) ಅಡಿಯಲ್ಲಿ ಅರ್ಹ ಸಲಹಾ ಸಂಸ್ಥೆಗಳಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಹಾಗೂ ನಿಯಮ 2000 ರನ್ವಯ ದ್ವಿ–ಲಕೋಟೆ ಪದ್ಧತಿಯಡಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.
ಕಾಮಗಾರಿಯ ಹೆಸರು: (1) ಬೆಂಗಳೂರು ಗ್ರಾಮಾಂತರ ಜಿಲ್ಲೆ ನೆಲಮಂಗಲ ತಾಲ್ಲೂಕು, ಓಬಳಾಪುರ ಕೈಗಾರಿಕಾ ಪ್ರದೇಶದ ಎಂ.ಎಂ.ಎಲ್.ಪಿ ಯಲ್ಲಿ ಕೈಗಾರಿಕಾ ಬಡಾವಣೆಯ ಕಾಮಗಾರಿಗೆ ಪಿಎಂಸಿ ಸೇವೆಗಳನ್ನು ಒದಗಿಸುವುದು. (2) ಬೆಂಗಳೂರು ಗ್ರಾಮಾಂತರ ಜಿಲ್ಲೆ ನೆಲಮಂಗಲ ತಾಲ್ಲೂಕು, ಓಬಳಾಪುರ ಕೈಗಾರಿಕಾ ಪ್ರದೇಶದ ಕೃಷ್ಣರಾಜಪುರ ಬ್ಲಾಕ್‌ನಲ್ಲಿ ಕೈಗಾರಿಕಾ ಬಡಾವಣೆಯ ಕಾಮಗಾರಿಗೆ ಪಿಎಂಸಿ ಸೇವೆಗಳನ್ನು ಒದಗಿಸುವುದು. (3) ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿ ಮತ್ತು ದೊಡ್ಡಬಳ್ಳಾಪುರ ತಾಲ್ಲೂಕು, ದೊಡ್ಡಗೊಲ್ಲಹಳ್ಳಿ ಬ್ಲಾಕ್ ಸೆಕ್ಟರ್–2 ಕೈಗಾರಿಕಾ ಬಡಾವಣೆಯ ಕಾಮಗಾರಿಗೆ ಪಿಎಂಸಿ ಸೇವೆಗಳನ್ನು ಒದಗಿಸುವುದು. (4) ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿ ಮತ್ತು ದೊಡ್ಡಬಳ್ಳಾಪುರ ತಾಲ್ಲೂಕು, ದೇವನಹಳ್ಳಿ ಸಾಮಾನ್ಯ ಕೈಗಾರಿಕಾ ಪ್ರದೇಶದಲ್ಲಿ ನೀರು ಸರಬರಾಜು ಯೋಜನೆಯ ಕಾಮಗಾರಿಗೆ ಪಿಎಂಸಿ ಸೇವೆಗಳನ್ನು ಒದಗಿಸುವುದು.
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 19.08.2023 ಸಂಜೆ 4.00 ಗಂಟೆವರೆಗೆ.
ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in. ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.
ಸಹಿ/–
ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು
DIPR/CP/784/Zen/2023-24

ಕರ್ನಾಟಕ ಸರ್ಕಾರ – ಧಾರ್ಮಿಕ ದತ್ತಿ ಇಲಾಖೆ
ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನ
ನಂಜನಗೂಡು, ಮೈಸೂರು ಜಿಲ್ಲೆ
ದೂ. : 08221–226245, 223320, 227245 E-Mail ID : sstnanjangud@gmail.com
ಸಂಖ್ಯೆ : ಎಸ್‌ಎಸ್‌ಟಿ/ಇ–ಟೆಂಡರ್/2023–24 ದಿನಾಂಕ : 31–07–2023
ಇ–ಟೆಂಡರ್ ಪ್ರಕಟಣೆ
ನಂಜನಗೂಡು ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯದ 2023–24ನೇ ಸಾಲಿನ ಶ್ರೀ ಶ್ರೀಯವರ ದೇವಾಲಯಕ್ಕೆ ಅಗತ್ಯವಾದ ವಿವಿಧ ದಿನಸಿ ಪದಾರ್ಥಗಳನ್ನು ಒಂದು ವರ್ಷದ ಅವಧಿಗೆ ಸರಬರಾಜು ಮಾಡಲು ಹಾಗೂ ದಾಸೋಹ ಭವನದಲ್ಲಿ ಪ್ರತಿ ದಿನ ಭಕ್ತಾದಿಗಳಿಗೆ ಉಚಿತ ಅನ್ನದಾಸೋಹಕ್ಕಾಗಿ ಅಡಿಗೆ ತಯಾರಿಸಿ, ಬಡಿಸಿ ಸ್ವಚ್ಛತೆ ಮಾಡುವ ಗುತ್ತಿಗೆ ಹಕ್ಕಿನ ಬಗ್ಗೆ, ಇ–ಪ್ರೊಕ್ಯೂರ್‌ಮೆಂಟ್ ಬಡಿಸಿ ಸ್ವಚ್ಛತೆ ಮಾಡುವ ಗುತ್ತಿಗೆ ಹಕ್ಕಿನ ಬಗ್ಗೆ, ಇ–ಪ್ರೊಕ್ಯೂರ್‌ಮೆಂಟ್ ಇ–ಟೆಂಡರ್‌ಯಡಿಯಲ್ಲಿ ಟೆಂಡರ್‌ಗಳನ್ನು ಕರೆಯಲಾಗಿದೆ. ಆಸಕ್ತರು ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್(https://kppp.karnataka.gov.in/) ಮೂಲಕ ಸಲ್ಲಿಸಬಹುದಾಗಿದೆ. ಟೆಂಡರ್ ದಾಖಲೆಗಳಲ್ಲಿ ತಿಳಿಸಿರುವಂತೆ (Technical Bid/ Qualification Criteria) ದ ಮೂಲಕ ಎಲ್ಲಾ ಅಗತ್ಯ ದಾಖಲೆಗಳನ್ನು ಸಲ್ಲಿಸುವುದು. ಹೆಚ್ಚಿನ ವಿವರಗಳಿಗೆ https://kppp.karnataka.gov.in/ ಅಥವಾ ಈ ಕಛೇರಿಯಿಂದ ದೂರವಾಣಿ ಮೂಲಕ ಮಾಹಿತಿ ಪಡೆಯಬಹುದಾಗಿದೆ.

ಕ್ರ.ಸಂ.	ಟೆಂಡರ್‌ನ ವಿವರ	ಇ.ಎಂ.ಡಿ. ಮೊತ್ತ
1.	ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯಕ್ಕೆ ಅಗತ್ಯ ವಿರುವ ಉತ್ತಮ ಗುಣಮಟ್ಟದ ಸೋನಾ ಮಸೂರಿ ಅಕ್ಕಿ ಮತ್ತು ಉತ್ತಮ ಗುಣಮಟ್ಟದ ತೊಗರಿ ಬೇಳೆಯನ್ನು ಸರಬರಾಜು ಮಾಡುವ ಬಗ್ಗೆ	ರೂ. 2,00000/–
2.	ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯಕ್ಕೆ ಅಗತ್ಯವಿರುವ ಉತ್ತಮ ಗುಣಮಟ್ಟದ ಬೆಣ್ಣೆ ಕಾಯಿಸಿದ ತುಪ್ಪ ಮತ್ತು ಸನ್‌ಫ್ಲವರ್ ರೀ–ಫೈಂಡ್ ಆಯಿಲ್‌ನ್ನು ಸರಬರಾಜು ಮಾಡುವ ಬಗ್ಗೆ.	ರೂ. 2,00000/–
3.	ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯಕ್ಕೆ ಲಾಡು ಪ್ರಸಾದ ತಯಾರಿಸಲು ಅಗತ್ಯವಿರುವ ಉತ್ತಮ ಗುಣಮಟ್ಟದ ಕಡ್ಲೆಹಿಟ್ಟು ಮತ್ತು ಸಕ್ಕರೆ ದಿನಸಿ ಪದಾರ್ಥಗಳನ್ನು ಸರಬರಾಜು ಮಾಡುವ ಬಗ್ಗೆ	ರೂ. 2,00000/–
4.	ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯಕ್ಕೆ ಅಗತ್ಯವಿರುವ ಉತ್ತಮ ಗುಣಮಟ್ಟದ ಒಣದ್ರಾಕ್ಷಿ, ಗೋಡಂಬಿ ಮತ್ತು ಕೆಂಪು / ಬಿಳಿ ಕಲ್ಲುಸಕ್ಕರೆ ದಿನಸಿ ಪದಾರ್ಥಗಳನ್ನು ಸರಬರಾಜು ಮಾಡುವ ಬಗ್ಗೆ	ರೂ. 2,00000/–
5.	ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯಕ್ಕೆ ಅಗತ್ಯವಿರುವ ಉತ್ತಮ ಗುಣಮಟ್ಟದ ವಿವಿಧ ದಿನಸಿ ಪದಾರ್ಥಗಳನ್ನು ಸರಬರಾಜು ಮಾಡುವ ಬಗ್ಗೆ	ರೂ. 2,00000/–
6.	ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯದ ದಾಸೋಹ ಭವನದಲ್ಲಿ ಪ್ರತಿ ದಿನ ಭಕ್ತಾದಿಗಳಿಗೆ ಉಚಿತ ಅನ್ನದಾಸೋಹಕ್ಕಾಗಿ ಅಡಿಗೆ ತಯಾರಿಸಿ, ಬಡಿಸಿ ಸ್ವಚ್ಛತೆ ಮಾಡುವ ಗುತ್ತಿಗೆ ಹಕ್ಕಿನ ಬಗ್ಗೆ.	ರೂ. 1,50,000/–

ಇ–ಪ್ರಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಇ–ಟೆಂಡರ್ ಶೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿದೆ.

1.	ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ :	01–08–2023	ರ ನಂತರ
2.	ಇ–ಟೆಂಡರ್ ಸಲ್ಲಿಸುವ ಕೊನೆ ದಿನಾಂಕ ಮತ್ತು ಕಾಲ	31–08–2023	ಸಂಜೆ 5.00 ಗಂಟೆಯವರೆಗೆ
3.	ಇ–ಟೆಂಡರ್‌ನ್ನು ತೆರೆಯುವ ದಿನಾಂಕ ಮತ್ತು ಕಾಲ	02–09–2023	11.00 A.M.ನಂತರ

ಸಹಿ/– ಕಾರ್ಯನಿರ್ವಾಹಕ ಅಧಿಕಾರಿಗಳು,
ಶ್ರೀ ಕಂಠೇಶ್ವರಸ್ವಾಮಿ ದೇವಸ್ಥಾನ, ನಂಜನಗೂಡು

ಪಿಇಎಸ್ ವಿವಿ ನಗರದಲ್ಲಿ ಶುಕ್ರವಾರ ಆಯೋಜಿಸಿದ್ದ 'ಶಿಕ್ಷಣದಲ್ಲಿ ಕೃತಕ ಬುದ್ಧಿಮತ್ತೆ ಪರಿಣಾಮ' ಸಮಾವೇಶದಲ್ಲಿ ಎಂ.ಆರ್. ದೊರೆಸ್ವಾಮಿ ಅವರು ಟಿ.ಜಿ. ಸೀತಾರಾಮ್ ದಂಪತಿಯನ್ನು ಗೌರವಿಸಿದರು

'ವಿದ್ಯಾರ್ಥಿ ಮಾರ್ಗದರ್ಶನ'ದಿಂದ ಗುಣಮಟ್ಟದ ಶಿಕ್ಷಣ: ದೊರೆಸ್ವಾಮಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಖಿಲ ಭಾರತೀಯ ತಾಂತ್ರಿಕ ಶಿಕ್ಷಣ ಮಂಡಳಿಯ (ಎಐಸಿಟಿಇ) 'ವಿದ್ಯಾರ್ಥಿ ಮಾರ್ಗದರ್ಶನ ಕಾರ್ಯಕ್ರಮ'ದಿಂದ ಗುಣಮಟ್ಟದ ಎಂಜಿನಿಯರಿಂಗ್ ಶಿಕ್ಷಣ ಸಾಧ್ಯ' ಎಂದು ಪಿಇಎಸ್ ವಿಶ್ವವಿದ್ಯಾಲಯದ ಕುಲಾಧಿಪತಿ ಎಂ.ಆರ್. ದೊರೆಸ್ವಾಮಿ ತಿಳಿಸಿದರು.

ಪಿಇಎಸ್ ವಿವಿ ನಗರದಲ್ಲಿ ಶುಕ್ರವಾರ ಆಯೋಜಿಸಿದ 'ಶಿಕ್ಷಣದಲ್ಲಿ ಕೃತಕ ಬುದ್ಧಿಮತ್ತೆ ಪರಿಣಾಮ' ಸಮಾವೇಶದಲ್ಲಿ ಮಾತನಾಡಿದರು.

'ನಮ್ಮ ದೇಶದ ದೊಡ್ಡ ಶಕ್ತಿ ವಿದ್ಯಾವಂತ ಯುವ ಮಾನವ ಸಂಪನ್ಮೂಲ. ದೇಶದಲ್ಲಿ 3,500 ಎಂಜಿನಿಯರಿಂಗ್ ಶಿಕ್ಷಣ ಸಂಸ್ಥೆಗಳಿದ್ದು, ಇಲ್ಲಿ ಶಿಕ್ಷಣದ ಗುಣಮಟ್ಟ ಹೆಚ್ಚಳಕ್ಕೆ 'ವಿದ್ಯಾರ್ಥಿ ಮಾರ್ಗದರ್ಶನ ಕಾರ್ಯಕ್ರಮ' ಸಹಕಾರಿಯಾಗಲಿದೆ. ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಸ್ನಾತಕೋತ್ತರ ಪದವಿಯ ನಂತರ 3ರಿಂದ 6 ತಿಂಗಳ ಅಧ್ಯಾಪಕರ ತರಬೇತಿ ಕಾರ್ಯಕ್ರಮವನ್ನು ನಡೆಸುವುದು ಉತ್ತಮ. ಬೋಧನೆ-ಕಲಿಕೆ ಪ್ರಕ್ರಿಯೆಯನ್ನು ಚುರುಕುಗೊಳಿಸಲು ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ನೆರವು ಪಡೆದುಕೊಳ್ಳಬೇಕು' ಎಂದು ಹೇಳಿದರು.

ಎಐಸಿಟಿಇ ಅಧ್ಯಕ್ಷ ಟಿ.ಜಿ. ಸೀತಾರಾಮ್, 'ಶಿಕ್ಷಣ, ವೈದ್ಯಕೀಯ, ಆಟೋಮೊಬೈಲ್, ಕೈಗಾರಿಕೆ ಸೇರಿ ವಿವಿಧ ಕ್ಷೇತ್ರಗಳಲ್ಲಿ ಕೃತಕ ಬುದ್ಧಿಮತ್ತೆ ಅಳವಡಿಸಿಕೊಳ್ಳಲಾಗುತ್ತಿದೆ. ಈ ತಂತ್ರಜ್ಞಾನ ದಿನದಿಂದ ದಿನಕ್ಕೆ ಪ್ರಾಮುಖ್ಯತೆ ಹೆಚ್ಚಿಸಿಕೊಳ್ಳುತ್ತಿದೆ. ಐಐಟಿ ಸೇರಿದಂತೆ ನಮ್ಮ ದೇಶದ ಎಲ್ಲಾ ಶಿಕ್ಷಣ ಸಂಸ್ಥೆಗಳಲ್ಲಿ 'ವಿದ್ಯಾರ್ಥಿ ಮಾರ್ಗದರ್ಶನ ಕಾರ್ಯಕ್ರಮ'ವನ್ನು ಕಡ್ಡಾಯ ಪ್ರಕ್ರಿಯೆಯನ್ನಾಗಿ ಮಾಡಲಾಗುತ್ತಿದೆ' ಎಂದು ತಿಳಿಸಿದರು.

ಶೀಘ್ರದಲ್ಲೇ ಸಾರಿಗೆ ಇಲಾಖೆಯಿಂದ ಪ್ರಾಯೋಗಿಕ ಚಾಲನೆ • ಬಳಿಕ ಇತರ ಜಿಲ್ಲೆಗಳಿಗೆ ವಿಸ್ತರಣೆ

ಆಟೊ, ಕ್ಯಾಬ್ ಬಳಕೆದಾರರಿಗೆ ಸರ್ಕಾರದ ಆ್ಯಪ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಟೊ, ಕ್ಯಾಬ್‌ಗಳ ಚಾಲಕರು ಮತ್ತು ಪ್ರಯಾಣಿಕರ ಅನುಕೂಲಕ್ಕಾಗಿ ಸಾರಿಗೆ ಇಲಾಖೆ ವತಿಯಿಂದಲೇ ಹೊಸ ಆ್ಯಪ್ ರೂಪಿಸಲು ಸಿದ್ಧತೆ ನಡೆದಿದೆ.

ಈ ಬಗ್ಗೆ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ವಿವರ ನೀಡಿದ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, 'ಲಾಭ ಮತ್ತು ನಷ್ಟ ಇಲ್ಲದ ಪರಿಕಲ್ಪನೆಯಲ್ಲಿ ಈ ಆ್ಯಪ್ ಅನ್ನು ಪರಿಚಯಿಸಲಾಗುತ್ತಿದೆ. ಬೆಂಗಳೂರಿನಲ್ಲಿ ಕೆಲವೇ ತಿಂಗಳಲ್ಲಿ ಹೊಸ ಆ್ಯಪ್‌ನ ಪ್ರಾಥಮಿಕ ಪ್ರಯೋಗಕ್ಕೆ ಚಾಲನೆ ದೊರೆಯಲಿದೆ. ನಂತರ, ಇತರ ಜಿಲ್ಲೆಗಳಿಗೆ ವಿಸ್ತರಿಸಲಾಗುವುದು' ಎಂದು ತಿಳಿಸಿದರು.

'ಹೊಸ ಆ್ಯಪ್‌ನಲ್ಲಿ ದರ ನಿಗದಿಪಡಿಸುವ ಬಗ್ಗೆ ಇನ್ನೂ ಯೋಚಿಸಿಲ್ಲ. ಆ್ಯಪ್ ಆಧಾರಿತ ಸಾರಿಗೆ ಸೇವೆ ನೀಡುತ್ತಿರುವ ಕೆಲವು ಖಾಸಗಿ ಸಂಸ್ಥೆಗಳು ಆಟೊ ಮತ್ತು ಕ್ಯಾಬ್ ಚಾಲಕರಿಗೆ ಕಡಿಮೆ ಹಣ ನೀಡಿ ಹೆಚ್ಚಿನ ಲಾಭ ಮಾಡಿಕೊಳ್ಳುತ್ತಿವೆ. ಇದಕ್ಕೆ ಕಡಿವಾಣ ಹಾಕಲು ಸರ್ಕಾರ ಈ ಕ್ರಮಕ್ಕೆಗೊಂಡಿದೆ' ಎಂದು ವಿವರಿಸಿದರು.

'ಸಾರಿಗೆ ಇಲಾಖೆಯ ಆ್ಯಪ್ ಆಧಾರಿತ ಸೇವೆಗೆ ನೋಂದಣಿ ಮಾಡಿಕೊಳ್ಳಬೇಕು. ಓಲಾ, ಉಬರ್‌ಗಿಂತಲೂ ಚಾಲಕರು ಹೆಚ್ಚಿನ ಲಾಭಗಳಿಸಬಹುದು. ಇಲ್ಲಿ ಯಾವುದೇ ಕಿರುಕುಳ ಇರುವುದಿಲ್ಲ. ಸಾರ್ವಜನಿಕರು ಮತ್ತು ಚಾಲಕರ ಹಿತದೃಷ್ಟಿ ಕೇಂದ್ರೀಕರಿಸಿದ ಆ್ಯಪ್ ಇದಾಗಿದೆ' ಎಂದು ವಿವರಿಸಿದರು.

ಸ್ಮಾರ್ಟ್ ಕಾರ್ಡ್ ಜಿಲ್ಲಾವಾರು ಗುತ್ತಿಗೆ: 'ಶಕ್ತಿ' ಯೋಜನೆ ಅಡಿ ಮಹಿಳೆಯರಿಗೆ ಸ್ಮಾರ್ಟ್ ಕಾರ್ಡ್ ನೀಡಲು ಜಿಲ್ಲಾವಾರು ಟೆಂಡರ್ ಕರೆದು ಹಂಚಿಕೆ ಮಾಡುವ ಕಾರ್ಯ ಶೀಘ್ರದಲ್ಲೇ ನಡೆಯಲಿದೆ. ಈ ಯೋಜನೆ ಅಡಿ ಸಾರಿಗೆ ಸಂಸ್ಥೆಯ ಬಸ್‌ಗಳಲ್ಲಿ ಪ್ರತಿ ದಿನ ಸರಾಸರಿ 59.55 ಲಕ್ಷ ಮಂದಿ ಪ್ರಯಾಣಿಸುತ್ತಿದ್ದಾರೆ' ಎಂದು ರಾಮಲಿಂಗಾ ರೆಡ್ಡಿ ಹೇಳಿದರು.

ಸಾರಿಗೆ ಸಿಬ್ಬಂದಿಗೆ ಸಕಾಲಕ್ಕೆ ಸಂಬಳ

'ಸಾರಿಗೆ ಸಂಸ್ಥೆಯ ಎಲ್ಲ ನಿಗಮಗಳ ಸಿಬ್ಬಂದಿಗೆ ಸಕಾಲಕ್ಕೆ ವೇತನ ಪಾವತಿಸಲಾಗುತ್ತಿದೆ' ಎಂದು ಸಚಿವ ರಾಮಲಿಂಗಾರೆಡ್ಡಿ ಸ್ಪಷ್ಟಪಡಿಸಿದರು.

ಈ ಬಗ್ಗೆ ದಾಖಲೆಗಳನ್ನು ಬಿಡುಗಡೆ ಮಾಡಿದ ಅವರು, 'ಶಾಸಕ ಬಸವರಾಜ ಬೊಮ್ಮಾಯಿ ಸುಳ್ಳು ಹೇಳುತ್ತಿದ್ದಾರೆ. ಕೆಎಸ್‌ಆರ್‌ಟಿಸಿ ಸಿಬ್ಬಂದಿಗಳಿಗೆ ಪ್ರತಿ ತಿಂಗಳು 1ನೇ ತಾರೀಕಿಗೆ, ಬಿಎಂಟಿಸಿ ಸಿಬ್ಬಂದಿಗಳಿಗೆ ಪ್ರತಿ ತಿಂಗಳು 7ನೇ ತಾರೀಕಿಗೆ, ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಹಾಗೂ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಮಗದ ಸಿಬ್ಬಂದಿಗಳಿಗೆ ಪ್ರತಿ ತಿಂಗಳ 17ನೇ ತಾರೀಕಿಗೆ ವೇತನ ಪಾವತಿಸಲಾಗುತ್ತಿದೆ' ಎಂದು ಅಂಕಿ-ಅಂಶ ಸಮೇತ ಮಾಹಿತಿ ನೀಡಿದರು.

ಬಿಜೆಪಿ ಮುಖಂಡರಿಗೆ 'ವರ್ಣ ಅಂಧತ್ವ'

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿರುವ ಶಾಸಕ ಆರಗ ಜ್ಞಾನೇಂದ್ರ ವರ್ತನೆಗೆ ಆಕ್ರೋಶ ವ್ಯಕ್ತಪಡಿಸಿದ ಸಚಿವ ರಾಮಲಿಂಗಾರೆಡ್ಡಿ, 'ನಾಗಪುರ ಪಾಠಶಾಲೆಯಲ್ಲಿ ವಿಷವಲ್ಲದೆ ಮತ್ತೇನು ಉತ್ಪಾದನೆಯಾಗಲು ಸಾಧ್ಯ' ಎಂದು ವಾಗ್ದಾಳಿ ನಡೆಸಿದರು.

'ಕೇಶವ ಕೃಪಾದಲ್ಲಿ ಇದನ್ನೇ ಬೋಧಿಸಲಾಗುತ್ತಿದೆಯೇ? ಆರ್‌ಎಸ್‌ಎಸ್ ಪಾಠಶಾಲೆಯಲ್ಲಿ ಇದನ್ನೇ ಕಲಿಸಲಾಗುತ್ತಿದೆಯೇ? ಬಿಜೆಪಿ ಮುಖಂಡರಿಗೆ ವರ್ಣ ಅಂಧತ್ವ' ರೋಗವಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಲೋಕಸಭೆ ಚುನಾವಣೆ ದಿನಾಂಕ ಘೋಷಣೆಗೂ ಮೊದಲೇ ಅಭ್ಯರ್ಥಿಗಳನ್ನು ಘೋಷಿಸಬೇಕು ಮತ್ತು ವಿವಿಧ ನಿಗಮ, ಮಂಡಳಿಗಳಿಗೆ ಅಧ್ಯಕ್ಷರನ್ನು ನೇಮಿಸಬೇಕು ಎಂದು ವರಿಷ್ಠರಲ್ಲಿ ಮನವಿ ಮಾಡಲಾಗಿದೆ' ಎಂದು ತಿಳಿಸಿದರು.

'ಜತೆಗೆ, ನಾನು ಸೇರಿದಂತೆ ಕೆಪಿಸಿಸಿ ಕಾರ್ಯಾಧ್ಯಕ್ಷರಾದವರು ಸಚಿವ ಸಂಪುಟದಲ್ಲಿ ಸ್ಥಾನ ಪಡೆದಿದ್ದಾರೆ. ಕೆಲವು ಜಿಲ್ಲಾಧ್ಯಕ್ಷರು ಶಾಸಕರಾಗಿ ಆಯ್ಕೆಯಾಗಿದ್ದಾರೆ. ಅಂತವರನ್ನು ಕೈಬಿಟ್ಟು ಹೊಸದಾಗಿ ಕೆಪಿಸಿಸಿ ಪುನರ್ ರಚಿಸುವಂತೆ ಮನವಿ ಮಾಡಲಾಗಿದೆ. ಶೀಘ್ರದಲ್ಲೇ ಜಿಲ್ಲಾ, ತಾಲ್ಲೂಕು ಘಟಕಗಳ ಕಾಂಗ್ರೆಸ್ ಪದಾಧಿಕಾರಿಗಳ ಬದಲಾವಣೆಯಾಗಲಿದೆ' ಎಂದರು.

ಒತ್ತುವರಿ ತೆರವು: ಸೋಮವಾರ ಉನ್ನತಮಟ್ಟದ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಜಮೀನು ಒತ್ತುವರಿ ತೆರವು ಚುರುಕುಗೊಳಿಸಲು ಸೋಮವಾರ ಉನ್ನತಮಟ್ಟದ ಸಭೆ ನಡೆಸಲಾಗುವುದು. ಜಿಲ್ಲಾಧಿಕಾರಿಗಳಿಗೆ ಪ್ರತಿ ತಿಂಗಳಿಗೂ ಗುರಿ ನಿಗದಿಪಡಿಸಲಾಗುವುದು ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಸರ್ಕಾರಿ ಜಮೀನುಗಳ ಒತ್ತುವರಿಗೆ ಸಂಬಂಧಿಸಿದಂತೆ ಎ.ಟಿ. ರಾಮಸ್ವಾಮಿ ನೇತೃತ್ವದ ಜಂಟಿ ಸದನ ಸಮಿತಿ, ನಿವೃತ್ತ ಐಎಎಸ್ ಅಧಿಕಾರಿ ವಿ. ಬಾಲಸುಬ್ರಮಣಿಯನ್ ನೇತೃತ್ವದ ಕಾರ್ಯಪಡೆ ಸಲ್ಲಿಸಿದ ವರದಿಗಳ ಆಧಾರದಲ್ಲಿ ಒತ್ತುವರಿ ತೆರವು ತ್ವರಿತಗೊಳಿಸಲಾಗುವುದು' ಎಂದರು.

ಜಿಲ್ಲೆ, ವಿಭಾಗೀಯ ಮಟ್ಟದಲ್ಲಿ ಸಭೆ ನಡೆಸಿ, ಒತ್ತುವರಿ ತೆರವು ಕಾರ್ಯಾಚರಣೆ ಪ್ರಗತಿ ಪರಿಶೀಲನೆ ನಡೆಸಲಾಗುವುದು. ವಶಕ್ಕೆ ಪಡೆದ ಜಮೀನುಗಳ ರಕ್ಷಣೆಯ ಹೊಣೆಗಾರಿಕೆಯನ್ನು ಆಯಾ ವೃತ್ತದ ಕಂದಾಯ ನಿರೀಕ್ಷಕರಿಗೆ ವಹಿಸಲಾಗುವುದು. ಆ ಜಮೀನುಗಳು ಮತ್ತೆ ಒತ್ತುವರಿಯಾದರೆ ಕಂದಾಯ ನಿರೀಕ್ಷಕರನ್ನೇ ಹೊಣೆ ಮಾಡಲಾಗುವುದು ಎಂದು ಹೇಳಿದರು.

ಗುತ್ತಿಗೆ ನಿರ್ಧಾರ ಬದಲಾವಣೆ ಇಲ್ಲ: ಕೊಡಗು, ಹಾಸನ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಕಾಫಿ ಬೆಳೆಗಾರರ ಸ್ವಾಧೀನದಲ್ಲಿರುವ ಸರ್ಕಾರಿ ಜಮೀನುಗಳನ್ನು ಅವರಿಗೆ ದೀರ್ಘಾವಧಿಗೆ ಗುತ್ತಿಗೆಗೆ ನೀಡುವ ಹಿಂದಿನ ಸರ್ಕಾರದ ನಿರ್ಧಾರವನ್ನು ತಮ್ಮ ಸರ್ಕಾರ ಜಾರಿಗೆ ತರಲಿದೆ. ಈ ವಿಚಾರದಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದರು.

ಬಿಜೆಪಿ ಸರ್ಕಾರ ಮಸೂದೆ ಮಂಡಿಸಿ, ಅಂಗೀಕಾರ ಪಡೆಯುವ ಕೆಲಸವನ್ನು ಮಾತ್ರ ಮಾಡಿದೆ. ಕಾಯ್ದೆಗೆ ನಿಯಮಗಳನ್ನು ರೂಪಿಸುವ ಕೆಲಸ ಬಾಕಿ ಇದೆ. ಈ ಪ್ರಕ್ರಿಯೆ ತಿಂಗಳೊಳಗೆ ಪೂರ್ಣಗೊಳ್ಳಲಿದೆ. ಆ ಬಳಿಕ ಅರ್ಹ ರೈತರಿಗೆ ಜಮೀನನ್ನು ಗುತ್ತಿಗೆಗೆ ನೀಡಲಾಗುವುದು. ಹಿಂದಿನ ಸರ್ಕಾರದ ಅವಧಿಯ ಕೊನೆಯ ದಿನಗಳಲ್ಲಿ ವಿವಿಧ ಸಂಘ, ಸಂಸ್ಥೆಗಳಿಗೆ ಸರ್ಕಾರಿ ಜಮೀನು ಮಂಜೂರು ಮಾಡಿರುವ ಕುರಿತು ವರದಿ ಸಲ್ಲಿಸಲು ಸೂಚಿಸಲಾಗಿದೆ. ನಿಯಮ ಪಾಲನೆ ಆಗಿರುವ ಪ್ರಕರಣಗಳಲ್ಲಿ ಯಾವುದೇ ಕ್ರಮ ಕೈಗೊಳ್ಳುವುದಿಲ್ಲ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ನೂಹ್ ಘರ್ಷಣೆ: ವರದಿಗೆ ಎನ್‌ಸಿಎಂ ಸೂಚನೆ

ನವದೆಹಲಿ (ಪಿಟಿಐ): ಹರಿಯಾಣದ ನೂಹ್ ಜಿಲ್ಲೆಯಲ್ಲಿ ನಡೆದ ಕೋಮುಗಲಭೆಗೆ ಸಂಬಂಧಿಸಿದಂತೆ ರಾಷ್ಟ್ರೀಯ ಅಲ್ಪಸಂಖ್ಯಾತರ ಆಯೋಗ (ಎನ್‌ಸಿಎಂ) ಜಿಲ್ಲಾ ಮ್ಯಾಜಿಸ್ಟ್ರೇಟ್ ಮತ್ತು ಪೊಲೀಸ್ ವರಿಷ್ಠಾಧಿಕಾರಿ ಅವರಿಂದ ವಿವರವಾದ ವರದಿ ಕೇಳಿದೆ.

ಗಲಭೆಯಲ್ಲಿ ಗೃಹ ರಕ್ಷಕ ದಳದ ಇಬ್ಬರು, ಧರ್ಮಗುರು ಸೇರಿ ಆರು ಮಂದಿ ಮೃತಪಟ್ಟಿದ್ದಾರೆ. ಕೋಮು ಹಿಂಸಾಚಾರಕ್ಕೆ ಸಂಬಂಧಿಸಿದಂತೆ ಮಾಧ್ಯಮ ವರದಿಗಳನ್ನು ಎನ್‌ಸಿಎಂ ಸ್ವಯಂ-ಪ್ರೇರಿತವಾಗಿ ಪರಿಗಣಿಸಿದೆ. ಶಾಂತಿ, ಸೌಹಾರ್ದತೆ ಕಾಪಾಡುವಂತೆ ಮನವಿ ಮಾಡಲಾಗಿದೆ ಎಂದು ಆಯೋಗದ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಸಚಿವಾಲಯ ನೌಕರರ ಸಂಘ: ರಮೇಶ್ ಸಂಗಾ ಅಧ್ಯಕ್ಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಸರ್ಕಾರ ಸಚಿವಾಲಯ ನೌಕರರ ಸಂಘದ ಅಧ್ಯಕ್ಷರಾಗಿ ರಮೇಶ್ ಸಂಗಾ ಆಯ್ಕೆಯಾಗಿದ್ದಾರೆ.

ನಗರದಲ್ಲಿ ಶುಕ್ರವಾರ ನಡೆದ ಪದಾಧಿಕಾರಿಗಳ ಚುನಾವಣೆ ಯಲ್ಲಿ ರಮೇಶ್ ಸಂಗಾ ಅವಿರೋಧವಾಗಿ ಆಯ್ಕೆಯಾದರು ಎಂದು ಚುನಾವಣಾಧಿಕಾರಿ ಸೋಮಶೇಖರಯ್ಯ ಮಾಹಿತಿ ನೀಡಿದ್ದಾರೆ.

ಎ.ಎಸ್.ಹರ್ಷ (ಉಪಾಧ್ಯಕ್ಷ), ಎಸ್.ಅಭಿಜಿತ್ (ಪ್ರಧಾನ ಕಾರ್ಯದರ್ಶಿ), ಆರ್.ಚೇತನ್, ಡಿ.ಸಿದ್ದರಾಜು (ಜಂಟಿ ಕಾರ್ಯದರ್ಶಿ), ಟಿ.ಚಂದನ್, ಎಂ.ನಾರಾಯಣ (ಸಂಘಟನಾ ಕಾರ್ಯದರ್ಶಿ), ಟಿ.ಎನ್. ರಮೇಶ್ (ಖಜಾಂಚಿ), ಅಮೃತಾ (ಆಂತರಿಕ ಲೆಕ್ಕ ಪರಿ ಶೋಧಕರು), ಗುರುಲಿಂಗಪ್ಪ ಬಿರಾದಾರ್ (ಕ್ರೀಡಾ ಕಾರ್ಯದರ್ಶಿ), ಅಂಬಣ್ಣ ಜಿ. ಮಹಾಗಾಂವಕರ್ (ಸಾಂಸ್ಕೃತಿಕ ಕಾರ್ಯದರ್ಶಿ) ಆಯ್ಕೆಯಾದ ಪದಾಧಿಕಾರಿಗಳು.

ರಮೇಶ್ ಸಂಗಾ

ಅಧ್ಯಕ್ಷರು, ಪದಾಧಿಕಾರಿಗಳ ಆಯ್ಕೆಗೆ ನಡೆದ ಚುನಾವಣೆಯನ್ನು ಕಾರ್ಯಕಾರಿ ಸಮಿತಿ ಸದಸ್ಯ ಲಕ್ಷ್ಮಣ್, ಹೇಮಂತ್ ನಾಯಕ್, ನಿಂಗೇಗೌಡ, ಗುರುಸ್ವಾಮಿ, ಶಶಿಕುಮಾರ್, ಭಾರತ ದುಬೆ ಬಹಿಷ್ಕರಿಸಿದ್ದರು.

ದಲಿತರ ಅನುದಾನ ಬಳಕೆಗೆ ವಿರೋಧ

ಬೆಂಗಳೂರು: ಗ್ಯಾರಂಟಿ ಜಾರಿಗೆ ಎಸ್‌ಸಿಎಸ್‌ಪಿ–ಟಿಎಸ್‌ಪಿ ಅನುದಾನದ ₹11 ಸಾವಿರ ಕೋಟಿ ಬಳಕೆ ಮಾಡುವ ತೀರ್ಮಾನವನ್ನು ಸರ್ಕಾರ ಹಿಂಪಡೆಯಬೇಕು ಎಂದು ಬಿಎಸ್‌ಪಿ ಆಗ್ರಹಿಸಿದೆ. ಈ ನಿರ್ಧಾರದ ಮೂಲಕ ಸರ್ಕಾರ ದಲಿತ ವಿರೋಧಿ ನೀತಿ ಅನುಸರಿಸಿದೆ' ಎಂದು ಪಕ್ಷದ ರಾಜ್ಯಾಧ್ಯಕ್ಷ ಮಾರಸಂದ್ರ ಮುನಿಯಪ್ಪ ದೂರಿದರು.

ಪಿಟಿಸಿಎಲ್ ಕಾಯ್ದೆ ಸಮಗ್ರ ತಿದ್ದುಪಡಿಗೆ ಆರ್‌ಪಿಐ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪಿಟಿಸಿಎಲ್ ಕಾಯ್ದೆಯನ್ನು ಸಮಗ್ರವಾಗಿ ತಿದ್ದುಪಡಿಗೊಳಿಸಬೇಕು ಎಂದು ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ (ಅಠವಳೆ) ಆಗ್ರಹಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಆರ್‌ಪಿಐ ರಾಜ್ಯಾಧ್ಯಕ್ಷ ಸತೀಶ್, 'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 2023–24ನೇ ಸಾಲಿನ ಬಜೆಟ್‌ನಲ್ಲಿ ಪಿಟಿಸಿಎಲ್ ಕಾಯ್ದೆ ತಿದ್ದುಪಡಿ ಮಾಡುವ ಮಸೂದೆಯನ್ನು ಅಂಗೀಕರಿಸಿದ್ದಾರೆ. ಆದರೆ, ಕಾಯ್ದೆಯನ್ನು ಕಾಲಮಿತಿ ವಿಷಯಕ್ಕಷ್ಟೇ ಸೀಮಿತಗೊಳಿಸಿ ಸಮಗ್ರ ತಿದ್ದುಪಡಿ ಮಾಡುವುದನ್ನು ಮರೆಮಾಚಿದ್ದಾರೆ. ಪಿಟಿಸಿಎಲ್ ಕಾಯ್ದೆಯ ಸಮಗ್ರ ತಿದ್ದುಪಡಿಯಾದರೇ ಮಾತ್ರ ದಲಿತರ ಭೂಮಿಯ ಹಕ್ಕನ್ನು ರಕ್ಷಿಸಲು ಸಾಧ್ಯ. ಆದ್ದರಿಂದ, ಆ ಕಾಯ್ದೆಯ ಸಮಗ್ರ ತಿದ್ದುಪಡಿಗಾಗಿ ಹಂತ–ಹಂತವಾಗಿ ಹೋರಾಟ ಮಾಡಲಾಗುವುದು' ಎಂದು ಹೇಳಿದರು.

'ಸರ್ಕಾರದ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಲು ಎಸ್‌ಸಿಎಸ್‌ಪಿ–ಟಿಎಸ್‌ಪಿ ಅನುದಾನದ ₹11 ಸಾವಿರ ಕೋಟಿ ಬಳಕೆ ಮಾಡುವ ತೀರ್ಮಾನವನ್ನು ಕೂಡಲೇ ಹಿಂಪಡೆಬೇಕು. ಈ ಹಣವನ್ನು ಪರಿಶಿಷ್ಟರ ಅಭಿವೃದ್ಧಿಗೆ ಮಾತ್ರ ವಿನಿಯೋಗಿಸುವಂತೆ ಕಾಂಗ್ರೆಸ್‌ನ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಮನವಿ ಸಲ್ಲಿಸಲಾಗುವುದು' ಎಂದು ತಿಳಿಸಿದರು.

ಕಾರ್ಯಕಾರಿ ಸಮಿತಿ ರಚನೆ

ಬೆಂಗಳೂರು: ಆಚಾರ್ಯ ಪಾಠಶಾಲಾ ಎಜುಕೇಷನಲ್ ಟ್ರಸ್ಟ್‌ಗೆ ನೂತನ ಕಾರ್ಯಕಾರಿ ಸಮಿತಿ ರಚನೆಯಾಗಿದ್ದು, ಅಧ್ಯಕ್ಷರಾಗಿ ವಿಷ್ಣು ಭರತ್ ಎ.ಎಸ್. ಚುನಾಯಿತರಾಗಿದ್ದಾರೆ.

ಉಪಾಧ್ಯಕ್ಷರಾಗಿ ಎಸ್.ಸಿ. ಶರ್ಮಾ, ಆರ್.ವಿ. ವಿಜಯ್ ಭಾಸ್ಕರ್, ಖಜಾಂಚಿಯಾಗಿ ಅಖಿಲೇಶ್ ಬಾಬು ಕೆ.ಎಸ್., ಪ್ರಧಾನ ಕಾರ್ಯದರ್ಶಿಯಾಗಿ ಎ. ಪ್ರಕಾಶ್, ಜಂಟಿ ಕಾರ್ಯದರ್ಶಿಯಾಗಿ ಕೃಷ್ಣಸ್ವಾಮಿ ಪಿ. ಹಾಗೂ ಎ.ಆರ್. ಮಂಜುನಾಥ್ ಚುನಾಯಿತರಾಗಿದ್ದಾರೆ. 2026ರವರೆಗೆ ಈ ಕಾರ್ಯಕಾರಿ ಸಮಿತಿ ಕಾರ್ಯನಿರ್ವಹಿಸಲಿದೆ ಎಂದು ಪ್ರಕಟಣೆ ತಿಳಿಸಿದೆ.

ಉಚಿತ ಬಂಜೆತನ ತಪಾಸಣಾ ಶಿಬಿರ

ಬೆಂಗಳೂರು: ಗರ್ಭಗುಡಿ ಐವಿಎಫ್ ಕೇಂದ್ರವು ಎಲೆಕ್ಟ್ರಾನಿಕ್ ಸಿಟಿಯ ದೊಡ್ಡತೋಗೂರಿನ ಶ್ರೀ ಲಕ್ಷ್ಮಿ ಆಸ್ಪತ್ರೆಯಲ್ಲಿ ಭಾನುವಾರ ಬೆಳಿಗ್ಗೆ 10ರಿಂದ ಮಧ್ಯಾಹ್ನ 2ರ ವರೆಗೆ ಉಚಿತ ತಪಾಸಣೆ ಶಿಬಿರ ಹಮ್ಮಿಕೊಂಡಿದೆ. ಕೌಟುಂಬಿಕ ಜೀವನದಲ್ಲಿ ಸಾಫಲ್ಯ ಕಾಣಲು ಸವಾಲುಗಳನ್ನು ಎದುರಿಸುತ್ತಿರುವ ದಂಪತಿಗೆ ಭರವಸೆ, ಬೆಂಬಲ ನೀಡಲು ಈ ಶಿಬಿರವನ್ನು ಆಯೋಜಿಸಲಾಗುತ್ತಿದೆ. ಸಂತಾನೋತ್ಪತ್ತಿ ಆರೋಗ್ಯದ ಬಗ್ಗೆ ಸೂಕ್ತ ನಿರ್ಧಾರಗಳನ್ನು ತೆಗೆದುಕೊಳ್ಳಲು ಶಿಬಿರದಲ್ಲಿ ಸಹಾಯ ಮಾಡಲಾಗುತ್ತದೆ ಎಂದು ಕೇಂದ್ರದ ವೈದ್ಯಕೀಯ ನಿರ್ದೇಶಕಿ ಡಾ.ಆಶಾ ವಿಜಯ್ ತಿಳಿಸಿದ್ದಾರೆ. ಸಂಪರ್ಕಕ್ಕೆ: 83101 35542 ಅಥವಾ 81051 81515

IN THE COURT OF THE PRINCIPAL SENIOR CIVIL JUDGE AND JMFC. ANEKAL

O.S. No.533/2019

Between
Smt. Akkayamma Rep by her SPA holders ....Plaintiff
And:
Smt. Chinnamma & others ...Defendants

SUMMONS TO DEFENDANT NO.21, 22, 25 & 26 UNDER ORDER 5 RULE 20(2) OF CPC

21. Smt. S.B.Nethravathi W/o Ramegowda, Aged about 46 years, R/at: Marle Hosahalli Village, Chikkamagalor Taluk & District.
22. Sri. Chandrashekar @ Chandrashekar Reddy S/o Chikkappaiah, Aged about 40 years, R/at:Dwarasandra Village, Kallur Post, Srinivasapura Taluk, Kolar District.
25. Smt. Nanjamma, W/o Late Kittappa, Aged about 83 years, R/at: No.33, 3rd Cross, Lakkasandra, Bangalore-30.
26. Smt. D. Vijaya, W/o D.V. Krishna, Aged about 67 years, R/at: No.7, 4th Cross, Further Layout, Viveknagar Post, Bangalore-47.

Whereas the plaintiff has filed the above suit for the relief of partition and for other reliefs in respect of the immovable property bearing Sy no.94/4, measuring 19 guntas, Sy No.137/1, measuring 11 guntas, Sy No.100/1 measuring 15 guntas, Sy No.152/3 measuring 36 guntas, Sy No.141/3, measuring 31 guntas, Sy No.170/3 measuring 12 guntas, Sy No.183/1 measuring 1 acre 39 guntas, Sy No.188/2 measuring 1 acre 34 guntas and Sy No.193/4 measuring 34 guntas all are situated at Kudlu vilage, Sarjapura Hobli, Anekal Taluk, Bangaloe District.

The defendant No.21, 22 25 & 26 are hereby summoned to appear before the Hon'ble Prl. Senior Civil Judge & JMFC, Anekal on **04.09.2023 at 11.00 AM** either in person or through Pleader in support of their case. Take notice that in case of default the suit will be heard and decided ex-parte/absent.

Given under my hand and seal of this Court, on this 13th of July 2023 at Anekal.

By Order of the Court,
Chief Ministerial Office
Senior Civil Judge & JMPC Court, Anekal

Advocate for Plaintiff.
Smt. Bhagya,
Venkateshaiah Layout,
Near St. Philomina School,
Anekal Road. Chandapura.

ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ

ಎಸ್.ಎನ್. ಕಾಂಪ್ಲೆಕ್ಸ್, ಮೊದಲನೇ ಮಹಡಿ, ನಗರ ಪೊಲೀಸ್ ಠಾಣೆ ಎದುರು, 'ಡಿ' ಕ್ರಾಸ್, ದೊಡ್ಡಬಳ್ಳಾಪುರ–561203. ದೂರವಾಣಿ: 080–29562046

ಸಂಖ್ಯೆ: ಅನಧಿಕೃತ ಬಡಾವಣೆ/ಸಾರ್ವಜನಿಕ ಪ್ರಕಟಣೆ/01/2023–24 ದಿನಾಂಕ: 02.08.2023

ಸಾರ್ವಜನಿಕ ಪ್ರಕಟಣೆ

ವಿಷಯ: ದೊಡ್ಡಬಳ್ಳಾಪುರ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಅನಧಿಕೃತ ಬಡಾವಣೆಗಳಲ್ಲಿ ನಿವೇಶನ ಖರೀದಿಸಬಾರದೆಂದು ಸಾರ್ವಜನಿಕರಿಗೆ ನೀಡುತ್ತಿರುವ ಪ್ರಕಟಣೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 4 – (ಎ) (1) ರನ್ವಯ ಸರ್ಕಾರದ ಅಧಿಸೂಚನೆ–II ಸಂಖ್ಯೆ: ನಅಇ95ಬಿಎಂಆರ್2016 ದಿನಾಂಕ: 30–11–2017ರಲ್ಲಿ ದೊಡ್ಡಬಳ್ಳಾಪುರ ಸ್ಥಳೀಯ ಯೋಜನಾ ಪ್ರದೇಶವನ್ನು ಘೋಷಿಸಲಾಗಿರುತ್ತದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 4 (ಸಿ) (1)ರನ್ವಯ ಸರ್ಕಾರದ ಅಧಿಸೂಚನೆ ಸಂ: ನಅಇ95ಬಿಎಂಆರ್2016 ದಿನಾಂಕ: 20–03–2018 ರಲ್ಲಿ ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರವನ್ನು ರಚಿಸಲಾಗಿರುತ್ತದೆ.

ದೊಡ್ಡಬಳ್ಳಾಪುರ ತಾಲ್ಲೂಕಿನ ದೊಡ್ಡಬಳ್ಳಾಪುರ ನಗರವನ್ನು ಒಳಗೊಂಡಂತೆ, ಕಸಬಾ, ದೊಡ್ಡಬೆಳವಂಗಲ, ತೂಬಗೆರೆ, ಸಾಸಲು, ಮಧುರೆ ಹೋಬಳಿಗಳ ಒಟ್ಟು 265 ಗ್ರಾಮಗಳು ಮತ್ತು ಬೆಂಗಳೂರು ಉತ್ತರ (ಅಪರ) ತಾಲ್ಲೂಕಿನ [ಯಲಹಂಕ ತಾಲ್ಲೂಕು] ಹೆಸರಘಟ್ಟ ಹೋಬಳಿಯ 29 ಗ್ರಾಮಗಳು ಸೇರಿ ಒಟ್ಟು 294 ಗ್ರಾಮಗಳನ್ನು ಒಳಗೊಂಡಿದ್ದು, 772.77 ಚ.ಕಿ.ಮೀ. ವಿಸ್ತೀರ್ಣದ ವ್ಯಾಪ್ತಿಯ ಪ್ರದೇಶವನ್ನು ಹೊಂದಿರುತ್ತದೆ.

ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳು ಮತ್ತು ಸರ್ವೆ ನಂಬರುಗಳ ವಿವರ, ಅಧಿಸೂಚನೆಗಳು ಹಾಗೂ ಮಹಾಯೋಜನೆ ನಕ್ಷೆಗಳನ್ನು ಪ್ರಾಧಿಕಾರದ ಅಂತರ್ಜಾಲತಾಣ (ವೆಬ್‌ಸೈಟ್) **www.doddaballapur.tpa.gov.in** ರಲ್ಲಿ ಪರಿಶೀಲಿಸಬಹುದಾಗಿದೆ.

ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವ ಮುನ್ನ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14, 15 & 17 ರಂತೆ ಕ್ರಮವಾಗಿ ಭೂ ಉಪಯೋಗ ಬದಲಾವಣೆ, ಕಟ್ಟಡ ನಿರ್ಮಾಣ ಮಾಡಲು ಮತ್ತು ವಸತಿ/ವಸತಿಯೇತರ ವಿನ್ಯಾಸ ನಕ್ಷೆ ರಚಿಸಲು ಸಕ್ಷಮ ಪ್ರಾಧಿಕಾರವಾದ ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರದ ಪೂರ್ವಾನುಮತಿ ಪಡೆಯುವುದು ಕಡ್ಡಾಯವಾಗಿರುತ್ತದೆ. ಈ ರೀತಿ ಯೋಜನಾ ಪ್ರಾಧಿಕಾರದ ಅನುಮೋದನೆ ಇಲ್ಲದೆ ಇತರೆ ಯಾವುದಾದರೂ ಅನುಮೋದನೆ ಆಧಾರದ ಮೇಲೆ ಯಾವುದಾದರೂ ಅಭಿವೃದ್ಧಿಗಳನ್ನು ಕೈಗೊಂಡಿದ್ದರೆ ಅಂತಹ ಅಭಿವೃದ್ಧಿ ಕಾರ್ಯಗಳು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 76-M (2) (b) ರಂತೆ ಊರ್ಜಿತವಾಗುವುದಿಲ್ಲ.

ಈ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಅಭಿವೃದ್ಧಿಪಡಿಸಿರುವ ವಿನ್ಯಾಸಗಳಲ್ಲಿ ಸಾರ್ವಜನಿಕರು ನಿವೇಶನಗಳನ್ನು ಖರೀದಿಸುವ ಮೊದಲು ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರದಿಂದ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಅಡಿಯಲ್ಲಿ ವಸತಿ/ವಸತಿಯೇತರ ವಿನ್ಯಾಸ ನಕ್ಷೆಗೆ ಅನುಮೋದನೆ ಪಡೆದು, ನಿವೇಶನಗಳು ನೋಂದಣಿಗೆ ಬಿಡುಗಡೆಯಾಗಿರುವ ಹಾಗೂ ವಸತಿ/ವಸತಿಯೇತರ ಅಭಿವೃದ್ಧಿ ಯೋಜನಾ ನಕ್ಷೆಗೆ ಅನುಮೋದನೆ ಪಡೆದಿರುವ ಬಗ್ಗೆ ಖಚಿತಪಡಿಸಿಕೊಂಡ ನಂತರ ಖರೀದಿಸಲು ತಿಳಿಸಲಾಗಿದೆ.

ಈ ಕಛೇರಿಯಿಂದ ಅನುಮೋದನೆ ಪಡೆಯದೇ ಅನಧಿಕೃತವಾಗಿ ನಿರ್ಮಿಸಿರುವ ವಸತಿ/ವಸತಿಯೇತರ ವಿನ್ಯಾಸಗಳಲ್ಲಿನ ನಿವೇಶನಗಳು ಮತ್ತು ವಸತಿ/ವಸತಿಯೇತರ ಅಭಿವೃದ್ಧಿ ಯೋಜನಾ ನಕ್ಷೆಗಳಲ್ಲಿನ ಕಟ್ಟಡಗಳನ್ನು ಖರೀದಿಸಬಾರದೆಂದು ಈ ಮೂಲಕ ತಿಳಿಯಪಡಿಸಲಾಗಿದೆ. ಅನಧಿಕೃತ ವಸತಿ/ವಸತಿಯೇತರ ವಿನ್ಯಾಸಗಳಲ್ಲಿ ಖರೀದಿಸಿದಂತಹ ನಿವೇಶನಗಳಿಗೆ ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರದ ವತಿಯಿಂದ ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದಂತೆ ತಾಂತ್ರಿಕ ಅನುಮೋದನೆ / ಪ್ರಾರಂಭಿಕ ಪ್ರಮಾಣ ಪತ್ರಗಳನ್ನು ನೀಡಲಾಗುವುದಿಲ್ಲ. ಅಲ್ಲದೇ, ಪ್ರಾಧಿಕಾರದಿಂದ ಅನುಮೋದನೆಗೊಂಡಿರುವ ವಸತಿ/ವಸತಿಯೇತರ ವಿನ್ಯಾಸಗಳಲ್ಲಿ ಹಾಗೂ ವಸತಿ/ವಸತಿಯೇತರ ಅಭಿವೃದ್ಧಿ ಯೋಜನಾ ನಕ್ಷೆಗಳಲ್ಲಿನ ಕಟ್ಟಡಗಳಿಗೆ ಎಲ್ಲಾ ರೀತಿಯ ಮೂಲಭೂತ ಸೌಲಭ್ಯಗಳನ್ನು ಅಭಿವೃದ್ಧಿದಾರರೇ ಅಭಿವೃದ್ಧಿಪಡಿಸಿ ಸಾರ್ವಜನಿಕರಿಗೆ ಒದಗಿಸಬೇಕಾಗಿರುತ್ತದೆ ಹಾಗೂ ಸದರಿ ಮೂಲಭೂತ ಸೌಲಭ್ಯಗಳನ್ನು ಕಾಲಕಾಲಕ್ಕೆ ಸಂಬಂಧಿಸಿದ ಸ್ಥಳೀಯ ಸಂಸ್ಥೆಗಳಿಂದ ನಿರ್ವಹಿಸಲಾಗುತ್ತದೆ ಎಂಬ ಮಾಹಿತಿಯನ್ನು ಈ ಮೂಲಕ ಸಾರ್ವಜನಿಕರ ಗಮನಕ್ಕೆ ಪ್ರಾಧಿಕಾರವು ತರಬಯಸುತ್ತದೆ ಮತ್ತು ಅನಧಿಕೃತ ವಿನ್ಯಾಸಗಳಲ್ಲಿನ ನಿವೇಶನಗಳನ್ನು ಮತ್ತು ಅನಧಿಕೃತವಾಗಿ ನಿರ್ಮಿಸಲಾದ ವಸತಿ/ವಸತಿಯೇತರ ಅಭಿವೃದ್ಧಿ ಯೋಜನಾ ನಕ್ಷೆಗಳಲ್ಲಿನ ಕಟ್ಟಡಗಳನ್ನು ಖರೀದಿಸಬಾರದು ಮತ್ತು ಭೋಗ್ಯ / ಬಾಡಿಗೆ ಇತ್ಯಾದಿಗಳ ಮೂಲಕ ಸ್ವಾಧೀನಕ್ಕೆ ಪಡೆಯಬಾರದೆಂದು ಹಾಗೂ ಒಂದು ವೇಳೆ ಸಾರ್ವಜನಿಕರು ಖರೀದಿಸಿ ಮೋಸ ಹೋದಲ್ಲಿ ಇದರಿಂದ ಉಂಟಾಗುವ ನಷ್ಟ / ತೊಂದರೆಗಳಿಗೆ ಈ ಪ್ರಾಧಿಕಾರವು ಜವಾಬ್ದಾರಿಯಲ್ಲವೆಂದು ಸ್ಪಷ್ಟವಾಗಿ ತಿಳಿಯಪಡಿಸಲಾಗಿದೆ.

ದೊಡ್ಡಬಳ್ಳಾಪುರ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಭೂ ಮಾಲೀಕರು / ಅಭಿವೃದ್ಧಿದಾರರು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 17 ರಡಿಯಲ್ಲಿ ಈ ಪ್ರಾಧಿಕಾರದಿಂದ ಅನುಮೋದನೆ ಪಡೆಯದೇ ವಸತಿ/ವಸತಿಯೇತರ ವಿನ್ಯಾಸಗಳನ್ನು ಮತ್ತು ವಸತಿ/ವಸತಿಯೇತರ ಅಭಿವೃದ್ಧಿ ಯೋಜನಾ ನಕ್ಷೆಗಳಲ್ಲಿ ಕಟ್ಟಡಗಳನ್ನು ಅನಧಿಕೃತವಾಗಿ ಅಭಿವೃದ್ಧಿಪಡಿಸಿ ಸಾರ್ವಜನಿಕರಿಗೆ ಮಾರಾಟ ಮಾಡುವುದು ಕಂಡುಬಂದಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರಡಿಯಲ್ಲಿ ವಿನ್ಯಾಸದ ಮಾಲೀಕರು / ಅಭಿವೃದ್ಧಿದಾರರು / ಜಿಪಿಎದಾರರು/ ಜಮೀನಿನ ಮಾಲೀಕರ ಮೇಲೆ ಕಾನೂನಿನ ಪ್ರಕಾರ ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ಈ ಮೂಲಕ ತಿಳುವಳಿಕೆ ನೀಡಲಾಗಿದೆ.

ಸಹಿ/- ಜಂಟಿ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ ಸದಸ್ಯ ಕಾರ್ಯದರ್ಶಿಗಳು,
ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ, ದೊಡ್ಡಬಳ್ಳಾಪುರ.

ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ

ನಂ.16, 2ನೇ ರಾಜಭವನ ರಸ್ತೆ, ಬೆಂಗಳೂರು–01
PH: 080-22867369, E-mail: cgmksamb@gmail.com

ಸಂಖ್ಯೆ:ಕೃಮಾಮಂ/ಪ್ರೋ–ನಿಶೇ/ಟೆಂಡರ್/2782//AUCTION2/2023–24 ದಿನಾಂಕ: 03.08.2023

ಇ–ಟೆಂಡರ್–ಇ–ಹರಾಜು ಪ್ರಕಟಣೆ

ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಯ ರೂ.35.00 ಕೋಟಿಗಳನ್ನು (ರೂಪಾಯಿ ಮೂವತ್ತೈದು ಕೋಟಿಗಳು ಮಾತ್ರ) **e-procurement** ಮೂಲಕ ಒಂದು ವರ್ಷದ ಅವಧಿಗೆ ನಿಶ್ಚಿತ ಠೇವಣಿಯಲ್ಲಿ ತೊಡಗಿಸುವ ಕುರಿತು ಆಸಕ್ತ ರಾಷ್ಟ್ರೀಕೃತ ಬ್ಯಾಂಕುಗಳಿಂದ ಸ್ಪರ್ಧಾತ್ಮಕ ಇ–ಬಿಡ್ಡಿಂಗ್‌ನ್ನು ಆಹ್ವಾನಿಸಲಾಗಿದ್ದು, ಹೆಚ್ಚಿನ ಮಾಹಿತಿಯನ್ನು **www.kppp.karnataka.gov.in** ವೆಬ್‌ಸೈಟ್‌ನ ಇಂಡೆಂಟ್ **ಸಂಖ್ಯೆ:APMC/2023-24/AUCTION2** ರಲ್ಲಿ **ದಿ:09.08.2023** ರೊಳಗೆ ಪಡೆಯಬಹುದಾಗಿದೆ.

ಸಹಿ/–
ಮುಖ್ಯ ಪ್ರಧಾನ ವ್ಯವಸ್ಥಾಪಕರು
ಕ.ರಾ.ಕೃ.ಮಾ.ಮಂ., ಬೆಂಗಳೂರು.

ವಾ.ಸಾ.ಸಂ.ಇ/ವಾಪ್ರ/767/ಶಿರಡಿಸಾಯಿ/2023–24

ಕರ್ನಾಟಕ ಸರ್ಕಾರ

ಕಂದಾಯ ಇಲಾಖೆ

ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿಯವರ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ
1ನೇ ಮಹಡಿ, ಜಿಲ್ಲಾಡಳಿತ ಭವನ, ಬೀರಸಂದ್ರ ಗ್ರಾಮ, ಕುಂದಾಣ ಹೋಬಳಿ, ದೇವನಹಳ್ಳಿ ತಾಲ್ಲೂಕು
ಇ–ಮೇಲ್ : deo.bangalore3@gmail.com

ನಂ. ಎಂಎಸ್‌ಸಿ/ಕ್ಯೂಎಲ್/ಸಿಆರ್/01/2023–24 ದಿನಾಂಕ : 03.08.2023

ಸಾರ್ವಜನಿಕ ಪ್ರಕಟಣೆ

ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಎತ್ತಿನಹೊಳೆ ಯೋಜನೆಯಡಿಯ ಸಮತೋಲನಾ ಜಲಾಶಯದಿಂದ ನೀರನ್ನು ಎತ್ತಿ ಸಂಗ್ರಹಣ ತೊಟ್ಟಿ–05ರ (ಮಾಡೇಶ್ವರ ಗ್ರಾಮದ ಹತ್ತಿರ) ಕಾಮಗಾರಿಯಡಿಯಲ್ಲಿ ಬರುವ ಇಂಟೇಕ್ ಕಾಲುವೆ, ಅಕ್ವಡಕ್ಟ್ ಪಂಪ್ ಹೌಸ್, ಪೈಪ್‌ಲೈನ್, ಡಿ.ಸಿ. ಛೇಂಬರ್, ಟರ್ಮಿನಲ್‌ಬೇ ಹಾಗೂ 220 ಕೆ.ವಿ. ಸಬ್‌ಸ್ಟೇಶನ್ ಹಾಗೂ ಟ್ರಾನ್ಸ್‌ಮಿಷನ್ ಲೈನ್ ಕಾಮಗಾರಿಗೆ ಸಂಬಂಧಿಸಿದಂತೆ ಸಾಸಲು ಹೋಬಳಿಯ ಅಲಪ್ಪನಹಳ್ಳಿ, ಭಕ್ತರಹಳ್ಳಿ, ಅಡಕವಾಳ ಮತ್ತು ದೊಡ್ಡಬೆಳವಂಗಲ ಹೋಬಳಿಯ ಕಂಗಲಾಪುರ, ಶಂಕರಸನಹಳ್ಳಿ, ಚಿಕ್ಕಕಾಲೇನಹಳ್ಳಿ, ಲಿಂಗಪುರ, ಮಾಡೇಶ್ವರ ಗ್ರಾಮಗಳ ಮಾರ್ಗದಲ್ಲಿ ಹಾದು ಹೋಗುತ್ತಿದ್ದು, ಸದರಿ ಗ್ರಾಮಗಳ ಮಾರ್ಗದಲ್ಲಿ ಕಾಮಗಾರಿ ನಡೆಯುವ ಸಂದರ್ಭದಲ್ಲಿ ದೊರೆಯುವ ಕಲ್ಲು ಬಂಡೆಗಳನ್ನು ಕಂಟ್ರೋಲ್ ಬ್ಲಾಸ್ಟಿಂಗ್ ಮೂಲಕ ತೆಗೆಯಲು ನಿರಾಕ್ಷೇಪಣಾ ಪತ್ರ ನೀಡುವ ಬಗ್ಗೆ ಮೆ॥ ಶಂಕರ್ ನಾರಾಯಣ ಕನ್‌ಸ್ಟ್ರಕ್ಷನ್ ಕಂಪನಿ, 4ನೇ ಮಹಡಿ, ಸಂ.7, ರೆಸಿಡೆನ್ಸಿ ರಸ್ತೆ, ಬೆಂಗಳೂರು ರವರು ಈ ಕಾರ್ಯಾಲಯಕ್ಕೆ ಮನವಿ ಸಲ್ಲಿಸಿರುತ್ತಾರೆ. ಸಾರ್ವಜನಿಕ ಹಿತದೃಷ್ಟಿಯಿಂದ ಸ್ಫೋಟಕ ಕಾಯ್ದೆ 1884ರ ನಿಯಮ 2008 ರನ್ವಯ ಮತ್ತು ಉಪನಿಯಮ 101, 102, 103 ಮತ್ತು 113 ರಡಿಯಲ್ಲಿ ನಿರಾಕ್ಷೇಪಣೆ ಪತ್ರ ನೀಡುವ ಮುನ್ನ ಯಾವುದೇ ಹಿತಾಸಕ್ತಿಯನ್ನು ಹೊಂದಿರುವ ಯಾವುದೇ ಸಾರ್ವಜನಿಕರು ಅಥವಾ ಯಾವುದೇ ವ್ಯಕ್ತಿಯು ಈ ಸಾರ್ವಜನಿಕ ಪ್ರಕಟಣೆ ಹೊರಡಿಸಿದ ಏಳು ದಿನಗಳೊಗಾಗಿ ಅಂದರೆ **ದಿನಾಂಕ : 10.08.2023 ರಂದ ಸಂಜೆ 5.30** ಗಂಟೆಯೊಳಗಾಗಿ ಸದರಿ ಉದ್ದೇಶದ ಬಗ್ಗೆ ಆಕ್ಷೇಪಣೆಗಳಿದ್ದಲ್ಲಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿರವರ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಜಿಲ್ಲಾಡಳಿತ ಭವನ, ಬೀರಸಂದ್ರ ಗ್ರಾಮ, ದೇವನಹಳ್ಳಿ ತಾಲ್ಲೂಕು ರವರಿಗೆ ಲಿಖಿತವಾಗಿ ಅಥವಾ ಈ ಕಛೇರಿಯ ಇ–ಮೇಲ್ ವಿಳಾಸಕ್ಕೆ **deo.bangalore3@gmail.com** ಸಲ್ಲಿಸಬಹುದಾಗಿರುತ್ತದೆ.

ಸಹಿ/– ಜಿಲ್ಲಾಧಿಕಾರಿ
ಬೆಂಗಳೂರು ಗ್ರಾಮಂತರ ಜಿಲ್ಲೆ

ವಾ.ಸಾ.ಸಂ.ಇ/ವಾಪ್ರ/766/ಶಿರಡಿಸಾಯಿ/2023–24

ಸ್ವಾತಂತ್ರ್ಯದ ಅಮೃತ ಮಹೋತ್ಸವ

ಭಾರತ ಸರ್ಕಾರ
ಸಿಬ್ಬಂದಿ ನೇಮಕಾತಿ ಆಯೋಗ
ಬೆಂಗಳೂರು

ಸಿಬ್ಬಂದಿ ನೇಮಕಾತಿ ಆಯೋಗ (ಕರ್ನಾಟಕ ಕೇರಳ ಪ್ರದೇಶ, ಭಾರತ ಸರ್ಕಾರ), ಬೆಂಗಳೂರು

ದೆಹಲಿ ಪೊಲೀಸ್ ಮತ್ತು ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳ (CAPF)ಗಳಲ್ಲಿ ಸಬ್‌ಇನ್ಸ್‌ಪೆಕ್ಟರ್(SI) ನೇಮಕಾತಿಗಾಗಿ ಸ್ಪರ್ಧಾತ್ಮಕ ಪರೀಕ್ಷೆಯ ಪ್ರಕಟಣೆಯ ಪತ್ಯ – 2023

ಕೇಂದ್ರ ಸರ್ಕಾರದ ಸಿಬ್ಬಂದಿ ನೇಮಕಾತಿ ಆಯೋಗವು ದೆಹಲಿ ಪೊಲೀಸ್ ಮತ್ತು ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳ ಸಬ್–ಇನ್ಸ್‌ಪೆಕ್ಟರ್ ಹುದ್ದೆಗಳ ನೇಮಕಾತಿಗಾಗಿ ಮುಕ್ತ ಸ್ಪರ್ಧಾತ್ಮಕ ಕಂಪ್ಯೂಟರ್ ಆಧಾರಿತ ಪರೀಕ್ಷೆಯನ್ನು ನಡೆಸುತ್ತಿದೆ. ಪರೀಕ್ಷೆಯು ನವೆಂಬರ್ 2023ರಲ್ಲಿ ನಡೆಯಲಿದೆ. ಪರೀಕ್ಷೆಯ ನಿಖರ ದಿನಾಂಕವನ್ನು ನಂತರ **SSC** ವೆಬ್‌ಸೈಟ್ ಮೂಲಕ ತಿಳಿಸಲಾಗುವುದು. ವಿವರಗಳು ವೆಬ್‌ಸೈಟ್: **www.ssckkr.kar.nic.in** ಮತ್ತು **https://ssc.nic.in** ನಲ್ಲಿ ಲಭ್ಯವಿದೆ.

1.	ವೇತನ ಶ್ರೇಣಿ	ಲೆವೆಲ್ – 6 (ರೂ. 35,400– ರೂ. 1,12,400)
2.	ವಯೋಮಿತಿ	01–08–2023 ರಂತೆ ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ 20 ರಿಂದ 25 ವರ್ಷಗಳು: (OBC/SC/ST/ESM/ ಇತರ ನಿರ್ದಿಷ್ಟ ವರ್ಗಗಳಿಗೆ ವಯೋಮಿತಿ ಸಡಿಲಿಕೆಗಾಗಿ ಅಧಿಸೂಚನೆಯ ಪ್ಯಾರಾ– 5.2 ಅನ್ನು ನೋಡಿ.
3.	ವಿದ್ಯಾರ್ಹತೆ	ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಪದವಿ ಅಥವಾ ತತ್ಸಮಾನ ಮತ್ತು ಅನುಭವ.
4.	ನೇಮಕಾತಿ ವಿಧಾನ	ಕಂಪ್ಯೂಟರ್ ಆಧಾರಿತ ಪರೀಕ್ಷೆ ಮತ್ತು ದೈಹಿಕ ಪರೀಕ್ಷೆಯ ವಿವರಗಳಿಗಾಗಿ ದಯವಿಟ್ಟು ಪ್ಯಾರಾ –12 & 16 ಅನ್ನು ನೋಡಿ. ಗಮನಿಸಿ: NCC ಪ್ರಮಾಣ ಪತ್ರ ಹೊಂದಿರುವವರಿಗೆ ಹೆಚ್ಚುವರಿ ಅಂಕಗಳನ್ನು ನೀಡಲಾಗುವುದು.
5.	ಹುದ್ದೆಗಳ ಸಂಖ್ಯೆ	1876 (ಪುರುಷ – 1710 & ಮಹಿಳಾ – 166)
6.	ಪರೀಕ್ಷೆ ಕೇಂದ್ರಗಳು	ಬೆಂಗಳೂರು, ಬೆಳಗಾವಿ, ಹುಬ್ಬಳ್ಳಿ, ಕಲಬುರ್ಗಿ, ಮಂಗಳೂರು, ಮೈಸೂರು, ಶಿವಮೊಗ್ಗ, ಉಡುಪಿ, ತಿರುವನಂತಪುರಂ, ಕೊಲ್ಲಂ, ಕೊಟ್ಟಾಯಂ, ಕೋಜಿಕೋಡ್, ತ್ರಿಶೂರ್, ಕವರಟ್ಟಿ
7.	ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಲಿಂಕ್	https://ssc.nic.in (SSC ನೇಮಕಾತಿ ಪ್ರಕಟಣೆ ದಿನಾಂಕ: 22-07-2023)
8.	ಶುಲ್ಕ	ರೂ. 100/– (ಮಹಿಳೆ/ SC/ST/ EXS ವರ್ಗಗಳಿಗೆ ಯಾವುದೇ ಶುಲ್ಕವಿಲ್ಲ)
9.	ಆನ್‌ಲೈನ್ ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ	15–08–2023 (23.00 ಗಂಟೆಯವರೆಗೆ), (ಆನ್‌ಲೈನ್ ಅರ್ಜಿಗಳನ್ನು ಮಾತ್ರ ಸ್ವೀಕರಿಸಲಾಗುತ್ತದೆ.)
10.	ಸಹಾಯಕ್ಕಾಗಿ ಸಹಾಯವಾಣಿಗಳು	080–25502520 (ಸೋಮವಾರ ದಿಂದ–ಶುಕ್ರವಾರದವರೆಗೆ 10.00 ರಿಂದ 17.00 ಗಂಟೆಗಳವರೆಗೆ)
11.	ಅರ್ಜಿ ಸಲ್ಲಿಸುವುದು ಹೇಗೆ ಮತ್ತು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಲಿಂಕ್	SSC ಮುಖ್ಯ ಕಛೇರಿಯ ಅಧಿಕೃತ ವೆಬ್‌ಸೈಟ್ ಅಂದರೆ https://ssc.nc.in ನಲ್ಲಿ ಆನ್‌ಲೈನ್ ರೀತಿಯಲ್ಲಿ ಮಾತ್ರ ಅರ್ಜಿಗಳನ್ನು ಸಲ್ಲಿಸಬಹುದು. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ವಿವರವಾದ ಸೂಚನೆಗಳಿಗಾಗಿ, ಅಧಿಸೂಚನೆಯ ಅನುಬಂಧ–I ಮತ್ತು ಅನುಬಂಧ –II ಅನ್ನು ನೋಡಿ.

ಅಭ್ಯರ್ಥಿಗಳು ನಿಯಮಿತವಾಗಿ ಈ ವೆಬ್‌ಸೈಟ್‌ಗಳಿಗೆ ಭೇಟಿ ನೀಡಲು ಸೂಚಿಸಲಾಗಿದೆ: **SSC** ಮುಖ್ಯ ಕಛೇರಿ ನವದೆಹಲಿಯ ವೆಬ್‌ಸೈಟ್ **https://ssc.nic.in** ಮತ್ತು **SSC** ಕರ್ನಾಟಕ – ಕೇರಳ ಪ್ರದೇಶದ ವೆಬ್‌ಸೈಟ್ **www.ssckkr.kar.nic.in**

ಪ್ರಾದೇಶಿಕ ನಿರ್ದೇಶಕರು
ಎಸ್‌ಎಸ್‌ಸಿ (ಕೆಕೆಆರ್), ಬೆಂಗಳೂರು

CBC -32203/11/0004/2324

ಸ್ವಾತಂತ್ರ್ಯದ ಅಮೃತ ಮಹೋತ್ಸವ

ಭಾರತ ಸರ್ಕಾರ
ಸಿಬ್ಬಂದಿ ನೇಮಕಾತಿ ಆಯೋಗ (ಕರ್ನಾಟಕ, ಕೇರಳ ಪ್ರದೇಶ)
ಬೆಂಗಳೂರು

ಜೂನಿಯರ್ ಇಂಜಿನಿಯರ್ (ಸಿವಿಲ್, ಮೆಕ್ಯಾನಿಕಲ್, ಎಲೆಕ್ಟ್ರಿಕಲ್ ಮತ್ತು ಕ್ವಾಂಟಿಟಿ ಸರ್ವೇಯಿಂಗ್ & ಒಪ್ಪಂದಗಳು) ಪರೀಕ್ಷೆ–2023

ಕೇಂದ್ರ ಸರ್ಕಾರದ ಸಿಬ್ಬಂದಿ ನೇಮಕಾತಿ ಆಯೋಗವು ಮೇಲ್ಕಂಡ ಹುದ್ದೆಗಳ ನೇಮಕಾತಿಗಾಗಿ ಮುಕ್ತ ಸ್ಪರ್ಧಾತ್ಮಕ ಕಂಪ್ಯೂಟರ್ ಆಧಾರಿತ ಪರೀಕ್ಷೆಯನ್ನು ನಡೆಸುತ್ತಿದೆ. ಪರೀಕ್ಷೆಯು ಅಕ್ಟೋಬರ್ 2023ರಲ್ಲಿ ನಡೆಯಲಿದೆ. ಪರೀಕ್ಷೆಯ ನಿಖರ ದಿನಾಂಕವನ್ನು ನಂತರ **SSC** ವೆಬ್‌ಸೈಟ್ ಮೂಲಕ ತಿಳಿಸಲಾಗುವುದು. ವಿವರಗಳು ವೆಬ್‌ಸೈಟ್: **www.ssckkr.kar.nic.in** ಮತ್ತು **https://ssc.nic.in** ನಲ್ಲಿ ಲಭ್ಯವಿದೆ.

1.	ವೇತನ ಶ್ರೇಣಿ	ಲೆವೆಲ್ – 6 (ರೂ. 35,400– ರೂ. 1,12,400)
2.	ವಯೋಮಿತಿ	01–08–2023 ರಂತೆ ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ 30 ವರ್ಷ / JE- CPWD ಗಾಗಿ 32 ವರ್ಷಗಳು (OBC/SC/ST/ESM/ ಇತರ ನಿರ್ದಿಷ್ಟ ವರ್ಗಗಳಿಗೆ ವಯೋಮಿತಿ ಸಡಿಲಿಕೆಗಾಗಿ ಅಧಿಸೂಚನೆಯ ಪ್ಯಾರಾ– 7.2 ಅನ್ನು ನೋಡಿ.
3.	ವಿದ್ಯಾರ್ಹತೆ	ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಪದವಿ ಅಥವಾ ತತ್ಸಮಾನ ಮತ್ತು ಅನುಭವ. (ಅಧಿಸೂಚನೆಯ ಪ್ಯಾರಾ – '2' ನ್ನು ನೋಡಿ).
4.	ನೇಮಕಾತಿ ವಿಧಾನ	ಪೇಪರ್– 1: ಕಂಪ್ಯೂಟರ್ ಆಧಾರಿತ ಪರೀಕ್ಷೆ (i) ಜನರಲ್ ಇಂಟೆಲಿಜೆನ್ಸ್ ಮತ್ತು ರೀಸನಿಂಗ್ (ii) ಸಾಮಾನ್ಯ ಅರಿವು (iii) ಭಾಗ–ಎ: ಸಾಮಾನ್ಯ ಇಂಜಿನಿಯರಿಂಗ್ (ಸಿವಿಲ್ & ನಿರ್ಮಾಣ) ಅಥವಾ ಭಾಗ–ಬಿ: ಸಾಮಾನ್ಯ ಎಂಜಿನಿಯರಿಂಗ್ (ಎಲೆಕ್ಟ್ರಿಕಲ್) ಅಥವಾ ಭಾಗ–ಸಿ: ಸಾಮಾನ್ಯ ಎಂಜಿನಿಯರಿಂಗ್ (ಮೆಕ್ಯಾನಿಕಲ್). ಪೇಪರ್–II ಭಾಗ–ಎ: ಸಾಮಾನ್ಯ ಇಂಜಿನಿಯರಿಂಗ್ (ಸಿವಿಲ್ & ನಿರ್ಮಾಣ) ಅಥವಾ ಭಾಗ–ಬಿ : ಸಾಮಾನ್ಯ ಎಂಜಿನಿಯರಿಂಗ್ (ಎಲೆಕ್ಟ್ರಿಕಲ್) ಅಥವಾ ಭಾಗ–ಸಿ: ಸಾಮಾನ್ಯ ಎಂಜಿನಿಯರಿಂಗ್ (ಮೆಕ್ಯಾನಿಕಲ್)
5.	ಪರೀಕ್ಷೆ ಕೇಂದ್ರಗಳು	ಬೆಂಗಳೂರು, ಬೆಳಗಾವಿ, ಹುಬ್ಬಳ್ಳಿ, ಕಲಬುರ್ಗಿ, ಮಂಗಳೂರು, ಮೈಸೂರು, ಶಿವಮೊಗ್ಗ, ಉಡುಪಿ, ತಿರುವನಂತಪುರಂ, ಕೊಲ್ಲಂ, ಕೊಟ್ಟಾಯಂ, ಕೋಜಿಕೋಡ್, ತ್ರಿಶೂರ್, ಕವರಟ್ಟಿ
6.	ಹುದ್ದೆಗಳ ಸಂಖ್ಯೆ	1324 ಹುದ್ದೆಗಳು
7.	ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಲಿಂಕ್	https://ssc.nic.in (SSC ನೇಮಕಾತಿ ಪ್ರಕಟಣೆ ದಿನಾಂಕ: 26-07-2023)
8.	ಶುಲ್ಕ	ರೂ. 100/– (ಮಹಿಳೆ/ SC/ST/ EXS ವರ್ಗಗಳಿಗೆ ಯಾವುದೇ ಶುಲ್ಕವಿಲ್ಲ)
9.	ಆನ್‌ಲೈನ್ ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ	16–08–2023 (23.00 ಗಂಟೆಯವರೆಗೆ), (ಆನ್‌ಲೈನ್ ಅರ್ಜಿಗಳನ್ನು ಮಾತ್ರ ಸ್ವೀಕರಿಸಲಾಗುತ್ತದೆ)
10.	ಸಹಾಯಕ್ಕಾಗಿ ಸಹಾಯವಾಣಿಗಳು	080–25502520 (ಸೋಮವಾರ ದಿಂದ–ಶುಕ್ರವಾರದವರೆಗೆ 10.00 ರಿಂದ 17.00 ಗಂಟೆಗಳವರೆಗೆ)
11.	ಅರ್ಜಿ ಸಲ್ಲಿಸುವುದು ಹೇಗೆ ಮತ್ತು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಲಿಂಕ್	SSC ಮುಖ್ಯ ಕಛೇರಿಯ ಅಧಿಕೃತ ವೆಬ್‌ಸೈಟ್ ಅಂದರೆ https://ssc.nic.in ನಲ್ಲಿ ಆನ್‌ಲೈನ್ ರೀತಿಯಲ್ಲಿ ಮಾತ್ರ ಅರ್ಜಿಗಳನ್ನು ಸಲ್ಲಿಸಬಹುದು. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ವಿವರವಾದ ಸೂಚನೆಗಳಿಗಾಗಿ, ಅಧಿಸೂಚನೆಯ ಅನುಬಂಧ–I ಮತ್ತು ಅನುಬಂಧ –II ಅನ್ನು ನೋಡಿ.

ಅಭ್ಯರ್ಥಿಗಳು ನಿಯಮಿತವಾಗಿ ಈ ವೆಬ್‌ಸೈಟ್‌ಗಳಿಗೆ ಭೇಟಿ ನೀಡಲು ಸೂಚಿಸಲಾಗಿದೆ: **SSC** ಮುಖ್ಯ ಕಛೇರಿ ನವದೆಹಲಿಯ ವೆಬ್‌ಸೈಟ್ https://ssc.nic.in ಮತ್ತು SSC ಕರ್ನಾಟಕ – ಕೇರಳ ಪ್ರದೇಶದ ವೆಬ್‌ಸೈಟ್ www.ssckkr.kar.nic.in

ಪ್ರಾದೇಶಿಕ ನಿರ್ದೇಶಕರು
ಎಸ್‌ಎಸ್‌ಸಿ (ಕೆಕೆಆರ್), ಬೆಂಗಳೂರು

CBC -32203/11/0005/2324

ಲಾಲ್‌ಬಾಗ್‌ನಲ್ಲಿ ಆಯೋಜಿಸಿರುವ ಫಲಪುಷ್ಪ ಪ್ರದರ್ಶನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶುಕ್ರವಾರ ಉದ್ಘಾಟಿಸಿದರು. ತೋಟಗಾರಿಕೆ ಸಚಿವ ಎಸ್‌ಎಸ್ ಮಲ್ಲಿಕಾರ್ಜುನ್, ಶಾಸಕ ಉದಯ ಬಿ. ಗರುಡಾಚಾರ್, ವಿಧಾನಪರಿಷತ್ ಸದಸ್ಯರಾದ ಟಿ.ಎ. ಶರವಣ, ಎ. ದೇವೇಗೌಡ, ಯು.ಬಿ. ವೆಂಕಟೇಶ್, ತೋಟಗಾರಿಕೆ ಇಲಾಖೆ ನಿರ್ದೇಶಕ ಜಗದೀಶ್ ಇದ್ದರು (ಎಡ ಚಿತ್ರ). ಗಾಜಿನ ಮನೆಯ ಮುಂಭಾಗದಲ್ಲಿ ಫಲಪುಷ್ಪ ಪ್ರದರ್ಶನ ವೀಕ್ಷಿಸಲು ಕಾಯುತ್ತಿರುವ ಸಾರ್ವಜನಿಕರು

–ಪ್ರಜಾವಾಣಿ ಚಿತ್ರಗಳು/ ಎಂ.ಎಸ್. ಮಂಜುನಾಥ್

ಫಲಪುಷ್ಪ ಪ್ರದರ್ಶನಕ್ಕೆ ಚಾಲನೆ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ; 15ರವರೆಗೂ ಸಾರ್ವಜನಿಕರಿಗೆ ಮುಕ್ತ

ಲಾಲ್‌ಬಾಗ್‌ನಲ್ಲಿ ಪುಷ್ಪ ಲೋಕ ಅನಾವರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕದ ಶಕ್ತಿ ಕೇಂದ್ರ ವಿಧಾನಸೌಧ ನಿರ್ಮಾತೃ ಕೆಂಗಲ್ ಹನುಮಂತಯ್ಯ ಅವರ ಸ್ಮರಣಾರ್ಥ ಲಾಲ್‌ಬಾಗ್‌ನಲ್ಲಿ ಆಯೋಜಿಸಿರುವ ಸ್ವಾತಂತ್ರ್ಯೋತ್ಸವದ ಫಲಪುಷ್ಪ ಪ್ರದರ್ಶನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶುಕ್ರವಾರ ಸಂಜೆ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, 'ಲಾಲ್‌ಬಾಗ್ ಉದ್ಯಾನವು ಇಡೀ ವಿಶ್ವದಲ್ಲಿಯೇ ಪ್ರಸಿದ್ಧವಾಗಿದೆ. ಸುಮಾರು 240 ಎಕರೆ ವಿಸ್ತೀರ್ಣದಲ್ಲಿದ್ದು, ವಿವಿಧ ಜಾತಿಯ ಮರ–ಗಿಡಗಳಿವೆ ಹೊಂದಿದೆ. ಬ್ರಿಟಿಷರ ಕಾಲದಲ್ಲಿ 140 ಎಕರೆ ಪ್ರದೇಶ ದಲ್ಲಿದ್ದ ಉದ್ಯಾನವು ಕೆಂಗಲ್ ಹನುಮಂತಯ್ಯ ಅವರು 100 ಎಕರೆ ಪ್ರದೇಶವನ್ನು ಸ್ವಾಧೀನಪಡಿಸಿಕೊಂಡು, 240 ಎಕರೆಗೆ ವಿಸ್ತರಿಸಿದ್ದರು' ಎಂದು ತಿಳಿಸಿದರು.

ತೋಟಗಾರಿಕೆ ಇಲಾಖೆ ಆಯೋಜಿಸಿರುವ 214ನೇ ಫಲಪುಷ್ಪ ಪ್ರದರ್ಶನ ಇದಾಗಿದೆ. ಹಚ್ಚ ಹಸಿರಿನಿಂದ ಕಂಗೊಳಿಸುತ್ತಿರುವ ಸಸ್ಯಕಾಶಿ ಲಾಲ್‌ಬಾಗ್‌ನಲ್ಲಿ ಫಲಪುಷ್ಪ ಪ್ರದರ್ಶನ ಸಾರ್ವಜನಿಕರಿಗೆ ಮುಕ್ತವಾಗಿರ ಲಿದೆ. ಇದೇ 15ರವರೆಗೂ ಈ ಹೂವಿನ ಲೋಕವನ್ನು ಕಣ್ತುಂಬಿಕೊಳ್ಳಬಹುದು.

ಗಾಜಿನ ಮನೆಯ ಕೇಂದ್ರ ಭಾಗದಲ್ಲಿ ವಿಧಾನಸೌಧವು 7.2 ಲಕ್ಷ ವಿವಿಧ ತಳಿಯ ಪುಷ್ಪಗಳಲ್ಲಿ ಕಂಗೊಳಿಸುತ್ತಿದೆ. ಅದರ ಮುಂಭಾಗದಲ್ಲಿ ಕೆಂಗಲ್ ಹನುಮಂತಯ್ಯ ಅವರ 14 ಅಡಿ ಎತ್ತರದ ಪ್ರತಿಮೆಯು ನೋಡುಗರನ್ನು ಸೆಳೆಯುತ್ತಿದೆ. ಹಿಂಭಾಗದಲ್ಲಿ ಮೈಸೂರು ಕೇಂದ್ರ ಕಾರಾಗೃಹ, ಅದರ ಹಿಂಭಾಗದಲ್ಲಿ ಲಾಲ್‌ಬಾಗ್ ಪ್ರತಿಕೃತಿಯನ್ನು ಸೃಷ್ಟಿಸಲಾಗಿದೆ. ಗಾಜಿನ ಮನೆಯ ಕೇಂದ್ರ ಭಾಗದ ಬಲಬದಿಗೆ ಶಿವಪುರ ಧ್ವಜ ಸತ್ಯಾಗ್ರಹ ಸೌಧದ ಪುಷ್ಪ ಮಾದರಿಯನ್ನು 3.48 ಲಕ್ಷ ಸೇವಂತಿಗೆ ಹೂವುಗಳನ್ನು ನಿರ್ಮಿಸಲಾಗಿದೆ. ಎಡಭಾಗದಲ್ಲಿ ಕೆಂಗಲ್ ಹನುಮಂತಯ್ಯ ಅವರು ಮಂಡಿಸಿದ್ದ ರೈಲ್ವೆ ಬಜೆಟ್‌ನ ಸವಿನೆನಪಿಗಾಗಿ ರೈಲಿನ ಪ್ರತಿಕೃತಿಯು ಅನಾವರಣಗೊಳಿಸಲಾಗಿದೆ.

ದೋಸೆ ಸವಿದ ಸಿದ್ದರಾಮಯ್ಯ: ಲಾಲ್‌ಬಾಗ್ ಹತ್ತಿರವಿರುವ ಎಂಟಿಆರ್ ಹೋಟೆಲ್‌ನಲ್ಲಿ ಸಿದ್ದರಾಮಯ್ಯ ದೋಸೆ ಸವಿದರು. ತೋಟಗಾರಿಕೆ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್, ವಿಧಾನ ಪರಿಷತ್ ಸದಸ್ಯ ಯು.ಬಿ. ವೆಂಕಟೇಶ್, ಶಾಸಕ ಉದಯ್ ಬಿ. ಗರುಡಾಚಾರ್ ಮುಖ್ಯಮಂತ್ರಿ ರಾಜಕೀಯ ಸಲಹೆಗಾರ ಗೋವಿಂದರಾಜು ಇದ್ದರು.

ಸಾರ್ವಜನಿಕರಿಗೆ ನಿರಾಸೆ: 'ಫಲಪುಷ್ಪ ಪ್ರದರ್ಶನ ವೀಕ್ಷಿಸಲು ಲಾಲ್‌ಬಾಗ್‌ಗೆ ಬಂದಿದ್ದ ಸಾರ್ವಜನಿಕರಿಗೆ ನಿರಾಸೆಯಾಯಿತು. ಶುಕ್ರವಾರ ಅಧಿಕೃತವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಚಾಲನೆ ನೀಡುವುದಕ್ಕೆ ಮಾತ್ರ ಸೀಮಿತವಾಗಿತ್ತು. ಸಾರ್ವಜನಿಕರಿಗೆ ಶನಿವಾರದಿಂದ ಫಲಪುಷ್ಪ ಪ್ರದರ್ಶನ ಮುಕ್ತವಾಗಿರಲಿದೆ' ಎಂದು ತೋಟಗಾರಿಕೆ ಇಲಾಖೆ ಅಧಿಕಾರಿಗಳು ತಿಳಿಸಿದರು.

'ಪ್ರಜಾಪ್ರಭುತ್ವಕ್ಕೆ ಸಂದ ಜಯ'

'ಸುಪ್ರೀಂ ಕೋರ್ಟ್ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯುವ ಮೂಲಕ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ನ್ಯಾಯ ನೀಡಿದೆ. ಇದು ಪ್ರಜಾಪ್ರಭುತ್ವಕ್ಕೆ ಸಂದ ಜಯ' ಎಂದು ಸಿದ್ದರಾಮಯ್ಯ ಹೇಳಿದರು.

'ರಾಹುಲ್ ಗಾಂಧಿ ಅವರಿಗೆ ಸೂರತ್ ನ್ಯಾಯಾಲಯ ಶಿಕ್ಷೆಯನ್ನು ವಿಧಿಸಿ ತೀರ್ಪು ನೀಡಿತ್ತು. ಅದಕ್ಕೆ ಸುಪ್ರೀಂ ಕೋರ್ಟ್ ತಡೆಯಾಜ್ಞೆ ನೀಡಿದ್ದು, ಅವರ ಲೋಕಸಭೆಯ ಸದಸ್ಯತ್ವ ಮುಂದುವರಿಯುವ ರೀತಿಯಲ್ಲಿ ತೀರ್ಪು ಪ್ರಕಟಿಸಿದೆ. ಈ ತೀರ್ಪನ್ನು ನಾನು ಸ್ವಾಗತಿಸುತ್ತೇನೆ' ಎಂದರು.

'ತೀರ್ಥಹಳ್ಳಿಯಲ್ಲೇ ಅರಣ್ಯ ಉಳಿಸಿದ್ದೇನೆ'

ಪ್ರಜಾವಾಣಿ ವಾರ್ತೆ

ಈಶ್ವರ ಖಂಡ್ರೆ

ಬೆಂಗಳೂರು: 'ಕಲ್ಯಾಣ ಕರ್ನಾಟಕ ಭಾಗದವನಾದ ನನಗೆ ಅರಣ್ಯದ ಬಗ್ಗೆ ತಿಳಿದಿಲ್ಲ ಎಂದು ಬಿಜೆಪಿ ಶಾಸಕ ಆರಗ ಜ್ಞಾನೇಂದ್ರ ಹೇಳಿದ್ದಾರೆ. ಅವರ ಸ್ವಕ್ಷೇತ್ರ ತೀರ್ಥಹಳ್ಳಿಯಲ್ಲೇ ಅರಣ್ಯ ನಾಶ ತಡೆದಿದ್ದೇನೆ' ಎಂದು ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ತಿರುಗೇಟು ನೀಡಿದ್ದಾರೆ.

ಜ್ಞಾನೇಂದ್ರ ಟೀಕೆಗೆ ಪತ್ರಿಕಾ ಹೇಳಿಕೆ ಮೂಲಕ ಶುಕ್ರವಾರ ಪ್ರತಿಕ್ರಿಯಿಸಿರುವ ಅವರು, 'ನಾನು ಅರಣ್ಯ ಸಚಿವನಾದ ಬಳಿಕ ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರದ ಮೇಗರವಳ್ಳಿ ವಲಯ ಅರಣ್ಯ ಕಚೇರಿ ವ್ಯಾಪ್ತಿಯ ಕೊಕ್ಕೋಡು ಗ್ರಾಮದಲ್ಲಿ ಅರಣ್ಯ ನಾಶ ತಡೆದಿದ್ದೇನೆ. ಅದೇ ರೀತಿ ಸೊರಬ ತಾಲ್ಲೂಕಿನ ಮುಟಗುಪ್ಪೆ ಗ್ರಾಮದಲ್ಲೂ ಅರಣ್ಯ ರಕ್ಷಣೆಗೆ ಕ್ರಮ ಕೈಗೊಂಡಿದ್ದೇನೆ' ಎಂದಿದ್ದಾರೆ.

'ಕೊಕ್ಕೋಡು– ಶಿವಳ್ಳಿಯ ಸರ್ವೆ ನಂಬರ್ 80ರಲ್ಲಿ ಬೆಂಕಿಹಚ್ಚಿ ಅರಣ್ಯ ನಾಶ ಮಾಡಿ, ಕಂದಾಯ ಜಮೀನು ಎಂದು ಬಿಂಬಿಸಿ ಮಂಜೂರು ಮಾಡಿಸಿಕೊಳ್ಳುವ ಪ್ರಯತ್ನ ನಡೆದಿತ್ತು. ಇದನ್ನು ತಡೆಯಲಾಗಿದೆ. ಸೊರಬ ತಾಲ್ಲೂಕಿನ ಮುಟಗುಪ್ಪ ಗ್ರಾ.ಪಂ ವ್ಯಾಪ್ತಿಯ ಹರಳಿಗೆ ವ್ಯಾಪ್ತಿಯಲ್ಲೂ ಒತ್ತುವರಿದಾರರ ವಿರುದ್ಧ ಕ್ರಮ ಜರುಗಿಸಲಾಗುತ್ತಿದೆ' ಎಂದು ಮಾಹಿತಿ ನೀಡಿದ್ದಾರೆ.

ಅರಣ್ಯ ಮತ್ತು ವನ್ಯಜೀವಿಗಳ ರಕ್ಷಣೆಯೇ ಪ್ರಥಮ ಆದ್ಯತೆ. 1978ಕ್ಕಿಂತ ಮೊದಲು ಅರಣ್ಯದಲ್ಲಿ ನೆಲೆಸಿದ್ದು, ನಿಗದಿತ ಅವಧಿಯೊಳಗೆ ಅರ್ಜಿ ಸಲ್ಲಿಸಿರುವವರಿಗೆ ನ್ಯಾಯ ದೊರಕಿಸಲು ಮಾನವೀಯ ನೆಲೆಗಟ್ಟಿನಲ್ಲಿ ಕೆಲಸ ಮಾಡಲಾಗುತ್ತಿದೆ ಎಂದು ಹೇಳಿದ್ದಾರೆ.

ಕೇಂದ್ರದಿಂದ ಒತ್ತಡ: 'ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಕಸ್ತೂರಿರಂಗನ್ ವರದಿ ಅನುಷ್ಠಾನಕ್ಕೆ ಒತ್ತಡ ಹೇರುತ್ತಿದೆ. ಅದರ ವಿರುದ್ಧ ಆರಗ ಜ್ಞಾನೇಂದ್ರ ಏಕೆ ಧ್ವನಿ ಎತ್ತಿಲ್ಲ' ಎಂದು ಖಂಡ್ರೆ ಪ್ರಶ್ನಿಸಿದ್ದಾರೆ.

ಕೇಂದ್ರ ಸರ್ಕಾರ ಸಂಜಯ್ ಕುಮಾರ್ ನೇತೃತ್ವದಲ್ಲಿ ಪರಿಶೀಲನಾ ಸಮಿತಿ ರಚಿಸಿದೆ. ಆ ಸಮಿತಿ ಪಶ್ಚಿಮ ಘಟ್ಟಗಳ ಯಾವ ಪ್ರದೇಶಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದೆ ಎಂಬುದನ್ನು ಜ್ಞಾನೇಂದ್ರ ತಿಳಿಸಬೇಕು ಎಂದು ಆಗ್ರಹಿಸಿದ್ದಾರೆ.

ಪ್ರಜಾವಾಣಿ@75
ಪತ್ರಿಕೆ ಚಂದಾದಾರರಾಗಲು / ದೂರುಗಳಿಗೆ
(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)
ಸಂಪರ್ಕಕ್ಕೆ
8147623791
080 45557204
readerservicecell@deccanherald.co.in
ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ
bit.ly/40dPCqy

ಬಿಎಂಟಿಸಿ ಪೂರ್ವ ವಲಯಕ್ಕೆ ಸಮಗ್ರ ವೀರಾಗ್ರಣಿ ಪ್ರಶಸ್ತಿ

ಬೆಂಗಳೂರು: ಬಿಎಂಟಿಸಿ ರಜತ ಮಹೋತ್ಸವದ ಅಂಗವಾಗಿ ಸಂಸ್ಥೆಯ ಸಿಬ್ಬಂದಿಗೆ ಬಿಜಿಎಸ್ ಕ್ರೀಡಾಂಗಣದಲ್ಲಿ ನಡೆದ ಎರಡು ದಿನಗಳ ಕ್ರೀಡಾಕೂಟದಲ್ಲಿ ಬಿಎಂಟಿಸಿ ಪೂರ್ವ ವಲಯ ಸಮಗ್ರ ವೀರಾಗ್ರಣಿ ಪ್ರಶಸ್ತಿ ಪಡೆಯಿತು.

ಮಹಿಳೆಯರ ವಿಭಾಗದಲ್ಲಿ ಕೊಕ್ಕೊ, ಥ್ರೋ ಬಾಲ್ ಹಾಗೂ 75 ಮೀಟರ್ ಓಟದ ಸ್ಪರ್ಧೆ ಮತ್ತು ಪುರುಷ ವಿಭಾಗದಲ್ಲಿ ಕಬಡ್ಡಿ, ಕ್ರಿಕೆಟ್, 100 ಮೀಟರ್ ಓಟ, ಶಾಟ್‌ಪಟ್ ಸ್ಪರ್ಧೆ ಆಯೋಜಿಸಲಾಗಿತ್ತು.

ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕಿ ಜಿ.ಸತ್ಯವತಿ ಹಾಗೂ ಅಧಿಕಾರಿಗಳು ಸ್ಪರ್ಧೆ ವೀಕ್ಷಿಸಿ ಸ್ಪರ್ಧಾಳುಗಳನ್ನು ಪ್ರೇರೇಪಿಸಿದರು.

ಸಚಿವ ರಾಮಲಿಂಗಾರೆಡ್ಡಿ ಮಾತನಾಡಿ 'ಸಾರಿಗೆ ಸಂಸ್ಥೆಯ ಚಾಲಕರು, ನಿರ್ವಾಹಕರು, ತಾಂತ್ರಿಕ ಸಿಬ್ಬಂದಿ ತಮ್ಮ ಒತ್ತಡ ಕೆಲಸದ ನಡುವೆಯೂ ಕ್ರೀಡೆಗಳಲ್ಲಿ ಉತ್ಸಾಹದಿಂದ ಭಾಗವಹಿಸಿರುವುದು ಸಂತಸದ ಸಂಗತಿ. ಸುಮಾರು 800ಕ್ಕೂ ಹೆಚ್ಚು ನೌಕರರು ಈ ಕ್ರೀಡಾಕೂಟದಲ್ಲಿ ಭಾಗವಹಿಸಿದ್ದರು' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

'ಕಾರ್ಮಿಕ ಸ್ನೇಹಿ ಯೋಜನೆಗಳು ಸಾರಿಗೆ ಸಂಸ್ಥೆಯಲ್ಲಿ ಮತ್ತಷ್ಟು ಜಾರಿಗೊಳಿಸಲಾಗುವುದು. ಬಿಎಂಟಿಸಿಯು ಆಯೋಜಿಸಿರುವ ಈ ಕಾರ್ಯಕ್ರಮ ನಿಜಕ್ಕೂ ಉತ್ತಮ' ಎಂದು ತಿಳಿಸಿದರು.

'ಸಾಮಾಜಿಕ ಬದಲಾವಣೆಗೆ ಹಡಪದ ಅಪ್ಪಣ್ಣ ಕೊಡುಗೆ'

ಪ್ರಜಾವಾಣಿ ವಾರ್ತೆ

ಕೆಂಗೇರಿ: ದೇಶದ ಸಾಮಾಜಿಕ ಬದಲಾವಣೆಯಲ್ಲಿ ಹಡಪದ ಅಪ್ಪಣ್ಣ ಅವರ ಕೊಡುಗೆ ಅನನ್ಯವಾದುದು ಎಂದು ಅಖಿಲ ಕರ್ನಾಟಕ ಕನ್ನಡ ಸವಿತಾ ಮಹಾಮಂಡಲ ತಲಘಟ್ಟಪುರ ಶಾಖಾ ಅಧ್ಯಕ್ಷ ರಮೇಶ್ .ಪಿ ಹೇಳಿದರು.

ಅಖಿಲ ಕರ್ನಾಟಕ ಕನ್ನಡ ಸವಿತಾ ಮಹಾಮಂಡಲದ ವತಿಯಿಂದ ಹೆಮ್ಮಿಗೆಪುರ ವಾರ್ಡಿನ ವಾಜರ ಹಳ್ಳಿಯಲ್ಲಿ ಆಯೋಜಿಸಿದ್ದ ಶ್ರೀಶಿವಶರಣ ಹಡಪದ ಅಪ್ಪಣ್ಣ ಅವರ 889ನೇ ಜಯಂತಿಯಲ್ಲಿ ಅವರು ಮಾತನಾಡಿದರು.

12ನೇ ಶತಮಾನದಲ್ಲಿ ನಡೆದ ವಚನ ಚಳವಳಿ ಮತ್ತು ಸಾಮಾಜಿಕ ಕ್ರಾಂತಿಯಲ್ಲಿ ಹಡಪದ ಅಪ್ಪಣ್ಣ ಅವರು ಪ್ರಮುಖ ಪಾತ್ರ ವಹಿಸಿದ್ದರು. 250ಕ್ಕೂ ಹೆಚ್ಚು ವಚನ ರಚಿಸುವ ಮೂಲಕ ಸಾಮಾಜಿಕ ಬದಲಾವಣೆಗೆ ಶ್ರಮಿಸಿದ್ದರು ಎಂದು ಹೇಳಿದರು.

ಕರ್ನಾಟಕ ಕನ್ನಡ ಸವಿತಾ ಮಹಾಮಂಡಲದ ರಾಜ್ಯಾಧ್ಯಕ್ಷ ಟಿ.ವೆಂಕಟೇಶ್ ಮಾತನಾಡಿ, ಬಸವಣ್ಣ ಸಾಮಾಜಿಕ ಕ್ರಾಂತಿಗೆ ಮುಂದಾದಾಗ ಎಲ್ಲಾ ಕಾಯಕ ವರ್ಗದವರೂ ಬೆಂಬಲ ನೀಡಿದ್ದರು. ಈ ವೇಳೆ ಹಡಪದ ಅಪ್ಪಣ್ಣ ಬಸವಣ್ಣ ಅವರ ಕಾರ್ಯದರ್ಶಿಯಂತೆ ಮುಂದಾಳತ್ವ ವಹಿಸಿ ಸಮಾಜದ ಓರೆ ಕೋರೆಗಳನ್ನು ತಿದ್ದುವ ಮಹತ್ಕಾರ್ಯದಲ್ಲಿ ತೊಡಗಿದ್ದರು ಎಂದರು.

ಶಾಸಕ ಎಸ್.ಟಿ.ಸೋಮಶೇಖರ್ ಮಾತನಾಡಿ, ಅಖಿಲ ಕರ್ನಾಟಕ ಕನ್ನಡ ಸವಿತಾ ಮಹಾಮಂಡಲವು ಹಲವು ವರ್ಷಗಳಿಂದ ಸಮಾಜದ ಏಳಿಗೆಗೆ ಶ್ರಮಿಸುತ್ತಿದೆ. ಸಂಘದ ಆಶೋತ್ತರಗಳಿಗೆ ಪೂರಕವಾಗಿ ಸಹಕಾರ ನೀಡಲಾಗುವುದು ಎಂದು ಭರವಸೆ ನೀಡಿದರು.

ಬಿಬಿಎಂಪಿ ಮಾಜಿ ಸದಸ್ಯ ಆರ್ಯ ಶ್ರೀನಿವಾಸ್ , ಬಿಜೆಪಿ ನಗರ ಮಂಡಲ ಪ್ರಧಾನ ಕಾರ್ಯದರ್ಶಿ ವಾಜರಹಳ್ಳಿ ಶಶಿಕುಮಾರ್, ಜಿಲ್ಲಾ ಪಂಚಾಯತಿ ಮಾಜಿ ಸದಸ್ಯೆ ಕುಸುಮಾ ಶಿವಮಾದಯ್ಯ . ಕಾಂಗ್ರೆಸ್ ಬ್ಲಾಕ್ ಅಧ್ಯಕ್ಷ ಅಮೃತ್ ಗೌಡ, ವಾರ್ಡ್ ಅಧ್ಯಕ್ಷ ಪ್ರಕಾಶ್, ಸೌಮ್ಯ ಉಪಸ್ಥಿತರಿದ್ದರು.

ಸವಿತಾ ಸಮಾಜದ ಕಲಾವಿದರನ್ನು ಸನ್ಮಾನಿಸಲಾಯಿತು. ಶಾಸಕ ಎಸ್.ಟಿ.ಸೋಮಶೇಖರ್, ಬಿಜೆಪಿ ಮುಖಂಡರಾದ ಆರ್ಯ ಶ್ರೀನಿವಾಸ್, ವಾಜರಹಳ್ಳಿ ಶಶಿಕುಮಾರ್, ಕುಸುಮಾ ಶಿವಮಾದಯ್ಯ, ಪ್ರಕಾಶ್, ಅಮೃತ್ ಗೌಡ ಇದ್ದರು

'ವಿನಾಶದ ಅಂಚಿನಲ್ಲಿ ಜಾನಪದ ಕಲೆಗಳು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡ ನಾಡಿನಲ್ಲಿ ಬಹುತೇಕ ಜಾನಪದ ಕಲೆಗಳು ನಾಪತ್ತೆಯಾಗುವ ಹಂತಕ್ಕೆ ತಲುಪಿವೆ. ಮೂಡಲಪಾಯ ಯಕ್ಷಗಾನವು ಈಗಾಗಲೇ ಶೇ 99 ರಷ್ಟು ನಾಪತ್ತೆಯಾಗಿದೆ' ಎಂದು ಜಾನಪದ ವಿದ್ವಾಂಸ ಹಿ.ಚಿ. ಬೋರಲಿಂಗಯ್ಯ ಬೇಸರ ವ್ಯಕ್ತಪಡಿಸಿದರು.

ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನಗರದಲ್ಲಿ ಶುಕ್ರವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ದತ್ತಿ ಪ್ರಶಸ್ತಿಗಳನ್ನು ಪ್ರದಾನ ಮಾಡಿ, ಮಾತನಾಡಿದರು. 'ದೇಶದಲ್ಲಿಯೇ ಅತಿ ಹೆಚ್ಚು ಜಾನಪದ ಕಲಾ ಪ್ರಕಾರಗಳು ನಮ್ಮ ನಾಡಿನಲ್ಲಿವೆ. 184 ಅಧಿಕೃತ ಕಲಾ ಪ್ರಕಾರಗಳನ್ನು ದಾಖಲಿಸಲಾಗಿದೆ. 21 ಜಾನಪದ ಮಹಾಕಾವ್ಯಗಳು ಪ್ರಕಟಗೊಂಡಿವೆ. ಇಷ್ಟಾಗಿಯೂ ಕನ್ನಡ ನಾಡಿನ ಬಹುತೇಕ ಜಾನಪದ ಕಲೆಗಳು ಈಗ ಕಾಣಸಿಗುತ್ತಿಲ್ಲ' ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸಿ.ವಿ. ಮಹದೇವಯ್ಯ, ಟಿ.ಎಸ್. ರಾಘವೇಂದ್ರರಾವ್, ರಂಗಶ್ರೀ ರಂಗಸ್ವಾಮಿ, ಕಾಸರಗೋಡು ಚಿನ್ನ, ಭಾರತಿ ಬಿಜಾಪುರ, ದೊಡ್ಡನಾಗಮ್ಮ ಚಿನ್ನಮ್ಮ ಸಾವಕ್ಕ ಯಲ್ಲಪ್ಪ ಒಲೇಕಾರ ಹಾಗೂ ಬೋರವ್ವ ಬಾಗನ್ನವರ ಅವರಿಗೆ ಕಸಾಪ ದತ್ತಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ಹಿ.ಚಿ. ಬೋರಲಿಂಗಯ್ಯ, ಮಹೇಶ ಜೋಶಿ, ನಿರ್ಮಾಪಕಿ ಲಕ್ಷ್ಮೀ ವಜ್ರಮುನಿ, ದತ್ತಿ ದಾನಿಗಳಾದ ನಾಗರಾಜ ರಾವ್, ಶ್ರೀನಿವಾಸ ಜೋಗಿ, ರಾಮಣ್ಣ ಕೋಡಿಹೊಸಹಳ್ಳಿ, ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ ನೇ.ಭ. ರಾಮಲಿಂಗ ಶೆಟ್ಟಿ, ಪದ್ಮಿನಿ ನಾಗರಾಜು, ಬಿ.ಎಂ.ಪಟೇಲ್ ಪಾಂಡು ಇದ್ದಾರೆ

ಪ್ರಶಸ್ತಿ ಪುರಸ್ಕೃತ ಕಾಸರಗೋಡು ಚಿನ್ನ, 'ಕಾಸರಗೋಡು ಕರ್ನಾಟಕದ ಅವಿಭಾಜ್ಯ ಅಂಗ. ಇತ್ತೀಚೆಗೆ ಕಾಸರಗೋಡಿನಲ್ಲಿ ಕನ್ನಡ ಶಾಲೆಗಳು ಕಣ್ಮರೆಯಾಗುತ್ತಿವೆ. ಅಲ್ಲಿರುವ ಕನ್ನಡಿಗರಿಗೆ ಭಾಷಾ ಅಭದ್ರತೆ ಕಾಡುತ್ತಿದೆ. ಕನ್ನಡ ಸಾಹಿತ್ಯ ಪರಿಷತ್ತು ಕಾಸರಗೋಡಿನ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿ, ಕನ್ನಡ ಕಟ್ಟುವ ಕೆಲಸಕ್ಕೆ ನಮ್ಮ ಜನರಿಗೆ ಪ್ರೋತ್ಸಾಹ ನೀಡಬೇಕು' ಎಂದರು.

ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ, 'ಕಾಸರಗೋಡಿನ ಜನರೊಂದಿಗೆ ಕಸಾಪ ಸದಾ ಇರಲಿದೆ. ಗಡಿನಾಡ ಕನ್ನಡಿಗರು ಅನಾಥಭಾವ ಅನುಭವಿಸಬಾರದು. ಕಾಸರಗೋಡಿನಲ್ಲಿ ಒಂದು ಗಡಿನಾಡ ಕನ್ನಡ ಸಮ್ಮೇಳನವನ್ನು ಪರಿಷತ್ತು ನಡೆಸಲಿದೆ' ಎಂದು ಹೇಳಿದರು.

ರಾಮೋಹಳ್ಳಿ: ವೇಣುಗೋಪಾಲ್ ಅಧ್ಯಕ್ಷ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ರಾಮೋಹಳ್ಳಿ ಗ್ರಾ.ಪಂ ಅಧ್ಯಕ್ಷರಾಗಿ ವಿ.ವೇಣುಗೋಪಾಲ್, ಉಪಾಧ್ಯಕ್ಷರಾಗಿ ಗೌರಮ್ಮ ಅವಿರೋಧ ಆಯ್ಕೆಯಾಗಿದ್ದಾರೆ.

ಇಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಅವಿರೋಧ ಆಯ್ಕೆ ನಡೆದಿದೆ ಎಂದು ಚುನಾವಣಾಧಿಕಾರಿ, ಎಇಇ ವಿಷ್ಣುಕಾಂತ್ ಅವರು ಹೇಳಿದರು.

ನೂತನ ಅಧ್ಯಕ್ಷ, ಉಪಾಧ್ಯಕ್ಷರನ್ನು ಅಭಿನಂದಿಸಿದ ಶಾಸಕ ಎಸ್.ಟಿ.ಸೋಮಶೇಖರ್, ಎಲ್ಲ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ನಾಗರಿಕರಿಗೆ ಬೇಕಾಗಿರುವ ಅಗತ್ಯ ಮೂಲಸೌಕರ್ಯ ದೊರಕಿಸಿಕೊಡುವಂತೆ ಸೂಚಿಸಿದರು.

ವೇಣುಗೋಪಾಲ್ ಮಾತನಾಡಿ, 'ಪಂಚಾಯಿತಿ ವ್ಯಾಪ್ತಿಯಲ್ಲಿ ಬಿಡಿಎಯ ನಾಡಪ್ರಭು ಕೆಂಪೇಗೌಡ ಬಡಾವಣೆ ನಿರ್ಮಾಣವಾಗಿದೆ. ಆ ವ್ಯಾಪ್ತಿಯಲ್ಲಿ ಬರುವ ಎಲ್ಲ ಗ್ರಾಮ, ಖಾಸಗಿ ಬಡಾವಣೆಗಳಿಗೂ ಕಾವೇರಿ ನೀರು ಒದಗಿಸಲು ಮತ್ತು ಮಂಚನಬೆಲೆ ಜಲಾಶಯದಿಂದ ಹಲವು ಪಂಚಾಯಿತಿ ವ್ಯಾಪ್ತಿಗಳಿಗೆ ಕುಡಿಯುವ ನೀರು ಸರಬರಾಜು ಯೋಜನೆಗೆ ಟೆಂಡರ್ ಪ್ರಕ್ರಿಯೆ ಮುಗಿದಿದೆ. ಹಂತಹಂತವಾಗಿ ನೀರು, ವಸತಿ ರಹಿತರಿಗೆ ನಿವೇಶನ, ವಸತಿ ನೀಡಲು ಕ್ರಮ ವಹಿಸಲಾಗುವುದು' ಎಂದು ಹೇಳಿದರು.

ಸದಸ್ಯರಾದ ಜಿ.ಮಹೇಶ್, ಬಿ.ಎಚ್.ಪ್ರಭು, ಯಲ್ಲಪ್ಪ ಆರ್. ಎಂ., ಚೇತನ್‌ಗೌಡ, ಆರ್.ಚಂದ್ರಪ್ಪ, ರಾಕೇಶ್‌ಗೌಡ, ಆರ್.ಪಿ.ಶ್ರೀನಿವಾಸ್ ತಾ.ಪಂ ಮಾಜಿ ಅಧ್ಯಕ್ಷ ಬಿ.ಕೃಷ್ಣಪ್ಪ, ವೆಂಕಟಲಕ್ಷಮ್ಮ ರೇವಣ್ಣ ಸಿದ್ದಯ್ಯ, ಮಂಡಲ ಗ್ರಾಮಾಂತರ ಬಿಜೆಪಿ ಅಧ್ಯಕ್ಷ ಎಂ. ರಂಗರಾಜು, ಯುದ್ಧ ಭೂಮಿ ಹೋರಾಟ ಸೇನೆ ರಾಜ್ಯ ಘಟಕದ ಅಧ್ಯಕ್ಷ ಹೇಮಂತ್‌ರಾಜ್, ರಾಜ್ಯ ಆರ್ಯ ಈಡಿಗರ ಸಂಘದ ರಾಜ್ಯ ಕಾರ್ಯದರ್ಶಿ ಆರ್.ಪಿ.ಪ್ರಕಾಶ್, ಅಧ್ಯಕ್ಷ ಹಾಗೂ ಉಪಾಧ್ಯಕ್ಷರನ್ನು ಅಭಿನಂದಿಸಿದರು.

ರಾಮೋಹಳ್ಳಿ ಗ್ರಾ.ಪಂ ಅಧ್ಯಕ್ಷ–ಉಪಾಧ್ಯಕ್ಷರಾಗಿ ಆಯ್ಕೆಯಾದ ವಿ.ವೇಣುಗೋಪಾಲ್ ಮತ್ತು ಗೌರಮ್ಮ ಅವರನ್ನು ಶಾಸಕ ಸೋಮಶೇಖರ್ ಅಭಿನಂದಿಸಿದರು

ಕಾಂಗ್ರೆಸ್ ಯಂಗ್ ಬ್ರಿಗೇಡ್ ಸದಸ್ಯತ್ವ ಅಭಿಯಾನ

ಬೆಂಗಳೂರು: ಕಾಂಗ್ರೆಸ್ ಯಂಗ್ ಬ್ರಿಗೇಡ್ ಸೇವಾ ದಳದ ಸದಸ್ಯತ್ವ ಅಭಿಯಾನವನ್ನು ಇದೇ 31ರವರೆಗೆ ಕೈಗೊಳ್ಳಲಾಗುವುದು ಎಂದು ಸೇವಾದಳದ ರಾಜ್ಯ ಘಟಕದ ಅಧ್ಯಕ್ಷ ಪಿ.ಕೆ. ಜುನೈದ್ ತಿಳಿಸಿದ್ದಾರೆ.

ಅರ್ಜಿಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸಿ ಸದಸ್ಯತ್ವ ಪಡೆಯಬಹುದು. ಎಲ್ಲ ವರ್ಗದ ಜನರು ಸದಸ್ಯತ್ವ ಪಡೆಯಬಹುದು ಎಂದೂ ಅವರು ಹೇಳಿದ್ದಾರೆ.

ಜನಪರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಜೊತೆಗೆ, ಯುವ ಸಮುದಾಯ ಬೇಡಿಕೆಗಳನ್ನು, ಅಹವಾಲುಗಳನ್ನು ಪಕ್ಷದ ನಾಯಕರಿಗೆ ತಲುಪಿಸುವ ಕೆಲಸವನ್ನು ಯಂಗ್ ಬ್ರಿಗೇಡ್ ಮಾಡಲಿದೆ. ಹೆಚ್ಚಿನ ಮಾಹಿತಿಗೆ ಮೊಬೈಲ್– 9980080202 ಸಂಪರ್ಕಿಸಬಹುದು ಎಂದೂ ಅವರು ತಿಳಿಸಿದ್ದಾರೆ.

ಮಾರಸಂದ್ರ: ಗ್ರಾಮಸಭೆಯಲ್ಲಿ ಸಮಸ್ಯೆಗಳ ಮಹಾಪೂರ

ಪ್ರಜಾವಾಣಿ ವಾರ್ತೆ

ಯಲಹಂಕ: ಚರಂಡಿ ತೆರೆದುಕೊಂಡು ನಾಲ್ಕು ತಿಂಗಳಾದರೂ ಬಗೆಹರಿಯದ ಸಮಸ್ಯೆ, ಶಾಲಾ ಕಟ್ಟಡ ಶಿಥಿಲಗೊಂಡು ಕೊಠಡಿಯೊಳಗೆ ಸುರಿಯುತ್ತಿರುವ ಮಳೆನೀರು...

ಮಾರಸಂದ್ರ ಗ್ರಾಮದ ಸರ್ಕಾರಿ ಶಾಲೆಯ ಆವರಣದಲ್ಲಿ ಆಯೋಜಿಸಿದ್ದ ಅರಕೆರೆ ಗ್ರಾಮಪಂಚಾಯಿತಿಯ 2023-24ನೇ ಸಾಲಿನ ಮೊದಲನೇ ಸುತ್ತಿನ ಗ್ರಾಮಸಭೆಯಲ್ಲಿ ಜನರು ಹಲವಾರು ಸಮಸ್ಯೆಗಳ ಬಗ್ಗೆ ಜನಪ್ರತಿನಿಧಿಗಳ ಗಮನಸೆಳೆದು, ಹಲವು ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿದರು.

'ನಮ್ಮ ಮನೆ ಪಕ್ಕದಲ್ಲಿ ಚರಂಡಿ ತೆರೆದುಕೊಂಡು ನಾಲ್ಕು ತಿಂಗಳಾದರೂ ಇದುವರೆಗೂ ಸರಿಪಡಿಸಿಲ್ಲ. ಇದರಿಂದ ಈ ಜಾಗದಲ್ಲಿ ನಡೆದಾಡಲು ಸಮಸ್ಯೆಯಾಗುತ್ತಿದೆ. ಅಲ್ಲದೆ ಇದೇ ರಸ್ತೆಯಲ್ಲಿ ಶಾಲಾಮಕ್ಕಳೂ ಸಂಚರಿಸುವುದರಿಂದ ತೊಂದರೆ ಅನುಭವಿಸಬೇಕಾಗಿದ್ದು, ದುರಸ್ತಿಗೊಳಿಸಲು ಇನ್ನೂ ಎಷ್ಟುದಿನ ಬೇಕು' ಎಂದು ಮಾರಸಂದ್ರ ಗ್ರಾಮದ ಈಶ್ವರ ದೇವಸ್ಥಾನ ರಸ್ತೆಯ ನಿವಾಸಿ ಯಮುನ ಪ್ರಶ್ನಿಸಿದರು.

'ಮಾರಸಂದ್ರ ಗ್ರಾಮದಲ್ಲಿ ಸರ್ಕಾರಿ ಶಾಲಾಕಟ್ಟಡ ತೀರಾ ಹಳೆಯದಾಗಿ ಶಿಥಿಲಾವಸ್ಥೆಗೆ ತಲುಪಿದೆ. ಮಳೆಯಾದರೆ ಕಟ್ಟಡ ಸೋರುತ್ತಿರುವುದರಿಂದ ಮಕ್ಕಳು ತೊಂದರೆ ಅನುಭವಿಸಬೇಕಾಗಿದೆ. ಈ ವೇಳೆ ಮಕ್ಕಳನ್ನು ಹೊರಗೆ ಕೂರಿಸಿ ಪಾಠ ಹೇಳಬೇಕಾದ ಪರಿಸ್ಥಿತಿಯಿದ್ದು, ಕೂಡಲೇ ನೂತನ ಕಟ್ಟಡ ನಿರ್ಮಿಸಬೇಕು' ಎಂದು ಎಸ್‌ಡಿಎಂಸಿ ಮಾಜಿ ಅಧ್ಯಕ್ಷ ಮುನಿರಾಜು ಮನವಿ ಮಾಡಿದರು.

'ಗಾರ್ಮೆಂಟ್ಸ್ ಮತ್ತಿತರ ಕೂಲಿ ಕೆಲಸಗಳಿಗೆ ಹೋಗುವ ಜನರು ಸರ್ಕಾರಿ ನ್ಯಾಯಬೆಲೆ ಅಂಗಡಿಯಲ್ಲಿ ಪಡಿತರ ತೆಗೆದುಕೊಳ್ಳಲು ಸಾಧ್ಯವಾಗುತ್ತಿಲ್ಲ. ನಗರ ಪ್ರದೇಶಗಳಲ್ಲಿ ವಿತರಿಸುವಂತೆ ಸಂಜೆ ವೇಳೆ ಅಥವಾ ಭಾನುವಾರ ಪಡಿತರ ವಿತರಿಸಿದರೆ ಕೂಲಿಕಾರ್ಮಿಕರಿಗೆ ಅನುಕೂಲವಾಗುತ್ತದೆ' ಎಂದು ಚಂದ್ರಕಲಾ ಮನವಿ ಮಾಡಿದರು.

'ಮಾರಸಂದ್ರದಲ್ಲಿ ಜನೌಷಧಿ ಕೇಂದ್ರ ಸ್ಥಾಪಿಸಬೇಕು' ಎಂದು ಸ್ಥಳೀಯ ನಿವಾಸಿ ರತ್ನ ಮನವಿ ಮಾಡಿದರು.

'ಪಂಚಾಯಿತಿಯ ಬಜೆಟ್ ಗಾತ್ರ ಹೆಚ್ಚಿದೆ. ಸಮಸ್ಯೆಗೆ ಸ್ಪಂದಿಸಲಾಗುವುದು' ಎಂದು ಪಂಚಾಯಿತಿ ಅಧ್ಯಕ್ಷ ಬಿ.ಸಿ.ಶಶಿಕುಮಾರ್ ತಿಳಿಸಿದರು.

ಶಾಸಕ ಎಸ್.ಆರ್.ವಿಶ್ವನಾಥ್ ಮಾತನಾಡಿ, 'ಅರಕೆರೆ ಪಂಚಾಯಿತಿಯು ಇತರೆ ಪಂಚಾಯಿತಿಗಳಿಗೆ ಮಾದರಿಯಾಗಿದೆ. ತೆರಿಗೆ ಸಂಗ್ರಹ, ಕೆರೆಗಳ ಅಭಿವೃದ್ಧಿ, ಸಸಿ ನೆಡುವ ಕಾರ್ಯ ಸೇರಿ ಮೂಲಸೌಕರ್ಯಗಳ ಸಮರ್ಪಕ ನಿರ್ವಹಣೆ ಮಾಡಲಾಗಿದೆ. ಘನತ್ಯಾಜ್ಯ ವಿಂಗಡಣಾ ಘಟಕ ಸ್ಥಾಪಿಸುವ ಮೂಲಕ ಕಸದ ಸಮಸ್ಯೆಗೆ ಸೂಕ್ತಪರಿಹಾರ ಕಲ್ಪಿಸಿ, ರಾಷ್ಟ್ರಮಟ್ಟದಲ್ಲಿ ಗಮನ ಸೆಳೆದಿದೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ನಗರದಲ್ಲಿ ಇಂದು

ಲೇಖಕ–ಲೇಖಕಿಯರಿಗಾಗಿ ಕನ್ನಡ ಬರವಣಿಗೆ ಶಿಬಿರ: ಉಪನ್ಯಾಸ: ಜಿ. ಅಶ್ವತ್ಥನಾರಾಯಣ, ಡುಂಡಿರಾಜ್ ಎಚ್., ಜೋಗಿ, ವಿದ್ಯಾರಶ್ಮಿ, ಚಿಂತಾಮಣಿ ಕೊಡ್ಲೆಕೆರೆ, ವೈ.ವಿ. ಗುಂಡೂರಾವ್, ಎ. ಭಾನು, ವಾಸುದೇವಮೂರ್ತಿ, ಆಯೋಜನೆ: ಯುವಿಸಿಇ ಅಲುಮ್ನಿ ಅಸೋಸಿಯೇಷನ್, ಸಮಾನ ಮನಸ್ಕರು, ಸ್ಥಳ: ಯುವಿಸಿಇ ಅಲುಮ್ನಿ ಅಸೋಸಿಯೇಷನ್, ಕೆ.ಆರ್. ವೃತ್ತ, ಬೆಳಿಗ್ಗೆ 9ರಿಂದ

'ಕೌಶಿಕ ರಾಮಾಯಣ' ಕಾವ್ಯ ಬಿಡುಗಡೆ, ಕವಿಜಯಂತಿ, ದತ್ತಿನಿಧಿ ಪ್ರಶಸ್ತಿ ಪ್ರದಾನ: ಉದ್ಘಾಟನೆ: ಬೈರಮಂಗಲ ರಾಮೇಗೌಡ, ಉಪಸ್ಥಿತಿ: ವೈ.ಕೆ. ಮುದ್ದುಕೃಷ್ಣ, ಅಧ್ಯಕ್ಷತೆ: ಕೆ.ಪಿ. ಪುತ್ತೂರಾಯ, 'ವಾಗ್ದೇವಿ ಪ್ರಶಸ್ತಿ' ಪುರಸ್ಕೃತರು: ಕಡಬ ಸುಬ್ರಹ್ಮಣ್ಯ, ವಿ. ಭಾಗ್ಯಲಕ್ಷ್ಮಿ, 'ಕೆ.ವಿ. ರವೀಂದ್ರನಾಥ ಟ್ಯಾಗೂರ್ ಯುವ ಪ್ರಶಸ್ತಿ' ಪುರಸ್ಕೃತರು: ಡಿ.ಎಸ್. ಸ್ವಾತಿ, 'ಎಚ್.ಆರ್. ಕೇಶವಮೂರ್ತಿ ಸ್ಮಾರಕ ಉತ್ತಮ ಗಮಕ ಶಿಕ್ಷಕ ಪ್ರಶಸ್ತಿ' ಪುರಸ್ಕೃತರು: ಸುಜಾತಾ ಗೋಪಿನಾಥ್, ಆಯೋಜನೆ: ವಾಗ್ದೇವಿ ಗಮಕಕಲಾ ಪ್ರತಿಷ್ಠಾನ, ಸ್ಥಳ: ಉದಯಭಾನು ಕಲಾಸಂಘ, ಗವಿಪುರ, ಬೆಳಿಗ್ಗೆ 9.30ರಿಂದ

'ಕಾನೂನು ಧರ್ಮ ಮತ್ತು ಸಮಾಜ–ಒಂದು ಸಾಂವಿಧಾನಿಕ ಚರ್ಚೆ' ಕುರಿತು ರಾಷ್ಟ್ರೀಯ ಸಮ್ಮೇಳನ: ಅತಿಥಿಗಳು: ಕೌಶಲ್ ಜಯೇಂದ್ರ ಠಾಕರ್, ಸುಭಾಷ್ ಬಿ. ಆದಿ, ವಿ. ವಿಜಯಕುಮಾರ್, ಅಧ್ಯಕ್ಷತೆ: ಪ್ರಭುಲಿಂಗ್ ಕೆ. ನಾವದಗಿ, ಆಯೋಜನೆ ಮತ್ತು ಸ್ಥಳ: ಕೆಎಲ್‌ಇ ಕಾನೂನು ಕಾಲೇಜು, ವಿಶ್ವೇಶ್ವರಯ್ಯ ಲೇಔಟ್, ಬೆಳಿಗ್ಗೆ 10

'ಬೆಂಗಳೂರು ಕಾವ್ಯ ಉತ್ಸವ'ದ ಉದ್ಘಾಟನೆ: ಹರಿಪ್ರಸಾದ್ ಚೌರಾಸಿಯಾ, ಸ್ಥಳ: ಗೋಪಾಲನ್ ಮಾಲ್, ಬೆಳಿಗ್ಗೆ 10

ಪ್ರಥಮ ಪಿಯುಸಿ ತರಗತಿಗಳ ಉದ್ಘಾಟನೆ, ಪ್ರತಿಭಾ ಪುರಸ್ಕಾರ: ಅತಿಥಿ: ಟಿ. ಪಾಲಾಕ್ಷ, ಅಧ್ಯಕ್ಷತೆ: ಎಚ್. ಸಿ. ಬಾಲಕೃಷ್ಣ, ಪ್ರತಿಭಾ ಪುರಸ್ಕಾರ ವಿತರಣೆ: ಜಿ.ಕೆ. ನಾರಾಯಣರೆಡ್ಡಿ ಎಸ್.ಟಿ. ನಾರಾಯಣಗೌಡ, ಎಚ್. ಜಿ. ಬಾಲಗೋಪಾಲ್, ಆಯೋಜನೆ ಮತ್ತು ಸ್ಥಳ: ವಿವೇಕಾನಂದ ಮಹಿಳಾ ಪದವಿಪೂರ್ವ ಕಾಲೇಜು, ಮಹಾಲಕ್ಷ್ಮಿ ಲೇಔಟ, ಬೆಳಿಗ್ಗೆ 10

ಚಾವುಂಡರಾಯ ನಾಟಕದ ದೃಶ್ಯ

'ಚಾವುಂಡರಾಯ' ನಾಟಕ ಪ್ರದರ್ಶನ: ರಚನೆ: ಜಯರಾಮ ರಾಯಪುರ, ರಂಗವಿನ್ಯಾಸ: ಎಚ್.ಕೆ. ದ್ವಾರಕಾನಾಥ್, ರಂಗಸಜ್ಜಿಕೆ: ಮಾಲತೇಶ ಬಡಿಗೇರ, ನಿರ್ದೇಶನ: ಹುಲುಗಪ್ಪ ಕಟ್ಟಿಮನಿ, ಸಂಗೀತ: ದಿಗ್ವಿಜಯ ಹೆಗ್ಗೋಡು, ಆಯೋಜನೆ: ಸಮಾಜಮುಖಿ, ಸ್ಥಳ: ರಂಗಶಂಕರ, ಜೆ.ಪಿ. ನಗರ, ಮಧ್ಯಾಹ್ನ 3.30

ತೆರಿಗೆ ಸಲಹೆಗಾರರ ದಿನ: ಅತಿಥಿಗಳು: ಪ್ರಲ್ಹಾದ್ ಜೋಶಿ, ಬಸವರಾಜ ಬೊಮ್ಮಾಯಿ, ಪದ್ಮಾಕರ್ ಕುಲಕರ್ಣಿ, ಆಯೋಜನೆ: ಕರ್ನಾಟಕ ರಾಜ್ಯ ತೆರಿಗೆ ಸಲಹೆಗಾರರ ಸಂಘ, ಸ್ಥಳ: ಪ್ರಿನ್ಸಸ್ ಗ್ರೀನ್, ಗೇಟ್ ನಂ 9, ಅರಮನೆ ಮೈದಾನ, ಬೆಳಿಗ್ಗೆ 10ರಿಂದ

2023–23ನೇ ಶೈಕ್ಷಣಿಕ ಸಾಲಿನ ಸಾಂಸ್ಕೃತಿಕ, ಕ್ರೀಡೆ, ಕನ್ನಡ ಸಂಘ, ಎನ್‌ಸಿಸಿ, ಎನ್‌ಎಸ್‌ಎಸ್, ರೋವರ್ಸ್ ಮತ್ತು ರೇಂಜರ್ಸ್, ರೆಡ್‌ಕ್ರಾಸ್, ಇತರೆ ಚಟುವಟಿಕೆಗಳ ಸಮಾರೋಪ ಸಮಾರಂಭ: ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಅತಿಥಿಗಳು: ಕೆ.ಎ. ದಯಾನಂದ್, ಬಿ.ಸಿ. ಸುರೇಶ್, ಹರ್ಷಿಕಾ ಪೂಣಚ್ಚ, ಎನ್.ಆರ್. ನಂಜುಂಡೇಗೌಡ, ಉಪಸ್ಥಿತಿ: ಪಿ.ಟಿ. ಶ್ರೀನಿವಾಸ ನಾಯಕ, ಆಯೋಜನೆ ಮತ್ತು ಸ್ಥಳ: ಸರ್ಕಾರಿ ಕಲಾ ಕಾಲೇಜು, ಡಾ.ಬಿ.ಆರ್. ಅಂಬೇಡ್ಕರ್ ವೀಧಿ, ಬೆಳಿಗ್ಗೆ 11

ಲಯನ್ಸ್ ಅಂತರರಾಷ್ಟ್ರೀಯ ಸಂಸ್ಥೆಯ 'ಜಿಲ್ಲೆ 317ಎ ಸೇವಾ ಕಾರ್ಯಕ್ರಮಗಳು, ಜಿಲ್ಲಾ ಸಂಪುಟ ಸದಸ್ಯರ ಪ್ರತಿಜ್ಞಾ ವಿಧಿ ಕಾರ್ಯಕ್ರಮ: ಅತಿಥಿಗಳು: ಸಮೀರ್ ಅಬು ಸಮರಾ, ಜಾವಗಲ್ ಶ್ರೀನಾಥ್, ಸ್ಥಳ: ನಿಮ್ಹಾನ್ಸ್ ಕನ್ವೆನ್ಷನ್ ಸೆಂಟರ್, ಹೊಸೂರು ಮುಖ್ಯರಸ್ತೆ, ಮಧ್ಯಾಹ್ನ 3ರಿಂದ

ಭೀಷ್ಮ ವಿಜಯ ಯಕ್ಷಗಾನ ಪ್ರದರ್ಶನ: ಹಿಮ್ಮೇಳ: ರವಿ ಶೆಟ್ಟಿ ಹೊಸಂಗಡಿ, ಸುಧೀರ್ ಭಟ್ ಪೆರ್ಡೂರು, ಮಂಜುನಾಥ ನಾವುಡ, ಎನ್. ಜಿ. ಹೆಗಡೆ ಯಲ್ಲಾಪುರ, ಮುಮ್ಮೇಳ: ಶ್ರೀಧರ ಕಾಂಚನ್, ಶಿಥಿಲ್ ಶೆಟ್ಟಿ, ಯುವರಾಜ ನಾಯ್ಕ, ಧನರಾಜ್ ಹೆಮ್ಮಾಡಿ, ರಾಜೇಶ್ ಆಚಾರ್ಯ, ಶ್ರೇಯಸ್, ಆಯೋಜನೆ: ಹಟ್ಟಿಯಂಗಡಿ ಮೇಳ, ಸ್ಥಳ: ಆರ್.ಟಿ. ನಗರ, ಸಂಜೆ 4

'ಆರ್ಥಿಕ ಬೆಳವಣಿಗೆಯನ್ನು ಖಾತ್ರಿಪಡಿಸುವುದು ಸಮರ್ಥನೀಯ, ಸಮತೋಲಿತ ಮತ್ತು ಸಮಾನವಾಗಿದೆ' ಕುರಿತು ಉಪನ್ಯಾಸ: ಅನಂತ ನಾಗೇಶ್ವರನ್, ಆಯೋಜನೆ: ಅಜೀಂ ಪ್ರೇಮಜಿ ವಿಶ್ವವಿದ್ಯಾಲಯ, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಸಂಜೆ 4.30ರಿಂದ

'ಒಂದು ಮುಂಗಾರಿನಲಿ' ಸಂಗೀತ ಕಾರ್ಯಕ್ರಮ: ಅತಿಥಿಗಳು: ಶ್ರೀನಿವಾಸ್ ಮೂರ್ತಿ, ಜಯಲಕ್ಷ್ಮಿ ಪಾಟೀಲ್, ಶ್ರೀಧರ್ ನಾಯಕ್, ಆಯೋಜನೆ: ಮಾನ್ಸೂನ್ ರಾಗ, ಸ್ಥಳ: ವಯೋಮ ಆರ್ಟ್‌ಸ್ಪೇಸ್ ಆ್ಯಂಡ್ ಸ್ಟುಡಿಯೋ, ಜೆ.ಪಿ. ನಗರ, ಸಂಜೆ 5

ಪಿ.ವಿ. ಕೃಷ್ಣಭಟ್ಟ ಕುರಿತಾದ ಲೇಖನಗಳ ಸಂಗ್ರಹ 'ಪಥದರ್ಶಿ' ಪುಸ್ತಕ ಬಿಡುಗಡೆ: ದತ್ತಾತ್ರೇಯ ಹೊಸಬಾಳೆ, ಅಧ್ಯಕ್ಷತೆ: ಥಾವರಚಂದ್ ಗೆಹಲೋತ್, ಅತಿಥಿಗಳು: ಬಿ.ಎಸ್. ಯಡಿಯೂರಪ್ಪ, ದು.ಗು. ಲಕ್ಷ್ಮಣ, ಸ್ಥಳ: ಭಾರತೀಯ ಸ್ಕೌಟ್ಸ್ ಆ್ಯಂಡ್ ಗೈಡ್ಸ್ ಸಭಾಂಗಣ, ಅರಮನೆ ರಸ್ತೆ, ಸಂಜೆ 5



ಪ್ರಣಿತಾ ಸುಧೀರ್

ಭರತನಾಟ್ಯ, ಮೋಹಿನಿ ಅಟ್ಟಂ ರಂಗಪ್ರವೇಶ: ಪ್ರಣಿತಾ ಸುಧೀರ್, ಆಯೋಜನೆ: ನೃತ್ಯಧಾಮ ಟೆಂಪಲ್ ಆಫ್ ಫೈನ್ ಆರ್ಟ್ಸ್, ಸ್ಥಳ: ಶ್ರೀಕೃಷ್ಣದೇವರಾಯ ಕಲಾಮಂದಿರ, ತೆಲುಗು ವಿಜ್ಞಾನ ಸಮಿತಿ, ಮಲ್ಲೇಶ್ವರ, ಸಂಜೆ 6

'ಸಿತಾರ್ ನವಾಜ್ ಉಸ್ತಾದ್ ಬಾಲೇಖಾನ್' ಸಂಗೀತೋತ್ಸವ, ಪ್ರಶಸ್ತಿ ಪ್ರದಾನ: ಅತಿಥಿ: ವಿನಾಯಕ ತೊರ್ವಿ, ಗಾಯನ: ಪರ್ವೀನ್ ಜೆ. ಶೇಕ್, ಅನೀಸಾ ಖಾನ್ ಸೌದಾಗಾರ್, ತಬಲಾ: ದತ್ತಾತ್ರಯ ಜೋಶಿ, ಹಾರ್ಮೋನಿಯಂ: ಶಿವಕುಮಾರ್ ಮಹಾಂತ್, ಹಿಂದಾಸ್ಥಾನಿ ಸಂಗೀತ ಗಾಯನ: ಶ್ರೇಯಾ ವಿ. ಮೂರ್ತಿ, ತಬಲಾ: ಸತೀಶ್ ಹಂಪಿಹೊಳಿ, ಹಾರ್ಮೋನಿಯಂ: ಗೌರವ್ ಗುಡಿಯಾರ್, ಸರೋದ್: ಆಶಿಶ್ ಖಾನ್, ತಬಲಾ: ರಾಜೇಂದ್ರ ನಾಕೋಡ್, 'ಇನ್ಫೋಸಿಸ್ ಸಿತಾರ್ ನವಾಜ್ ಉಸ್ತಾದ್ ಬಾಲೇಖಾನ್ ಸ್ಮಾರಕ ಪ್ರಶಸ್ತಿ' ಪುರಸ್ಕೃತರು: ಆಶಿಶ್ ಖಾನ್, 'ಸಿತಾರ್ ನವಾಜ್ ಉಸ್ತಾದ ಬಾಲೇಖಾನ್ ಸಹ ಕಲಾವಿದ' ಪ್ರಶಸ್ತಿ' ಪುರಸ್ಕೃತರು: ಸತೀಶ್ ಹಂಪಿಹೊಳಿ, ಆಯೋಜನೆ: ಸಿತಾರ್ ನವಾಜ್ ಉಸ್ತಾದ್ ಬಾಲೇಖಾನ್ ಮೆಮೊರಿಯಲ್ ಫೌಂಡೇಷನ್ ಟ್ರಸ್ಟ್, ಸ್ಥಳ: ವಿವೇಕ ಸಭಾಂಗಣ, ಯುವಪಥ, ಜಯನಗರ, ಸಂಜೆ 5.30

ಸತೀಶ್ ಹಂಪಿಹೊಳಿ

ಸಮತ್ವ ಸಂಭ್ರಮ–2023: ಉದ್ಘಾಟನೆ: ಉಮಯಲಪುರಂ ಕೆ. ಶಿವರಾಮನ್, ಅತಿಥಿಗಳು: ಸುಮಾ ಸುಧೀಂದ್ರ, ಆರ್.ಎಸ್. ರಮೇಶ್, ಕೆ.ಎಂ. ನಾಗರಾಜ್, ಆಯೋಜನೆ: ಸಮತ್ವ ಫೌಂಡೇಷನ್, ಸ್ಥಳ: ಪತ್ತಿ ಸಭಾಂಗಣ, ಎನ್.ಆರ್. ಕಾಲೊನಿ, ಸಂಜೆ 6ರಿಂದ

ಆರ್.ಆರ್. ಕೇಶವಮೂರ್ತಿ ಸಂಗೀತೋತ್ಸವ: 'ಸಾಧನಾಚಾರ್ಯ ಬಿರುದು' ಪುರಸ್ಕೃತರು: ಆರ್. ವಿಶ್ವೇಶ್ವರನ್, ಅಧ್ಯಕ್ಷತೆ: ಶಾಮಸುಂದರ ಶರ್ಮಾ, ಅತಿಥಿ: ಆರ್. ಪೂರ್ಣಿಮಾ, ಮೃದಂಗ: ರೇಣುಕಾ ಪ್ರಸಾದ್, ಘಟ: ಓಂಕಾರ್ ರಾವ್, ಆಯೋಜನೆ: ಸ್ವರ ಸೌರಭ, ಸ್ಥಳ: ಹವ್ಯಕ ಭವನ, ಮಲ್ಲೇಶ್ವರ, ಸಂಜೆ 6ರಿಂದ

ಪ್ರವಚನ ವಾಹಿನಿ: ಭರತನಾಟ್ಯ ಪ್ರದರ್ಶನ: ಶಿವಾಂಗಿ ಬಿ.ಎಸ್., ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ ಕಳುಹಿಸಿ
nagaradalli_indu@prajavani.co.in

ಅತ್ಯುತ್ತಮ ಸೇವೆ ★ ನಿಶ್ಚಿತ ಕಡಿಮೆ ಬೆಲೆಯಲ್ಲಿ, 1971 ರಿಂದ
ಗಿರಿಯಾಸ್®
ಗೃಹಬಳಕೆ ವಸ್ತುಗಳ ವ್ಯಾಪಾರಿಗಳು
1971 ರಿಂದ
MEGA FREEDOM SALE
BIGGEST DISCOUNTS ★ BIGGEST BRANDS
Upto 20% ಕ್ಯಾಶ್ ಬ್ಯಾಕ್
Upto 75% OFF
EXCHANGE BONANZA
UPTO ₹25,000
ವರೆಗೂ ಕಡಿತ ಹಳೆಯ ಎಲೆಕ್ಟ್ರಾನಿಕ್ಸ್ ಗೃಹೋಪಯೋಗಿ ವಸ್ತುಗಳ, ಮೊಬೈಲ್‌ಗಳು ಮತ್ತು ಲ್ಯಾಪ್‌ಟಾಪ್‌ಗಳು.
ಎಕ್ಸ್‌ಚೇಂಜ್ ಮೇಲೆ*
FINANCE BONANZA
UPTO ₹6,000
ಕ್ಯಾಶ್ ಬ್ಯಾಕ್
ನಮ್ಮ 133ನೇ ಮೆಗಾ ಸ್ಟೋರ್ ಮಹೋನ್ನತ ಪ್ರಾರಂಭೋತ್ಸವ ಮದನಾಯಕನಹಳ್ಳಿಯಲ್ಲಿ (90362 89550) ಇಂದು @ ಬೆಳಗ್ಗೆ 10.40
ಕೇವಲ ಪಾವತಿಸಿ ₹1 ಮನೆಗೆ ತೆಗೆದುಕೊಂಡು ಹೋಗಿ*
1 ಇ.ಎಮ್.ಐ ಉಚಿತ*
INSTANT LOAN APPROVAL
Upto ₹4,00,000*
ASSURED GIFTS ON ALL LG PRODUCTS*
BT SPEAKER
INDUCTION COOKER
STEAM IRON
KETTLE
DRY IRON
24 HOURS EXPRESS DELIVERY*
ಯಾವುದೇ ಲ್ಯಾಪ್‌ಟಾಪ್ ಖರೀದಿಸಿ ಮತ್ತು ಪಡೆಯಿರಿ
ಫ್ಲಾಟ್ 63% ರಿಯಾಯಿತಿ*
*₹4,499 ಮೌಲ್ಯದ amazon echo ನ ಖರೀದಿಯ ಮೇಲೆ
PRIDE OF INDIA
NEVER BEFORE DEAL
UPTO 54% OFF*
32 SMART ANDROID LED ₹9,700 Or ಇ.ಎಮ್.ಐ: ₹808
43 SMART FHD LED ₹18,750 Or ಇ.ಎಮ್.ಐ: ₹1,563
55 4K SMART LED ₹29,900 Or ಇ.ಎಮ್.ಐ: ₹2,492
ಯಾವುದೇ ಮೊಬೈಲ್ ಖರೀದಿಸಿ ಮತ್ತು ಪಡೆಯಿರಿ
ಫ್ಲಾಟ್ 75% ರಿಯಾಯಿತಿ*
*₹19,990 ಮೌಲ್ಯದ LG TONE FREE ನ ಖರೀದಿಯ ಮೇಲೆ
ಯಾವುದೇ ವಾಷಿಂಗ್ ಮೆಷಿನ್ ಖರೀದಿಸಿ ಮತ್ತು ಪಡೆಯಿರಿ
ಫ್ಲಾಟ್ 52% ರಿಯಾಯಿತಿ*
*₹945 ಮೌಲ್ಯದ KENSTAR DRY IRONನ ಖರೀದಿಯ ಮೇಲೆ
ಯಾವುದೇ ಎಲ್.ಇ.ಡಿ ಟಿವಿ ಖರೀದಿಸಿ ಮತ್ತು ಪಡೆಯಿರಿ
ಫ್ಲಾಟ್ 67% ರಿಯಾಯಿತಿ*
*₹14,990 ಮೌಲ್ಯದ LG SOUNDBARನ ಖರೀದಿಯ ಮೇಲೆ
ಯಾವುದೇ ರೆಫ್ರಿಜರೇಟರ್ ಖರೀದಿಸಿ ಮತ್ತು ಪಡೆಯಿರಿ
ಫ್ಲಾಟ್ 63% ರಿಯಾಯಿತಿ*
*₹25,990 ಮೌಲ್ಯದ KAFF CHIMNEYನ ಖರೀದಿಯ ಮೇಲೆ
ಯಾವುದೇ ಡ್ರೈಯರ್ ಖರೀದಿಸಿ ಮತ್ತು ಪಡೆಯಿರಿ
ಫ್ಲಾಟ್ 74% ರಿಯಾಯಿತಿ*
*₹3,990 ಮೌಲ್ಯದ NIRLEP 4 PCS COOKWARE SETನ ಖರೀದಿಯ ಮೇಲೆ
ಯಾವುದೇ ಕಿಚನ್ ಅಪ್ಲೈಯನ್ಸಸ್ ಖರೀದಿಸಿ ಮತ್ತು ಪಡೆಯಿರಿ
ಫ್ಲಾಟ್ 70% ರಿಯಾಯಿತಿ*
*₹3,990 ಮೌಲ್ಯದ ZEBRONICS SMART WATCHನ ಖರೀದಿಯ ಮೇಲೆ
ಯಾವುದೇ ಮೈಕ್ರೋವೇವ್ ಖರೀದಿಸಿ ಮತ್ತು ಪಡೆಯಿರಿ
ಫ್ಲಾಟ್ 44% ರಿಯಾಯಿತಿ*
*₹1,770 ಮೌಲ್ಯದ V-GUARD ROOM HEATERನ ಖರೀದಿಯ ಮೇಲೆ
ಯಾವುದೇ ಡಿಶ್‌ವಾಶರ್ ಖರೀದಿಸಿ ಮತ್ತು ಪಡೆಯಿರಿ
ಫ್ಲಾಟ್ 43% ರಿಯಾಯಿತಿ*
*₹999 ಮೌಲ್ಯದ BUTTERFLY NON STICK COOKWAREನ ಖರೀದಿಯ ಮೇಲೆ
ಯಾವುದೇ ಏರ್ ಕಂಡಿಷನರ್ ಖರೀದಿಸಿ ಮತ್ತು ಪಡೆಯಿರಿ
ಫ್ಲಾಟ್ 62% ರಿಯಾಯಿತಿ*
*₹19,990 ಮೌಲ್ಯದ 32 HD READY LEDನ ಖರೀದಿಯ ಮೇಲೆ
ಯಾವುದೇ ಹೋಮ್ ಥಿಯೇಟರ್/ಸೌಂಡ್ ಬಾರ್ ಖರೀದಿಸಿ ಮತ್ತು ಪಡೆಯಿರಿ
ಫ್ಲಾಟ್ 75% ರಿಯಾಯಿತಿ*
*₹11,500 ಮೌಲ್ಯದ ZEBRONICS SMART WATCHನ ಖರೀದಿಯ ಮೇಲೆ
ಮಾದನಾಯಕನಹಳ್ಳಿ ದೂ: 90362 89550
ಗೌರಿಬಿದನೂರು ದೂ: 90354 99244
ಮಾಗಡಿರಸ್ತೆ ದೂ: 90362 89557
ಹೆಸರಘಟ್ಟ ಮುಖ್ಯ ರಸ್ತೆ ದೂ: 90362 89551
ಕೆಆರ್ ಪುರಂ ದೂ: 9019929881
ಅಂದ್ರಹಳ್ಳಿ ದೂ: 95918 35070
ಚಿಕ್ಕಜಾಲ ದೂ: 95918 32080
ಅತ್ತಿಬೆಲೆ ದೂ:99009 77747
ಹೆಬ್ಬಗೋಡಿ ದೂ: 90350 50023.
ಭಾರ್ತಿಯಾ ಮಾಲ್ ದೂ: 70900 00981
ಮಂತ್ರಿ ಮಾಲ್ ದೂ:95919 25353
ಕೆಂಗೇರಿ ದೂ: 99009 77712
ಸಹಕಾರನಗರ ದೂ:90199 29882
ದೊಡ್ಡಬಳ್ಳಾಪುರ ದೂ:77602 12888
ಎಲೆಕ್ಟ್ರಾನಿಕ್ ಸಿಟಿ ದೂ:9591103536
ಕನಕಪುರ ಮುಖ್ಯ ರಸ್ತೆ ದೂ:90082 20739
ಜಾಲಹಳ್ಳಿ ಕ್ರಾಸ್ ದೂ:9008220804
ಆರ್.ಟಿ.ನಗರ ದೂ:91080 65665
ಬನಶಂಕರಿ ದೂ:9035499199
ಬನ್ನೇರುಘಟ್ಟ ರೋಡ್ ದೂ:9035422500
ಬ್ರಿಗೇಡ್ ರಸ್ತೆ ದೂ:90354 99066
ಬಸವನಗುಡಿ ದೂ:90354 99244
ಗಾಂಧಿನಗರ ದೂ:9035499311
ಹೊಸೂರು ರಸ್ತೆ ದೂ:9035499022
ಹೆಚ್‌ಆರ್‌ಬಿಆರ್ ಲೇಔಟ್ ದೂ:90354 99177
ಇಂದಿರಾನಗರ ದೂ:9035499255
ಜಯನಗರ ದೂ:90354 99077
ಜೆ.ಪಿ.ನಗರ ದೂ:9606922698
ಕತ್ರಿಗುಪ್ಪೆ ದೂ:9035499288
ಕೋರಮಂಗಲ ದೂ:90354 11200
ಮಲ್ಲೇಶ್ವರಂ ದೂ:41411663
ಮತ್ತಿಕೆರೆ ದೂ:90352 22377
ಮಾರತ್‌ಹಳ್ಳಿ ದೂ:90354 99011
ಮೈಸೂರು ರಸ್ತೆ ದೂ:90354 99188
ನಾಗರಭಾವಿ ದೂ:90354 99191
ನೆಲಮಂಗಲ ದೂ:9606922798
ರಾಜಾಜಿನಗರ ದೂ:9035499144
ಸದಾಶಿವನಗರ ದೂ:9035499088
ವಿಜಯನಗರ ದೂ:96069 22795
ಯಲಹಂಕ ದೂ:9036001315
ರಾಮನಗರ ದೂ:9606922697
ತುಮಕೂರು ದೂ:90082 18009
ಹೊಸೂರು ದೂ:04344 243633
ಕೋಲಾರ ದೂ:90082 20791
ಚಿಕ್ಕಬಳ್ಳಾಪುರ ದೂ:9591561669
*Terms & conditions apply. Finance at the sole discretion of the Finance company.Upto 20% Cashback & 1 EMI off on selected brands and models. Cash Back / vouchers will be credited to the customer bank account / BFL wallet after clearing 3 EMI. Upto Rs.6,000 Bajaj cash back / vouchers valid only in selected cities & valid only on Selected REF & AC'S. EMI offer on above products based on 12,18,24 & fixed emi schemes. Exchange offer valid on MRP and Product as to be in good working condition. * GST Extra.
133 ಮೆಗಾ ಸ್ಟೋರ್ಸ್, ದಕ್ಷಿಣ ಭಾರತದ ನಂ.1 ಗೃಹೋಪಯೋಗಿ ವಸ್ತುಗಳ ಮಾರಾಟಗಾರರು.
SHOP ONLINE @ www.giriasindia.com
"like" us on facebook HTTPS://WWW.FACEBOOK.COM/GIRIAS.INDIA
WE SUPPORT ROUND TABLE INDIA LADIES CIRCLE INDIA
www.roundtableindia.org www.ladiescircleindia.org

ಶನಿವಾರ ● ಆಗಸ್ಟ್ 5, 2023 ಪ್ರಜಾವಾಣಿ

ಅಕ್ಕಿ ಪೂರೈಸಲು ತೆಲಂಗಾಣ, ಆಂಧ್ರಪ್ರದೇಶ ಒಲವು: ಆಹಾರ ಸಚಿವ ಕೆ.ಎಚ್.ಮುನಿಯಪ್ಪ ಹೇಳಿಕೆ

ಸೆಪ್ಟೆಂಬರ್‌ನಲ್ಲಿ ಅಕ್ಕಿ ವಿತರಣೆಗೆ ಪ್ರಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಎಲ್ಲ ಸದಸ್ಯರಿಗೆ ಪ್ರತಿ ತಿಂಗಳಿಗೆ ತಲಾ ಐದು ಕೆ.ಜಿ. ಅಕ್ಕಿಯನ್ನು ಹೆಚ್ಚುವರಿಯಾಗಿ ಸೆಪ್ಟೆಂಬರ್ ತಿಂಗಳಿನಿಂದಲೇ ವಿತರಿಸಲು ಪ್ರಯತ್ನಿಸಲಾಗುತ್ತಿದೆ ಎಂದು ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ.ಎಚ್. ಮುನಿಯಪ್ಪ ತಿಳಿಸಿದರು.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯ ಸರ್ಕಾರಗಳು ಅಕ್ಕಿ ಪೂರೈಕೆಗೆ ಆಸಕ್ತಿ ವ್ಯಕ್ತಪಡಿಸಿವೆ. ಹೆಚ್ಚಿನ ದರದಲ್ಲಿ ಖರೀದಿ ಸಾಧ್ಯವಿಲ್ಲ. ಆದ್ದರಿಂದ ಭಾರತೀಯ ಆಹಾರ ನಿಗಮ (ಎಫ್‌ಸಿಐ) ಮುಕ್ತ ಮಾರುಕಟ್ಟೆ ಮಾರಾಟ ಯೋಜನೆ (ಒಎಂಎಸ್‌ಎಸ್) ಅಡಿಯಲ್ಲಿ ನಿಗದಿಪಡಿಸುವ ದರದಲ್ಲಿ ಅಕ್ಕಿ ಪೂರೈಸಿದರೆ ಖರೀದಿಗೆ ನಾವು ಸಿದ್ಧ ಎಂದು ಎರಡೂ ರಾಜ್ಯ ಸರ್ಕಾರಗಳಿಗೆ ತಿಳಿಸಿದ್ದೇವೆ' ಎಂದರು.

ಜುಲೈ ತಿಂಗಳಲ್ಲಿ ಒಂದು ಕೋಟಿ ಕುಟುಂಬಗಳಿಗೆ ₹ 566 ಕೋಟಿಯನ್ನು ನೇರ ನಗದು ವರ್ಗಾವಣೆ ಮೂಲಕ ನೀಡಲಾಗಿದೆ. ಹೆಚ್ಚು ಸಮಯ ನಗದು ಪಾತಿಸುವುದು ಸರಿಯಲ್ಲ ಎಂಬ ನಿರ್ಧಾರಕ್ಕೆ ಬರಲಾಗಿದೆ. ಅಕ್ಕಿ ಖರೀದಿಗೆ ಎಲ್ಲ ಪ್ರಯತ್ನಗಳೂ ನಡೆದಿವೆ. ಎಫ್‌ಸಿಐ ದರಕ್ಕೆ ಅಕ್ಕಿ ಪೂರೈಸಲು ಪೂರೈಕೆದಾರರು ಒಪ್ಪದೇ ಇದ್ದರೆ ಮಾತ್ರ ಕೆಲವು ತಿಂಗಳ ಕಾಲ ವಿಳಂಬವಾಗಬಹುದು ಎಂದು ಹೇಳಿದರು.

5.32 ಲಕ್ಷ ಕುಟುಂಬಗಳು ಮೂರು ತಿಂಗಳಲ್ಲಿ ಯಾವುದೇ ಪಡಿತರ ಪಡೆದಿಲ್ಲ. 19.27 ಪಡಿತರ ಚೀಟಿಗಳಿಗೆ ಆಧಾರ್ ಮತ್ತು ಬ್ಯಾಂಕ್ ಖಾತೆಗಳ ವಿವರ ಜೋಡಣೆಯಾಗಿಲ್ಲ. ಈ ಎಲ್ಲವೂ ಅನರ್ಹ ಪಡಿತರ ಚೀಟಿಗಳು ಎಂಬ ಅನುಮಾನವಿದೆ ಎಂದರು.

ಅಂಚೆ ಇಲಾಖೆಯ ಸಹಯೋಗದಲ್ಲಿ 170 ನ್ಯಾಯಬೆಲೆ ಅಂಗಡಿಗಳಲ್ಲಿ ಶಿಬಿರ ನಡೆಸಿ ಪಡಿತರ ಚೀಟಿದಾರರ ಬ್ಯಾಂಕ್ ಖಾತೆ ತೆರೆಯಲು ವ್ಯವಸ್ಥೆ ಮಾಡಲಾಗಿತ್ತು. ಈವರೆಗೆ 1.19 ಲಕ್ಷ ಪಡಿತರ ಚೀಟಿದಾರರ ಬ್ಯಾಂಕ್ ಖಾತೆ ತೆರೆಯಲಾಗಿದೆ ಎಂದು ತಿಳಿಸಿದರು.

ಪಡಿತರ ಚೀಟಿ ವಿತರಣೆಗೆ ಕ್ರಮ: ಜುಲೈ ಅಂತ್ಯಕ್ಕೆ ಬಿಪಿಎಲ್ ಪಡಿತರ ಚೀಟಿ ಕೋರಿರುವ 2.95 ಲಕ್ಷ ಅರ್ಜಿಗಳು ಬಾಕಿ ಇವೆ. ಅವುಗಳಿಗೆ ಸಂಬಂಧಿಸಿದಂತೆ ಪರಿಶೀಲನೆ ನಡೆಸಿ, ಶೀಘ್ರದಲ್ಲಿ ಪಡಿತರ ಚೀಟಿಗಳನ್ನು ವಿತರಿಸಲಾಗುವುದು. ಕೋರಿಕೆ ಆಧರಿಸಿ ಬಡತನ ರೇಖೆಗಿಂತ ಮೇಲಿರುವ (ಎಪಿಎಲ್) ಪಡಿತರ ಚೀಟಿಗಳ ವಿತರಣೆಗೂ ಕ್ರಮ ಕೈಗೊಳ್ಳಲಾಗುವುದು ಎಂದರು.

ಶ್ರೀಮಂತರು ಅಕ್ರಮವಾಗಿ ಬಿಪಿಎಲ್ ಪಡಿತರ ಚೀಟಿ ಹೊಂದಿರುವ ದೂರುಗಳಿವೆ. ಈ ಕುರಿತು ತನಿಖೆ ನಡೆಸಲಾಗುವುದು. ಅನರ್ಹರು ಹೊಂದಿರುವ ಬಿಪಿಎಲ್ ಪಡಿತರ ಚೀಟಿಗಳನ್ನು ರದ್ದುಗೊಳಿಸಲಾಗುವುದು. ಬಾಡಿಗೆ ಉದ್ದೇಶಕ್ಕೆ ನಾಲ್ಕು ಚಕ್ರದ ವಾಹನ ಹೊಂದಿರುವವರಿಗೆ ಮಾತ್ರ ಬಿಪಿಎಲ್ ಪಡಿತರ ಚೀಟಿ ನೀಡಬಹುದು. ಸ್ವಂತ ಬಳಕೆಯ ಕಾರು ಹೊಂದಿವರಿಗೆ ನೀಡಿದ ಬಿಪಿಎಲ್ ಪಡಿತರ ಚೀಟಿಗಳನ್ನು ರದ್ದು ಮಾಡಲಾಗುವುದು ಎಂದು ತಿಳಿಸಿದರು.

'ಆಹಾರ ಉಳಿತಾಯಕ್ಕೆ ಜಾಗೃತಿ ಅಭಿಯಾನ'

'ಆಹಾರ ಪದಾರ್ಥಗಳನ್ನು ಪೋಲು ಮಾಡುವುದನ್ನು ತಡೆಯಲು ಹೋಟೆಲ್ ಮಾಲೀಕರ ಸಂಘದ ಸಹಯೋಗದಲ್ಲಿ ಅಭಿಯಾನ ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ' ಎಂದು ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ.ಎಚ್. ಮುನಿಯಪ್ಪ ತಿಳಿಸಿದರು.

'ಈಗ ಅಂದಾಜಿನ ಪ್ರಕಾರ, ಶೇಕಡ 25ರಷ್ಟು ಆಹಾರ ಪದಾರ್ಥ ಪೋಲಾಗುತ್ತದೆ. ಅದನ್ನು ತಡೆದರೆ ಹಸಿವು ನೀಗಿಸಲು ಸಾಧ್ಯವಾಗಲಿದೆ' ಎಂದರು.

ಸುದ್ದಿ 2 ನಿಮಿಷ

ಮುಸ್ಲಿಮರ ಮೀಸಲಾತಿ ರದ್ದು ಅರ್ಜಿ ವಿಚಾರಣೆ ಮುಂದೂಡಿಕೆ

ನವದೆಹಲಿ: ಹಿಂದುಳಿದ ವರ್ಗಗಳ ಕೋಟಾದಲ್ಲಿ ಉದ್ಯೋಗ ಹಾಗೂ ಶಿಕ್ಷಣದಲ್ಲಿ ಮುಸ್ಲಿಮರಿಗೆ ನೀಡಿದ್ದ ಶೇ 4ರಷ್ಟು ಮೀಸಲಾತಿಯನ್ನು ಕರ್ನಾಟಕ ಸರ್ಕಾರ ಹಿಂಪಡೆದಿರುವುದನ್ನು ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಶುಕ್ರವಾರ ಮುಂದೂಡಿದೆ.

ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಹಾಗೂ ಎಸ್‌ವಿಎನ್ ಭಟ್ಟಿ ಅವರನ್ನು ಒಳಗೊಂಡ ದ್ವಿಸದಸ್ಯ ಪೀಠದಲ್ಲಿ ಅರ್ಜಿಯ ವಿಚಾರಣೆ ನಿಗದಿಯಾಗಿತ್ತು. ವಿಚಾರಣೆ ಮುಂದೂಡಬೇಕು ಎಂದು ಅರ್ಜಿದಾರರು ಹಾಗೂ ಕರ್ನಾಟಕ ಸರ್ಕಾರದ ವಕೀಲರು ಮನವಿ ಮಾಡಿದರು. ಬಳಿಕ ವಿಚಾರಣೆಯನ್ನು ನಾಲ್ಕು ವಾರ ಮುಂದೂಡಲಾಯಿತು.

ಮುಸ್ಲಿಮರ ಶೇ 4ರಷ್ಟು ಮೀಸಲಾತಿ ಹಿಂಪಡೆದ ಕರ್ನಾಟಕ ಸರ್ಕಾರದ ಮಾರ್ಚ್ 27ರ ಆದೇಶ ಪ್ರಶ್ನಿಸಿ ಎಲ್. ಗುಲಾಮ್ ರಸೂಲ್ ಮತ್ತು ಇತರರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. 'ಮುಸ್ಲಿಮರನ್ನು ಒಬಿಸಿ ಪಟ್ಟಿಯಿಂದ ಕೈಬಿಟ್ಟಿರುವುದು ಕಾನೂನು ಬಾಹಿರ ಮತ್ತು ಆರ್ಥಿಕವಾಗಿ ದುರ್ಬಲ ವರ್ಗದ ಪಟ್ಟಿಗೆ ಸೇರಿಸಿರುವುದು ಕೂಡ ಕಾನೂನಿಗೆ ವಿರುದ್ಧ' ಎಂದು ಅರ್ಜಿದಾರರು ದೂರಿದ್ದರು.

ಗರ್ಭಿಣಿ ಬಾಲಕಿಯರು 49 ಎಫ್‌ಐಆರ್ ದಾಖಲು

ಹೊಸಪೇಟೆ (ವಿಜಯನಗರ): ವಿಜಯನಗರ ಜಿಲ್ಲೆಯಲ್ಲಿ ಬಾಲಕಿಯರು ಗರ್ಭಿಣಿಯರಾಗಿರುವ 59 ಪ್ರಕರಣಗಳಲ್ಲಿ 49 ಪ್ರಕರಣಗಳಿಗೆ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

'ಹೊಸಪೇಟೆ ತಾಲ್ಲೂಕಿನಲ್ಲಿ 12, ಹೂವಿನ ಹಡಗಲಿಯಲ್ಲಿ 22, ಕೂಡ್ಲಿಗಿಯಲ್ಲಿ 14, ಹಗರಿಬೊಮ್ಮನಹಳ್ಳಿಯಲ್ಲಿ ಎಂಟು ಹಾಗೂ ಹರಪನಹಳ್ಳಿಯಲ್ಲಿ ಮೂರು ಬಾಲಕಿಯರು ಗರ್ಭಿಣಿಯಾಗಿದ್ದ ಪ್ರಕರಣಗಳು ಆರೋಗ್ಯ ಇಲಾಖೆಯಲ್ಲಿ ದಾಖಲಾಗಿದ್ದವು. ಒಂದು ಪ್ರಕರಣವನ್ನು ವೈದ್ಯಕೀಯ ಪರೀಕ್ಷೆಗೆ ಕಳುಹಿಸಿಕೊಡಲಾಗಿದ್ದು, ನಾಲ್ಕು ಪ್ರಕರಣಗಳು ಬೇರೆ ಜಿಲ್ಲೆಗಳಿಗೆ ವರ್ಗಾವಣೆಗೊಂಡಿವೆ. ಉಳಿದ ಐದು ಪ್ರಕರಣಗಳಲ್ಲಿ ಬಾಲಕಿಯರು ಪ್ರಾಪ್ತ ವಯಸ್ಸಿಗೆ ಬಂದಿರುವುದು ದೃಢಪಟ್ಟಿದೆ' ಎಂದು ಡಿಎಚ್‌ಒ ಕಚೇರಿ ಶುಕ್ರವಾರ 'ಪ್ರಜಾವಾಣಿ'ಗೆ ಮಾಹಿತಿ ನೀಡಿದೆ.

ಜೂನ್ 18ರಂದು ಜಿಲ್ಲೆಗೆ ಭೇಟಿ ನೀಡಿದ್ದ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶಶಿಧರ್ ಕೋಸಂಬೆ ಅವರು ಪರಿಶೀಲನೆ ನಡೆಸಿದ್ದ ವೇಳೆ 59 ಬಾಲಕಿಯರು ಗರ್ಭಿಣಿಯರಾಗಿರುವ ಮಾಹಿತಿ ನೀಡಲಾಗಿತ್ತು. ಇದನ್ನು ಗಂಭೀರವಾಗಿ ಪರಿಗಣಿಸಿದ್ದ ಮಕ್ಕಳ ರಕ್ಷಣಾ ಆಯೋಗ ಮುಂದೆ ಇಂತಹ ಪ್ರಸಂಗ ಮರುಕಳಿಸದಂತೆ ನೋಡಿಕೊಳ್ಳಬೇಕು ಎಂದು ಸೂಚಿಸಿತ್ತು.

'ಗುತ್ತಿಗೆದಾರರಿಂದ ಕಮಿಷನ್ ಸಂಗ್ರಹ'

ಒಂದನೇ ಪುಟದಿಂದ...

ಗ್ಯಾರಂಟಿ ಗೊಂದಲ ಮಾಡಿಕೊಂಡು, ವಿಧಾನಸಭೆ ಕ್ಷೇತ್ರಗಳ ಅಭಿವೃದ್ಧಿಗೆ ಹಣ ಇಲ್ಲ ಎಂದು ಸಬೂಬು ಹೇಳುತ್ತಿದ್ದಾರೆ. ವಾಸ್ತವದಲ್ಲಿ ಖಜಾನೆ ಸಮೃದ್ಧವಾಗಿದೆ ಎಂದು ಹೇಳಿದರು.

'ಗ್ಯಾರಂಟಿಗಳಿಗೆ ಗರಿಷ್ಠ ₹ 25 ಸಾವಿರ ಕೋಟಿ ಸಾಕು. ಕಳೆದ ವರ್ಷ ₹ 40 ಸಾವಿರ ಕೋಟಿ ಹೆಚ್ಚುವರಿ ತೆರಿಗೆ ಆದಾಯ ಬಂದಿದೆ. ತೆರಿಗೆಯ ಎಲ್ಲಾ ಬಾಬ್ತುಗಳಲ್ಲಿ ನಿರೀಕ್ಷೆಗೂ ಮೀರಿ ಸಂಗ್ರಹವಾಗಿದೆ. ಕೇಂದ್ರ ಸರಕಾರದಿಂದಲೂ ಬಾಕಿ ಇಲ್ಲ. ಹಾಗಾದರೆ 14 ಬಜೆಟ್ ಮಂಡಿಸಿದ ಮಹಾನುಭಾವ ಕೊರತೆ ಬಜೆಟ್ ಮಂಡಿಸಿದ್ದು ಯಾಕೆ? ಧೈರ್ಯವಿದ್ದರೆ ಶ್ವೇತಪತ್ರ ಹೊರಡಿಸಲಿ' ಎಂದು ಒತ್ತಾಯಿಸಿದರು.

ದಶಕದ ಹಿಂದಿನ ಶಿಫಾರಸು ಜಾರಿಗೆ ಸಿ.ಎಸ್.ದ್ವಾರಕಾನಾಥ್ ಸಲಹೆ

ಅಲೆಮಾರಿಗಳಿಗೆ ಕಾಲಮಿತಿಯ ಆಯೋಗ?

ಪ್ರಜಾವಾಣಿ ವಾರ್ತೆ

ದ್ವಾರಕಾನಾಥ್

ಬೆಂಗಳೂರು: ರಾಜ್ಯದಲ್ಲಿನ ಅಲೆಮಾರಿಗಳು ಸಂಕಷ್ಟದಲ್ಲಿದ್ದು, ಸಮುದಾಯದ ಎಲ್ಲ ಸಮಸ್ಯೆಗಳಿಗೂ ಶಾಶ್ವತ ಪರಿಹಾರ ದೊರಕಿಸಲು ರಾಜ್ಯ ಹಿಂದುಳಿದ ವರ್ಗಗಳ ಆಯೋಗ ದಶಕದ ಹಿಂದೆ ಮಾಡಿದ್ದ ಶಿಫಾರಸಿನಂತೆ ಕಾಲಮಿತಿ ಒಳಗೊಂಡ 'ಅಲೆಮಾರಿ ಆಯೋಗ' ರಚಿಸಬೇಕು ಎಂದು ಆಯೋಗದ ಮಾಜಿ ಅಧ್ಯಕ್ಷ ಸಿ.ಎಸ್.ದ್ವಾರಕಾನಾಥ್ ಸಲಹೆ ನೀಡಿದ್ದಾರೆ.

ಅಲೆಮಾರಿಗಳು ಎಲ್ಲಿ ವಾಸವಾಗಿದ್ದಾರೆ ಎಂಬ ಮಾಹಿತಿ ಸರ್ಕಾರದ ಬಳಿ ಇಲ್ಲ. ಪಾಳು ಮಂಟಪ, ರೈಲುನಿಲ್ದಾಣ, ಬಸ್‌ನಿಲ್ದಾಣ, ರಸ್ತೆ ಬದಿ, ಹಳ್ಳ, ಕುರುಚಲು ಬೆಳೆದ ರಣಬಿಸಿಲಿನ ಒಣಭೂಮಿ, ಸ್ಮಶಾನಗಳಲ್ಲಿ ಕೌದಿ, ಹರಿದ ಹಳೇಸೀರೆ, ಗೋಣಿಚೀಲಗಳ ಗುಡಾರಗಳನ್ನು ಹಾಕಿಕೊಂಡು ಬದುಕುತ್ತಿರುವ ಅಲೆಮಾರಿ, ಅರೆ ಅಲೆಮಾರಿಗಳಿಗೆ ಸರ್ಕಾರದ ಅನುದಾನ, ಸಾಲ, ತರಬೇತಿ, ಮನೆ, ಶಿಕ್ಷಣ, ಆರೋಗ್ಯದ ಯಾವ ಸೌಲಭ್ಯಗಳೂ ತಲುಪುತ್ತಿಲ್ಲ.

ಅಲೆಮಾರಿ ಸಮುದಾಯಗಳ ಗುರುತಿಸುವಿಕೆಯ ಗೊಂದಲಗಳನ್ನು ಸರಿಪಡಿಸಬೇಕಿದೆ. ಹಲವು ಪ್ರವರ್ಗಗಳಲ್ಲಿ ಅವೈಜ್ಞಾನಿಕವಾಗಿ ಆಗಿರುವ ಹಂಚಿಕೆ ಸರಿಪಡಿಸಬೇಕಿದೆ. ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಮುಸ್ಲಿಂ ಅಲೆಮಾರಿಗಳೂ ಸೇರಿದಂತೆ 46 ಉಪ ಪಂಗಡಗಳು, ಪರಿಶಿಷ್ಟ ಜಾತಿ ಪಟ್ಟಿಯಲ್ಲಿ 51 ಅಲೆಮಾರಿಗಳು, ಪರಿಶಿಷ್ಟ ಪಂಗಡದಲ್ಲಿ 23 ಅಲೆಮಾರಿಗಳು ಹಂಚಿಹೋಗಿವೆ. ಯಾವ ಪಟ್ಟಿಗೂ ಸೇರದ ಅನೇಕ ಅಲೆಮಾರಿ ಸಮುದಾಯಗಳಿವೆ. ಅಧಿಕಾರಿಗಳಿಗೆ ಅಲೆಮಾರಿಗಳ ಪರ್ಯಾಯ ಪದಗಳ ಜ್ಞಾನವಿಲ್ಲದ ಕಾರಣ ಗೊಂದಲಗಳು ಸೃಷ್ಟಿಯಾಗಿವೆ. ದೊಂಬಿದಾಸ, ಚೆನ್ನದಾಸ ಹಾಗೂ ಕಿಳ್ಳೇಕ್ಯಾತ, ಶಿಳ್ಳೇಕ್ಯಾತ ಬೇರೆಬೇರೆ ಪಟ್ಟಿಯಲ್ಲಿರುವುದು ಇದಕ್ಕೆ ಉದಾಹರಣೆ. ಇದರಿಂದ ಜಾತಿ ಪ್ರಮಾಣಪತ್ರ ಸಿಗುತ್ತಿಲ್ಲ ಎಂದು ಪತ್ರದಲ್ಲಿ ವಿವರಿಸಿದ್ದಾರೆ.

ಅಲೆಮಾರಿ ಆಯೋಗ ರಚನೆಯಿಂದ ಎಲ್ಲ ಸಮಸ್ಯೆಗಳಿಗೂ ಪರಿಹಾರ ದೊರಕಿಸಬಹುದು. ಅದಕ್ಕಾಗಿ ಶಾಶ್ವತ ಆಯೋಗದ ರಚನೆಯ ಆವಶ್ಯಕತೆಯೂ ಇಲ್ಲ. ಕನಿಷ್ಠ ಮೂರು ವರ್ಷದ ಕಾಲಮಿತಿಯ ಆಯೋಗ ರಚಿಸಿದರೂ ಸಾಕು. ಅಂಕಿಅಂಶ ಕಲೆ ಹಾಕುವುದು, ಸಾರ್ವಜನಿಕ ವಿಚಾರಣೆ, ದ್ವಿತೀಯ ಮೂಲದ ಮಾಹಿತಿ, ಕುಲಶಾಸ್ತ್ರ ಅಧ್ಯಯನ ಮತ್ತು ಸ್ಥಳ ಪರಿಶೀಲನೆ ಮಾಡಿ ನಿಖರವಾದ ಸಲಹೆ, ಶಿಫಾರಸುಗಳನ್ನು ಸಲ್ಲಿಸುವ ಜವಾಬ್ದಾರಿಯನ್ನು ಆಯೋಗಕ್ಕೆ ನೀಡಬೇಕು.

2006 ರಲ್ಲಿ ಕೇಂದ್ರ ಸರ್ಕಾರ ಬಾಲಕೃಷ್ಣ ರೇಣುಕೆ ಅವರ ಅಧ್ಯಕ್ಷತೆಯಲ್ಲಿ ರಾಷ್ಟ್ರೀಯ ಅಲೆಮಾರಿಗಳ ಆಯೋಗ ರಚಿಸಿತ್ತು. ಅದೇ ಮಾದರಿಯಲ್ಲಿ ರಾಜ್ಯ ಸರ್ಕಾರವೂ ಕ್ರಮ ಕೈಗೊಳ್ಳಬೇಕು. ಹಿಂದೆ ತಾವು ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಅಲೆಮಾರಿಗಳಿಗೆ ಆಯೋಗ ರಚಿಸಲು ಸರ್ಕಾರಕ್ಕೆ ಶಿಫಾರಸು ಮಾಡಲಾಗಿತ್ತು. ಅಲೆಮಾರಿ ಜನಾಂಗದವರ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸ್ಥಿತಿಗತಿಗಳ ಬಗ್ಗೆ ಸಮೀಕ್ಷೆ ನಡೆಸಲು ಸಲಹೆ ನೀಡಲಾಗಿತ್ತು ಎಂದು ಮಾಹಿತಿ ನೀಡಿದ್ದಾರೆ.

ತಮ್ಮ ಸ್ಥಿತಿಗತಿ ಅಧ್ಯಯನ ಮಾಡಿ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ ಗುರುತಿಸಬೇಕು. ಸಿದ್ದರಾಮಯ್ಯ ಅವರು ತಕ್ಷಣ ಆಯೋಗ ರಚನೆಗೆ ಕ್ರಮ ಕೈಗೊಳ್ಳಬೇಕು

ಬಿ.ಎಲ್.ಹನುಮಂತಪ್ಪ

ಅಧ್ಯಕ್ಷರು, ಕರ್ನಾಟಕ ರಾಜ್ಯ ಅಲೆಮಾರಿ ಬುಡಕಟ್ಟು ಮಹಾಸಭಾ

ಬಾಲಕಿ ಮೇಲೆ ಅತ್ಯಾಚಾರ: ಬಂಧನ

ಒಂದನೇ ಪುಟದಿಂದ...

ಮನೆಗೆ ಕರೆದೊಯ್ದು ಕೃತ್ಯ: 'ಶಾಲೆ ಆವರಣದಲ್ಲಿಯೇ ಆರೋಪಿ ಪುಷ್ಪರಾಜ್ ಮನೆ ಇದೆ. ಅದೇ ಮನೆಗೆ ವಿದ್ಯಾರ್ಥಿನಿಯನ್ನು ಕರೆದೊಯ್ದು ಆರೋಪಿ ಕೃತ್ಯ ಎಸಗಿದ್ದಾನೆ' ಎಂದು ಪೊಲೀಸರು ಹೇಳಿದರು.

'ಗುರುವಾರ ಬೆಳಿಗ್ಗೆ 8 ಗಂಟೆ ಸುಮಾರಿಗೆ ಎಂದಿನಂತೆ ಶಾಲೆಗೆ ಬಂದಿದ್ದಳು. ಬೆಳಿಗ್ಗೆ 11 ಗಂಟೆ ಸುಮಾರಿಗೆ ಶಾಲೆಯ ತರಗತಿ ಕೊಠಡಿಯಲ್ಲಿ ಬಾಲಕಿ ಒಂಟಿಯಾಗಿ ಕುಳಿತಿದ್ದಳು. ಇತರೆ ಮಕ್ಕಳು ಆಟವಾಡಲು ಮೈದಾನಕ್ಕೆ ಹೋಗಿದ್ದರು.'

'ಬಾಲಕಿಯನ್ನು ಗಮನಿಸಿದ್ದ ಆರೋಪಿ, ಆಕೆಯ ಬಳಿ ಹೋಗಿದ್ದ. 'ನನ್ನ ಜೊತೆ ಬಾ. ನಿನಗೆ ಕೇಕ್ ಕೊಡುತ್ತೇನೆ' ಎಂದು ಬಾಲಕಿಯನ್ನು ಮನೆಗೆ ಕರೆದೊಯ್ದಿದ್ದ. ಇದೇ ಸಂದರ್ಭದಲ್ಲಿ ಬಾಲಕಿ ಮೇಲೆ ಅತ್ಯಾಚಾರ ಎಸಗಿದ್ದನೆಂಬುದು ಸದ್ಯದ ತನಿಖೆಯಿಂದ ಗೊತ್ತಾಗಿದೆ' ಎಂದು ತಿಳಿಸಿದರು.

'ಕೃತ್ಯದ ಬಳಿಕ ಆರೋಪಿ, ಬಾಲಕಿಗೆ ಕೇಕ್ ಕೊಟ್ಟು ಮನೆಯಿಂದ ಹೊರಗೆ ಕಳುಹಿಸಿದ್ದ. ಸಂಜೆ 4.30 ಸುಮಾರಿಗೆ ಎಂದಿನಂತೆ ಮನೆಗೆ ಹೋಗಿದ್ದ ಬಾಲಕಿ, ಹೊಟ್ಟೆ ನೋವಿನಿಂದ ಬಳಲುತ್ತಿದ್ದಳು. ಜೊತೆಗೆ, ಒಳ ಉಡುಪಿನಲ್ಲಿ ರಕ್ತಸ್ರಾವವಾಗಿತ್ತು. ಅದನ್ನು ಗಮನಿಸಿದ್ದ ತಾಯಿ, ಆಸ್ಪತ್ರೆಗೆ ಕರೆದೊಯ್ದಿದ್ದರು.'

'ತಪಾಸಣೆ ನಡೆಸಿದ ವೈದ್ಯರು, ಅತ್ಯಾಚಾರವಾಗಿರುವುದಾಗಿ ತಿಳಿಸಿದ್ದರು. ನಂತರವೇ ಪೋಷಕರು ಠಾಣೆಗೆ ಬಂದು ದೂರು ನೀಡಿದ್ದಾರೆ. ಬಾಲಕಿ ಸಹ ಅತ್ಯಾಚಾರದ ಬಗ್ಗೆ ಹೇಳಿಕೆ ನೀಡಿದ್ದಾಳೆ' ಎಂದು ಪೊಲೀಸರು ಹೇಳಿದರು.

'ಧರ್ಮಸ್ಥಳ ಕ್ಷೇತ್ರ ಅವಹೇಳನ': ಹೋರಾಟ

ಸೌಜನ್ಯಾ ಕೊಲೆ ಪ್ರಕರಣ: ಮೊಳಗಿದ 'ಖಾವಂದರ ಜೊತೆ ನಾವಿದ್ದೇವೆ' ಘೋಷಣೆ

ಪ್ರಜಾವಾಣಿ ವಾರ್ತೆ

ಉಜಿರೆ (ದಕ್ಷಿಣ ಕನ್ನಡ): 2012ರಲ್ಲಿ ಅತ್ಯಾಚಾರಕ್ಕೆ ಒಳಗಾಗಿ ಕೊಲೆಯಾದ ಸೌಜನ್ಯಾ ಪ್ರಕರಣದಲ್ಲಿ ಧರ್ಮಸ್ಥಳ ಕ್ಷೇತ್ರ ಹಾಗೂ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಅವರ ಬಗ್ಗೆ ಕೆಲವರು ಅವಹೇಳನಕಾರಿ ಹೇಳಿಕೆ ನೀಡುತ್ತಿದ್ದಾರೆ ಎಂದು ಆರೋಪಿಸಿ ಹಾಗೂ ಇದನ್ನು ಖಂಡಿಸಿ ಶುಕ್ರವಾರ ಇಲ್ಲಿ 'ಅಖಿಲ ಕರ್ನಾಟಕ ಶ್ರೀ ಮಂಜುನಾಥ ಸ್ವಾಮಿ ಭಕ್ತವೃಂದ' ಸಂಘಟನೆಯ ನೇತೃತ್ವದಲ್ಲಿ ಸಮಾವೇಶ, ಜಾಥಾ ಮತ್ತು ಹಕ್ಕೊತ್ತಾಯ ಕಾರ್ಯಕ್ರಮ ನಡೆಯಿತು.

ನಾಡಿನ ನಾನಾ ಭಾಗಗಳಿಂದ ಬಂದಿದ್ದ ಅಪಾರ ಸಂಖ್ಯೆಯ ಪ್ರತಿಭಟನಕಾರರು 'ಖಾವಂದರ ಜೊತೆ ನಾವಿದ್ದೇವೆ' ಎಂದು ಘೋಷಣೆ ಕೂಗುವುದರ ಜೊತೆಯಲ್ಲಿ ಸೌಜನ್ಯಾ ಕೊಲೆಯ ನೈಜ ಆರೋಪಿಗಳನ್ನು ಪತ್ತೆ ಹಚ್ಚಬೇಕು ಎಂಬ ಒತ್ತಾಯವನ್ನೂ ಮುಂದಿಟ್ಟರು. 'ಸುಳ್ಳು ಸಾಯಲಿ, ಧರ್ಮ ಗೆಲ್ಲಲಿ', 'ಮತೀಯವಾದಿಗಳ ಕುತಂತ್ರ ನಿಲ್ಲದೇ ಇದ್ದರೆ ರಾಜ್ಯದಾದ್ಯಂತ ಹೋರಾಟ ಹಮ್ಮಿಕೊಳ್ಳಲಾಗುವುದು' ಎಂಬ ಹೇಳಿಕೆಗಳು ವೇದಿಕೆಯಿಂದ ಕೇಳಿಬಂದವು.

ಪಟ್ಟಣದ ಜನಾರ್ದನ ದೇವಸ್ಥಾನದ ರಥಬೀದಿಯಲ್ಲಿ ಸೇರಿದ ಪ್ರತಿಭಟನಕಾರರು 'ಸೌಜನ್ಯಾ ಮತ್ತು ಕುಟುಂಬಕ್ಕೆ ನ್ಯಾಯ ಸಿಗಲಿ', 'ಸತ್ಯದ ಅನಾವರಣವಾಗಲಿ', 'ಸುಳ್ಳು ಆರೋಪಗಳು ನಿಲ್ಲಲಿ', 'ದ್ವೇಷಕ್ಕೆ ಸಾಟಿಯಾದ ಶತ್ರುವಿಲ್ಲ', 'ಶ್ರೀ ಕ್ಷೇತ್ರಕ್ಕೆ ಜಯವಾಗಲಿ', 'ಪೂಜ್ಯ ಹೆಗ್ಗಡೆಯವರಿಗೆ ಗೆಲುವಾಗಲಿ' ಎಂಬಿತ್ಯಾದಿ ಘೋಷಣಾ ಪತ್ರಗಳನ್ನು ಹಿಡಿದುಕೊಂಡಿದ್ದರು.

ನಂತರ ಸುಮಾರು ಒಂದೂವರೆ ಕಿಲೋಮೀಟರ್ ದೂರದಲ್ಲಿರುವ ಎಸ್‌ಡಿಎಂ ಕಾಲೇಜು ಮತ್ತು ರತ್ನವರ್ಮ ಹೆಗ್ಗಡೆ ಕ್ರೀಡಾಂಗಣದತ್ತ ಮೆರವಣಿಗೆ ನಡೆಯಿತು. ಘೋಷಣೆಗಳನ್ನು ಕೂಗುತ್ತ ಸಾಗಿದವರಲ್ಲಿ ಅವಿಭಜಿತ ದಕ್ಷಿಣ ಜಿಲ್ಲೆ, ನೆರೆಯ ಕಾಸರಗೋಡು, ದೂರದ ಹುಬ್ಬಳ್ಳಿ-ಧಾರವಾಡದ ವಿವಿಧ ಸಂಘಸಂಸ್ಥೆಗಳ ಪ್ರತಿನಿಧಿಗಳು, ಕಾಲೇಜು ವಿದ್ಯಾರ್ಥಿಗಳು, ಶಾಸಕರು, ಮಾಜಿ ಸಚಿವರು ಮತ್ತು ಸಮಾಜದ ವಿವಿಧ ವಲಯಗಳಲ್ಲಿ ಸಕ್ರಿಯರಾಗಿರುವ ಗಣ್ಯರು ಇದ್ದರು. ಸಮಾವೇಶ ಮತ್ತು ಮೆರವಣಿಗೆಯುದ್ದಕ್ಕೂ ಆಗಾಗ ಮಳೆ ಸುರಿದರೂ ಪ್ರತಿಭಟನಕಾರರ ಛಲ ಕುಗ್ಗಲಿಲ್ಲ.

ಎರಡು ತಿಂಗಳಲ್ಲಿ ಆರೋಪಿ ಸೆರೆ: ಎಸ್‌ಡಿಎಂ ಕಾಲೇಜು ಎದುರಲ್ಲಿ ನಿರ್ಮಿಸಿದ್ದ ವೇದಿಕೆಯಲ್ಲಿ ನಡೆದ ಸಭೆಯಲ್ಲಿ ಹಕ್ಕೊತ್ತಾಯದ ಪ್ರತಿಯನ್ನು ಬೆಳ್ತಂಗಡಿ ಶಾಸಕ ಹರೀಶ್ ಪೂಂಜ ಅವರಿಗೆ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ಶಾಸಕ ಹರೀಶ್ ಪೂಂಜ, 'ಕಾನೂನಿನ ಮೂಲಕ ಪ್ರಕರಣದ ತನಿಖೆ ನಡೆಸಿ ಕೊಲೆ ಆರೋಪಿಯನ್ನು ಸಮಾಜದ ಮುಂದೆ ಎರಡು ತಿಂಗಳೊಳಗೆ ತಂದು ನಿಲ್ಲಿಸಲಾಗುವುದು' ಎಂದು ಭರವಸೆ ನೀಡಿದರು.

ಉಜಿರೆಯಲ್ಲಿ ಶುಕ್ರವಾರ ನಡೆದ ಮೆರವಣಿಗೆಯ ನಂತರ ಎಸ್‌ಡಿಎಂ ಕಾಲೇಜು ಮುಂದೆ ಸೇರಿದ ಪ್ರತಿಭಟನಾಕಾರರು

ಮಾನಭಂಗಕ್ಕೆ ಯತ್ನ: ಸೌಜನ್ಯಾ ತಾಯಿ ದೂರು

'ಇಲ್ಲಿನ ಎಸ್‌ಡಿಎಂ ಕಾಲೇಜು ಬಳಿ ಶುಕ್ರವಾರ ನಡೆದ ಹಕ್ಕೊತ್ತಾಯ ಮಂಡನೆ ಸಭೆಯ ಸಂದರ್ಭದಲ್ಲಿ ಅಪರಿಚಿತರು ತಮ್ಮ ಮಾನಭಂಗಕ್ಕೆ ಯತ್ನಿಸಿದ್ದು ಮಗನ ಮೇಲೆ ಹಲ್ಲೆ ಮಾಡಿದ್ದಾರೆ' ಎಂದು ಸೌಜನ್ಯಾ ಅವರ ತಾಯಿ ಕುಸುಮಾವತಿ ದೂರಿದ್ದಾರೆ. ಈ ಕುರಿತು ಬೆಳ್ತಂಗಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರತಿಭಟನೆ ಸಭೆ ಮುಕ್ತಾಯಗೊಳ್ಳುತ್ತಿದ್ದಂತೆ ಸೌಜನ್ಯಾ ತಾಯಿ ಕುಸುಮಾವತಿ, ಸಹೋದರಿಯರಾದ ಸೌಂದರ್ಯಾ, ಸೌಹಾರ್ದ, ಸಹೋದರ ಜಯರಾಮ ಮತ್ತು ಇಬ್ಬರು ಸಂಬಂಧಿಕರು ವೇದಿಕೆಯ ಬಳಿ ಕಂಡುಬಂದರು.

'ನನ್ನ ಮಗಳ ಪರವಾಗಿ ನಡೆಯುತ್ತಿರುವ ಪ್ರತಿಭಟನೆ ಇದು. ಹೀಗಾಗಿ ವೇದಿಕೆ ಮೇಲೇರಲು ಅವಕಾಶ ನೀಡಬೇಕು' ಎಂದು ತಾಯಿ ಮನವಿ ಮಾಡಿದರು.

ಆದರೆ ಆಯೋಜಕರು ಮತ್ತು ಪೊಲೀಸರು ಇದಕ್ಕೆ ಅವಕಾಶ ನೀಡಲಿಲ್ಲ. ಕೆಲವರು ಘೋಷಣೆ ಕೂಗುತ್ತ ಅವರತ್ತ ಧಾವಿಸಿದರು. ಪೊಲೀಸರು ರಕ್ಷಣಾ ಕೋಟೆ ನಿರ್ಮಿಸಿದರು. ಈ ಸಂದರ್ಭದಲ್ಲಿ ಗೊಂದಲದ ವಾತಾವರಣ ನಿರ್ಮಾಣವಾಯಿತು. 'ಯಾರೋ ಕೆಲವರು ನನ್ನ ಕೊರಳಪಟ್ಟಿ ಹಿಡಿದು ಎಳೆದಿದ್ದಾರೆ' ಎಂದು ಜಯರಾಮ ದೂರಿದರು.

'ಪ್ರತಿಭಟನೆ ನಡೆಯುತ್ತಿರುವ ವಿಷಯ ತಿಳಿದು ಅಲ್ಲಿಗೆ ಕುಟುಂಬ ಸಮೇತ ಹೋಗಿದ್ದೆ. ವೇದಿಕೆಯತ್ತ ಹೋಗುತ್ತಿದ್ದಾಗ ಅಪರಿಚಿತ ವ್ಯಕ್ತಿಯೊಬ್ಬ ಇತರರ ಜೊತೆ ಸೇರಿಕೊಂಡು ಮೈ ಮುಟ್ಟಿ ಚೂಡಿದಾರದ ವೇಲ್ ಎಳೆದಿದ್ದಾನೆ. ಮಗ ಜಯರಾಮನ ಮೇಲೆಯೂ ಹಲ್ಲೆ ಮಾಡಿದ್ದಾನೆ' ಎಂದು ಕುಸುಮಾವತಿ ದೂರಿದ್ದಾರೆ.

ನಾಳೆ ಒಕ್ಕಲಿಗರ ಸಭೆ

ಮಂಗಳೂರು: 'ಸೌಜನ್ಯಾ ಕೊಲೆ ಪ್ರಕರಣದ ಮರು ತನಿಖೆಯನ್ನು ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ ನಡೆಸಿ, ನೈಜ ಆರೋಪಿಗಳನ್ನು ಬಂಧಿಸಬೇಕು' ಎಂದು ಒಕ್ಕಲಿಗರ ಯಾನೆ ಗೌಡರ ಸೇವಾ ಸಂಘವು ಆಗ್ರಹಿಸಿದೆ.

'ಜಿಲ್ಲಾ ಮಟ್ಟದ ಹೋರಾಟದ ಸ್ವರೂಪ ರೂಪಿಸುವ ಸಂಬಂಧ ಆ. 6ರಂದು ಪುತ್ತೂರಿನ ಒಕ್ಕಲಿಗರ ಭವನದಲ್ಲಿ ಸಭೆ ಹಮ್ಮಿಕೊಳ್ಳಲಾಗಿದೆ' ಎಂದು ಸಂಘದ ಅಧ್ಯಕ್ಷ ಗುರುದೇವ್ ಯು.ಬಿ. ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಗೃಹ ಜ್ಯೋತಿ'ಗೆ ಇಂದು ಚಾಲನೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ಚುನಾವಣೆ ಪ್ರಣಾಳಿಕೆಯಲ್ಲಿ ಘೋಷಿಸಿದ್ದ ಐದು ಗ್ಯಾರಂಟಿಗಳ ಪೈಕಿ ಪ್ರತಿ ಕುಟುಂಬಕ್ಕೆ 200 ಯೂನಿಟ್ ವಿದ್ಯುತ್ ಉಚಿತವಾಗಿ ನೀಡುವ 'ಗೃಹ ಜ್ಯೋತಿ' ಯೋಜನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶನಿವಾರ (ಆಗಸ್ಟ್ 5) ನಗರದಲ್ಲಿ ಚಾಲನೆ ನೀಡಲಿದ್ದಾರೆ.

ನಗರದ ನೂತನ ವಿದ್ಯಾಲಯ (ಎನ್‌ವಿ) ಮೈದಾನದಲ್ಲಿ ಬೆಳಿಗ್ಗೆ 11 ಗಂಟೆಗೆ ನಡೆಯುವ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಹತ್ತು ಫಲಾನುಭವಿಗಳಿಗೆ ಸಾಂಕೇತಿಕವಾಗಿ ಶೂನ್ಯ ದರದ ವಿದ್ಯುತ್ ಬಿಲ್ ನೀಡಿ ಯೋಜನೆಗೆ ಚಾಲನೆ ಕೊಡುವರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಇಂಧನ ಸಚಿವ ಕೆ.ಜೆ.ಜಾರ್ಜ್, ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ ಪಾಟೀಲ ಸೇರಿ ಹಲವು ಸಚಿವರು, ಶಾಸಕರು ಸಮಾರಂಭದಲ್ಲಿ ಭಾಗವಹಿಸುವರು.

'ಯೋಜನೆಯಡಿ ನೋಂದಾಯಿತ 1.41 ಕೋಟಿ ಮನೆಗಳಿಗೆ ಜುಲೈ ತಿಂಗಳ ವಿದ್ಯುತ್ ಬಳಕೆಯ ಶೂನ್ಯ ದರದ ವಿದ್ಯುತ್ ಬಿಲ್ ನೀಡಲಾಗುತ್ತಿದೆ. ಜುಲೈ 25ರ ವೇಳೆಗೆ ಜೆಸ್ಕಾಂನಲ್ಲಿ 20.21 ಲಕ್ಷ, ಬೆಸ್ಕಾಂನಲ್ಲಿ 54.99 ಲಕ್ಷ, ಚೆಸ್ಕಾಂನಲ್ಲಿ 20.49 ಲಕ್ಷ, ಹೆಸ್ಕಾಂನಲ್ಲಿ 30.66 ಲಕ್ಷ, ಮೆಸ್ಕಾಂನಲ್ಲಿ 14.53 ಲಕ್ಷ ಮತ್ತು ಎಚ್‌ಆರ್‌ಇಸಿಎಸ್‌ನಲ್ಲಿ 76,562 ಮನೆಗಳು ಯೋಜನೆಯಡಿ ನೋಂದಣಿಯಾಗಿವೆ' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

'ಆಗಸ್ಟ್ ತಿಂಗಳಲ್ಲಿ ನೋಂದಾಯಿಸಿದವರಿಗೂ ಮುಂದಿನ ತಿಂಗಳಿಂದ ಗೃಹ ಜ್ಯೋತಿಯ ಸೌಲಭ್ಯ ಲಭಿಸಲಿದೆ. ಕಾರ್ಯಕ್ರಮಕ್ಕೆ 15 ಸಾವಿರ ಜನ ಬರುವ ನಿರೀಕ್ಷೆ ಇದೆ. ಪ್ರತಿ ಜಿಲ್ಲೆಯಲ್ಲಿಯೂ ಕಾರ್ಯಕ್ರಮ ಆಯೋಜಿಸಿ ಫಲಾನುಭವಿಗಳಿಗೆ ಸಾಂಕೇತಿಕವಾಗಿ ಶೂನ್ಯ ದರದ ವಿದ್ಯುತ್ ಬಿಲ್ ನೀಡಲಾಗುವುದು. ನಿರುದ್ಯೋಗಿಗಳಿಗೆ ಮಾಸಿಕ ಭತ್ಯೆ ನೀಡುವ 'ಯುವ ನಿಧಿ' ಅನುಷ್ಠಾನದ ನೀಲನಕ್ಷೆ ಸಿದ್ಧವಾಗುತ್ತಿದೆ' ಎಂದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	113.46	3,461	3,284
ಹಾರಂಗಿ	2,859	2,858.10	2,000	2,166
ಕಬಿನಿ	2284.00	2,283	4,549	6,000
ಹೇಮಾವತಿ	2,922	2,914.80	2,215	200
ಲಿಂಗನಮಕ್ಕಿ	1,819	1,788.90	12,854	6,055
ಸೂಪಾ (ಮೀ)	564	545.70	10,913	2,291
ಮಾಣಿ	595	581.10	1,773	00
ತುಂಗಭದ್ರಾ	1,633	1,627.31	14,850	4,176
ಮಲಪ್ರಭಾ	2079.5	2,065.00	4,442	194
ಘಟಪ್ರಭಾ	2175	2,159.83	14,651	1,828
ಭದ್ರಾ	186	164.10	3,937	191
ಆಲಮಟ್ಟಿ (ಮೀ)	519.60	519.25	87,841	44,231
ನಾರಾಯಣಪುರ (ಮೀ)	492.25	491.55	42,000	38,770

*ನೆಲಮಟ್ಟದಿಂದ

ನಾಲ್ಕು ವರ್ಷಗಳಲ್ಲಿ 5,900 ದಲಿತರ ಮೇಲೆ ದೌರ್ಜನ್ಯ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ರಾಜ್ಯದಲ್ಲಿ ನಾಲ್ಕು ವರ್ಷಗಳಲ್ಲಿ ಪರಿಶಿಷ್ಟ ಜಾತಿಯ (ಎಸ್‌ಸಿ) 5,900 ಮಂದಿಯ ಮೇಲೆ ದೌರ್ಜನ್ಯ ನಡೆದಿದೆ ಎಂದು ಕೇಂದ್ರ ಗೃಹ ಸಚಿವಾಲಯ ರಾಜ್ಯಸಭೆಗೆ ತಿಳಿಸಿದೆ.

ಈ ಸಂಬಂಧ ರಾಜ್ಯಸಭೆಯಲ್ಲಿ ಲಿಖಿತ ಉತ್ತರ ನೀಡಿರುವ ಇಲಾಖೆಯ ರಾಜ್ಯ ಸಚಿವ ಅಜಯ್ ಕುಮಾರ್ ಮಿಶ್ರಾ, 'ನಾಲ್ಕು ವರ್ಷಗಳಲ್ಲಿ ಪರಿಶಿಷ್ಟ ಪಂಗಡದ (ಎಸ್‌ಟಿ) 1,303 ಮಂದಿಯ ಮೇಲೆ ದೌರ್ಜನ್ಯ ಆಗಿದೆ' ಎಂದು ತಿಳಿಸಿದ್ದಾರೆ. ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ (ಎನ್‌ಸಿಆರ್‌ಬಿ) ಈ ಸಂಬಂಧ ಗೃಹ ಇಲಾಖೆಗೆ 2021ರ ವರೆಗಿನ ಅಪರಾಧಗಳ ವರದಿ ನೀಡಿದೆ ಎಂದು ಮಾಹಿತಿ ನೀಡಿದ್ದಾರೆ.

ಸೇಫ್ ಸಿಟಿಗೆ ₹667 ಕೋಟಿ: ಕಾಂಗ್ರೆಸ್ ಸದಸ್ಯ ಕೆ.ಸಿ.ವೇಣುಗೋಪಾಲ್ ಪ್ರಶ್ನೆಗೆ ಪ್ರತ್ಯೇಕ ಉತ್ತರ ನೀಡಿರುವ ಸಚಿವರು, ಸೇಫ್ ಸಿಟಿ ಯೋಜನೆಯಡಿ ಬೆಂಗಳೂರಿಗೆ ₹667 ಕೋಟಿ ನೀಡಲು ಅನುಮೋದನೆ ನೀಡಲಾಗಿದೆ' ಎಂದು ತಿಳಿಸಿದ್ದಾರೆ.

'ಮಹಿಳೆಯರ ಮೇಲಿನ ಅಪರಾಧ ಪ್ರಕರಣಗಳನ್ನು ನಿಯಂತ್ರಿಸಲು ಬೆಂಗಳೂರು ಸೇರಿ ದೇಶದ ಎಂಟು ನಗರಗಳಲ್ಲಿ ಈ ಯೋಜನೆ ಅನುಷ್ಠಾನ ಮಾಡಲಾಗುತ್ತಿದೆ' ಎಂದಿದ್ದಾರೆ.

ದೌರ್ಜನ್ಯ ಪ್ರಕರಣಗಳು

ವರ್ಷ	ಎಸ್‌ಸಿ	ಎಸ್‌ಟಿ
2018	1,325	322
2019	1,504	327
2020	1,398	293
2021	1,673	361

29ರಿಂದ ಆರಾಧನಾ ಮಹೋತ್ಸವ

ಪ್ರಜಾವಾಣಿ ವಾರ್ತೆ

ರಾಯಚೂರು: ಇಲ್ಲಿಗೆ ಸಮೀಪದ ಮಂತ್ರಾಲಯದಲ್ಲಿ ರಾಘವೇಂದ್ರ ಸ್ವಾಮಿಗಳ 352ನೇ ಆರಾಧನಾ ಮಹೋತ್ಸವ ಆಗಸ್ಟ್ 29ರಿಂದ ಸೆಪ್ಟೆಂಬರ್ 4ರವರೆಗೆ ಮಠದ ಪೀಠಾಧಿಪತಿ ಸುಬುಧೇಂದ್ರ ತೀರ್ಥ ಸ್ವಾಮೀಜಿ ಸಮ್ಮುಖದಲ್ಲಿ ನಡೆಯಲಿದೆ.

ಆಗಸ್ಟ್ 29ರಂದು ಧ್ವಜಾರೋಹಣ, ಪ್ರಾರ್ಥನೋತ್ಸವ, ಪ್ರಭಾಉತ್ಸವ, ಧ್ಯಾನೋತ್ಸವ, 30ರಂದು ಶಂಖೋತ್ಸವ, ರಜತ ಮಂಟಪೋತ್ಸವ, 31ರಂದು ಪೂರ್ವಾರಾಧನೆ ಹಾಗೂ ರಜತ ಸಿಂಹ ವಾಹನೋತ್ಸವ ನಡೆಯಲಿದೆ. ಅಂದು ಸಂಜೆ 7ಕ್ಕೆ 'ರಾಘವೇಂದ್ರ ಅನುಗ್ರಹ ಪ್ರಶಸ್ತಿ' ಪ್ರದಾನ ಕಾರ್ಯಕ್ರಮ ಆಯೋಜಿಸಲಾಗಿದೆ.

ವಿದ್ವಾನ್ ರಾಮ ವಿಠ್ಠಲಾಚಾರ್ಯ, ಗಾರಕಿಪತಿ ನರಸಿಂಹರಾವ್, ಟಾಟಾ ಸನ್ಸ್‌ನ ಸಿಇಒ ಎಂ.ಎನ್. ಚಂದ್ರಶೇಖರನ್, ಪುಣೆಯ ಡಾ.ವಿಶ್ವನಾಥ ಕರಾಡ ಅವರಿಗೆ ಆಂಧ್ರಪ್ರದೇಶದ ರಾಜ್ಯಪಾಲ ನ್ಯಾಯಮೂರ್ತಿ ಅಬ್ದುಲ್ ನಜೀರ್ ಅವರು ಪ್ರಶಸ್ತಿ ಪ್ರದಾನ ಮಾಡುವರು.

ರಾಘವೇಂದ್ರ ಸ್ವಾಮೀಜಿ ಭಾವಚಿತ್ರವಿರುವ ಅಂಚೆಪತ್ರ ಬಿಡುಗಡೆ ಮಾಡಲಾಗುವುದು.

ಸೆ. 1ರಂದು ಮಧ್ಯಾರಾಧನೆ, ಅಭಿಷೇಕ, ಗಜರಜತ ಸ್ವರ್ಣ ರಥೋತ್ಸವ, ಸೆ.2ರಂದು ಉತ್ತರ ಆರಾಧನೆ ಹಾಗೂ ಪ್ರತಾಹ ಮಹಾರಥೋತ್ಸವ ನಡೆಯಲಿದೆ.

ನಿತ್ಯ ಕಾರ್ಯಕ್ರಮ: ಆರಾಧನಾ ಮಹೋತ್ಸವದ ಅಂಗವಾಗಿ ಧಾರ್ಮಿಕ, ಆಧ್ಯಾತ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

ಒಂದು ವಾರ ಪ್ರತಿದಿನ ಬೆಳಗಿನ ಜಾವ 4ರಿಂದ 8.30ರವರೆಗೆ ರಾಯರ ಪಾದಪೂಜೆ, ನಿರ್ಮಾಲ ವಿಸರ್ಜನೆ, ಮೂಲ ರಾಮದೇವರ ಪೂಜೆ, ಬೆಳಿಗ್ಗೆ 11ರಿಂದ ಮಧ್ಯಾಹ್ನ 2.30ರವರೆಗೆ ಶ್ರೀಮೂಲ ರಘುಪತಿ ವೇದವ್ಯಾಸದೇವರ ಪೂಜೆ, ಅಲಂಕಾರ ಸಂತರ್ಪಣೆ, ಹಸ್ತೋದಕ, ಮಹಾಮಂಗಳಾರತಿ ಹಾಗೂ ತೀರ್ಥ ಪ್ರಸಾದ ವಿತರಣೆ ನಡೆಯಲಿದೆ. ಸಂಜೆ 5 ಗಂಟೆಯ ನಂತರ ವಿದ್ವಾಂಸರಿಂದ ಕೀರ್ತನೆ, ಹಗಲು ದೀವಟಿಗೆ, ಮಂಗಳಾರತಿ, ಸ್ವಸ್ತಿ ವಾಚನ ಹಾಗೂ ಪ್ರಾಕರ ಉತ್ಸವ ನಡೆಯಲಿದೆ.

ಸೆಪ್ಟೆಂಬರ್ 23ರಿಂದ 29ರವರೆಗೆ ಬೆಂಗಳೂರಿನ ವಿದ್ವಾನ್ ಎ.ಗುರುಪ್ರಸಾದಾರ್ಯ ಅವರಿಂದ ಪ್ರೊಷ್ಠಾಪದಿ ಭಗವತ್ ಸಪ್ತಾಹ ನಡೆಯಲಿದೆ.



ಮಂತ್ರಾಲಯದಲ್ಲಿ ಸುಬುಧೇಂದ್ರ ತೀರ್ಥ ಸ್ವಾಮೀಜಿ ಅವರು ರಾಘವೇಂದ್ರ ಸ್ವಾಮಿಗಳ 352ನೇ ಆರಾಧನಾ ಮಹೋತ್ಸವದ ಆಹ್ವಾನ ಪತ್ರಿಕೆ ಬಿಡುಗಡೆ ಮಾಡಿದರು

ಕಲುಷಿತ ನೀರಿಗೆ ಐವರು ಬಲಿ ● ಅಸ್ವಸ್ಥಗೊಂಡವರ ಸಂಖ್ಯೆ 177ಕ್ಕೆ ಏರಿಕೆ

ಮೌನಕ್ಕೆ ಶರಣಾದ ಕವಾಡಿಗರಹಟ್ಟಿ

● ಜಿ.ಬಿ.ನಾಗರಾಜ್

ಚಿತ್ರದುರ್ಗ: ನಗರದ 17ನೇ ವಾರ್ಡ್ ವ್ಯಾಪ್ತಿಯ ಕವಾಡಿಗರಹಟ್ಟಿ ಕಲುಷಿತ ನೀರಿನಿಂದ ತಲ್ಲಣಗೊಂಡಿದೆ. ಅಸ್ವಸ್ಥರಾಗಿ ಆಸ್ಪತ್ರೆಗೆ ಸೇರಿದವರು ಶವವಾಗಿ ಮರಳುತ್ತಿರುವುದು ಜನರಲ್ಲಿ ದಿಗಿಲು ಮೂಡಿಸಿದೆ. ಮುಂದುವರಿದ ಸಾವಿನ ಸರಣಿಯಿಂದ ಹಟ್ಟಿ ಸ್ಮಶಾನ ಮೌನಕ್ಕೆ ಶರಣಾಗಿದೆ.

ಅಸ್ವಸ್ಥರಾದವರು ಚಿಕಿತ್ಸೆ ಪಡೆದು ಗುಣಮುಖರಾಗಿ ಮನೆಗೆ ಬರುವವರೆಗೂ ಏನನ್ನೂ ಹೇಳಲಾಗದ ಸ್ಥಿತಿ ಇದೆ. ಶುಕ್ರವಾರ ಒಂದೇ ದಿನ ಇಬ್ಬರು ಮೃತಪಟ್ಟಿದ್ದನ್ನು ಕಂಡು ಸ್ಥಳೀಯರು ದಿಕ್ಕೇ ತೋಚದಂತಾಗಿದ್ದಾರೆ. ಮತ್ತೆ 19 ಜನರಲ್ಲಿ ವಾಂತಿ-ಭೇದಿ ಕಾಣಿಸಿಕೊಂಡಿದ್ದು, ಅಸ್ವಸ್ಥರ ಸಂಖ್ಯೆ 177ಕ್ಕೆ ಏರಿಕೆಯಾಗಿದೆ. ಮೊದಲ ಮೂರು ಸಾವು ಸಂಭವಿಸಿದಾಗ ಸರ್ಕಾರ, ಅಧಿಕಾರಿಗಳ ವಿರುದ್ಧ ಆಕ್ರೋಶ ಭುಗಿಲೆದ್ದಿದ್ದ ಹಟ್ಟಿಯಲ್ಲಿ ಈಗ ಸದ್ದೇ ಇಲ್ಲದಂತಾಗಿದೆ.

ಚಿತ್ರದುರ್ಗದ ಹೊರವಲಯದ ಕವಾಡಿಗರಹಟ್ಟಿ 3,675 ಜನರು ಇದ್ದಾರೆ. ಇದರಲ್ಲಿ 1,128 ಜನರು ಇರುವ ಮೂರು ಬೀದಿಗಳಿಗೆ ಮಾತ್ರ ಕಲುಷಿತ ನೀರು ಪೂರೈಕೆಯಾಗಿದೆ. ಪರಿಶಿಷ್ಟ ಜಾತಿಯ ಜನರೇ ಹೆಚ್ಚಾಗಿ ಅಸ್ವಸ್ಥಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ. ದಿನಗೂಲಿ ಕೆಲಸ ಮಾಡಿಕೊಂಡು ಬದುಕು ಸಾಗಿಸುತ್ತಿದ್ದವರು ಇದರಿಂದ ಕಂಗಾಲಾಗಿದ್ದಾರೆ.

ಪ್ರತಿ ಮನೆಯಲ್ಲಿ ಇಬ್ಬರು, ಮೂವರು ಅಸ್ವಸ್ಥರಾಗಿ ಆಸ್ಪತ್ರೆ ಸೇರಿದ್ದಾರೆ. ಕುಟುಂಬದ ಸದಸ್ಯರು ಆರೈಕೆಗೆ ತೆರಳಿದ್ದು, ಬೀದಿಯ ಬಹುತೇಕ ಮನೆಗಳಿಗೆ ಬೀಗ ಹಾಕಲಾಗಿದೆ. 'ಆಸ್ಪತ್ರೆಯಿಂದ ಸಾವಿನ ಸುದ್ದಿ ಬಾರದಿರಲಿ' ಎಂದು ಜನ ಪ್ರಾರ್ಥಿಸುತ್ತಿದ್ದಾರೆ. ಅಗತ್ಯ ವಸ್ತುಗಳನ್ನು ಕೊಂಡೊಯ್ಯಲು ಮನೆಗೆ ಬಂದವರನ್ನು ಆತಂಕದಿಂದಲೇ ಜನರು ಪ್ರಶ್ನಿಸುತ್ತಿದ್ದಾರೆ. ಶಾಲೆಗೆ ತೆರಳಬೇಕಿದ್ದ 40ಕ್ಕೂ ಹೆಚ್ಚು ಮಕ್ಕಳು ಆಸ್ಪತ್ರೆಯ ಹಾಸಿಗೆಯ ಮೇಲೆ ಮಲಗಿದ್ದಾರೆ.

ಚನ್ನಗಿರಿ ತಾಲ್ಲೂಕಿನ ಶಾಂತಿ ಸಾಗರದಿಂದ (ಸೂಳೆಕೆರೆ) ನಗರಕ್ಕೆ ಪೂರೈಸುವ ನೀರು ಕವಾಡಿಗರಹಟ್ಟಿಗೂ ಸರಬರಾಜು ಆಗುತ್ತಿದೆ. ಓವರ್ ಹೆಡ್ ಟ್ಯಾಂಕ್ ಮೂಲಕ ಮನೆಮನೆಗೆ ನಿತ್ಯ ಅಥವಾ ಎರಡು ದಿನಕ್ಕೊಮ್ಮೆ ನೀರು ಪೂರೈಸಲಾಗುತ್ತದೆ. ಕೆರೆಯ ನೀರಿಗೆ ಪರ್ಯಾಯವಾಗಿ ಐದು ಕೊಳವೆ ಬಾವಿಗಳೂ ವಾರ್ಡ್ ವ್ಯಾಪ್ತಿಯಲ್ಲಿದ್ದು, ಆಗಾಗ ಎರಡೂ ಮೂಲಗಳಿಂದ ನೀರು ಒದಗಿಸಲಾಗುತ್ತದೆ.

ಕೆಲ ಕುಟುಂಬಗಳು ಮಾತ್ರ ಕುಡಿಯುವ ಉದ್ದೇಶಕ್ಕೆ ಶುದ್ಧ ಕುಡಿಯುವ ನೀರಿನ (ಆರ್‌ಒ) ಘಟಕ ಹೊಂದಿವೆ. ಬಹುತೇಕ ಮನೆಗಳಲ್ಲಿ ನಳದ ನೀರನ್ನು ಸೋಸಿ ಕುಡಿಯುತ್ತಿದ್ದಾರೆ. ಅಡುಗೆ ಹಾಗೂ ಕುಡಿಯಲು ನಲ್ಲಿ ನೀರು ಬಳಸಿದ ಮನೆಗಳಲ್ಲಿ ಹೆಚ್ಚು ಜನರು ಅಸ್ವಸ್ಥರಾಗಿದ್ದಾರೆ. ಕುಡಿಯಲು ಆರ್‌ಒ ಘಟಕ ಬಳಕೆ ಮಾಡಿದವರು ಅಪಾಯದಿಂದ ಪಾರಾಗಿದ್ದಾರೆ.

ಚಿತ್ರದುರ್ಗ ನಗರದ ಕವಾಡಿಗರಹಟ್ಟಿ ಮೌನಕ್ಕೆ ಶರಣಾಗಿದೆ. ಬಹುತೇಕರು ಆಸ್ಪತ್ರೆಗೆ ಸೇರಿರುವುದರಿಂದ ಬೀದಿಗಳು ಬಿಕೊ ಎನ್ನುತ್ತಿವೆ

ಪ್ರಜಾವಾಣಿ ಶನಿವಾರ, 5 ಆಗಸ್ಟ್ 2023 9

ಭೂಮಿಕಾ

ಮಹಿಳೆಯ ಆಪ್ತ ಸಂಗಾತಿ

ಕಾಲ ಬದಲಾದರೂ ಅತ್ತೆ–ಸೊಸೆಯ ಸಂಬಂಧವನ್ನು ನೋಡುವ ರೀತಿ ಬದಲಾಗಿಲ್ಲ. ಕೌಟುಂಬಿಕ ಚೌಕಟ್ಟಿನಲ್ಲಿ ಹೀಗೆ ಇರಬೇಕು ಎಂದುಕೊಳ್ಳುವ ನಿಯಮವೇ ಕೆಲವೊಮ್ಮೆ ಅತ್ತೆ ಸೊಸೆಯ ನಡುವೆ ಅಹಂನ ಗೋಡೆ ಏಳಲು ಕಾರಣವಾಗಿರುತ್ತದೆ. ಎಲ್ಲ ಸಂಬಂಧಗಳಲ್ಲಿರುವಂತೆ ಇಲ್ಲಿಯೂ ಬಿರುಕು, ಮನಸ್ತಾಪ ಸಹಜವೆಂಬುದನ್ನು ಸ್ವೀಕರಿಸಿದಾಗಷ್ಟೆ ಮನಸ್ಸು ಮನಸ್ಸು ಸೇರುವುದು ಸುಲಭವಾಗುತ್ತದೆ

ಅತ್ತೆ –ಸೊಸೆ ಸಂಬಂಧ ಕದನವಲ್ಲ, ಕವಿತೆ!

ಲಹರಿ

ಗೀತಾ ಕುಂದಾಪುರ

ಯಾವುದೇ ಸಂಬಂಧವಿರಲಿ ಅದರದ್ದೇ ಆದ ಮಧುರತೆಯಿರುತ್ತದೆ. ಪ್ರೀತಿಯ ಅಂಟಿನ ನಂಟಿರುತ್ತದೆ. ಪ್ರೀತಿ ಇದ್ದಲ್ಲಿ ಹಕ್ಕೊತ್ತಾಯ, ಅಭಿಪ್ರಾಯ ಹೇರುವಿಕೆ ಮುಂತಾದವುಗಳು ಬಂದೇ ಬರುತ್ತವೆ. ಅದರೊಂದಿಗೆ ಚಿಕ್ಕ, ಪುಟ್ಟ ಭಿನ್ನಾಭಿಪ್ರಾಯ, ಮನಸ್ತಾಪವೂ ಇರುತ್ತದೆ. ಸಂಬಂಧದಲ್ಲಿ ಉಂಟಾದ ಕಹಿ ಕಾಲ ಕಳೆದಂತೆ ಕಳೆಯುವುದೂ ಇದೆ, ಮೊಳೆತು ಕೊಳೆಯುವುದೂ ಇದೆ.

ಎಲ್ಲ ಕಾಲಕ್ಕೂ ಅತ್ಯಂತ ಹೆಚ್ಚು ಟೀಕೆಗೆ ಒಳಗಾದ ಸಂಬಂಧವೆಂದರೆ ಬಹುಶಃ ಅದು ಅತ್ತೆ ಸೊಸೆಯ ಸಂಬಂಧವೇ ಇರಬೇಕು. ಅದು ಒಂದು ಪ್ರಾಂತ್ಯ, ಕಾಲ ಅಥವಾ ದೇಶಕ್ಕೆ ಸೀಮಿತವಾಗಿಲ್ಲ. ಸಾರ್ವತ್ರಿಕ ಎನ್ನುವಷ್ಟು ಸಾರಾಸಗಟಾಗಿದೆ. ಏನೇ ಬದಲಾದರೂ ಈ ಸಂಬಂಧದ ತಿಕ್ಕಾಟಗಳು, ಗೊಂದಲ–ಗದ್ದಲಗಳು ಹಲವು ಸಿನಿಮಾ, ಧಾರಾವಾಹಿಗಳ ಹಾಗೂ ಕಾದಂಬರಿಗಳ ಹೂರಣವೂ, ಪ್ರೇರಣೆಯೂ ಆಗಿ ಉಳಿದಿವೆ.

ಇದೇಕೆ ಹೀಗೆ ಎಂಬ ಪ್ರಶ್ನೆ ಕಾಡದೇ ಬಿಟ್ಟಿಲ್ಲ. ಅತ್ತೆ –ಸೊಸೆಯ ನಡುವಿನ ಸಂಬಂಧದ ತಿಕ್ಕಾಟಕ್ಕೆ ಕಾರಣ ಯಾರು? ಸಮಾಜದಲ್ಲಿ ರೂಪಿತಗೊಂಡ ತಥಾಕಥಿತ ಮೌಲ್ಯಗಳೇ, ಮಹಿಳೆಯರ ಮನಸ್ಥಿತಿಯೇ ಅಥವಾ ಪುರುಷರ ದೃಷ್ಟಿಕೋನವೇ?

ಯಾವುದೇ ಧಾರ್ಮಿಕ ಗ್ರಂಥಗಳ ಪುಟ ಮೊಗಚಿದರೂ, ಇತಿಹಾಸದ ಪುಟಗಳನ್ನು ತಿರುವಿದರೂ ಅತ್ತೆ, ಸೊಸೆಯ ಜಗಳದ ಬಗ್ಗೆ ಎಲ್ಲೂ ಉದಾಹರಣೆಯ ಸೊಲ್ಲಿಲ್ಲ.

ಶತಕದಿಂದೀಚಿನ ಕೂಡು ಕುಟುಂಬದ ವ್ಯವಸ್ಥೆಯಲ್ಲಿ ಅತ್ತೆ, ಸೊಸೆಯ ಕದನ ಬಗ್ಗೆ ಹೆಚ್ಚು, ಹೆಚ್ಚು ಕೇಳಿ ಬಂತು. ಕುಟುಂಬ ವ್ಯವಸ್ಥೆ ಬದಲಾಗುತ್ತಿದ್ದಂತೆ ಸಂಬಂಧಗಳ ಆಯಾಮ ಬದಲಾಗುತ್ತಾ ಬಂದರೂ ಅತ್ತೆ, ಸೊಸೆ ಎಂದರೆ ಎರಡು ಧ್ರುವಗಳು ಎಂದೇ ಚಿತ್ರಿತಗೊಂಡಿದೆ. ಅತ್ತೆ-ಸೊಸೆಯ ವೈಮನಸ್ಸಿನ ವಿಚಾರವನ್ನು ತುಸು ಹೆಚ್ಚೇ ಬಣ್ಣ ಹಚ್ಚಿ ವೈಭವೀಕರಿಸಿದ್ದೇವೆ. ಜತೆಗೆ ಇದಕ್ಕೆ ಪರಿಹಾರವೇ ಇಲ್ಲವೆಂಬಂತೆ ಸೋತು ಕೈಚೆಲ್ಲಿದ್ದೇವೆ.

ಈ ಟಿ.ವಿ. ಧಾರಾವಾಹಿಗಳಲ್ಲಂತೂ ಒಂದೋ ಅತ್ತೆ ಖಳನಾಯಕಿ, ಇಲ್ಲವೇ ಸೊಸೆ ಅಳುಬುರುಕಿ; ಸೊಸೆ ಕ್ರೂರಿ, ಅತ್ತೆಯ ದಮನೀಯ ಸ್ಥಿತಿಯಲ್ಲಿರುತ್ತಾಳೆ. ಇದರ ಸುತ್ತವೇ ಕಥಾ ಹಂದರ ಹೆಣೆದು, ಹೆಣೆದು ಸವಕಲಾಗಿದೆ. ಎಲ್ಲ ಸಂಬಂಧಗಳ ನಡುವೆ ಕಾಲಾನುಕ್ರಮದಲ್ಲಿ ಒಂದು ಸಣ್ಣ ಭಿನ್ನಾಭಿಪ್ರಾಯ, ಹತಾಶೆ ಮೂಡುವುದೆಲ್ಲ ಸಹಜ ತಾನೇ? ಆದರೆ, ಅತ್ತೆ–ಸೊಸೆಯ ನಡುವಿನ ಈ ಭಿನ್ನಾಭಿಪ್ರಾಯವನ್ನು ಹಾಗೇ ನೋಡಲು ಯಾಕೆ ಸಾಧ್ಯವಾಗದು? ತಾಯಿ ಮಗಳ ಮಧ್ಯೆ ಬರುವ ಮನಸ್ತಾಪ ಕೆಲವೇ ದಿನಗಳಲ್ಲಿ ದೂರವಾಗಿ ಮತ್ತೆ ಮನಗಳು ಒಂದಾಗುತ್ತವೆಯಾದರೆ, ಅತ್ತೆ, ಸೊಸೆಯ ವಿಚಾರದಲ್ಲೂ ಹಾಗಾಗಬಹುದು; ಪೂರ್ವಾಗ್ರಹವೊಂದು ಇರದೇ ಇದ್ದರೆ.

ನನ್ನ ಗೆಳತಿಯೊಬ್ಬಳು ಹವ್ಯಾಸಿ ಬರಹಗಾರ್ತಿ. ಫೇಸ್‌ಬುಕ್‌ನಲ್ಲಿಯೂ ಕ್ರಿಯಾಶೀಲವಾಗಿದ್ದು, ತನ್ನ ಅಭಿಪ್ರಾಯಗಳನ್ನು ಯಾವ ಮುಲಾಜೂ ಇಲ್ಲದೇ ಬರೆದು ಪ್ರಸಿದ್ಧಿಯಾಗಿದ್ದಳು. ಈಚೆಗೆ ಪಕ್ಕನೆ ಸೈಲೆಂಟ್ ಆಗಿದ್ದಳು. ವಿಚಾರಿಸಿದಾಗ 'ಸೊಸೆ ಹೆತ್ತಿದಾಳೆ ಕಣ್ರೀ, ಬಾಣಂತನದ ಕೆಲಸ, ಅವಳ ತಾಯಿ ಮನೆ ಹಳ್ಳಿಯಲ್ಲಿದೆ. ಹಾಗಾಗಿ ಬೆಂಗಳೂರಿನಲ್ಲೇ ಹೆರಿಗೆಯಾಯ್ತು. ಎರಡು ವಾರಗಳ ನಂತರ ಅವಳೂರಿಗೆ ಹೋಗುವ ಪ್ಲಾನ್ ಇತ್ತು. ಕಡೆಗೆ ನಾನೇ ಬಾಣಂತನ ಮಾಡ್ತೀನಿ ಕಣೇ, ಅಂತ ಇರಿಸಿಕೊಂಡಿದ್ದೀನಿ. ಮುಂದೆಯೂ ಬರವಣಿಗೆಯಲ್ಲಿ ತೊಡಗಿಸಿಕೊಳ್ಳಬಹುದು. ಆದರೆ ಇಂಥ ಸಮಯ ಮತ್ತೆ ಬಾರದು ಅಲ್ವಾ?' ಎಂದಾಗ ಆ ಗೆಳತಿಯ ಬಗ್ಗೆ ಹೆಮ್ಮೆ ಎನಿಸಿತು. ಇದು ಅತ್ತೆಯ ಹೃದಯ ವೈಶಾಲ್ಯದ ಒಂದು ಝಲಕ್ ಆದರೆ, ಆಧುನಿಕ ಸೊಸೆಯೂ ಕಡಿಮೆಯೇನಿಲ್ಲ.

ಸಮಾರಂಭವೊಂದರಲ್ಲಿ ಭೇಟಿಯಾದ ಸುಮಾ ಮತ್ತೆ ಎಂದಿನಂತೆ ಬರೆಯಲು ಆರಂಭಿಸಿದ್ದರು. ಇಷ್ಟು ದಿನ ನಾಪತ್ತೆಯಾಗಿದ್ದೀರಾ? ಎಂದು ಕೇಳಿದ್ದಕ್ಕೆ. 'ಅತ್ತೆ ಬೆಡ್ ರಿಡನ್ ಆಗಿದ್ದರು, ಸಹಾಯಕ್ಕೆ ಕೆಲಸದವಳಿದ್ದರೂ ನನ್ನ ಮೇಲೂ ಜವಾಬ್ದಾರಿ ಇತ್ತು, ಹಾಗಾಗಿ ಬರವಣಿಗೆಗೆ ಫೋಕಸ್ ಮಾಡಲಾಗಲಿಲ್ಲ. 6 ತಿಂಗಳ ಕೆಳಗೆ ಅತ್ತೆ ತೀರಿಕೊಂಡರು, ಮತ್ತೆ ಬರೆಯಲು ಕೂತೆ' ಎಂದರು. ಇವೆಲ್ಲ ಎಲ್ಲೂ ದಾಖಲಾಗುವುದಿಲ್ಲ, ಅತ್ತೆ, ಸೊಸೆಗಾಗಿ ಅಥವಾ ಸೊಸೆ ಅತ್ತೆಯ ಸಹಾಯಕ್ಕೆ ನಿಂತಿದ್ದು ತ್ಯಾಗವೆನ್ನಿ, ಕರ್ತವ್ಯವೆನ್ನಿ. ಆದರೆ ಮಧುರ ಬಾಂಧವ್ಯಕ್ಕಂತೂ ಕನ್ನಡಿ ಹಿಡಿಯುತ್ತದೆ.

ಕೊರೊನಾ ಕೆಟ್ಟ ಕಾಲ ತಂದಿರಬಹುದು. ಆದರೆ, ಎಷ್ಟೋ ಮನೆಯಲ್ಲಿ ಅತ್ತೆ, ಸೊಸೆಯನ್ನು ಇನ್ನೂ ಹತ್ತಿರಕ್ಕೆ ತಂದಿದೆ. ಈಗೀಗ ಒಂದೋ, ಎರಡೋ ಮಕ್ಕಳು, ಅಂತಹದ್ದರಲ್ಲಿ ಸೊಸೆಯನ್ನು ದೂರ ಮಾಡಿ ಮಗ, ಮೊಮ್ಮಕ್ಕಳಿಂದಲೂ ದೂರವಾಗುವ ಮೂರ್ಖತನವನ್ನು ಬುದ್ಧಿವಂತ ಅತ್ತೆ ಮಾಡಲಾರಳು. ಹಾಗೆಯೇ ಸುಖವಿರಲಿ, ಕಷ್ಟವಿರಲಿ; ಎಲ್ಲಾ ಕಾಲದಲ್ಲೂ ಹೆಗಲುಗೊಡುವ ಅತ್ತೆಯಿಂದ ದೂರ ಓಡುವ ಕೆಲಸವನ್ನು ಜಾಣ ಸೊಸೆ ಮಾಡಲಾರಳು.

ನಮ್ಮ ನೆಂಟರೊಬ್ಬರ ಮನೆಯ ಪೂಜೆಗೆ ಮಗ, ಸೊಸೆ, ಅತ್ತೆ ಬಂದಿದ್ದರು. ಯಾವುದೋ ಮಾತಿಗೆ ಸೊಸೆ ಪುಷ್ಪ 'ನಾವು ಪೂಜೆ ಏನು ಮಾಡಿಸೋದಿಲ್ಲ. ಯಾವ ತೀರ್ಥಕ್ಷೇತ್ರಕ್ಕೂ ಹೋಗೋದಿಲ್ಲ. ಮನೆಯಲ್ಲಿ ಅತ್ತೆ ಇದ್ದಾರೆ ಅವರನ್ನು ನೋಡಿಕೊಂಡ್ರೆ ಸಾಕಲ್ವ?' ಎಂದಾಗ 90 ವರ್ಷದ ಹೇಮತ್ತೆಯ ಮುಖದಲ್ಲಿ ಕಂಡ ಸಂತೋಷ, ಕಣ್ಣ ಮಿಂಚು ಯಾವ ಮಾತು ಆಡದೆಯೂ ಎಲ್ಲವನ್ನೂ ಹೇಳುತ್ತಿತ್ತು.

ಗಂಡ, ಹೆಂಡತಿ, ಮಗು ಒಂದೇ ಸೂರಿನಡಿಯಲ್ಲಿದ್ದರೆ ಅದೇ ಕೂಡು ಕುಟುಂಬ ಎಂದು ಕುಹಕವಾಡುವ ಈ ಕಾಲದಲ್ಲಿ ವರ್ಕ್ ಫ್ರಂ ಹೋಂ ಎಂದು ಮನೆಯಲ್ಲೇ ಕೂತು ಕೆಲಸ ಮಾಡುವ ಸೊಸೆಗೆ ಗಂಟೆ, ಗಂಟೆಗೆ ಬಿಸಿ, ಬಿಸಿ ಚಹಾ ಮಾಡಿಕೊಡುವ ಅತ್ತೆ ನಮ್ಮ, ನಿಮ್ಮ ಮಧ್ಯೆ ಇದ್ದಾರೆ. ಅತ್ತೆ ಬೆನ್ನೋ, ಕತ್ತೋ ಉಳುಕಿಸಿಕೊಂಡಾಗ ಬಾಮ್ ಹಚ್ಚುವ ಸೊಸೆ, ಅತ್ತೆ ಹೋಗಬೇಕೆಂದ ಕಡೆ ಸ್ಕೂಟರಿನಲ್ಲೋ, ಕಾರಿನಲ್ಲೋ ಡ್ರಾಪ್ ಕೊಡುವ ಸೊಸೆಯೂ ಇದ್ದಾರೆ.

ಅತ್ತೆ–ಸೊಸೆ ಎಂದಾಕ್ಷಣ ಅಲ್ಲೊಂದು ಕದನ-ಕಲಹವೇ ಸೃಷ್ಟಿಯಾಯಿತು ಎಂದು ನೋಡಲಾಗುತ್ತದೆ. ಆದರೆ, ಈ ಸಂಬಂಧ, ಒಂದೇ ಬಾರಿಗೆ ಅರ್ಥವಾಗದ ಕವಿತೆಯಂತೆ....

ಹೀಗಿರಲು ಪ್ರಯತ್ನಿಸಿ..

ಪೀಳಿಗೆ ನಡುವಿನ ಅಂತರ, ಅಹಂಗಳ ಕಾರಣಗಳಿಗಾಗಿ ಆಗಾಗ್ಗೆ ಅತ್ತೆ –ಸೊಸೆಯ ನಡುವೆ ಜಗಳಗಳು ಏರ್ಪಡುತ್ತವೆ. ಅಡುಗೆಮನೆ, ಮನೆವಾರ್ತೆಯ ಹಿಡಿತ ತನ್ನಲ್ಲೇ ಉಳಿಯಬೇಕು ಎಂದು ಗುದ್ದಾಡುವ ಅತ್ತೆ; ತನಗೆ ಬೇಕಾದ ಹಾಗೇ ನಿಯಮಗಳು ಬದಲಾಗಲಿ ಎಂದು ಕಾಯುವ ಸೊಸೆ. ಸಣ್ಣ ಪುಟ್ಟ ಅಹಂಗಳು ಬೆಳೆದು ಬೆಟ್ಟವಾಗಿ ಕುಟುಂಬವನ್ನೇ ನೆಲಸಮ ಮಾಡಿದ ಉದಾಹರಣೆಗಳಿವೆ. ದೊಡ್ಡ ಗಲಾಟೆಯಾಗಿ ರಾಜಿಗೆ ಅವರಿವರು ಬರುವ ಮುನ್ನ ಮನಸ್ತಾಪ ಹೊಂದಿರುವ ಅತ್ತೆ–ಸೊಸೆಯಂದಿರು ಈ ಸಲಹೆಗಳನ್ನು ಪಾಲಿಸಿ ನೋಡಿ

- ಅತ್ತೆ ತಾಯಿಯಾಗಲು ಸಾಧ್ಯವಿಲ್ಲ; ಸೊಸೆ ಮಗಳಾಗಲು ಸಾಧ್ಯವೇ ಇಲ್ಲ ಎಂಬ ನಿಯಮವನ್ನು ಮುರಿದು ನೋಡಲು ಅತ್ತೆ–ಸೊಸೆ ಇಬ್ಬರೂ ಏಕಕಾಲಕ್ಕೆ ಪ್ರಯತ್ನಿಸಿ.
- ಆಚಾರ, ವಿಚಾರ, ಆಹಾರ ಪದ್ಧತಿ ಎಲ್ಲವೂ ಭಿನ್ನವೇ ಆಗಿರುತ್ತವೆ. ಸೊಸೆ ಮಾಡಿದ್ದು ಸರಿ ಇಲ್ಲ ಎನಿಸಿದರೆ ನೇರವಾಗಿ ಸೊಸೆಯ ಬಳಿಯೇ ಹೇಳಿಕೊಳ್ಳಿ. ಎಲ್ಲದ್ದಕ್ಕೂ ಟೀಕೆ, ಅನವಶ್ಯಕ ಅಭಿಪ್ರಾಯ ನೀಡುವ ಸ್ವಭಾವ ಅತ್ತೆಯದ್ದಾಗಿದ್ದರೆ, ಮೆಲ್ಲನೆ ಪ್ರತಿರೋಧ ವ್ಯಕ್ತಪಡಿಸಿ, ಅದನ್ನು ಮುಕ್ತವಾಗಿ ಚರ್ಚಿಸುವ ಮಟ್ಟಿಗೆ ಸಂಬಂಧ ಉಳಿಸಿಕೊಳ್ಳಿ
- ಎಲ್ಲ ಸಂಬಂಧಗಳಲ್ಲೂ ಸಿಹಿ–ಕಹಿ ಇರುತ್ತವೆ. ಆಗಾಗ್ಗೆ ಇಷ್ಟದ ಬಟ್ಟೆಯನ್ನು ಧರಿಸಿ, ಔಟಿಂಗ್, ಸಿನಿಮಾ ಎಂದು ಇಬ್ಬರೇ ಹೊರಡಿ.
- ತಪ್ಪು ಯಾರೇ ಮಾಡಿದ್ದರೂ, ಅದನ್ನೇ ಇಟ್ಟುಕೊಂಡು ಹಗೆ ಸಾಧಿಸದೇ, ಕ್ಷಮಿಸಿ ಬಿಡಿ.
- ದೂರವಿರಲಿ, ಹತ್ತಿರವಿರಲಿ ನೈತಿಕಸ್ಥೈರ್ಯ, ಪರಸ್ಪರ ಸಹಕಾರವಿರಲಿ. ನಿಮ್ಮಿಬ್ಬರ ನಡುವೆ ಮೂರನೆಯವರಿಗೆ ಪ್ರವೇಶವೇ ಇಲ್ಲ ಎಂಬುದನ್ನು ಇತರರಿಗೆ ಮನದಟ್ಟು ಮಾಡಿ.

ಶಿಕ್ಷಿಸಿ ಶಿಸ್ತು ಕಲಿಸಬಹುದೇ?

ಏನಾದ್ರೂ ಕೇಳ್ಬೋದು

ನಡಹಳ್ಳಿ ವಸಂತ್

● ನನ್ನ ಅಕ್ಕನ ಮಗನಿಗೆ 9 ವರ್ಷ. ಬಾಲ್ಯದಲ್ಲಿ ಶುರುವಾದ ಫಿಟ್ಸ್ ಕಾಯಿಲೆಗೆ ಔಷಧಿ ಕೊಡುತ್ತಿದ್ದೇವೆ. ಶಾಲೆಗೆ ಮೊದಲ ವಾರ ಹಠ ಮಾಡದೆ ಹೋಗುತ್ತಿದ್ದ. ಕ್ರಮೇಣ ಶಾಲೆಗೆ ಹೋಗಲು, ಬರೆಯಲು ಓದಲು ಹಿಂದೇಟು ಹಾಕಿದ. ಅನಾರೋಗ್ಯದ ಕಾರಣ ಮನೆಯಲ್ಲಿ ಯಾರು ಅವನಿಗೆ ಹೊಡೆಯುತ್ತಿರಲಿಲ್ಲ. ಒಳ್ಳೆಯ ಮಾತಿನಲ್ಲಿ ಹೇಳಿದರೂ ಓದಲು ಆಸಕ್ತಿ ತೋರಿಸುತ್ತಿರಲಿಲ್ಲ. ಆದರೆ ಆಟ, ಸೈಕಲ್ ಓಡಿಸುವುದು, ಮತ್ತಿತರ ದೈಹಿಕ ಚಟುವಟಿಕೆಗಳಲ್ಲಿ ಹೆಚ್ಚು ಆಸಕ್ತಿ. ನಂತರ ತಂದೆ ತಾಯಿಯ ಜಗಳದ ಕಾರಣಕ್ಕಾಗಿ ಮಗುವನ್ನು ಹಳ್ಳಿಗೆ ಕರೆದೊಯ್ದರು. ಅಲ್ಲಿ ದೈಹಿಕವಾಗಿ ಸಾಕಷ್ಟು ಬಳಲಿ ಹೋಗಿದ್ದ. ಜೊತೆಗೆ ಅಜ್ಜ, 'ಇವನು ಓದುವುದಿಲ್ಲ' ಎಂದು ಕಂಬಕ್ಕೆ ಕಟ್ಟಿ ಹೊಡೆದು ಓದಿಸುವ ಪ್ರಯತ್ನ ಮಾಡಿದರೂ ಏನೂ ಪ್ರಯೋಜನವಾಗಿಲ್ಲ. ಬದಲಾಗಿ ಕೆಟ್ಟ ಪದಗಳಲ್ಲಿ ಅಜ್ಜನನ್ನು ಬೈಯುತ್ತಾನೆ. ಮತ್ತೆ ತುಂಬಾ ಹಟ ಮಾಡುತ್ತಾನೆ. ಏನಾದರೂ ಕೊಡಿಸದಿದ್ದರೆ, ಬೈದರೆ ಕೋಣೆಗೆ ಹೋಗಿ ಬಾಗಿಲು ಹಾಕಿಕೊಳ್ಳುತ್ತಾನೆ. 'ಹೊಡಿರಿ' ಎಂದು ತಿರುಗಿ ನಿಲ್ಲುತ್ತಾನೆ. ನೇಣು ಹಾಕಿಕೊಳ್ಳುತ್ತೀನಿ ಎಂದು ಹೆದರಿಸುತ್ತಾನೆ. ನಾವು ಬೆಳೆಸಿದ ವಾತಾವರಣ ಇದಕ್ಕೆ ಕಾರಣ ಎನ್ನುವುದಾದರೆ ಅವನ ತಂಗಿಯ ಸ್ವಭಾವ ಸಂಪೂರ್ಣ ಭಿನ್ನವಾಗಿದೆ. ಅವನನ್ನು ಹೇಗೆ ಸರಿ ಮಾಡುವುದು? ಹಾಸ್ಟೆಲ್‌ಗೆ ಹಾಕಬೇಕು ಎಂದುಕೊಂಡಿದ್ದೇನೆ. ಇದಕ್ಕೆ ಪರಿಹಾರ ತಿಳಿಸಿ.

ಹೆಸರು ಊರು ತಿಳಿಸಿಲ್ಲ.

ದೀರ್ಘವಾದ ಪತ್ರದಲ್ಲಿ ನಿಮ್ಮ ನೋವು ಅಸಹಾಯಕತೆಯನ್ನು ವ್ಯಕ್ತಪಡಿಸಿದ್ದೀರಿ. ಮಕ್ಕಳು ಕೌಟುಂಬಿಕ ವಾತಾವರಣವನ್ನು ಪ್ರತಿಫಲಿಸುವ ಕನ್ನಡಿ ಮಾತ್ರ ಎನ್ನುವುದರ ಕುರಿತು 8ನೇ ಜುಲೈ 2023ರಂದು ಇದೇ ಅಂಕಣದಲ್ಲಿ ಬರೆಯಲಾಗಿತ್ತು. ದಯವಿಟ್ಟು ಅದನ್ನು ಗಮನಿಸಿ. ಫಿಟ್ಸ್ ಕಾಯಿಲೆಗೂ ಮಗುವಿನ ಸಮಸ್ಯೆಗಳಿಗೂ ಸಂಬಂಧವಿಲ್ಲ.

ಒಂದು ಘಟನೆ ಅಥವಾ ಕೌಟುಂಬಿಕ ಪರಿಸ್ಥಿತಿ ಎಲ್ಲಾ ಮಕ್ಕಳ ಮೇಲೆ ಒಂದೇ ರೀತಿಯ ಪರಿಣಾಮ ಬೀರಲು ಸಾಧ್ಯವಿಲ್ಲ. ಹಾಗಾಗಿ ನಿಮ್ಮ ಮಗಳ ವರ್ತನೆ ಆಧಾರದ ಮೇಲೆ ಮಗನನ್ನು ದೂಷಿಸುವುದು ಹೆಚ್ಚಿನ ಸಮಸ್ಯೆಗಳಿಗೆ ಕಾರಣವಾಗುತ್ತದೆ. ಮಕ್ಕಳ ಮಾತು ವರ್ತನೆಗಳು ಅವರ ಮನಸ್ಥಿತಿಯ ಸೂಚನೆ ಮಾತ್ರ. ಮನಸ್ಥಿತಿ ಬದಲಾಗದಿದ್ದರೆ ವರ್ತನೆಗಳನ್ನು ಮಾತ್ರ ಹೊಡೆದು, ಬೈದು, ಬುದ್ಧಿಹೇಳಿ ಮಕ್ಕಳನ್ನು ಶಿಸ್ತಿಗೆ ಒಳಪಡಿಸುವುದು ಸಾಧ್ಯವಿಲ್ಲ. ಶಿಕ್ಷೆ ಬೆದರಿಕೆಗಳು ತಾತ್ಕಾಲಿಕವಾಗಿ ಬದಲಾವಣೆ ತಂದಿರಬಹುದು. ಆದರೆ ನಿಧಾನವಾಗಿ ಅವು ನಿಷ್ಪ್ರಯೋಜಕವಾಗಿರುತ್ತವೆ ಎಂದು ನಿಮ್ಮ ಅನುಭವಕ್ಕೂ ಬಂದಿರಬೇಕಲ್ಲವೇ? ಬೈಗುಳ ಹಿಂಸೆಗಳು ಪೋಷಕರ ಹತಾಶೆ ಅಸಹಾಯಕತೆಗಳ ಸೂಚನೆ ಮಾತ್ರ. ಇದರಿಂದ ಮಕ್ಕಳು ಬದಲಾಗುವುದಿಲ್ಲ.

ಮಕ್ಕಳ ಮಿದುಳು ನರಮಂಡಲಗಳ ಸಮಗ್ರವಾದ ಬೆಳವಣಿಗೆಗೆ ಅಗತ್ಯವಾಗಿರುವುದು ಪೋಷಕರು ಕೊಡುವ ಭದ್ರತೆ ಬೆಂಬಲ ಮತ್ತು ಪ್ರೀತಿ. ಮಕ್ಕಳಿಗೆ ಶಿಸ್ತು ಮತ್ತು ಜೀವನ ಪಾಠಗಳನ್ನು ಇವುಗಳ ಮೂಲಕವೇ ಕಲಿಸಬೇಕಾಗುತ್ತದೆ. ಯಾವುದೇ ಕಾರಣಕ್ಕಾಗಿ ಆಗಲಿ ಇವುಗಳ ಕೊರತೆಯಾದರೆ ಮಕ್ಕಳು ಕಲಿಕೆ, ಸ್ವಯಂ ನಿಯಂತ್ರಣ ಮತ್ತು ಸಾಮಾಜಿಕ ನಡವಳಿಕೆಗಳಲ್ಲಿ ಹಿಂದೆ ಉಳಿಯುತ್ತಾರೆ.

ಈ ಹಿನ್ನೆಲೆಯಲ್ಲಿ ನಿಮ್ಮ ಮಗುವಿನ ಮನಸ್ಥಿತಿ ಹೇಗಿರಬಹುದು? ಪೋಷಕರ ನಡುವೆ ಭಿನ್ನಾಭಿಪ್ರಾಯಗಳಿರುವಾಗ ಮಕ್ಕಳಿಗೆ ಅಗತ್ಯವಿರುವ ಬೆಂಬಲ ಪ್ರೀತಿ ಭದ್ರತೆ ದೊರಕುವುದು ಸಾಧ್ಯವಾಗಿರುವುದಿಲ್ಲ. ಪೋಷಕರಾಗಿ ನಿರ್ವಹಿಸಬೇಕಾಗಿದ್ದ ಜವಾಬ್ದಾರಿಯನ್ನು ಬೇರೆಯವರಿಗೆ (ಅವರು ಅಜ್ಜನೇ ಇರಬಹುದು) ವಹಿಸಿದಾಗ ಮಗುವಿನ ಮನಸ್ಸಿನ ಮೇಲೆ ಎಂಥ ಪರಿಣಾಮಗಳಾಗಿರಬಹುದು ಎಂದು ಯೋಚಿಸಬೇಕಲ್ಲವೇ? ಜೊತೆಗೆ ಬೈಗುಳ ದೈಹಿಕ ಹಿಂಸೆಗಳಿಂದಾಗಿ ಮಗು ಎಲ್ಲರ ಬಗೆಗೂ ನಂಬಿಕೆ ಕಳೆದುಕೊಂಡಿದೆ. ಈಗ ಯಾರ ಒಡನಾಟವೂ ಅವನಿಗೆ ಸುರಕ್ಷಿತ ಅನ್ನಿಸುತ್ತಿಲ್ಲ. ಅಗತ್ಯಗಳನ್ನು ಪೂರೈಸಿಕೊಳ್ಳಲು ಬೆದರಿಕೆ ಪ್ರತಿಹಿಂಸೆಗಳು ಮಾತ್ರ ತನಗಿರುವ ದಾರಿ ಎಂದು ಅವನಿಗೆ ಮನವರಿಕೆಯಾಗಿದೆ. ಇಲ್ಲಿಯವರೆಗೆ ನೀವೆಲ್ಲರು ಬಳಸಿದ್ದೂ ಇದೇ ತಂತ್ರಗಳನ್ನಲ್ಲವೇ? ಮಗು ತೋರಿಸುತ್ತಿರುವ ಎಲ್ಲಾ ವರ್ತನೆಗಳ ಹಿಂದೆ ನಿಮ್ಮೆಲ್ಲರ ಮನಸ್ಥಿತಿಯ ಪ್ರತಿಬಿಂಬ ಕಾಣುತ್ತಿಲ್ಲವೇ?

ಇದಕ್ಕೆ ತಕ್ಷಣದ ಪರಿಹಾರಗಳಿಲ್ಲ. ಮಗುವಿನ ವರ್ತನೆ ಸರಿಮಾಡುವ ಮೊದಲು ಅವನಿಗೆ ಅಗತ್ಯವಾದ ಬೆಂಬಲ ಭದ್ರತೆ ಮತ್ತು ಪ್ರೀತಿ ತೋರಿಸುವ ಅಗತ್ಯವಿದೆ. ಇದಕ್ಕೆ ಪೋಷಕರ ಮನಸ್ಥಿತಿ ಬದಲಾಗಬೇಕು. ಕುಟುಂಬದವರೆಲ್ಲರೂ ಒಟ್ಟಾಗಿ ಮನೋಚಿಕಿತ್ಸೆ ಪಡೆದುಕೊಂಡರೆ ನಿಧಾನವಾಗಿ ಬದಲಾವಣೆ ಸಾಧ್ಯವಾಗ ಬಹುದು. ಹಾಸ್ಟೆಲ್‌ಗೆ ಕಳಿಸಿದರೆ ಅವನ ಸಮಸ್ಯೆಗಳು ಹೆಚ್ಚಾಗುವ ಅಪಾಯಗಳಿವೆ.

ಜುಲೈ 8 ರ ಸಂಚಿಕೆಯ ಲೇಖನಕ್ಕಾಗಿ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ

ಏನಾದ್ರೂ ಕೇಳ್ಬೋದು: ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು

ಸಮುದಾಯದಲ್ಲಿ ಕ್ರೀಡಾಜ್ಯೋತಿ ಬೆಳಗಿದ ನಯನಾ

ಗಿರೀಶ ದೊಡ್ಡಮನಿ

ಪದಕ ಜಯಿಸಿ ಬಂದ ನಯನಾ ಕೋಕರೆಗೆ ಅಭಿನಂದನೆಯ ಹೂಮಳೆ

ಸಾಧನೆ

ಉತ್ತರ ಕನ್ನಡ ಜಿಲ್ಲೆಯ ಪುಟ್ಟ ಗ್ರಾಮ ಚಳಗೇರಿಯ ರೈತಾಪಿ ಜನರು ಮುಂಗಾರು ಮಳೆಯ ನಿರೀಕ್ಷೆಯಲ್ಲಿ ಆಕಾಶದತ್ತ ದೃಷ್ಟಿ ನೆಟ್ಟು ಕೂತಿದ್ದರು. ಅದೇ ಹೊತ್ತಿಗೆ ಈ ಊರಿನ ಮಗಳು ನಯನಾ ಕೋಕರೆ ದಕ್ಷಿಣ ಕೊರಿಯಾದಲ್ಲಿ ಮಾಡಿದ ಸಾಧನೆಯೊಂದು ಅವರೆಲ್ಲರ ಕಂಗಳಲ್ಲಿ ಆನಂದಭಾಷ್ಪ ಜಿನುಗಲು ಕಾರಣವಾಯಿತು.

ಶಾಲೆಯ ಓದು ಮತ್ತು ಕ್ರೀಡಾ ಸಾಧನೆಗಳಿಂದ ದೂರವೇ ಇದ್ದ ದನಗರಗೌಳಿ ಸಮುದಾಯವೊಂದರ ಪೋರಿ ನಯನಾ 20ವರ್ಷದೊಳಗಿನವರ ಏಷ್ಯನ್ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿಮಹಿಳೆಯರ 4X100 ಮೀ ರಿಲೆಯಲ್ಲಿ ಕಂಚಿನ ಪದಕ ಜಯಿಸಿದ್ದು ಸಣ್ಣ ಸಾಧನೆಯೇನಲ್ಲ. ಇದರಿಂದಾಗಿ ಈ ಹಿಂದುಳಿದ ಸಮುದಾಯದಲ್ಲಿ ಕ್ರೀಡಾಕ್ರಾಂತಿ ಸದ್ದಿಲ್ಲದೇ ಆರಂಭವಾಗಿದೆ.

ಹಲವಾರು ವರ್ಷಗಳ ಹಿಂದೆ ಮಹಾರಾಷ್ಟ್ರದಿಂದ ಬಂದು ನೆಲೆಸಿರುವ ಸಮುದಾಯ ಇದಾಗಿದೆ. ಕೃಷಿ ಕೂಲಿಯೇ ಜೀವನಾಧಾರ. ಬಡತನದಿಂದಾಗಿ ವಿದ್ಯಾಭ್ಯಾಸ ಮತ್ತು ಆಧುನಿಕ ಪ್ರಪಂಚದ ಸೌಲಭ್ಯಗಳಿಂದಲೂ ವಂಚಿತರಾದವರು. ಈ ಊರಿನ ಗಂಗಾರಾಮ್ ಕೋಕರೆ ಅವರಿಗೆ ಮೂವರು ಹೆಣ್ಣು ಮತ್ತು ಇಬ್ಬರು ಗಂಡುಮಕ್ಕಳು. ಅದರಲ್ಲಿ ನಯನಾ ಕೊನೆಯವರು. ಎಲ್ಲ ಮಕ್ಕಳಿಗೂ ವಿದ್ಯಾಭ್ಯಾಸ ಕೊಡಿಸುವಷ್ಟು ಗಂಗಾರಾಮ್ ಅವರ ಆರ್ಥಿಕ ಸ್ಥಿತಿ ಚೆನ್ನಾಗಿರಲಿಲ್ಲ. ನಯನಾ ಅವರ ಅಣ್ಣ ಎಂಟನೇ ತರಗತಿಯವರೆಗೆ ಓದಿ ಶಾಲೆ ಬಿಟ್ಟರು. ನಂತರ ಕೆಲಸ ಮಾಡಲು ಆರಂಭಿಸಿದ್ದರು.

ಆದರೆ ನಯನಾ ಮಾತ್ರ ಶಾಲೆ ದಿನಗಳಿಂದಲೇ ಅಥ್ಲೆಟಿಕ್ಸ್‌ನಲ್ಲಿ ಆಸಕ್ತಿ ತೋರಿದರು. 100 ಮೀಟರ್ ಮತ್ತು 200 ಮೀಟರ್ ಓಟಗಳಲ್ಲಿ ಎಲ್ಲರನ್ನೂ ಹಿಂದಿಕ್ಕುವಷ್ಟು ಸಾಮರ್ಥ್ಯ ಅವರಿಗೆ ಇತ್ತು.

ಮುಂಡಗೋಡದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬ್ರಿಜಸ್ ಆಫ್ ಸ್ಪೋರ್ಟ್ಸ್ ಫೌಂಡೇಷನ್ ನಡೆಸಿದ್ದ ಪ್ರತಿಭಾ ಶೋಧದಲ್ಲಿ ನಯನಾ ಪ್ರತಿಭೆಗೆ ಹೊಸ ತಿರುವು ಲಭಿಸಿತು. 2019ರಲ್ಲಿ ಮೊದಲ ಬಾರಿಗೆ ಬ್ರಿಜಸ್ ಎನ್‌ಜಿಒದಲ್ಲಿ ಅಭ್ಯಾಸ ಆರಂಭವಾಯಿತು. ಅವರದ್ದೇ ವಸತಿ ನಿಲಯದಲ್ಲಿ ಆಶ್ರಯ ಮತ್ತು ವಿದ್ಯಾಭ್ಯಾಸವೂ ಲಭಿಸಿತು. ಆದರೆ 2020ರಲ್ಲಿ ಜಗತ್ತನ್ನೇ ಕಾಡಿದ ಕೋವಿಡ್ ಬಿಕ್ಕಟ್ಟು ನಯನಾ ಅವರ ಕ್ರೀಡಾ ಭವಿಷ್ಯವನ್ನು ಮೊಟಕುಗೊಳಿಸುವ ಆತಂಕ ಇತ್ತು.

'ಕೋವಿಡ್ ಸಂದರ್ಭದಲ್ಲಿ ಹೊರಗೆ ಹೋಗುವಂತಿಲ್ಲ. ವಸತಿ ನಿಲಯದಿಂದಲೂ ಬಿಡುಗಡೆ ಮಾಡಿ ಮನೆಗೆ ಕಳುಹಿಸಲಾಯಿತು. ಮನೆಯಲ್ಲಿ ಎಲ್ಲರೂ ಮನೆಯಲ್ಲಿಯೇ ಇದ್ದೆವು. ಖಾಸಗಿ ಸಂಸ್ಥೆಗಳೂ ಧನಸಹಾಯ ನಿಲ್ಲಿಸಿದ್ದವು. ದುಡಿಮೆ ಇಲ್ಲದೇ ಜೀವನ ದುಸ್ತರವಾಗಿತ್ತು. ಆ ಸಂದರ್ಭದಲ್ಲಿಯೂ ಸರ್ಕಾರೇತರ ಸಂಸ್ಥೆಯಾದ ಟ್ರಾನ್ಸ್‌ವರ್ಲ್ಡ್ ಸಮೂಹವು ಬ್ರಿಜಸ್ ಫೌಂಡೇಷನ್ ಮೂಲಕ ನೆರವಿಗೆ ಬಂತು. ಆಹಾರ ಸಾಮಗ್ರಿ, ಹಣ ಮತ್ತು ತರಬೇತಿಗೆ ಸಹಾಯ ಮಾಡಿತು' ಎಂದು ನಯನಾ ನೆನಪಿಸಿಕೊಳ್ಳುತ್ತಾರೆ.

ತಮಿಳುನಾಡಿನಲ್ಲಿ ನಡೆದ 21ನೇ ಫೆಡರೇಷನ್ ಕಪ್ ಅಥ್ಲೆಟಿಕ್ಸ್ ಕೂಟದಲ್ಲಿ ರಾಷ್ಟ್ರೀಯ ಚಾಂಪಿಯನ್ ಆಗಿ ಹೊರಹೊಮ್ಮಿದ ನಯನಾ ಅವರಿಗೆ ಅಂತರರಾಷ್ಟೀಯ ಕೂಟದ ಬಾಗಿಲು ತೆರೆಯಿತು.

200 ಮೀಟರ್ಸ್‌ನಲ್ಲಿ 24.28 ಸೆಕೆಂಡುಗಳ ಸಾಧನೆ ಅವರದ್ದಾಗಿದೆ. ಕೊರಿಯಾದಲ್ಲಿ ಕಂಚು ಗೆದ್ದ 4X100 ಮೀ ರಿಲೆ ತಂಡದಲ್ಲಿ ನಯನಾ ಅವರೊಂದಿಗೆ ಅಭಿನಯಾ, ಅಕ್ಷಯಾ ಹಾಗೂ ತಮನ್ನಾ ಇದ್ದರು. ಈ ತಂಡವು 45.36 ಸೆಕೆಂಡುಗಳಲ್ಲಿ ಗುರಿ ಮುಟ್ಟಿತ್ತು.

19 ವರ್ಷದ ನಯನಾ ಸದ್ಯ ಧಾರವಾಡದ ಜೆಎಸ್‌ಎಸ್ ಮಹಾವಿದ್ಯಾಲಯದಲ್ಲಿ ಬಿ.ಕಾಂ ಓದುತ್ತಿದ್ದಾರೆ.

'ನಮ್ಮ ಎನ್‌ಜಿಒದಲ್ಲಿ ಉತ್ತಮ ಕೋಚ್‌ಗಳಿದ್ದಾರೆ. ಮನೋವೈದ್ಯರು, ಫಿಟ್‌ನೆಸ್ ಪರಿಣತರು ಇದ್ದಾರೆ. ಕಾಲೇಜಿನಲ್ಲಿಯೂ ಒಳ್ಳೆಯ ಬೆಂಬಲ ಸಿಗುತ್ತಿದೆ. ಇದರಿಂದಾಗಿ ಇನ್ನೂ ಉನ್ನತ ಸಾಧನೆ ಮಾಡುವ ವಿಶ್ವಾಸ ನನಗಿದೆ' ಎಂದು ನಯನಾ ಹೇಳುತ್ತಾರೆ.

ಅವರ ಕುಟುಂಬದಲ್ಲಿ ಕಾಲೇಜು ಮೆಟ್ಟಿಲು ಹತ್ತಿದ ಮೊದಲ ವ್ಯಕ್ತಿ ಕೂಡ ನಯನಾ ಅವರಾಗಿದ್ದಾರೆ. ಇದೀಗ ಅವರ ಸಾಧನೆಯಿಂದಾಗಿ ಸಮುದಾಯದ ಹೆಣ್ಣುಮಕ್ಕಳು ಕೂಡ ಕ್ರೀಡೆಗಳತ್ತ ಆಸಕ್ತಿ ತೋರಿಸುತ್ತಿದ್ದಾರೆ. ಪಾಲಕರೂ ತಮ್ಮ ಪುತ್ರಿಯರನ್ನು ಉನ್ನತ ವಿದ್ಯಾಭ್ಯಾಸ ಮತ್ತು ಕ್ರೀಡೆಗಳಿಗೆ ಕಳಿಸಲು ಮನಸ್ಸು ಮಾಡುತ್ತಿದ್ದಾರೆ. ನಯನಾ ಬಾಲ್ಯದಲ್ಲಿ ರೂಢಿಸಿಕೊಂಡ ಓಟದ ಹವ್ಯಾಸವು ಅವರ ಕುಟುಂಬ ಮತ್ತು ಸಮುದಾಯವನ್ನೇ ಪ್ರಭಾವಿಸುವಂತಾಗಿದೆ.

ನಯನಾ ಕೊಕರೆ ಪದಕದೊಂದಿಗೆ

ಪ್ರಾಸ್ಟೇಟ್ ಆರೋಗ್ಯದ ಪ್ರಸ್ತುತ ಸನ್ನಿವೇಶ

Advertorial

ಪ್ರಾಸ್ಟೇಟ್, ಎಲ್ಲಾ ಪುರುಷರ ದೇಹದಲ್ಲಿ ಇರುವ ಒಂದು ಮೂಲ ಅಂಗ ಮತ್ತು ಇದು ಮೂತ್ರಕೋಶ ಮತ್ತು ಮೂತ್ರನಾಳದ ನಡುವೆ ಇದೆ.

ಪ್ರಾಸ್ಟೇಟ್ ಒಂದು ಅಂಗವಾಗಿ, ಜನನದ ಸಮಯದಲ್ಲಿ ಮತ್ತು ಶಿಶು ಅವಸ್ಥೆಯಲ್ಲಿ ತುಂಬಾ ಚಿಕ್ಕದಾಗಿರುತ್ತದೆ, ಆದರೆ, ಪ್ರೌಢಾವಸ್ಥೆಯ ವಯಸ್ಸಿನಲ್ಲಿ ಅದರ ಬೆಳವಣಿಗೆಯನ್ನು ಪ್ರಾರಂಭಿಸುತ್ತದೆ ಮತ್ತು ಮಧ್ಯವಯಸ್ಕ ಗುಂಪಿನಲ್ಲಿ ಸ್ಥಿರಗೊಳ್ಳುತ್ತದೆ. 30 ರ ವಯಸ್ಸಿನಲ್ಲಿ ನಿಧಾನವಾಗಿ ಗಾತ್ರದಲ್ಲಿ ಹಿಗ್ಗಲು ಪ್ರಾರಂಭಿಸುತ್ತದೆ ಮತ್ತು 50 ವಯಸ್ಸು ದಾಟಿದ ನಂತರ ವೇಗವಾಗಿ ಗಾತ್ರದಲ್ಲಿ ಹೆಚ್ಚಾಗುತ್ತದೆ. 50% ಪುರುಷರಲ್ಲಿ 50 ವರ್ಷ ವಯಸ್ಸಿನ ನಂತರ ಪ್ರಾಸ್ಟೇಟ್ ರೋಗಲಕ್ಷಣಗಳೊಂದಿಗೆ ಕಾಣಿಸಿಕೊಳ್ಳುತ್ತಾರೆ. ಪ್ರೌಢಾವಸ್ಥೆಯಲ್ಲಿ ಮತ್ತು ಸಕ್ರಿಯ ಲೈಂಗಿಕ ಜೀವನದಲ್ಲಿ ಪ್ರಾಸ್ಟೇಟ್, ವೀರ್ಯದ ಟ್ರಾನ್ಸ್‌ಮಿಷನ್‌ನಲ್ಲಿ ಸಹಾಯ ಮಾಡುತ್ತದೆ, ಆದಾಗ್ಯೂ ವಯಸ್ಸಾದ ಪುರುಷರಲ್ಲಿ ಅದರ ಪಾತ್ರವು ಪ್ರಶ್ನಾರ್ಹವಾಗಿದೆ.

ಪ್ರಾಸ್ಟೇಟ್ ಕಾಯಿಲೆಗಳು 27ನೇ ವಯಸ್ಸಿನಲ್ಲಿ ಪ್ರಾರಂಭವಾಗುವ ಎಲ್ಲಾ ವಯೋಮಾನದವರ ಮೇಲೆ ಪರಿಣಾಮ ಬೀರುತ್ತವೆ. ಮಧ್ಯಮ ವಯಸ್ಕರಲ್ಲಿ (27–45 ರ ನಡುವೆ) ಪ್ರಾಥಮಿಕ ಬ್ಲಾಡರ್ ನೆಕ್ ಅಡಚಣೆ, CPPS, ಪ್ರೊಸ್ಟಟೊಡಿನಿಯಾ ಮತ್ತು ಪ್ರೊಸ್ಟೈಟಿಸ್ (ಸೋಂಕು ಮತ್ತು ರಾಸಾಯನಿಕ) ಮತ್ತು ತೀವ್ರತರವಾದ ಪ್ರಕರಣಗಳಲ್ಲಿ ಪ್ರಾಸ್ಟೇಟ್ ಬಾವು ಎಂದು ಕರೆಯಲ್ಪಡುತ್ತದೆ. ಆರಂಭದಲ್ಲಿ ಹಿಗ್ಗುವಿಕೆ ಕಾಣಿಸಿಕೊಂಡು 45 ವಯಸ್ಸಿನ ನಂತರ ಪ್ರಾರಂಭವಾಗುತ್ತದೆ ಕೆಲವರಲ್ಲಿ ಹೈಪರ್‌ಟ್ರೋಫಿ ಮತ್ತು ಕ್ಷೀಣತೆ ಕಂಡುಬಂದರೆ ಇತರ ಕೆಲವರು ಕ್ಯಾನ್ಸರ್‌ಗೆ ತುತ್ತಾಗುವವರೆಗೆ ಪುರುಷರನ್ನು ಬಾಧಿಸಬಹುದು. ಆದರೆ "ಎಲ್ಲಾ ಪ್ರಾಸ್ಟೇಟ್ ಹಿಗ್ಗುವಿಕೆ ಕಾಯಿಲೆಯಲ್ಲ. ರೋಗಲಕ್ಷಣಗಳು ಅಥವಾ ಕ್ಯಾನ್ಸರ್ ಲಕ್ಷಣ ಉಂಟುಮಾಡುವವರೆಗೆ ರೋಗವಾಗಿರಬೇಕಾಗಿಲ್ಲ" ಎಂದು ನಾವು ಅರ್ಥಮಾಡಿಕೊಳ್ಳಬೇಕು. ಎಲ್ಲಾ ಪ್ರಾಸ್ಟೇಟ್ ಹಿಗ್ಗುವಿಕೆಯು ಒಂದು ರೋಗ ಮತ್ತು ಚಿಕಿತ್ಸೆಯ ಅಗತ್ಯವಿಲ್ಲ ಎಂಬುದು ಒಂದು ಮಿಥ್ಯ ನಂಬಿಕೆ ಎನ್ನುತ್ತಾರೆ **ಡಾ. ಟಿ ಮನೋಹರ್.**

ಪ್ರಾಸ್ಟಟಿಕ್ ರೋಗಗಳ ಪಕ್ಷಿನೋಟ

- ಅಕ್ಯೂಟ್ ಪ್ರೋಸ್ಟೈಟಿಸ್
- ಕ್ರಾನಿಕ್ ಪ್ರೋಸ್ಟೈಟಿಸ್
- ಪ್ರಾಸ್ಟಾಟಿಕ್ ಆಬ್ಸೆಸ್
- CPPS (ಕ್ರಾನಿಕ್ ಪೆಲ್ವಿಕ್ ಪೇನ್ ಸಿಂಡ್ರೋಮ್)
- BPH (ಪ್ರಾಸ್ಟೇಟ್ ಹಿಗ್ಗುವಿಕೆ)
- ಪ್ರೈಮರಿ ಬ್ಲಾಡರ್ ನೆಕ್ ಅಬ್‌ಸ್ಟ್ರಕ್ಷನ್
- ಪ್ರಾಸ್ಟೇಟ್ ಕ್ಯಾನ್ಸರ್

ಉತ್ತಮ ಪ್ರಾಸ್ಟೇಟ್ ಆರೋಗ್ಯಕ್ಕಾಗಿ ಸಲಹೆಗಳು:

- ಆರೋಗ್ಯಕರ ತೂಕವನ್ನು ಕಾಪಾಡಿಕೊಳ್ಳಿ. ಸ್ಥೂಲಕಾಯತೆಯು ಪ್ರಾಸ್ಟೇಟ್ ಕ್ಯಾನ್ಸರ್ ಸೇರಿದಂತೆ ಹಲವಾರು ಪ್ರಾಸ್ಟೇಟ್ ಆರೋಗ್ಯ ಸಮಸ್ಯೆಗಳಿಗೆ ಸಂಬಂಧಿಸಿದೆ.



The Anatomy of the Prostate

ಡಾ ಟಿ ಮನೋಹರ್
ಹಿರಿಯ ಯೂರಾಲಜಿಸ್ಟ್, ಯುರೋ–ಆಂಕೊಲಾಜಿಸ್ಟ್, ಟ್ರಾನ್ಸ್‌ಪ್ಲಾಂಟ್ ಸರ್ಜನ್,
ಲೇಸರ್ ಲ್ಯಾಪರೊಸ್ಕೋಪಿಕ್ ಮತ್ತು ರೊಬೊಟಿಕ್ ಸರ್ಜನ್
ನಿರ್ದೇಶಕರು, ಅಪೊಲೊ ಇನ್‌ಸ್ಟಿಟ್ಯೂಟ್ ಆಫ್ ಯುರೋ ಸೈನ್ಸಸ್

mp MRI - TRUS ಸಮ್ಮಿಳನ TP - ಪ್ರಾಸ್ಟೇಟ್ ಬಯಾಪ್ಸಿಗಳೊಂದಿಗೆ 2 mm ಯಷ್ಟು ಚಿಕ್ಕದಾದ ಪ್ರಾಸ್ಟೇಟ್ ಕ್ಯಾನ್ಸರ್ ಅನ್ನು ಗುರುತಿಸಲಾಗಿದೆ

678gms - ದೊಡ್ಡ ಪ್ರಾಸ್ಟೇಟ್ ಗ್ರಂಥಿಯನ್ನು ಹೋಲ್ಮಿಯಂನಿಂದ ಚಿಕಿತ್ಸೆ ನೀಡಲಾಗುತ್ತದೆ (ಮೋಸಸ್ ತಂತ್ರಜ್ಞಾನ)

ESWT ಸುಮಾರು 87% ರೋಗಿಗಳಲ್ಲಿ ಪ್ರೋಸ್ಟೈಟಿಸ್ ಅನ್ನು ನಿವಾರಿಸುತ್ತದೆ

ಪ್ರಾಸ್ಟೇಟ್ ಕ್ಯಾನರ್‌ಗೆ ರೋಬೋಟಿಕ್ ಶಸ್ತ್ರಚಿಕಿತ್ಸೆ ಪ್ಲಾಟಿನಂ ಸ್ಟಾಂಡರ್ಡ್ ಚಿಕಿತ್ಸೆಯಾಗಿದೆ.

- ಹೆಚ್ಚು ತರಕಾರಿಗಳನ್ನು ಸೇವಿಸಿ.
- ಕೆಂಪು ಮಾಂಸದ ಸೇವನೆಯನ್ನು ಕಡಿಮೆ ಮಾಡಿ.
- ನಿಮ್ಮ ಅಪಾಯವನ್ನು ತಿಳಿದುಕೊಳ್ಳಿ ಮತ್ತು ಪರೀಕ್ಷಿಸಿಕೊಳ್ಳಿ.
- ದಿನವೂ ವ್ಯಾಯಾಮ ಮಾಡಿ.
- ಪ್ರತಿದಿನ ಹೆಚ್ಚು ನೀರು ಸೇವಿಸಿ
- ಒತ್ತಡವನ್ನು ನಿರ್ವಹಿಸಿ.
- ಧೂಮಪಾನ ನಿಲ್ಲಿಸಿ.

ಇತ್ತೀಚಿನ ದಿನಗಳಲ್ಲಿ ಪ್ರಾಸ್ಟೇಟ್ ಅಂಗರಚನಾಶಾಸ್ತ್ರ, ಕಾರ್ಯ ಮತ್ತು ಅದರ ರೋಗಶಾಸ್ತ್ರದ ನಿರಂತರ ತಿಳುವಳಿಕೆಯೊಂದಿಗೆ ಮತ್ತು ಕೆಲವು ರೀತಿಯ ಪ್ರಾಸ್ಟೇಟ್ ಸಮಸ್ಯೆಗಳಿಂದ ಬಳಲುತ್ತಿರುವ ಎಲ್ಲಾ ರೋಗಿಗಳಿಗೆ ಸಮಗ್ರ ಚಿಕಿತ್ಸೆಯ ಉದ್ದೇಶದಿಂದ, ಅಪೋಲೋ ಹಾಸ್ಪಿಟಲ್ಸ್, ಶೇಷಾದ್ರಿಪುರಂ "ಇನ್ಸಿಟ್ಯೂಟ್ ಆಫ್ ಪ್ರಾಸ್ಟಾಟಿಕ್ ಡಿಸೀಸಸ್ – (IPD) ಸೋಂಕು, ಹಾನಿಕರವಲ್ಲದ ಅಥವಾ ಮಾರಣಾಂತಿಕವಾಗಿರುವ ಪ್ರಾಸ್ಟಟಿಕ್ ಕಾಯಿಲೆಗಳಿಂದ ಬಳಲುತ್ತಿರುವ ಎಲ್ಲಾ ರೋಗಿಗಳಿಗೆ ಚಿಕಿತ್ಸೆ ನೀಡುವ ಉದ್ದೇಶದಿಂದ ಶೇಷಾದ್ರಿಪುರಂನಲ್ಲಿರುವ ಅಪೊಲೊ ಇನ್‌ಸ್ಟಿಟ್ಯೂಟ್ ಆಫ್ ಯುರೋಸೈನ್ಸ್‌ನ ಮುಖ್ಯಸ್ಥರಾಗಿರುವ ಡಾ ಟಿ ಮನೋಹರ್ ಅವರ ಉಸ್ತುವಾರಿಯಲ್ಲಿ ಮೂತ್ರಶಾಸ್ತ್ರ ಸೇವೆಗಳನ್ನು ಪ್ರಾರಂಭಿಸಲಾಗಿದೆ

ಸಂಸ್ಥೆಯಲ್ಲಿ ಲಭ್ಯವಿರುವ ರೋಗಪರೀಕ್ಷೆ / ರೋಗನಿರ್ಣಯದ ಸೌಲಭ್ಯಗಳು:

- ಯುರೋಫ್ಲೋಮೆಟ್ರಿ
- ಯುರೊಡೈನಾಮಿಕ್ ಅಧ್ಯಯನ
- ಬೆಡ್ ಸೈಡ್ ಅಲ್ಟ್ರಾಸೌಂಡ್ ಸ್ಕ್ಯಾನಿಂಗ್
- ಟೋಟಲ್ ಪಿಎಸ್‌ಎ
- mp MRI ಇಮೇಜಿಂಗ್
- ಟ್ರಾನ್ಸ್‌ರೆಕ್ಟಲ್ ಅಲ್ಟ್ರಾಸೌಂಡ್
- ಪ್ರಾಸ್ಟೇಟ್ ಬಯಾಪ್ಸಿ (TRUS ಗೈಡೆಡ್)
- ಅಡ್ವಾನ್ಸ್ಡ್ ಟಿಪಿ – ಪ್ರಾಸ್ಟಾಟಿಕ್ ಬಯಾಪ್ಸಿಗಳು
- mp MRI – ಅಲ್ಟ್ರಾಸೌಂಡ್ ಫ್ಯೂಷನ್ ಟ್ರಾನ್ಸ್ ಪೆರಿನಿಯಲ್ ಬಯಾಪ್ಸಿಗಳು
- ಕೆಲವು ಆನುವಂಶಿಕ ಅಧ್ಯಯನಗಳು

ಲಭ್ಯವಿರುವ ಚಿಕಿತ್ಸಾ ಸೌಲಭ್ಯಗಳು:

ಫಾರ್ಮಾಕೋಥೆರಪಿ ಮತ್ತು ಸೀಟ್ಜ್ ಬಾತ್ ಮತ್ತು ಪೆಲ್ವಿಕ್ ಫ್ಲೋರ್ ವ್ಯಾಯಾಮಗಳು ದೀರ್ಘಕಾಲದ ನೋವಿನ ಪರಿಸ್ಥಿತಿಗಳಲ್ಲಿ ಸಹಾಯ ಮಾಡುತ್ತದೆ

ESWT (ಲೋ ಇಂಟೆನ್ಸಿಟಿ ಶಾಕ್‌ವೇವ್ ಥೆರಪಿ) – ಇದು ನಾನ್ ಇನ್ವೇಸಿವ್ ಮಾದರಿಯ ಚಿಕಿತ್ಸೆಯಾಗಿದೆ, ಅಲ್ಲಿ ರೇಡಿಯೊಫ್ರೀಕ್ವೆನ್ಸಿ ತರಂಗಗಳನ್ನು ಪ್ರಾಸ್ಟಾಟಿಕ್ ಪ್ರದೇಶದಲ್ಲಿ ಮತ್ತು ಅದರ ಸುತ್ತಲಿನ ಪೆಲ್ವಿಕ್ ಪ್ರದೇಶಗಳಿಗೆ ನೀಡಲಾಗುತ್ತದೆ. ಪ್ರೋಸ್ಟೈಟಿಸ್‌ನಿಂದ ಬಳಲುತ್ತಿರುವ ರೋಗಿಗಳಿಗೆ ಇದು 78–93% ಯಶಸ್ಸು ಹೊಂದಿದೆ

TURP - BPH – ರೋಗಿಗಳಿಗೆ ಸಾಂಪ್ರದಾಯಿಕ ಚಿಕಿತ್ಸೆ

ಬೈಪೋಲಾರ್ TURP – ಬೈಪೋಲಾರ್ ಶಕ್ತಿಯನ್ನು ವಿಸ್ತರಿಸಿದ ಪ್ರಾಸ್ಟಾಟಿಕ್ ಅಡಿನೋಮಾವನ್ನು ಬೇರ್ಪಡಿಸಲು ಬಳಸಲಾಗುತ್ತದೆ

ಟ್ಯೂಬ್ – ಇಲ್ಲಿ ಬೈಪೋಲಾರ್ ಶಕ್ತಿಯನ್ನು ಬಳಸಿಕೊಂಡು ಪ್ರಾಸ್ಟೇಟ್ ಅನ್ನು ನ್ಯೂಕ್ಲಿಯೇಟ್ ಮಾಡಲಾಗುತ್ತದೆ

Urolift , *iTIND - ಎರಡೂ ವಿಧಾನಗಳಲ್ಲಿ ಮೂತ್ರನಾಳವನ್ನು ಅಗಲವಾಗಿಸಲು ಪ್ರಾಸ್ಟೇಟ್ ಅನ್ನು ಕ್ಯಾಪ್ಸುಲ್ ಕಡೆಗೆ ಎಳೆಯಲಾಗುತ್ತದೆ. ಇಲ್ಲಿ ರೋಗಿಗೆ ಸ್ಖಲನ ಕ್ರಿಯೆಯನ್ನು ಉಳಿಸಿಕೊಳ್ಳುವ ಪ್ರಯೋಜನವಿದೆ. ಆದಾಗ್ಯೂ, 5–10 ವರ್ಷಗಳ ನಂತರ ಮರುಕಳಿಸುವಿಕೆಯನ್ನು ಗಮನಿಸಬಹುದು

RAZUM* - ಪ್ರಾಸ್ಟೇಟ್‌ಗೆ (ನೀರಿನ ಆವಿ ಚಿಕಿತ್ಸೆ) ಒಳಪಟ್ಟಿರುತ್ತದೆ ಮತ್ತು ಮಧ್ಯಮ ಗಾತ್ರದವರೆಗಿನ ಪ್ರಾಸ್ಟೇಟ್ ಅನ್ನು ಸ್ಖಲನ ಕ್ರಿಯೆಯ ಸಂರಕ್ಷಣೆಯೊಂದಿಗೆ ಚಿಕಿತ್ಸೆ ನೀಡಬಹುದು. ಕಿರಿಯ ರೋಗಿಗಳಿಗೆ ಮತ್ತು ಹೆಚ್ಚಿನ ಸಹ–ಅಸ್ವಸ್ಥತೆ ಹೊಂದಿರುವವರಿಗೆ ಸಹಾಯಕವಾಗಿದೆ.

ಆಕ್ವಾ ಅಬ್ಲೇಶನ್ * – ಟ್ರಾನ್ಸ್‌ರೆಕ್ಟಲ್ ಅಲ್ಟ್ರಾಸೌಂಡ್ ಮಾರ್ಗದರ್ಶನದ ಅಡಿಯಲ್ಲಿ ವಾಟರ್ ಜೆಟ್ ಥೆರಪಿಯು ಅಡಚಣೆಯನ್ನು ಉಂಟುಮಾಡುವ ದೊಡ್ಡ ಪ್ರಾಸ್ಟೇಟ್ ಪ್ರಮಾಣವನ್ನು ಕಡಿಮೆ ಮಾಡಲು ಬಳಸಲಾಗುತ್ತದೆ

(* ಭಾರತದಲ್ಲಿ ಅನುಮೋದಿಸಲಾಗಿಲ್ಲ)

BPH ಗೆ ಲೇಸರ್ ಚಿಕಿತ್ಸೆ:

ಪ್ರಾಸ್ಟೇಟ್ ಚಿಕಿತ್ಸೆಗಾಗಿ ವಿವಿಧ ಲೇಸರ್ ಚಿಕಿತ್ಸೆಗಳು ಲಭ್ಯವಿದೆ. ಅತ್ಯಂತ ಸಾಮಾನ್ಯವಾಗಿ ಬಳಸುವ ಚಿಕಿತ್ಸೆಗಳು ಕೆಳಗಿನಂತಿವೆ

KTP - ಪೊಟ್ಯಾಶಿಯಮ್ ಟೈಟಾನಿಲ್ ಫಾಸ್ಫೇಟ್: ಪ್ರಾಸ್ಟೇಟ್ ಆವಿಯಾಗುತ್ತದೆ, ಇದನ್ನು ಆಯ್ದ ಪ್ರಾಸ್ಟೇಟ್‌ನ ಫೋಟೋ ಆವಿಯಾಗುವಿಕೆ ಎಂದೂ ಕರೆಯಲ್ಪಡುತ್ತದೆ ಮತ್ತು ಇದು ಸಣ್ಣ ಗಾತ್ರದ ಪ್ರಾಸ್ಟೇಟ್‌ಗಳಲ್ಲಿ ಉಪಯುಕ್ತವಾಗಿದೆ.

Thulep : ಥುಲಿಯಮ್ ಲೇಸರ್‌ಅನ್ನು ಪ್ರಾಸ್ಟೇಟ್‌ಅನ್ನು ಬೇರ್ಪಡಿಸಲು ಮತ್ತು ಆವಿಯಾಗಿಸಲು ಬಳಸಲಾಗುತ್ತದೆ

Thuflep : ಥುಲಿಯಮ್ ಫೈಬರ್ ಲೇಸರ್ ಅನ್ನು ಬಳಸಲಾಗುತ್ತದೆ ಮತ್ತು ಇದು ಗರಿಷ್ಠ ಹೆಪ್ಪುಗಟ್ಟುವಿಕೆಯ ಪ್ರಯೋಜನಗಳನ್ನು ಹೊಂದಿದೆ ಮತ್ತು ವಿಶೇಷವಾಗಿ ರಕ್ತ ತೆಳುವಾಗಿಸುವ ಮತ್ತು ಮಧ್ಯಮ ಗಾತ್ರದ ಪ್ರಾಸ್ಟೇಟ್ ರೋಗಿಗಳಿಗೆ ಉಪಯುಕ್ತವಾಗಿದೆ.

Holep : ಹೋಲ್ಮಿಯಮ್ ಲೇಸರ್ ಎನ್‌ಕ್ಯುಲೇಶನ್ ಆಫ್ ಪ್ರಾಸ್ಟೇಟ್ : ಇದು ಯಾವುದೇ ಗಾತ್ರ ಮತ್ತು ಯಾವುದೇ ಸಹ ಕಾಯಿಲೆಯಾಗಿರಲಿ, ಇದು ಗೋಲ್ಡ್ ಸ್ಟಾಂಡರ್ಡ್ ಆಗಿದೆ. ಇದು ಲೆವೆಲ್ 1 ಪುರಾವೆಗಳೊಂದಿಗೆ ಹೆಚ್ಚಿನ ಅಂತರರಾಷ್ಟ್ರೀಯ ಮಾರ್ಗಸೂಚಿಗಳಲ್ಲಿ (AUA, EAU ಇತ್ಯಾದಿ) ಗೋಲ್ಡ್ ಸ್ಟಾಂಡರ್ಡ್ ಚಿಕಿತ್ಸೆಯಾಗಿದೆ

Molep : ಹೊಸ ಮತ್ತು ಅತ್ಯಾಧುನಿಕ ತಂತ್ರಜ್ಞಾನ. ಇದು Moses 2.0 ತಂತ್ರಜ್ಞಾನದೊಂದಿಗೆ ಹೋಲ್ಮಿಯಮ್ ಲೇಸರ್ ಅನ್ನು ಬಳಸಲಾಗುತ್ತದೆ ಮತ್ತು ಕಡಿಮೆ ತೊಡಕುಗಳೊಂದಿಗೆ ನೋವುರಹಿತ, ಕಡಿಮೆ ರಕ್ತ ಸ್ರಾವ ಹಾಗೂ ವೇಗವಾಗಿ ಚೇತರಿಸಿಕೊಳ್ಳುವುದು ಮತ್ತು ಕಡಿಮೆ ಆಸ್ಪತ್ರೆ ವಾಸದ ಪ್ರಯೋಜನವನ್ನು ಹೊಂದಿದೆ.

ಪ್ರಾಸ್ಟೇಟ್ ಕ್ಯಾನ್ಸರ್‌ಗೆ ರೋಬೋಟಿಕ್ ಚಿಕಿತ್ಸೆ

ರೊಬೊಟಿಕ್ ಆರ್ಮ್‌ಗಳನ್ನು ಕಿಬ್ಬೊಟ್ಟೆಯ ಕುಹರದೊಳಗೆ ಇರಿಸಲಾಗುತ್ತದೆ ಮತ್ತು ನಿಖರವಾದ ನಿಯಂತ್ರಣ ಶಸ್ತ್ರಚಿಕಿತ್ಸಕ ಉಪಕರಣವನ್ನು ಹೆಚ್ಚಿನ ನಿಖರತೆಯೊಂದಿಗೆ ನ್ಯಾವಿಗೇಟ್ ಮಾಡುತ್ತಾರೆ

ಡಾ ಟಿ ಮನೋಹರ್ ಅವರು ಪ್ರಾಸ್ಟೇಟ್ ಮತ್ತು ಅದರ ಅಸ್ವಸ್ಥತೆಗಳಿಗೆ 4000+ ವಿವಿಧ ಲೇಸರ್ ಕಾರ್ಯವಿಧಾನಗಳನ್ನು ಮಾಡಿದ್ದಾರೆ (ಫಲಿತಾಂಶದ ವಿವರ ಟೇಬಲ್‌ನಲ್ಲಿದೆ)

ಲೇಸರ್	ಹೋಲ್ಮಿಯಮ್	ಮೋಸಸ್	ಇತರೆ ಲೇಸರ್
ಪ್ರಕರಣಗಳ ಸಂಖ್ಯೆ	3278	356	378
5 ವರ್ಷಗಳಲ್ಲಿ ಮರುಕಳಿಸುವಿಕೆ	3 (0.09%)	Nil	93 (25%)
ಶಸ್ತ್ರಚಿಕಿತ್ಸೆಯ ನಂತರದ ತೊಂದರೆಯ ಲಕ್ಷಣಗಳು	77 (2.3%)	4 (1.2%)	119 (31%)
ರೋಗಿಯ ತೃಪ್ತಿ	***	****	*

Apollo HOSPITALS — SHESHADRIPURAM —

#1, ಪ್ಲಾಟ್‌ಫಾರಂ ರಸ್ತೆ, ಮಂತ್ರಿ ಮಾಲ್ ಹತ್ತಿರ, ಶೇಷಾದ್ರಿಪುರಂ, ಬೆಂಗಳೂರು – 560 020

+91 84959 11066 bangalore.apollohospitals.com

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,381
ಇಂದಿನ ಅಂತ್ಯ	19,517
▲	136
ದಿನದ ಕನಿಷ್ಠ	19,436

ಎನ್‌ಇಸಿಸಿ ನಿಗದಿಪಡಿಸುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹475
12 ಮೊಟ್ಟೆಗೆ	₹68
ಮೈಸೂರು	
100 ಮೊಟ್ಟೆಗೆ	₹480

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಕ್ವಿ.)	₹335-519
ದ್ವಿತಳಿ (ಕ್ವಿ.)	₹323-645

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹148
ಆರ್‌ಎಸ್‌ಎಸ್-5	₹141.50
ಗುಡ್ ಲಾಟ್	₹125
(ಪ್ರತಿ ಕೆ.ಜಿಗೆ)	

ಖಾದ್ಯ ತೈಲ ಮುಂಬೈ

(10 ಕೆ.ಜಿಗೆ)	
ಶೇಂಗಾ (ರಿಫೈನ್ಡ್)	₹1860 (1860)
ಸೋಯಾ (ರಿಫೈನ್ಡ್)	₹960 (960)
ಸೂರ್ಯಕಾಂತಿ (ರಿಫೈನ್ಡ್)	₹970 (975)
ಪಾಮೋಲಿನ್	₹868 (865)

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)	
ಅರಸೀಕೆರೆ	₹8500-9750
ತಿಪಟೂರು	₹9000-9300
ತುಮಕೂರು	₹8050-8780

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)	
ದಪ್ಪ	₹1400-1800
ಮಧ್ಯಮ	₹1246-1400
ಸಣ್ಣ	₹800-1200

ಮುಂಬೈ ಧಾರಣೆ

ಶೇಂಗಾ

4-8-2023

ಜಾವಾ 70/80(ಹೊಸ)	13400-13500
ಜಾವಾ 80/90(ಹೊಸ)	12000-12100
ದಪ್ಪ ಮಧ್ಯಪ್ರದೇಶ(ಹೊಸ)	13000-13100
ದಪ್ಪ ಗುಜರಾತ್(ಹೊಸ)	14300-14400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1870(1870)
ಒಂದು ವಾರದ ಡೆಲಿವರಿ	1865(1865)
ಸೋಯಾ ಕಚ್ಚಾ	915(920)
ಪಾಮ್ ವಾರದ ಡೆಲಿವರಿ	866(863)
ಸೂರ್ಯಕಾಂತಿ ಎಣ್ಣೆ ಕಚ್ಚಾ	920(920)

ಚಿನ್ನ - ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 59,200 (59,100)

ಬೆಳ್ಳಿ ಕೆ.ಜಿ 72,300 (72,300)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಸುಧಾ, ಮಯೂರ ಓದಿರಿ

ಎಸ್‌ಬಿಐ ಲಾಭ ₹16,884 ಕೋಟಿ

ನವದೆಹಲಿ (ಪಿಟಿಐ): ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ನಿವ್ವಳ ಲಾಭವು ಪ್ರಸಕ್ತ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ಎರಡುಪಟ್ಟು ಹೆಚ್ಚಾಗಿದ್ದು ₹16,884 ಕೋಟಿಗೆ ತಲುಪಿದೆ.

ಸುಸ್ತಿ ಸಾಲದಲ್ಲಿ ಇಳಿಕೆ ಹಾಗೂ ಬಡ್ಡಿ ವರಮಾನ ಹೆಚ್ಚಾಗಿರುವ ಕಾರಣಗಳಿಂದಾಗಿ ಈ ಪ್ರಮಾಣದ ಲಾಭ ಬಂದಿದೆ ಎಂದು ಬ್ಯಾಂಕ್ ತಿಳಿಸಿದೆ.

2022-23ನೇ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ಕಂಪನಿಯ ನಿವ್ವಳ ಲಾಭವು ₹6,068 ಕೋಟಿಯಷ್ಟು ಇತ್ತು.

ಬ್ಯಾಂಕ್‌ನ ಒಟ್ಟು ವರಮಾನವು ಜೂನ್ ತ್ರೈಮಾಸಿಕದಲ್ಲಿ ₹1.08 ಲಕ್ಷ ಕೋಟಿಗೆ ತಲುಪಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹74,989 ಕೋಟಿಯಷ್ಟು ವರಮಾನ ಇತ್ತು ಎಂದು ಷೇರುಪೇಟೆಗೆ ಮಾಹಿತಿ ನೀಡಿದೆ.

ಬಡ್ಡಿ ವರಮಾನ ₹72,676 ಕೋಟಿಯಿಂದ ₹95,975 ಕೋಟಿಗೆ ಏರಿಕೆ ಕಂಡಿದೆ.

ವಸೂಲಾಗದ ಸಾಲದ ಸರಾಸರಿ ಪ್ರಮಾಣವು (ಜಿಎನ್‌ಪಿಎ) ಶೇ 3.91ರಿಂದ ಶೇ 2.76ಕ್ಕೆ ಇಳಿಕೆ ಆಗಿದೆ. ನಿವ್ವಳ ಎನ್‌ಪಿಎ ಶೇ 1ರಿಂದ ಶೇ 0.71ಕ್ಕೆ ಇಳಿಕೆ ಕಂಡಿದೆ.

ಸಾಲ ನೀಡಿಕೆ ಸಾಮರ್ಥ್ಯವು ಶೇ 13.90ರಷ್ಟು, ಮುಂಗಡ ನೀಡಿಕೆಯು ಶೇ 15.08ರಷ್ಟು ಹೆಚ್ಚಳ ಆಗಿದೆ. ಕೃಷಿ ಮತ್ತು ಕಾರ್ಪೊರೇಟ್ ಸಾಲಗಳು ಕ್ರಮವಾಗಿ ಶೇ 14.84 ಮತ್ತು ಶೇ 12.38ರಷ್ಟು ಬೆಳವಣಿಗೆ ಕಂಡಿವೆ ಎಂದು ಬ್ಯಾಂಕ್ ಮಾಹಿತಿ ನೀಡಿದೆ.

ಬ್ಯಾಂಕ್‌ನ ಬಂಡವಾಳ ಲಭ್ಯತೆ ಪ್ರಮಾಣವು 113 ಮೂಲಾಂಶದಷ್ಟು ಸುಧಾರಿಸಿದ್ದು ಶೇ 14.56ಕ್ಕೆ ತಲುಪಿದೆ.

ತ್ರೈಮಾಸಿಕ ಫಲಿತಾಂಶದ ಬಳಿಕ ಬ್ಯಾಂಕ್‌ನ ಷೇರು ಮೌಲ್ಯ ಶೇ 3ರವರೆಗೆ ಇಳಿಕೆ ಕಂಡಿದ್ದು, ಮಾರುಕಟ್ಟೆ ಮೌಲ್ಯದಲ್ಲಿ ₹15,484 ಕೋಟಿ ಕರಗಿದೆ.

ಮಹೀಂದ್ರ ಲಾಭ ಶೇ 56 ಹೆಚ್ಚಳ

ಮುಂಬೈ (ಪಿಟಿಐ/ರಾಯಿಟರ್ಸ್): ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಯು ಪ್ರಸಕ್ತ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ₹3,683 ಕೋಟಿಯಷ್ಟು ತೆರಿಗೆ ನಂತರದ ಲಾಭ ಗಳಿಸಿದೆ. ಹಿಂದಿನ ಹಣಕಾಸು ವರ್ಷದಲ್ಲಿ ಗಳಿಸಿದ್ದ ಲಾಭಕ್ಕೆ ಹೋಲಿಸಿದರೆ (₹2,360 ಕೋಟಿ) ಈ ಬಾರಿ ಲಾಭ ಶೇ 56ರಷ್ಟು ಹೆಚ್ಚಾಗಿದೆ.

ಎಸ್‌ಯುವಿ ಮಾರಾಟ ಹೆಚ್ಚಾಗಿರುವುದೇ ಈ ಪ್ರಮಾಣದಲ್ಲಿ ಲಾಭ ಗಳಿಕೆಗೆ ಕಾರಣ ಎಂದು ಹೇಳಿದೆ.

ಕಾರ್ಯಾಚರಣಾ ವರಮಾನ ಶೇ 17.57ರಷ್ಟು ಏರಿಕೆ ಕಂಡು ₹33,406 ಕೋಟಿಗೆ ತಲುಪಿದೆ ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ. ಒಟ್ಟು ವೆಚ್ಚವು ₹26,195 ಕೋಟಿಯಿಂದ ₹30,492 ಕೋಟಿಗೆ ಏರಿಕೆ ಕಂಡಿದೆ.

ಆಗಸ್ಟ್‌ವರೆಗೆ 2.81 ಲಕ್ಷ ಎಸ್‌ಯುವಿಗಳಿಗೆ ಬುಕ್ಕಿಂಗ್ ಬಂದಿದೆ. ಇದು ಎಸ್‌ಯುವಿಗಳಿಗೆ ಇರುವ ಬೇಡಿಕೆಯನ್ನು ಸೂಚಿಸುತ್ತಿದೆ ಎಂದು ಕಂಪನಿ ತಿಳಿಸಿದೆ.

ಎಸ್‌ಯುವಿ ಮಾರಾಟ 1 ಲಕ್ಷದ ಮೈಲಿಗಲ್ಲು ದಾಟಿದ್ದು, ಸತತ 6ನೇ ತ್ರೈಮಾಸಿಕದಲ್ಲಿಯೂ ವರಮಾನದ ಪಾಲಿನಲ್ಲಿ ಮುಂಚೂಣಿಯಲ್ಲಿದೆ.

ಆಗಸ್ಟ್ ಅಂತ್ಯಕ್ಕೆ ಈರುಳ್ಳಿ ದುಬಾರಿ?

ಕೆ.ಜಿ.ಗೆ ₹70ರವರೆಗೆ ಏರಿಕೆ: ಕ್ರಿಸಿಲ್ ಸಂಸ್ಥೆಯ ಅಧ್ಯಯನ ವರದಿ ಅಂದಾಜು

ಮುಂಬೈ (ಪಿಟಿಐ): ಆಗಸ್ಟ್ ತಿಂಗಳ ಕೊನೆಯಲ್ಲಿ ದೇಶದ ರಿಟೇಲ್ ಮಾರುಕಟ್ಟೆಗಳಲ್ಲಿ ಈರುಳ್ಳಿ ಬೆಲೆ ಹೆಚ್ಚಳ ಕಂಡು ಬರುವ ಸಾಧ್ಯತೆ ಇದೆ. ಬೆಲೆಯು ಕೆ.ಜಿ.ಗೆ ₹60ರಿಂದ ₹70ರವರೆಗೆ ಏರಿಕೆ ಕಾಣಲಿದೆ ಎಂದು ಕ್ರಿಸಿಲ್ ಸಂಸ್ಥೆಯ ಅಧ್ಯಯನ ವರದಿಯೊಂದು ಹೇಳಿದೆ. ಪೂರೈಕೆಯ ಕೊರತೆಯು ಬೆಲೆ ಏರಿಕೆಗೆ ಕಾರಣ ಆಗಲಿದೆ ಎಂದು ಅದು ಹೇಳಿದೆ.

ಆದರೆ, ಈರುಳ್ಳಿ ಬೆಲೆಯು 2020ರಲ್ಲಿ ಕಂಡಿದ್ದ ಗರಿಷ್ಠ ಮಟ್ಟಕ್ಕಿಂತ ಕಡಿಮೆ ಇರಲಿದೆ ಎಂದು ಅಂದಾಜು ಮಾಡಿದೆ.

'ಈರುಳ್ಳಿಯ ಪೂರೈಕೆ ಮತ್ತು ಬೇಡಿಕೆಯಲ್ಲಿನ ಅಸಮತೋಲನವು, ಆಗಸ್ಟ್ ತಿಂಗಳ ಕೊನೆಯ ವೇಳೆಗೆ ಬೆಲೆ ಏರಿಕೆಯ ರೂಪದಲ್ಲಿ ಕಾಣಿಸಿಕೊಳ್ಳಲಿದೆ. ನಾವು ತಳಮಟ್ಟದಲ್ಲಿ ನಡೆಸಿದ ಮಾತುಕತೆಗಳ ಪ್ರಕಾರ ರಿಟೇಲ್ ಮಾರುಕಟ್ಟೆಯಲ್ಲಿ ಸೆಪ್ಟೆಂಬರ್ ಆರಂಭದಿಂದ ಬೆಲೆಯು ಗಮನಾರ್ಹವಾಗಿ ಹೆಚ್ಚಳ ಆಗಲಿದೆ. ಬೆಲೆಯು ₹70ರವರೆಗೂ ತಲುಪಬಹುದು' ಎಂದು ಕ್ರಿಸಿಲ್ ಮಾರ್ಕೆಟ್ ಇಂಟೆಲಿಜೆನ್ಸ್ ಆ್ಯಂಡ್ ಅನಾಲಿಟಿಕ್ಸ್ ಸಿದ್ಧಪಡಿಸಿರುವ ವರದಿಯು ಹೇಳಿದೆ.

ಈರುಳ್ಳಿ ಬೆಳೆಯುವ ಪ್ರದೇಶಗಳಲ್ಲಿ ಮಾರ್ಚ್‌ನಲ್ಲಿ ಅಕಾಲಿಕ ಮಳೆಯಾಗಿ, ಈರುಳ್ಳಿ ಗುಣಮಟ್ಟ ಹಾಳಾಯಿತು. ಹೀಗಾಗಿ, ಈ ಹಿಂಗಾರು ಹಂಗಾಮಿನ ಈರುಳ್ಳಿ ಹೆಚ್ಚು ಕಾಲ ಬಾಳಿಕೆ ಬರದಂತಾಯಿತು. ಇದರ ಜೊತೆಗೆ, ಈ ವರ್ಷದ ಫೆಬ್ರುವರಿ-ಮಾರ್ಚ್ ಅವಧಿಯಲ್ಲಿ ಈರುಳ್ಳಿಯನ್ನು ವಿಪರೀತ ಪ್ರಮಾಣದಲ್ಲಿ ಮಾರಾಟ ಮಾಡಿದ್ದ ಕಾರಣದಿಂದಾಗಿ ಮುಕ್ತ ಮಾರುಕಟ್ಟೆಯಲ್ಲಿ ಹಿಂಗಾರು ಬೆಳೆಯ ಸಂಗ್ರಹವು ಆಗಸ್ಟ್ ಕೊನೆಯಲ್ಲಿ ಗಣನೀಯವಾಗಿ ಕಡಿಮೆ ಆಗಲಿದೆ ಎಂದು ವಿವರಿಸಿದೆ.

ಮುಂಗಾರು ಅವಧಿಯ ಈರುಳ್ಳಿ ಬೆಳೆಯು ಅಕ್ಟೋಬರ್‌ನಿಂದ ಮಾರುಕಟ್ಟೆಗೆ ಬರಲಿದೆ. ಆಗ ಬೆಲೆಯಲ್ಲಿ ಇಳಿಕೆ ಕಂಡುಬರಲಿದೆ. ಹಬ್ಬಗಳ ಋತುವಿನಲ್ಲಿ (ಅಕ್ಟೋಬರ್-ಡಿಸೆಂಬರ್ ಅವಧಿ) ಬೆಲೆಯಲ್ಲಿನ ಏರಿಳಿತವು ಸ್ಥಿರತೆಯ ಹಂತವನ್ನು ತಲುಪುವ ನಿರೀಕ್ಷೆ ಇದೆ.

ಈ ವರ್ಷದ ಜನವರಿ-ಮೇ ಅವಧಿಯಲ್ಲಿ ಈರುಳ್ಳಿ ಬೆಲೆ ಇಳಿಕೆಯಾಗಿದ್ದ ಕಾರಣ ಗ್ರಾಹಕರಿಗೆ ಹೊರೆ ತುಸು ಕಡಿಮೆ ಆಗಿತ್ತು. ಆದರೆ ಇದರ ಪರಿಣಾಮವಾಗಿ ಮುಂಗಾರು ಅವಧಿಯಲ್ಲಿ ರೈತರು ಈರುಳ್ಳಿ ಬೆಳೆಯುವ ಪ್ರಮಾಣ ಕಡಿಮೆ ಆಯಿತು.

'ಹೀಗಾಗಿ ಮುಂಗಾರು ಹಂಗಾಮಿನ ಈರುಳ್ಳಿ ಬೆಳೆ ಪ್ರಮಾಣವು ಹಿಂದಿನ ವರ್ಷದ ಪ್ರಮಾಣಕ್ಕೆ ಹೋಲಿಸಿದರೆ ಶೇಕಡ 5ರಷ್ಟು ಕಡಿಮೆ ಆಗಬಹುದು ಎಂಬುದು ನಮ್ಮ ನಿರೀಕ್ಷೆ. ಈರುಳ್ಳಿಯ ವಾರ್ಷಿಕ ಉತ್ಪಾದನೆಯು 2.9 ಕೋಟಿ ಟನ್ ಆಗಲಿದೆ. ಇದು ಕಳೆದ ಐದು ವರ್ಷಗಳ ಸರಾಸರಿಗಿಂತ ಶೇ 7ರಷ್ಟು ಜಾಸ್ತಿ' ಎಂದು ವರದಿಯಲ್ಲಿ ತಿಳಿಸಲಾಗಿದೆ.

'ಇದನ್ನು ಪರಿಗಣಿಸಿದರೆ ಈ ವರ್ಷದಲ್ಲಿ ಪೂರೈಕೆಯಲ್ಲಿ ದೊಡ್ಡ ಪ್ರಮಾಣದ ಸಮಸ್ಯೆ ಎದುರಾಗಲಿಕ್ಕಿಲ್ಲ. ಆದರೂ ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳ ಮಳೆಯ ಪ್ರಮಾಣವು ಈರುಳ್ಳಿ ಬೆಳೆಯ ಪ್ರಮಾಣ ಯಾವ ಮಟ್ಟದಲ್ಲಿ ಇರಲಿದೆ ಎಂಬುದನ್ನು ತೀರ್ಮಾನಿಸಲಿದೆ' ಎಂದು ವರದಿ ಹೇಳಿದೆ.

'ಆಮದು ನಿರ್ಬಂಧದಿಂದ ದೇಶಿ ತಯಾರಿಕೆಗೆ ಉತ್ತೇಜನ'

ನವದೆಹಲಿ (ಪಿಟಿಐ): ಲ್ಯಾಪ್‌ಟಾಪ್, ಟ್ಯಾಬ್ ಮತ್ತು ಪರ್ಸನಲ್ ಕಂಪ್ಯೂಟರ್ ಆಮದಿನ ಮೇಲೆ ನಿರ್ಬಂಧ ಹೇರಿರುವ ಕೇಂದ್ರದ ಕ್ರಮ ಹಾಗೂ ಐ.ಟಿ. ಹಾರ್ಡ್‌ವೇರ್ ತಯಾರಿಕೆ ಉತ್ತೇಜನಕ್ಕೆ ರೂಪಿಸಿರುವ ಪಿಎಲ್‌ಐ ಯೋಜನೆಯು ದೇಶದಲ್ಲಿ ಇವುಗಳ ಉತ್ಪಾದನೆಗೆ ಇಂಬು ಕೊಡಲಿದೆ ಎಂದು ಉದ್ಯಮದ ಪ್ರಮುಖರು ಅಭಿಪ್ರಾಯಪಟ್ಟಿದ್ದಾರೆ.

ಕೇಂದ್ರವು ಈ ಉತ್ಪನ್ನಗಳ ಆಮದುದಾರರಿಗೆ ಪರವಾನಗಿ ಪಡೆದುಕೊಳ್ಳಲು ಹೆಚ್ಚಿನ ಸಮಯ ನೀಡುವ ಸಾಧ್ಯತೆ ಇದೆ. ಇದರಿಂದ ಕಂಪನಿಗಳಿಗೆ ನೆರವಾಗುವ ನಿರೀಕ್ಷೆ ಇದೆ.

'ಮುಂದಿನ 2-3 ವರ್ಷಗಳಲ್ಲಿ ಭಾರತದಲ್ಲಿ ತಯಾರಾಗುವ ಐ.ಟಿ. ಹಾರ್ಡ್‌ವೇರ್‌ಗಳು ದೇಶಿ ಮಾರುಕಟ್ಟೆಯ ಶೇ 60ರಿಂದ ಶೇ 65ರಷ್ಟು ಬೇಡಿಕೆಯನ್ನು ಪೂರೈಸುವ ನಿರೀಕ್ಷೆ ಇದೆ' ಎಂದು ಆಪ್ಟಿಮಸ್ ಎಲೆಕ್ಟ್ರಾನಿಕ್ಸ್ ಲಿ. (ಒಇಎಲ್) ವ್ಯವಸ್ಥಾಪಕ ನಿರ್ದೇಶಕ ಎ. ಗುರುರಾಜ್ ಹೇಳಿದ್ದಾರೆ.

ಭಾರತದ ಲ್ಯಾಪ್‌ಟಾಪ್ ಮತ್ತು ಪರ್ಸನಲ್ ಕಂಪ್ಯೂಟರ್ ಮಾರುಕಟ್ಟೆಯ ವಾರ್ಷಿಕ ವಹಿವಾಟು ಅಂದಾಜು ₹66 ಸಾವಿರ ಕೋಟಿ. ಇದರಲ್ಲಿ ಆಮದಿನ ಪಾಲು ಶೇಕಡ 65ರಷ್ಟು ಎಂದು ಕೌನ್ಸಿಲ್ ಫಾರ್ ಕಂಪ್ಯೂಟರ್ ರಿಸರ್ಚ್ ಸಂಸ್ಥೆಯ ಸಂಶೋಧನಾ ನಿರ್ದೇಶಕ ತರುಣ್ ಪಾಠಕ್ ಹೇಳಿದ್ದಾರೆ.

'ಕೇಂದ್ರದ ಕ್ರಮವು ಲಕ್ಷಾಂತರ ಉದ್ಯೋಗ ಸೃಷ್ಟಿಗೆ ಕಾರಣವಾಗಲಿದೆ' ಎಂದು ಲಾವಾ ಇಂಟರ್‌ನ್ಯಾಷನಲ್ ಸಹ ಸಂಸ್ಥಾಪಕ ಹರಿ ಓಂ ರಾಯ್ ಹೇಳಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ		ಹೊಸತು	34000-45000	ಬೆಟ್ಟೆ	42370-49018
ಸಕಲೇಶಪುರ		ಶಿವಮೊಗ್ಗ		ಬಿಳೆಗೋಟು	28009-37201
ಕಳಿ	500-550	ಬೆಟ್ಟೆ	51658-53410	ಚಾಲಿ	38698-43799
ಹಸಿರು	600-650	ಗೊರಬಲು	26609-42299	ಕೆಂಪುಗೋಟು	
ರಾಶಿ ಗೋಟು	700-800	ರಾಶಿ	44809-54609		24199-39123
ರಾಶಿ ಉತ್ತಮ	900-950	ಸರಕು	52419-81059	ರಾಶಿ	48899-52609
ಜರಡಿ	1000-1050	ಸಿದ್ದಾಪುರ		ಯಲ್ಲಾಪುರ	
ಹರಳಿನ	1300-1400	ಬಿಳೆಗೋಟು	31899-35909	ಬಿಳೆಗೋಟು	26899-38519
ಹಸಿರು ಸಾಧಾರಣ	1000-1100	ಚಾಲಿ	39569-43400	ಚಾಲಿ	38312-43380
ಹಸಿರು ಮಧ್ಯಮ	1250-1350	ಕೋಕ	31119-35699	ಕೋಕ	22612-36122
ಹಸಿರು ಅತಿ ಉತ್ತಮ		ಕೆಂಪುಗೋಟು		ಕೆಂಪುಗೋಟು	
	1600-1800		32019-36089		32019-37499
ಕಾಳುಮೆಣಸು	615	ರಾಶಿ	46599-51099	ರಾಶಿ	49369-55865
ಅಡಿಕೆ		ತಟ್ಟಿಬೆಟ್ಟೆ	39699-48599	ತಟ್ಟಿಬೆಟ್ಟೆ	40469-49008
ಬಂಟ್ವಾಳ		ಶಿರಸಿ			
ಕೋಕ	12500-25000				
ಹೊಸತು	27500-45000				
ಹಳತು	46000-48000				
ಕುಮಟಾ					
ಚಿಪ್ಪು	33019-36109				
ಕೋಕ	23509-35699				
ಫ್ಯಾಕ್ಟರಿ	15019-22769				
ಹಳೆಚಾಲಿ	39509-42149				
ಹೊಸಚಾಲಿ	39019-42569				
ಪುತ್ತೂರು					

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

ಮೂಟೆಗೆ	ಹಾಸನ			
	ಮಡ್ಡಿಕೆರೆ	ಪಾಲಾಂಚಿ	ಅಲ್ಕಾನ	ಚಿಕ್ಕಮಗಳೂರು
ಎಪಿ	14000	14050	14050	164.75/ಸೆಂಟ್
ಎಸಿ	7140	6900	7000	
ಆರ್‌ಪಿ	10200	10300	10250	ಲಂಡನ್
ಆರ್‌ಸಿ	6230	250	6050	2645/ಡಾಲರ್

ಟಾಟಾ ಪಂಚ್ ಐಸಿಎನ್‌ಜಿ

ನವದೆಹಲಿ (ಪಿಟಿಐ): ಟಾಟಾ ಮೋಟರ್ಸ್ ಕಂಪನಿಯು ತನ್ನ ಮೈಕ್ರೊ ಎಸ್‌ಯುವಿ 'ಪಂಚ್'ನ ಐಸಿಎನ್‌ಜಿ ಆವೃತ್ತಿಯನ್ನು ಬಿಡುಗಡೆ ಮಾಡಿದ್ದು, ಎಕ್ಸ್ ಷೋರೂಂ ಬೆಲೆಯು ₹7.1 ಲಕ್ಷದಿಂದ ₹9.68 ಲಕ್ಷದವರೆಗೆ ಇದೆ. ಟ್ವಿನ್ ಸಿಲಿಂಡರ್ ತಂತ್ರಜ್ಞಾನವನ್ನು ಇದು ಒಳಗೊಂಡಿದೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಇಪಿಎಸ್ ಕನಿಷ್ಠ ಪಿಂಚಣಿ ಹೆಚ್ಚಳ ಇಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೌಕರರ ಪಿಂಚಣಿ ಯೋಜನೆಯ (ಇಪಿಎಸ್) ಅಡಿಯಲ್ಲಿ ನೀಡುತ್ತಿರುವ ಕನಿಷ್ಠ ಪಿಂಚಣಿ ಮೊತ್ತವನ್ನು ಹೆಚ್ಚಿಸುವ ಯಾವುದೇ ಪ್ರಸ್ತಾವ ಕೇಂದ್ರ ಸರ್ಕಾರದ ಮುಂದೆ ಇಲ್ಲ ಎಂದು ಕಾರ್ಮಿಕ ಖಾತೆ ರಾಜ್ಯ ಸಚಿವ ರಾಮೇಶ್ವರ ತೇಲಿ ಅವರು ರಾಜ್ಯಸಭೆಗೆ ತಿಳಿಸಿದ್ದಾರೆ.

ರಾಜ್ಯಸಭೆಯ ಸದಸ್ಯ ರಾಧಾ ಮೋಹನ ದಾಸ್ ಅಗರ್‌ವಾಲ್ ಅವರು ಕೇಳಿದ್ದ 'ಕನಿಷ್ಠ ಪಿಂಚಣಿ ಮೊತ್ತ ₹1,000 ಇರುವುದನ್ನು ₹5,000ಕ್ಕೆ, ₹6,000ಕ್ಕೆ ಅಥವಾ ₹7,000ಕ್ಕೆ ಹೆಚ್ಚಿಸುವ ಪ್ರಸ್ತಾವ ಇದೆಯೇ' ಎಂಬ ಪ್ರಶ್ನೆಗೆ ಸಚಿವರು ಈ ಉತ್ತರ ನೀಡಿದ್ದಾರೆ.

'ಇಪಿಎಸ್ ಅಡಿಯಲ್ಲಿ 2022-23ನೇ ಹಣಕಾಸು ವರ್ಷದಲ್ಲಿ ಒಟ್ಟು 75 ಲಕ್ಷ ಜನರಿಗೆ ಪಿಂಚಣಿ ನೀಡಲಾಗುತ್ತಿದೆ' ಎಂದು ಸಚಿವರು ಹೇಳಿದ್ದಾರೆ.

'ಪಿಎಸ್‌ಐ ಹಗರಣ: ಮರು ಪರೀಕ್ಷೆ ನಡೆಸಬಹುದು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪೊಲೀಸ್ ಸಬ್ ಇನ್‌ಸ್ಪೆಕ್ಟರ್‌ಗಳ (ಪಿಎಸ್‌ಐ) ನೇಮಕಾತಿಯಲ್ಲಿ ಅಕ್ರಮ ನಡೆದ ಹಿನ್ನೆಲೆಯಲ್ಲಿ ಸರ್ಕಾರ ಮರು ಪರೀಕ್ಷೆ ನಡೆಸಬಹುದು' ಎಂದು ಹೈಕೋರ್ಟ್ ಮೌಖಿಕ ಅಭಿಪ್ರಾಯ ವ್ಯಕ್ತಪಡಿಸಿದೆ.

'ಮರು ಪರೀಕ್ಷೆಗೆ ಸರ್ಕಾರ ಹೊರಡಿಸಿರುವ ಆದೇಶ ರದ್ದುಪಡಿಸಬೇಕು. ಕಳಂಕಿತ ಮತ್ತು ಕಳಂಕರಹಿತ ಅಭ್ಯರ್ಥಿಗಳನ್ನು ಪ್ರತ್ಯೇಕಿಸಿ, ನೇಮಕಾತಿ ಆದೇಶ ನೀಡಲು ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಿ ಆಯ್ಕೆಯಾಗಿದ್ದ 100ಕ್ಕೂ ಹೆಚ್ಚು ಅಭ್ಯರ್ಥಿಗಳು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಪಿ.ಎಸ್. ದಿನೇಶ್ ಕುಮಾರ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, ಮರು ಪರೀಕ್ಷೆ ನಡೆಸುವ ಸರ್ಕಾರದ ನಿರ್ಧಾರಕ್ಕೆ ಆಕ್ಷೇಪ ವ್ಯಕ್ತಪಡಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಸರ್ಕಾರ ಮರು ಪರೀಕ್ಷೆ ನಡೆಸಿದರೆ ನಿಮಗೇನು ಸಮಸ್ಯೆ, ನೀವು (ಅರ್ಜಿದಾರರು) ಪರೀಕ್ಷೆ ಬರೆದು ಪಾಸ್ ಆಗಬಹುದಲ್ಲವೇ, ಅದೇ ರೀತಿ ಬೇರೆಯವರೂ ಪರೀಕ್ಷೆ ಬರೆಯಲಿ. ಸರ್ಕಾರ ಮರು ಪರೀಕ್ಷೆ ನಡೆಸಬಹುದು ಎಂಬುದು ನಮ್ಮ ಅಭಿಪ್ರಾಯ' ಎಂದು ಮೌಖಿಕವಾಗಿ ಹೇಳಿತು.

ಸೋಮವಾರ ವಿಚಾರಣೆ ನಡೆಸೋಣ ಆದರೆ, ಮೇಲ್ಮನವಿಗೆ ನಾವು ನಿಮ್ಮ ಜೊತೆಗಿಲ್ಲ ಎಂದು ಅರ್ಜಿದಾರರ ಪರ ವಕೀಲರಿಗೆ ತಿಳಿಸಿದ ನ್ಯಾಯಪೀಠ ವಿಚಾರಣೆಯನ್ನು ಇದೇ 7ಕ್ಕೆ ಮುಂದೂಡಿತು. ವಿಚಾರಣೆ ವೇಳೆ ಅಡ್ವೊಕೇಟ್ ಜನರಲ್ ಕೆ. ಶಶಿಕಿರಣ್ ಶೆಟ್ಟಿ ಹಾಜರಿದ್ದರಾದರೂ ಅರ್ಜಿದಾರರ ಪರ ಹಿರಿಯ ವಕೀಲರು ಹಾಜರಿಲ್ಲದ ಕಾರಣ ಯಾವುದೇ ವಾದ ಮಂಡಿಸಲಿಲ್ಲ.

'ಆಂತರಿಕ ವಿಷಯದತ್ತ ಪಾಕ್ ಗಮನಹರಿಸಲಿ'

ವಾಷಿಂಗ್ಟನ್ (ಪಿಟಿಐ): ಕಾಶ್ಮೀರ ಸಮಸ್ಯೆ ಹಾಗೂ ಭಾರತದ ಬಗ್ಗೆ ಕ್ಷುಲ್ಲಕ ಆರೋಪ ಮಾಡುವ ಬದಲು ತನ್ನ ಆಂತರಿಕ ವಿಷಯಗಳನ್ನು ಬಗೆಹರಿಸುವತ್ತ ಗಮನ ಹರಿಸುವಂತೆ ಭಾರತವು ಪಾಕಿಸ್ತಾನಕ್ಕೆ ತಿರುಗೇಟು ನೀಡಿದೆ.

ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಚರ್ಚೆಯ ವೇಳೆ ಪಾಕಿಸ್ತಾನದ ಪ್ರತಿನಿಧಿಯೊಬ್ಬರು ಕಾಶ್ಮೀರ ವಿಷಯದ ಬಗ್ಗೆ ಎತ್ತಿದ ಪ್ರಶ್ನೆಗೆ ವಿಶ್ವಸಂಸ್ಥೆಯಲ್ಲಿನ ಭಾರತದ ಪ್ರತಿನಿಧಿ ಆರ್. ಮಧುಸೂದನ್ ಈ ಪ್ರತಿಕ್ರಿಯೆ ನೀಡಿದ್ದಾರೆ.

ಪ್ರಧಾನಿ ಶೆಹಬಾಜ್ ಹೇಳಿಕೆ • ಆಗಸ್ಟ್ 12ಕ್ಕೆ ಸರ್ಕಾರದ ಅವಧಿ ಮುಕ್ತಾಯ

9ಕ್ಕೆ ಪಾಕ್ ನ್ಯಾಷನಲ್ ಅಸೆಂಬ್ಲಿ ವಿಸರ್ಜನೆ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದ 'ನ್ಯಾಷನಲ್ ಅಸೆಂಬ್ಲಿ'ಯನ್ನು (ಸಂಸತ್ತಿನ ಕೆಳಮನೆ) ಅವಧಿ ಮುಗಿಯುವ ಮೂರು ದಿನ ಮೊದಲೇ ಅಂದರೆ, ಆಗಸ್ಟ್ 9ರಂದು ವಿಸರ್ಜಿಸಲಾಗುವುದಾಗಿ ಪ್ರಧಾನಿ ಶೆಹಬಾಜ್ ಷರೀಫ್ ಹೇಳಿದ್ದಾರೆ.

ಆಡಳಿತಾರೂಢ ಪಕ್ಷಗಳ ಮುಖಂಡರಿಗೆ ಗುರುವಾರ ತಮ್ಮ ನಿವಾಸದಲ್ಲಿ ಆಯೋಜಿಸಿದ್ದ ಔತಣಕೂಟದಲ್ಲಿ ಮಾತನಾಡಿದ ಶೆಹಬಾಜ್, ಸಾರ್ವತ್ರಿಕ ಚುನಾವಣೆಗೆ ಸಿದ್ಧವಾಗಲು ಸಮ್ಮಿಶ್ರ ಸರ್ಕಾರದ ಪಾಲುದಾರ ಪಕ್ಷಗಳ ನಾಯಕರಿಗೆ ತಿಳಿಸಿದರು.

ನ್ಯಾಷನಲ್ ಅಸೆಂಬ್ಲಿ ವಿಸರ್ಜನೆಯ ಪ್ರಸ್ತಾವ ಅಧ್ಯಕ್ಷರ ಅಂತಿಮ ಒಪ್ಪಿಗೆಗಾಗಿ ಅವರಿಗೆ ಕಳುಹಿಸಲಾಗುತ್ತದೆ. ಈ ಪ್ರಕ್ರಿಯೆ ಶೀಘ್ರವೇ ನಡೆಯಲಿದೆ ಎಂದು ಶೆಹಬಾಜ್ ಹೇಳಿರುವುದಾಗಿ ಮಾಧ್ಯಮಗಳು ಶುಕ್ರವಾರ ವರದಿ ಮಾಡಿವೆ.

ಆಗಸ್ಟ್ 9ರಂದು ಕೆಳಮನೆಯನ್ನು ವಿಸರ್ಜಿಸುವಂತೆ ಪ್ರಧಾನಿಯವರು ಅಧ್ಯಕ್ಷ ಆರಿಫ್ ಅಲ್ವಿ ಅವರಿಗೆ ಪ್ರಸ್ತಾವನೆ ಕಳುಹಿಸಿಕೊಟ್ಟಿದ್ದಾರೆ ಎಂದು 'ದಿ ಎಕ್ಸ್‌ಪ್ರೆಸ್ ಟ್ರಿಬ್ಯೂನ್' ಪತ್ರಿಕೆ ವರದಿ ಮಾಡಿದೆ.

ಸರ್ಕಾರವು ನ್ಯಾಷನಲ್ ಅಸೆಂಬ್ಲಿಯನ್ನು ವಿಸರ್ಜಿಸಿದರೆ, ಚುನಾವಣಾ ಆಯೋಗವು ಸಂವಿಧಾನಕ್ಕೆ ಅನುಗುಣವಾಗಿ ಸಾರ್ವತ್ರಿಕ ಚುನಾವಣೆ ಘೋಷಿಸಲಿದೆ ಎಂದು ಶೆಹಬಾಜ್, ಈಗಾಗಲೇ ಹಲವು ಬಾರಿ ಹೇಳಿಕೆ ನೀಡಿದ್ದಾರೆ.

ಆಗಸ್ಟ್ 12ರಂದು ಆಡಳಿತಾರೂಢ ಸಮ್ಮಿಶ್ರ ಸರ್ಕಾರದ ಐದು ವರ್ಷಗಳ ಅವಧಿ ಮುಗಿಯಲಿದೆ. ನ್ಯಾಷನಲ್ ಅಸೆಂಬ್ಲಿ 5 ವರ್ಷಗಳ ಅವಧಿ ಪೂರ್ಣಗೊಳಿಸಿದರೆ, ಸಂವಿಧಾನದ ಪ್ರಕಾರ 60 ದಿನಗಳಲ್ಲಿ ಚುನಾವಣೆ ನಡೆಸಬೇಕು. ಆದರೆ, ಅವಧಿಗೂ ಮೊದಲೇ ವಿಸರ್ಜನೆಯಾದ ಸಂದರ್ಭದಲ್ಲಿ ಚುನಾವಣೆ ನಡೆಸಲು 90 ದಿನಗಳವರೆಗೂ ಕಾಲಾವಕಾಶ ಇರುತ್ತದೆ.

ಹಣ ಅಕ್ರಮ ವರ್ಗಾವಣೆ ತಡೆ: ಮಸೂದೆಗೆ ಅಸ್ತು

ಇಸ್ಲಾಮಾಬಾದ್ (ಪಿಟಿಐ): ಹಣಕಾಸು ಕ್ರಿಯಾ ಯೋಜನೆ ಕಾರ್ಯಪಡೆಯ (ಎಫ್‌ಎಟಿಎಫ್) 'ಬೂದು ಪಟ್ಟಿ'ಯಲ್ಲಿ ದೇಶವು ಸೇರದಂತೆ ಶಾಶ್ವತ ಪರಿಹಾರ ಕಂಡುಕೊಳ್ಳುವುದಕ್ಕೆ ಪೂರಕವಾದ ಮಸೂದೆಗೆ ಪಾಕಿಸ್ತಾನದ ನ್ಯಾಷನಲ್ ಅಸೆಂಬ್ಲಿ ಶುಕ್ರವಾರ ಅಂಗೀಕಾರ ನೀಡಿದೆ.

ಹಣ ಅಕ್ರಮ ವರ್ಗಾವಣೆ ಮತ್ತು ಉಗ್ರರಿಗೆ ಹಣಕಾಸು ನೆರವು ನೀಡುವುದನ್ನು ಕಡಿವಾಣ ಹಾಕಲು ಸಂಸ್ಥೆಯೊಂದನ್ನು ಸ್ಥಾಪಿಸಬೇಕೆಂದು ಕೋರುವ ಈ ಮಸೂದೆಗೆ ಸಂಸತ್ ಕೆಳಮನೆಯಲ್ಲಿ ಅಂಗೀಕಾರ ದೊರೆತಿದೆ. ಎಫ್‌ಎಟಿಎಫ್‌ಗೆ ಸಂಬಂಧಿಸಿದ ಎಲ್ಲಾ ಸಂಸ್ಥೆಗಳನ್ನು ಒಂದೇ ಸೂರಿನಡಿ ತರುವ ಉದ್ದೇಶವನ್ನು ಇದು ಹೊಂದಿದೆ.

ಹೀನಾ ರಬ್ಬಾನಿ

ಈ ಮಸೂದೆ ಮಂಡಿಸಿ ಮಾತನಾಡಿದ ವಿದೇಶಾಂಗ ವ್ಯವಹಾರಗಳ ರಾಜ್ಯ ಸಚಿವೆ ಹೀನಾ ರಬ್ಬಾನಿ ಖಾರ್, 'ಐದೂವರೆ ಉತ್ತಮ ಮಸೂದೆ. ಇದು ಸರಿಯಾದ ಜಾರಿಯಾದರೆ ಪಾಕಿಸ್ತಾನವು ಮತ್ತೊಮ್ಮೆ ಎಫ್‌ಎಟಿಎಫ್ ಬೂದು ಪಟ್ಟಿಗೆ ಸೇರಬೇಕಾಗಿಲ್ಲ' ಎಂದು ಹೇಳಿದರು. ಕಳೆದ ವರ್ಷ ಎಫ್‌ಎಟಿಎಫ್ ಪಾಕಿಸ್ತಾನವನ್ನು ಬೂದುಪಟ್ಟಿಯಿಂದ ಹೊರಗಿಟ್ಟಿತ್ತು.

ತೋಶಾಖಾನಾ ಪ್ರಕರಣ: ಸೆಷನ್ಸ್ ಕೋರ್ಟ್ ತೀರ್ಪು ವಜಾ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರಿಗೆ ಸಂಬಂಧಿಸಿದ ತೋಶಾಖಾನಾ ಪ್ರಕರಣವು ವಿಚಾರಣೆಗೆ ಅರ್ಹ ಎಂದು ಸೆಷನ್ಸ್ ನ್ಯಾಯಾಲಯ ನೀಡಿದ್ದ ಆದೇಶವನ್ನು ಇಸ್ಲಾಮಾಬಾದ್ ಹೈಕೋರ್ಟ್ ಶುಕ್ರವಾರ ರದ್ದುಗೊಳಿಸಿದೆ. ಇದರಿಂದಾಗಿ ಇಮ್ರಾನ್ ಸದ್ಯಕ್ಕೆ ನಿರಾಳರಾಗಿದ್ದಾರೆ.

ಸೆಷನ್ಸ್ ನ್ಯಾಯಾಲಯದಲ್ಲಿ ತೋಶಾಖಾನಾ ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ನಡೆಯುತ್ತಿದ್ದ ವಿಚಾರಣೆ ವಿರುದ್ಧ ಇಮ್ರಾನ್ ಖಾನ್ ಅವರು ಸಲ್ಲಿಸಿದ್ದ ಅರ್ಜಿಗಳ ವಿಚಾರಣೆ ನಡೆಸಿದ್ದ ಹೈಕೋರ್ಟ್, ತೀರ್ಪನ್ನು ಕಾಯ್ದಿರಿಸಿರುವುದಾಗಿ ಗುರುವಾರ ಪ್ರಕಟಿಸಿತ್ತು.

ಹೈಕೋರ್ಟ್ ನ್ಯಾಯಮೂರ್ತಿ ಅಮೀರ್ ಫಾರೂಕ್ ಶುಕ್ರವಾರ ತೀರ್ಪು ಪ್ರಕಟಿಸಿದ್ದು, 'ತೋಶಾಖಾನಾ ಪ್ರಕರಣವು ವಿಚಾರಣೆಗೆ ಅರ್ಹವೇ? ಅಲ್ಲವೇ ಎಂಬುದನ್ನು ಮತ್ತೊಮ್ಮೆ ಪರಿಶೀಲಿಸಿ' ಎಂದು ಸೆಷನ್ಸ್ ನ್ಯಾಯಾಲಯಕ್ಕೆ ಆದೇಶಿಸಿದ್ದಾರೆ.

ತಾವು ಪಡೆದಿರುವ ಉಡುಗೊರೆಗಳ ವಿವರಗಳನ್ನು ಗುಟ್ಟಾಗಿರಿಸುವ ಮತ್ತು ವಿದೇಶಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಬಂದ ಉಡುಗೊರೆಗಳನ್ನು ಮಾರಾಟ ಮಾಡಿದ ಆರೋಪ ಇಮ್ರಾನ್ ಮೇಲಿದೆ. ಇದಕ್ಕೂ ಮುನ್ನ ವಿಚಾರಣೆಯನ್ನು ಪ್ರಶ್ನಿಸಿ ಇಮ್ರಾನ್ ಅವರು ಪಾಕಿಸ್ತಾನ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಆದರೆ, ಕೋರ್ಟ್ ಅರ್ಜಿಯನ್ನು ವಜಾಗೊಳಿಸಿತ್ತು.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to: https://homepages.deccanherald.com or Scan QR code to access booking form

ಚಿರಸ್ಮರಣೆ

ನಮ್ಮ ಕುಟುಂಬದ ಜ್ಯೋತಿಯಾಗಿದ್ದ ಶ್ರೀಮಾನ್ ಕೆ.ಎಲ್. ಶಿವಲಿಂಗಯ್ಯನವರು (ನಿವೃತ್ತ ಡಿ.ಎಸ್.ಪಿ. ...) ಶ್ರೀಯುತರು ದಿನಾಂಕ: 27.07.2023 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ಉತ್ತರ ಕ್ರಿಯಾದಿ ಭುಜಿತಾದಿ ಕಾರ್ಯವನ್ನು ದಿನಾಂಕ: 06.08.2023ರ ಭಾನುವಾರ ಬೆಳಿಗ್ಗೆ 11.00 ಗಂಟೆಗೆ ಮೃತರ ಸ್ವಗೃಹ ... ನೆರವೇರಿಸಲಿರುವುದು. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ.

ಶ್ರೀಮತಿ ಡಿ.ಕೆ. ವಿಜಯಾ ಕುಟುಂಬ ವರ್ಗದವರು ಹಾಗೂ ಬಂಧು-ಮಿತ್ರರು

ಪ್ರಜಾವಾಣಿ — ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು!

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

www.homepages.deccanherald.com — ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ

Vishal: +91 9845114560 | Jerry: +91 9731810277 | Tanveer: +91 9886213331 | Ravichandra: +91 9901641752 | Anitha: +91 9900428036

ಪ್ರಜಾವಾಣಿ ಕ್ಲಾಸಿಫೈಡ್ಸ್ — ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080 - 45557160 /161/ 162/ 163/ 164 9845114560 / 9731810277/ 9886213331

ಉದ್ಯೋಗಾವಕಾಶ — General

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೊದಗಿಸಲಾಗುವುದು. ಸಂಬಳ 16,000- 80,000. 7760014526, 7795199673

ತಕ್ಷಣ ಬೇಕಾಗಿದ್ದಾರೆ. ಟಾಟಾಮೋಟಾರ್ಸ್, ಬಯೋಕಾನ್, ಬ್ರಿಟಾನಿಯಾ, ಟಿ.ವಿ.ಎಸ್, MNCಗಳಿಗೆ SSLC, PUC, Degree, Diplomaದವರು 18,000- 56,000/- (ವಿದ್ಯಾರ್ಹತೆಯುಳ್ಳವರಿಗಾಗಿ) ವಸತಿಯಿದೆ. 8105161292

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 9611227266 /9611221244

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ 15,000-20,000/- ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503.

ಮನೆಯಲ್ಲಿದ್ದೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸ ಮೂಲಕ ತಿಂಗಳಿಗೆ 18,000-22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

Multiple Vacancy

ಬೇಕಾಗಿದ್ದಾರೆ ಬೆಂಗಳೂರಿನ ಕಂಪನಿಗೆ ಪುರುಷ/ ಮಹಿಳೆ ಸಹಾಯಕರು/ ಶುಚಿಗೊಳಿಸುವ ನೌಕರರು/ ಆಡುಗೆ ಸಹಾಯಕರು/ ಮೇಲ್ವಿಚಾರಕರು/ ಆಫೀಸ್‌ಬಾಯ್/ ಕಟ್ಟಿಂಗ್ ಹುಡುಗರು/ ಚಾಲಕರು. 35 ವರ್ಷಕ್ಕಿಂತ ಕಡಿಮೆ ವಯಸ್ಸಿನವರು. ಉಚಿತ ಊಟ, ವಸತಿ, ESI/PF, CV ಕಳುಹಿಸಲು ಸಂಪರ್ಕಿಸಿ: 9663625770

ಭವಿಷ್ಯ — Astrology

ಒಂದೇಕರೆಯಲ್ಲಿ ಶಾಶ್ವತ ಪರಿಹಾರ, ಸ್ತ್ರೀ-ಪುರುಷ ವಶೀಕರಣ ಸ್ಪೆಷಲಿಸ್ಟ್ 100% ಗ್ಯಾರಂಟಿ ಪರಿಹಾರ. ಪಂಡಿತ್ ಕೃಷ್ಣಪ್ರಸಾದ್. ಉಚಿತ ಭವಿಷ್ಯ ಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು ಶ್ರೀಕ್ಷೇತ್ರ ಧರ್ಮಸ್ಥಳ:9880788899

ಚೌಡೇಶ್ವರಿ ದೇವಿ ಕೃಪೆಯಿಂದ ಪ್ರೀತಿಯಲ್ಲಿ ನಂಬಿದವರ ಮೋಸ, ಹಣಕಾಸು ತೊಂದರೆ, ಇಷ್ಟಪಟ್ಟವರು ನಿಮ್ಮವರಾಗಲು ಯಾವುದೇ ಗುಪ್ತ ನಿಗೂಢ ಸಮಸ್ಯೆಗಳಿಗೆ ಕೇವಲ ರೂ. 1750ರಲ್ಲಿ ಪರಿಹಾರ. 9945566330 ಶ್ರೀಕಾಂತ್ ರಾವ್.

ಸ್ತ್ರೀವಶೀಕರಣ, ಪುರುಷವಶೀಕರಣ, ಪ್ರೀತಿಪ್ರೇಮ, ಇಷ್ಟಪಟ್ಟವರು ನಿಮ್ಮವರಾಗಲು 11ಗಂಟೆಗಳಲ್ಲಿ ಸ್ತ್ರೀಯರಿಗೆ ಕಡಿಮೆ ಖರ್ಚಿನಲ್ಲಿ ಪರಿಹಾರ. 9448687421

ಸಾರ್ವಜನಿಕ ಪ್ರಕಟಣೆ

PUBLIC NOTICE

IN THE COURT OF THE ADDL. CIVIL JUDGE AT BANGARPET OS. NO. 248 /2020. PLAINTIFF; M. NAGARAJ. V/S DEFENDANT; R. VENKATESHA MURTHY. APPLICANT M.GOVINDA. OPPONENT R. VENKATESHA MURTHY. NOTICE

Take notice that The plaintiff have filed OS.NO. 248/2020 for SPECIFIC PERFORMANCE OF CONTRACT against the defendant. The court required defendant to appear before this honble court in person or through advocate duly instructed to appear on 23.8.2023 at 11 AM. before ADDL civil judge at Bangarpet, failing which matter would be heard and decided in your absence as an EX-PARTE.

SCHEDULE

All that piece and parcel of the schedule property, the schedule property is tiles roofed house, bearing municipal katha no. 397/365/329, measuring east to west 10.6 feets ... North to South: 26 feets situated at tank road (dandu road), Bangarpet Town, bounded on East by : satyamurthy property, West by : Muniyamma w/o Changappa property, North by : conservancy and South by : tank road.

Sd/- V Aswath Narayana Murthy, Advocate, Bangarpet. By order of the Court. Sheristedar, ADDL. Civil Judge Court, Bangarpet.

ಪ್ರವಾಸ — Travel

19.09.2023 17.11.2023 ಸಿಂಗಾಪೂರ್, ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 04.11.2023 22.11.2023 08.12.2023 ದುಬೈ, ಅಬುದಾಬಿ 5 ದಿನಗಳು. 11.10.2023 29.11.2023 ದುಬೈ ಯೂರೋಪ್ 5 ದಿನಗಳು. 11.09.2023 09.10.2023 17.11.2023 ಶ್ರೀಲಂಕಾ 6 ದಿನಗಳು. 19.09.2023 06.10.2023 ಕಾಶಿ, ಗಯಾ, ಅಯೋಧ್ಯ 8 ದಿನಗಳು. 11.09.2023 09.10.2023 ಗುಜರಾತ್ 8 ದಿನಗಳು. 13.10.2023 25.11.2023 ರಾಜಸ್ಥಾನ್ 9 ದಿನಗಳು. 07.10.2023 11.11.2023 ದೆಹಲಿ, ಆಗ್ರಾ, ಜೈಪೂರ್ 6 ದಿನಗಳು. ಸಂಪರ್ಕಿಸಿ: ಜೈನ್ ಟ್ರಾವೆಲ್, ಮಲ್ಲೇಶ್ವರಂ, ಬೆಂಗಳೂರು. 03 9448402248 7022547922

ಸುಸಜ್ಜಿತ ವ್ಯವಸ್ಥೆಗಳೊಂದಿಗೆ: 30.08.2023 ರಿಂದ 13 ದಿನಗಳ ಯೂರೋಪ್ ಪ್ರವಾಸ. 24.09.2023 19.10.2023 ರಿಂದ 5 ದಿನಗಳ ದುಬೈ, ಅಬುದಾಬಿ, ಶಾರ್ಜಾ. 29.09.2023 25.10.2023 ರಿಂದ 7/11 ದಿನಗಳ ಸಿಂಗಾಪೂರ್, ಮಲೇಶಿಯಾ ಥೈಲ್ಯಾಂಡ್. 01.10.2023 16.10.2023 ರಿಂದ 11 ದಿನಗಳ ಮತ್ತಿನಾಥ ಕಾಠ್, ನೇಪಾಳ. 06.10.2023 18.10.2023 ರಿಂದ 15 ದಿನಗಳ ಚಾರ್‌ಧಾಮ್ ಯಾತ್ರೆಗಳು. 01.10.2023 16.10.2023 ರಿಂದ 7/12 ದಿನಗಳ ಶಿಮ್ಲಾ, ಮನಾಲಿ ವೈಷ್ಣೋದೇವಿ, ಕಾಶ್ಮೀರ್. 21.09.2023 01.10.2023 ರಿಂದ 8 /12 ದಿನಗಳ ಕಾಶಿ, ಗಯಾ, ಅಲಹಾಬಾದ್. 25.10.2023 29.10.2023 20.11.2023 ರಿಂದ 7/11/17 ದಿನಗಳ ರಾಜಸ್ಥಾನ್/ಗುಜರಾತ್ ಪ್ರವಾಸಗಳು. ಸಂಪರ್ಕಿಸಿ: ಆನಂದ್ ವಿಹಾರಿ ಬೆಂಗಳೂರು23. 080-23385837 8088887677

9 ದಿನಗಳ ಕಾಶಿ, ಗಯಾ ಅಲಹಾಬಾದ್. 8 ದಿನಗಳ ನೇಪಾಳ, ಮುಕ್ತಿನಾಥ ವಿಶೇಷ. 8 ದಿನಗಳ ಸಿಂಗಾಪೂರ್ ಮಲೇಶಿಯಾ. 5 ದಿನಗಳ ಬಾಲಿ. ಹಾಗೂ ಇತರೆ ಪ್ರವಾಸಗಳಿಗೆ ಸಂಪರ್ಕಿಸಿ: ಆರ್ಕೆ ಟ್ರಾವೆಲ್ ಅಂಡ್ ಟೂರ್ಸ್, ಬಸವನಗುಡಿ ಬೆಂಗಳೂರು.04. 9880079588 9900080796

ಸೆಪ್ಟೆಂಬರ್ ಅಕ್ಟೋಬರ್ ನವೆಂಬರ್ ಡಿಸೆಂಬರ್ ಕಾಶಿಯಾತ್ರೆ 6 ದಿನಗಳು, ಉತ್ತರಭಾರತ ಪ್ರವಾಸ 11 ದಿನಗಳು, ಗುಜರಾತ್ ಪ್ರವಾಸ 11 ದಿನಗಳು, ಗುಜರಾತ್/ಮಧ್ಯಪ್ರದೇಶ ಪ್ರವಾಸ 12 ದಿನಗಳು, ರಾಜಸ್ಥಾನ್ ಪ್ರವಾಸ 11 ದಿನಗಳು, ಮಧ್ಯಪ್ರದೇಶ ಪ್ರವಾಸ 12 ದಿನಗಳು, ಪುರಿ, ಕಲ್ಕತ್ತಾ, ಡಾರ್ಜಿಲಿಂಗ್ 11 ದಿನಗಳು, ಚಾರ್‌ಧಾಮ್ ಯಾತ್ರೆ 13 ದಿನಗಳು, ಕಾಶ್ಮೀರ್, ವೈಷ್ಣೋದೇವಿ 9 ದಿನಗಳು, ಹಿಮಾಚಲ, ಮನಾಲಿ ಪ್ರವಾಸ 7 ದಿನಗಳು, ದಕ್ಷಿಣಭಾರತ ಗೋವಾ, ಕೇರಳ ತಮಿಳುನಾಡು, ಶಿರಡಿ ಪ್ರತಿ ತಿಂಗಳು ನಿಗದಿಯಾದ ಪ್ರವಾಸ ಸಂಪರ್ಕಿಸಿ: ಶ್ರೀವಿಘ್ನೇಶ್ವರ ಟ್ರಾವೆಲ್ಸ್, ವಿಜಯನಗರ, ಬೆಂಗಳೂರು 9880847001 9342848791

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್ 4/9 ನೇಪಾಳ ಮುಕ್ತಿನಾಥ್, ಪಶುಪತಿನಾಥ. 29/8 ಶಿರಡಿ 3 ಜ್ಯೋತಿರ್ಲಿಂಗ. 17/8 ಪುರಿ ಜಗನ್ನಾಥ್ 9964527782, 9591017782

ರಿಯಲ್ ಎಸ್ಟೇಟ್ ಸೆಲ್ಲಿಂಗ್ — Sites — Hoskote

HOSKOTE 30X60 SITE For SALE at Kanakanagar, Sir. M. Visveshwaraiah Layout, Hoskote. Contact: 9880843416, 9743535151.

ಬಿಲ್ಡರ್ ಎಸೆನ್ಷಿಯಲ್ — Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರಕಟವಾದವುಗಳ ವಸ್ತು, ಸೇವೆ ಗುಣಮಟ್ಟವನ್ನು ಪರಿಶೀಲಿಸಿ ಕೊಳ್ಳಿ. ... ಜಾಹೀರಾತುದಾರರು ...

Book Your Classifieds Ads Online Log in to dhclassifieds.com

Contact: 9845114560 : 9731810277 9901641752 : 9886213331 080 - 45557163 / 164

ಏಷ್ಯನ್ ಹಾಕಿ ಚಾಂಪಿಯನ್‌ಷಿಪ್: ಮಲೇಷ್ಯಾ ತಂಡಕ್ಕೆ ಜಯ

ಭಾರತ–ಜಪಾನ್ ಪಂದ್ಯ ಡ್ರಾ



ಚೆನ್ನೈನಲ್ಲಿ ಶುಕ್ರವಾರ ನಡೆದ ಏಷ್ಯನ್ ಹಾಕಿ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ ಭಾರತ ತಂಡದ ಆಟಗಾರರು ಜಪಾನ್ ತಂಡದ ವಿರುದ್ಧ ಗೋಲು ಗಳಿಸಲು ಪ್ರಯತ್ನಿಸಿದರು –ಪಿಟಿಐ ಚಿತ್ರ

ಚೆನ್ನೈ (ಪಿಟಿಐ): ಹರ್ಮನ್‌ಪ್ರೀತ್ ಸಿಂಗ್ ಗಳಿಸಿದ ಗೋಲಿನ ಬಲದಿಂದ ಭಾರತ ತಂಡವು ಇಲ್ಲಿ ನಡೆಯುತ್ತಿರುವ ಏಷ್ಯನ್ ಹಾಕಿ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ ಜಪಾನ್ ವಿರುದ್ಧ 1–1 ಗೋಲಿನಿಂದ ಡ್ರಾ ಸಾಧಿಸಿತು.

ಶುಕ್ರವಾರ ನಡೆದ ಪಂದ್ಯದಲ್ಲಿ ಜಪಾನ್ ತಂಡದ ನಾಗಯೋಶಿ ಕೆನ್ (28ನೇ ನಿಮಿಷ) ಪೆನಾಲ್ಟಿ ಕಾರ್ನರ್‌ನಲ್ಲಿ ಗೋಲು ಹೊಡೆದರು. ಮೂರನೇ ಕ್ವಾರ್ಟರ್‌ನಲ್ಲಿ ಭಾರತದ ಹರ್ಮನ್‌ಪ್ರೀತ್ ಸಿಂಗ್ ತಿರುಗೇಟು ನೀಡಿದರು. 43ನೇ ನಿಮಿಷದಲ್ಲಿ ಲಭಿಸಿದ್ದ ಪೆನಾಲ್ಟಿ ಕಾರ್ನರ್‌ನಲ್ಲಿ ಗೋಲು ಗಳಿಸುವಲ್ಲಿ ಅವರು ಸಫಲರಾದರು.

ನಾಲ್ಕನೇ ಕ್ವಾರ್ಟರ್‌ನಲ್ಲಿ ಒಂದರ ಹಿಂದೊಂದು ಪೆನಾಲ್ಟಿ ಕಾರ್ನರ್‌ಗಳು ದೊರೆತರೂ ಜಪಾನ್ ತಂಡದ ರಕ್ಷಣಾ ಪಡೆ ಮೇಲುಗೈ ಸಾಧಿಸಿತು. ಇದರಿಂದಾಗಿ ಜಯ ಸಾಧಿಸುವ ಭಾರತ ತಂಡದ ಆಸೆ ಕೈಗೂಡಲಿಲ್ಲ. ಗುರುವಾರ ನಡೆದಿದ್ದ ಮೊದಲ ಪಂದ್ಯದಲ್ಲಿ ಭಾರತ ಗೆದ್ದಿತ್ತು.

ಪಾಕ್–ಕೊರಿಯಾ ಡ್ರಾ: ಪಾಕಿಸ್ತಾನ ತಂಡದ ಗೆಲುವಿನ ಕನಸಿಗೆ ಅಡ್ಡಿಯಾದ ಹಾಲಿ ಚಾಂಪಿಯನ್ ದಕ್ಷಿಣ ಕೊರಿಯಾ ತಂಡವು ಪಂದ್ಯವನ್ನು 1–1ರಿಂದ ಡ್ರಾ ಮಾಡಿಕೊಳ್ಳುವಲ್ಲಿ ಸಫಲವಾಯಿತು.

ಗುರುವಾರದ ಪಂದ್ಯದಲ್ಲಿ ಪಾಕ್ ತಂಡವು 1–3ರಿಂದ ಮಲೇಷ್ಯಾ ವಿರುದ್ಧ ಸೋತಿತ್ತು. ಶುಕ್ರವಾರ ಕೊರಿಯಾ ವಿರುದ್ಧ ಗೆಲುವಿನ ಛಲದಲ್ಲಿತ್ತು. ತಂಡದ ಅಬ್ದುಲ್ ಶಹೀದ್ ಒಂಬತ್ತನೇ ನಿಮಿಷದಲ್ಲಿ ಗೋಲು ಗಳಿಸಿ ತಂಡಕ್ಕೆ 1–0 ಮುನ್ನಡೆ ಒದಗಿಸಿಕೊಟ್ಟರು. ಆದರೆ 53ನೇ ನಿಮಿಷದಲ್ಲಿ ಲಭಿಸಿದ ಪೆನಾಲ್ಟಿ ಕಾರ್ನರ್‌ನಲ್ಲಿ ಕೊರಿಯಾದ ಜಿಹುನ್ ಯಾಂಗ್ ಗೋಲು ಹೊಡೆದು ಸಮಬಲ ಸಾಧಿಸಿದರು.

200ನೇ ಪಂದ್ಯ: ಪಾಕಿಸ್ತಾನ ತಂಡದ ನಾಯಕ ಉಮರ್ ಭುಟ್ಟಾ ಅವರಿಗೆ ಇದು 200ನೇ ಅಂತರರಾಷ್ಟ್ರೀಯ ಪಂದ್ಯವಾಗಿತ್ತು. ಪಂದ್ಯಕ್ಕೂ ಮುನ್ನ ಅವರನ್ನು ಹಾಕಿ ಇಂಡಿಯಾ ವತಿಯಿಂದ ಗೌರವಿಸಲಾಯಿತು.

ಮಲೇಷ್ಯಾ ಜಯಭೇರಿ: ಇನ್ನೊಂದು ಪಂದ್ಯದಲ್ಲಿ ಮಲೇಷ್ಯಾ ತಂಡವು 5–1ರಿಂದ ಚೀನಾ ಬಳಗವನ್ನು ಮಣಿಸಿತು.

ಮೇಯರ್ ರಾಧಾಕೃಷ್ಣನ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಚೀನಾ ತಂಡದ ಚಾಂಗ್‌ಕಾಂಗ್ ಚೆನ್ ನಾಲ್ಕನೇ ನಿಮಿಷದಲ್ಲಿಯೇ ಗೋಲು ಗಳಿಸಿದರು. ಇದರೊಂದಿಗೆ ತಂಡಕ್ಕೆ ಮಹತ್ವದ ಮುನ್ನಡೆ ನೀಡಿದರು. ಆದರೆ ಇದನ್ನು ಉಳಿಸಿಕೊಳ್ಳುವಲ್ಲಿ ಚೀನಾ ಎಡವಿತು.

ಏಳನೇ ನಿಮಿಷದಲ್ಲಿ ಮಲೇಷ್ಯಾದ ಫೈಜಲ್ ಸಾರಿ ಪೆನಾಲ್ಟಿ ಕಾರ್ನರ್‌ನಲ್ಲಿ ಗೋಲು ಗಳಿಸಿದರು. 15ನೇ ನಿಮಿಷದಲ್ಲಿ ಅಬು ಕಮಲ್ ಅಝ್ರೈ, 45 ಹಾಗೂ 49ನೇ ನಿಮಿಷದಲ್ಲಿ ಫೆರ್ಹಾನ್ ಅಶಾರಿ ಮತ್ತು 57ನೇ ನಿಮಿಷದಲ್ಲಿ ನಜ್ಮಿ ಜಜಲಾನ್ ಗೋಲು ಹೊಡೆದರು.

ಕ್ರಿಕೆಟ್‌ಗೆ ವಿದಾಯ ಹೇಳಿದ ಹೇಲ್ಸ್

ಅಲೆಕ್ಸ್ ಹೇಲ್ಸ್

ಲಂಡನ್ (ಎಎಫ್‌ಪಿ): ಇಂಗ್ಲೆಂಡ್‌ನ ಬ್ಯಾಟರ್ ಅಲೆಕ್ಸ್ ಹೇಲ್ಸ್ ಅವರು ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಶುಕ್ರವಾರ ವಿದಾಯ ಹೇಳಿದರು. 34 ವರ್ಷದ ಬಿರುಸಿನ ಹೊಡೆತಗಳ ಆಟಗಾರ ಹೇಲ್ಸ್ 2022ರಲ್ಲಿ ಪಾಕಿಸ್ತಾನ ವಿರುದ್ಧ ಮೆಲ್ಬರ್ನ್‌ನಲ್ಲಿ ಟಿ–20 ಪಂದ್ಯದಲ್ಲಿ ಕೊನೆಯ ಬಾರಿ ಇಂಗ್ಲೆಂಡ್ ತಂಡದಲ್ಲಿ ಆಡಿದ್ದರು.

ಅವರಿಂದ ಕೊನೆಯ ಬಾರಿ ಗಮನಾರ್ಹ ಆಟ ಬಂದಿದ್ದು ಭಾರತ ವಿರುದ್ಧ 2022ರ ಟಿ–20 ವಿಶ್ವಕಪ್‌ನಲ್ಲಿ. ಆಸ್ಟ್ರೇಲಿಯಾದಲ್ಲಿ ನಡೆದಿದ್ದ ಆ ವಿಶ್ವಕಪ್‌ನಲ್ಲಿ ಅವರು ಅಡಿಲೇಡ್‌ನಲ್ಲಿ 47 ಎಸೆತಗಳಲ್ಲಿ ಅಜೇಯ 86 ರನ್ ಹೊಡೆದಿದ್ದರು. ಜೋಸ್ ಬಟ್ಲರ್ 80 ರನ್ ಹೊಡೆದಿದ್ದು, ಇಂಗ್ಲೆಂಡ್ 10 ವಿಕೆಟ್‌ಗಳಿಂದ ಆ ಪಂದ್ಯ ಜಯಿಸಿತ್ತು.

ಮೂರೂ ಮಾದರಿಗಳಲ್ಲಿ ಒಟ್ಟು 156 ಪಂದ್ಯಗಳನ್ನು ಆಡಿರುವ ಹೇಲ್ಸ್ 70 ಏಕದಿನ ಪಂದ್ಯಗಳಿಂದ ಸುಮಾರು 38ರ ಸರಾಸರಿಯಲ್ಲಿ 2,419 ರನ್ ಗಳಿಸಿದ್ದರೆ. 75 ಟಿ–20 ಪಂದ್ಯಗಳನ್ನು ಆಡಿದ್ದು 2,074 ರನ್ ಕಲೆಹಾಕಿದ್ದಾರೆ.

ಆದರೆ ಕ್ರೀಡಾಂಗಣದ ಹೊರಗೆ ವಿವಾದಗಳಲ್ಲೂ ಅವರು ಸಿಲುಕಿದ್ದಾರೆ. ಬ್ರಿಸ್ಟಲ್‌ನ ನೈಟ್‌ಕ್ಲಬ್ ಹೊರಗೆ ನಡೆದ ಘಟನೆಯೊಂದಕ್ಕೆ ಸಂಬಂಧಿಸಿ ಅವರಿಗೆ ಅಮಾನತು ಶಿಕ್ಷೆ ವಿಧಿಸಲಾಗಿತ್ತು. ಮಾದಕ ವಸ್ತು ಸೇವನೆಗಾಗಿ ಮತ್ತೆ ನಿಷೇಧ ಶಿಕ್ಷೆಗೆ ಒಳಗಾದರು. ಹೀಗಾಗಿ ಅವರು 2019ರ ಏಕದಿನ ವಿಶ್ವಕಪ್ ತಂಡದಲ್ಲಿ ಆಡುವ ಅವಕಾಶ ಕೈತಪ್ಪಿತ್ತು.

ಆರ್‌ಸಿಬಿಗೆ ಫ್ಲವರ್ ಕೋಚ್

ಮೈಕ್ ಹೆಸನ್, ಬಾಂಗರ್‌ಗೆ ಕೊಕ್ ನೀಡಿದ ಐಪಿಎಲ್ ತಂಡ

ಪ್ರಜಾವಾಣಿ ವಾರ್ತೆ



ಜಿಂಬಾಬ್ವೆಯ ಆ್ಯಂಡಿ ಫ್ಲವರ್ (ಬಲ) ಅವರಿಗೆ ಆರ್‌ಸಿಬಿ ಫ್ರಾಂಚೈಸಿಯ ಮುಖ್ಯಸ್ಥ ಮತ್ತು ಉಪಾಧ್ಯಕ್ಷ ರಾಜೇಶ್ ಮೆನನ್ ಕ್ಯಾಪ್ ಕಾಣಿಕೆ ನೀಡಿದರು

ಬೆಂಗಳೂರು: ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಮುಖ್ಯ ಕೋಚ್ ಸ್ಥಾನಕ್ಕೆ ಜಿಂಬಾಬ್ವೆಯ ಆ್ಯಂಡಿ ಫ್ಲವರ್ ನೇಮಕವಾಗಿದ್ದಾರೆ.

ಇದರೊಂದಿಗೆ ಈ ಮೊದಲು ಮುಖ್ಯ ಕೋಚ್ ಆಗಿದ್ದ ಸಂಜಯ್ ಬಾಂಗರ್ ಮತ್ತು ನಿರ್ದೇಶಕ ಮೈಕ್ ಹೆಸನ್ ಅವರಿಗೆ ಕೊಕ್ ನೀಡಲಾಗಿದೆ.

ಆರ್‌ಸಿಬಿ ಫ್ರಾಂಚೈಸಿಯ ಮುಖ್ಯಸ್ಥ ಮತ್ತು ಉಪಾಧ್ಯಕ್ಷ ರಾಜೇಶ್ ಮೆನನ್, ಫ್ಲವರ್ ಅವರನ್ನು ಲಂಡನ್‌ನಲ್ಲಿ ಭೇಟಿಯಾಗಿ ಮಾತುಕತೆ ನಡೆಸಿದರು. ನಂತರ ಅವರೊಂದಿಗೆ ಒಪ್ಪಂದ ಮಾಡಿಕೊಂಡು ತಂಡದ ಕ್ಯಾಪ್ ಕಾಣಿಕೆ ನೀಡಿದರು.

'ಆರ್‌ಸಿಬಿ ತಂಡವನ್ನು ಸೇರುತ್ತಿರುವುದಕ್ಕೆ ಹೆಮ್ಮೆಯೆನಿಸುತ್ತಿದೆ. ಈ ಮೊದಲು ಮೈಕ್ ಹೆಸನ್ ಮತ್ತು ಸಂಜಯ್ ಬಾಂಗರ್ ಅವರು ಮಾಡಿರುವ ಒಳ್ಳೆಯ ಕಾರ್ಯಗಳನ್ನು ಗೌರವಿಸುತ್ತೇನೆ. ಆರ್‌ಸಿಬಿಯು ಉನ್ನತ ಸಾಧನೆಗೆ ಬೇಕಾದ ಕಾರ್ಯಕ್ರಮಗಳಿಗೆ ಒತ್ತು ನೀಡುತ್ತೇನೆ' ಎಂದು ಫ್ಲವರ್ ಹೇಳಿದ್ದಾರೆ.

ಅವರು ಕಳೆದ ಎರಡು ಋತುಗಳಲ್ಲಿ ಲಖನೌ ಸೂಪರ್ ಜೈಂಟ್ಸ್ ತಂಡಕ್ಕೆ ಮುಖ್ಯ ಕೋಚ್ ಆಗಿದ್ದರು. ಅಲ್ಲದೇ ಇಂಗ್ಲೆಂಡ್ ಕ್ರಿಕೆಟ್ ತಂಡಕ್ಕೆ 12 ವರ್ಷ ಮಾರ್ಗದರ್ಶನ ನೀಡಿದ್ದರು. ಕೋಚ್ ಹಾಗೂ ಸಹಾಯಕ ಕೋಚ್ ಆಗಿದ್ದರು. 2007ರಲ್ಲಿ ಇಂಗ್ಲೆಂಡ್ ತಂಡಕ್ಕೆ ಪೀಟರ್ ಮೂರ್ಸ್ ಕೋಚ್ ಆಗಿದ್ದಾಗ ಫ್ಲವರ್ ಸಹಾಯಕ ಕೋಚ್ ಆಗಿದ್ದರು. ಎರಡು ವರ್ಷಗಳ ನಂತರ ಮುಖ್ಯ ಕೋಚ್ ಆಗಿದ್ದರು. ಅವರ ಮಾರ್ಗದರ್ಶನದಲ್ಲಿ ಇಂಗ್ಲೆಂಡ್ ತಂಡವು ಐಸಿಸಿ ಟೆಸ್ಟ್ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನ ಪಡೆದಿತ್ತು.

> ನಾಲ್ಕು ವರ್ಷಗಳ ಕಾಲ ನಮ್ಮ ತಂಡವನ್ನು ಉತ್ತಮವಾಗಿ ಮುನ್ನಡೆಸಿದ ಹೆಸನ್ ಮತ್ತು ಬಾಂಗರ್ ಅವರಿಗೆ ಆಭಾರಿಯಾಗಿದ್ದೇವೆ. ಅವರ ಅವಧಿಯಲ್ಲಿ ತಂಡ ಮೂರು ಬಾರಿ ಪ್ಲೇ ಆಫ್ ಪ್ರವೇಶಿಸಿತ್ತು –**ಪ್ರಥಮೇಶ್ ಮಿಶ್ರಾ** ಚೇರ್ಮನ್, ಆರ್‌ಸಿಬಿ

> ಕಳೆದ ನಾಲ್ಕು ಆವೃತ್ತಿಗಳಲ್ಲಿ ಮೂರು ಸಲ ತಂಡವನ್ನು ಪ್ಲೇಆಫ್‌ನತ್ತ ಮುನ್ನಡೆಸಿದ್ದು ಹೆಮ್ಮೆಯ ವಿಷಯ. ಆದರೆ ಪ್ರಶಸ್ತಿ ಜಯಿಸಲು ಸಾಧ್ಯವಾಗದಿರುವ ಬಗ್ಗೆ ನಿರಾಶೆ ಇದೆ. –**ಮೈಕ್ ಹೆಸನ್** ಆರ್‌ಸಿಬಿಯ ನಿಕಟಪೂರ್ವ ನಿರ್ದೇಶಕ

2010ರಲ್ಲಿ ಟಿ20 ವಿಶ್ವಕಪ್ ಮತ್ತು 2010–11ರಲ್ಲಿ ಆಸ್ಟ್ರೇಲಿಯಾದಲ್ಲಿ ನಡೆದಿದ್ದ ಆ್ಯಷಸ್ ಸರಣಿಯನ್ನು ಗೆದ್ದುಕೊಂಡಿತ್ತು.

ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟೂರ್ನಿಯಲ್ಲಿಯೂ ಫ್ಲವರ್ ಅವರಿಗೆ ಕಾರ್ಯನಿರ್ವಹಿಸಿದ ಉತ್ತಮ ಅನುಭವ ಇದೆ. ಪಂಜಾಬ್ ಕಿಂಗ್ಸ್ ಮತ್ತು ಲಖನೌ ತಂಡಗಳಿಗೆ ಮಾರ್ಗದರ್ಶನ ನೀಡಿದ್ದರು.

'ಫಫ್ ಡುಪ್ಲೆಸಿಯೊಂದಿಗೆ ಕಾರ್ಯನಿರ್ವಹಿಸಲು ಉತ್ಸುಕನಾಗಿದ್ದೇನೆ. ಈ ಹಿಂದೆಯೂ ಅವರೊಂದಿಗೆ ಕೆಲಸ ಮಾಡಿದ್ದೆ. ಆರ್‌ಸಿಬಿಯಂತಹ ತಂಡದೊಂದಿಗೆ ಕೆಲಸ ಮಾಡುವುದು ಯಾವಾಗಲೂ ಅದ್ಭುತ ಅನುಭವ' ಎಂದೂ 55 ವರ್ಷದ ಫ್ಲವರ್ ಹೇಳಿದ್ದಾರೆ. 1992 ರಿಂದ 2003ರ ಅವಧಿಯಲ್ಲಿ ಫ್ಲವರ್ ಜಿಂಬಾಬ್ವೆ ತಂಡದಲ್ಲಿ ವಿಕೆಟ್‌ಕೀಪರ್ –ಬ್ಯಾಟರ್ ಆಗಿದ್ದರು. 63 ಟೆಸ್ಟ್ ಆಡಿ 4794 ರನ್ ಗಳಿಸಿದ್ದಾರೆ. ಅದರಲ್ಲಿ 12 ಶತಕ ಹಾಗೂ 27 ಅರ್ಧಶತಕಗಳು ಇವೆ. 213 ಏಕದಿನ ಪಂದ್ಯಗಳಿಂದ 6786 ರನ್ ಪೇರಿಸಿದ್ದಾರೆ. 4 ಶತಕ ಹಾಗೂ 55 ಅರ್ಧಶತಕ ಗಳಿಸಿದ್ದಾರೆ.

ಆನಂದ್ ಹಿಂದಿಕ್ಕಿದ ಗುಕೇಶ್

ಡಿ.ಗುಕೇಶ್

ಬಾಕು (ಅಜರ್‌ಬೈಜಾನ್): ಹದಿಹರೆಯದ ಗ್ರ್ಯಾಂಡ್‌ಮಾಸ್ಟರ್ ಡಿ.ಗುಕೇಶ್ ಅವರು ಸ್ಥಳೀಯ ನೆಚ್ಚಿನ ಆಟಗಾರ ಮಿಸ್ರಾಟಿನ್ ಇಸ್ಕಂದರೊವ್ ಅವರನ್ನು ಗುರುವಾರ ವಿಶ್ವಕಪ್ ಚೆಸ್ ಟೂರ್ನಿಯ ಎರಡನೇ ಸುತ್ತಿನಲ್ಲಿ ಸೋಲಿಸಿದರು. ಆ ಮೂಲಕ ಫಿಡೆ ಲೈವ್ ರೇಟಿಂಗ್‌ನಲ್ಲಿ ಭಾರತದ ವಿಶ್ವನಾಥನ್ ಆನಂದ್ ಅವರನ್ನು ಹಿಂದೆಹಾಕಿ ದೇಶದ ಅಗ್ರಮಾನ್ಯ ಆಟಗಾರ ಎನಿಸಿದರು.

17 ವರ್ಷದ ದೊಮ್ಮರಾಜು ಗುಕೇಶ್ 44 ನಡೆಗಳಲ್ಲಿ ಇಸ್ಕಂದರೋವ್ ಅವರನ್ನು ಸೋಲಿಸಿದರು. ಆ ಮೂಲಕ ಮುಂದಿನ ತಿಂಗಳ ಆರಂಭದಲ್ಲಿ ಪ್ರಕಟವಾಗುವ ಫಿಡೆ ರೇಟಿಂಗ್‌ನಲ್ಲಿ ಅವರು ವಿಶ್ವದ ಟಾಪ್ ಟೆನ್ ಆಟಗಾರರ ಪಟ್ಟಿಯಲ್ಲಿ ಸ್ಥಾನ ಪಡೆಯುವುದು ಬಹುತೇಕ ಖಚಿತಗೊಂಡಿದೆ.

'ಗುಕೇಶ್ ಮತ್ತೆ ಗೆದಿದ್ದಾರೆ ಮತ್ತು ವಿಶ್ವನಾಥನ್ ಆನಂದ್ ಅವರನ್ನು ಲೈವ್ ರೇಟಿಂಗ್‌ನಲ್ಲಿ (ಟೂರ್ನಿ ನಡೆಯುವ ವೇಳೆ ಆಟಗಾರರ ರೇಟಿಂಗ್‌ಗೆ ಈ ಪದ ಬಳಲಾಗುತ್ತದೆ) ಹಿಂದೆಹಾಕಿದ್ದಾರೆ. ಮುಂದಿನ ರೇಟಿಂಗ್ ಪಟ್ಟಿಯಲ್ಲಿ 17 ವರ್ಷದ ಆಟಗಾರ ಅತಿ ಹೆಚ್ಚಿನ ರೇಟಿಂಗ್ ಪಡೆದ ಭಾರತದ ಆಟಗಾರನಾಗಲಿದ್ದಾರೆ' ಎಂದು ಇಂಟರ್‌ನ್ಯಾಷನಲ್ ಚೆಸ್ ಫೆಡರೇಷನ್ (ಫಿಡೆ) ಟ್ವೀಟ್‌ನಲ್ಲಿ ತಿಳಿಸಿದೆ.

ವಿಶ್ವಕಪ್‌ನಲ್ಲಿ ಗಳಿಸಿದ 2.5 ರೇಟಿಂಗ್ ಪಾಯಿಂಟ್‌ನಿಂದ ಅವರು 2755.9 ಪಾಯಿಂಟ್ಸ್ ಹೊಂದಿದ್ದಾರೆ. ಆನಂದ್ ಅವರು 2754.0 ಪಾಯಿಂಟ್ಸ್ ಹೊಂದಿದ್ದಾರೆ. ಹೀಗಾಗಿ ಅವರು ವಿಶ್ವದ 9ನೇ ಕ್ರಮಾಂಕಕ್ಕೆ ಏರಲಿದ್ದಾರೆ. ಐದು ಬಾರಿಯ ವಿಶ್ವ ಚಾಂಪಿಯನ್ ಆನಂದ್ 19ನೇ ಕ್ರಮಾಂಕಕ್ಕೆ ಇಳಿಯುವ ಸಾಧ್ಯತೆ ಇದೆ.

ಆನಂದ್ 1991ರ ಜುಲೈನಲ್ಲಿ ಮೊದಲ ಬಾರಿ ವಿಶ್ವದ ಟಾಪ್ 10 ಆಟಗಾರರ ಪಟ್ಟಿಯಲ್ಲಿ ಕಾಣಿಸಿಕೊಂಡಿದ್ದರು. 1987ರಿಂದೀಚೆಗೆ ಅವರು ಭಾರತದ ಅಗ್ರಮಾನ್ಯ ಆಟಗಾರನ ಪಟ್ಟ ಉಳಿಸಿಕೊಂಡಿದ್ದಾರೆ. 2016ರಲ್ಲಿ ಅತ್ಯಲ್ಪ ಅವಧಿಗೆ ಪಿ.ಹರಿಕೃಷ್ಣ ಅವರು ಆನಂದ್ ಅವರನ್ನು ಹಿಂದೆಹಾಕಿದ್ದರು.

ಭಾರತದ ಗ್ರ್ಯಾಂಡ್‌ಮಾಸ್ಟರ್‌ಗಳಾದ ಪ್ರಗ್ನಾನಂದ, ನಿಹಾಲ್ ಸರೀನ್ ಕೂಡ ಗುರುವಾರ ಮೂರನೇ ಸುತ್ತನ್ನು ತಲುಪಿದ್ದಾರೆ. ಅಧಿಬನ್, 0.5–1.5 ರಿಂದ ಡೇನಿಯಲ್ ಡುಬೋವ್ ಎದುರು ಸೋಲನ್ನು ಕಂಡರು.

ಮೊದಲ ಟಿ20 ಪಂದ್ಯಕ್ಕೆ ತಂಡ ಸಂಯೋಜನೆ

ಸಮರ್ಥಿಸಿದ ಆರ್ಷದೀಪ್

ಆರ್ಷದೀಪ್ ಸಿಂಗ್ ಬೌಲಿಂಗ್‌ನಲ್ಲಿ ಔಟಾದ ರೋವ್ಮನ್ ಪೊವೆಲ್ ಪೆವಿಲಿಯನ್‌ಗೆ ಮರಳುತ್ತಿರುವುದು –ಎಎಫ್‌ಪಿ ಚಿತ್ರ

ತರೊಬಾ, ಟ್ರಿನಿಡಾಡ್ (ಪಿಟಿಐ): ವೆಸ್ಟ್ ಇಂಡೀಸ್ ಎದುರಿನ ಮೊದಲ ಟಿ20 ಪಂದ್ಯದಲ್ಲಿ ಕಣಕ್ಕಿಳಿಸಿದ ಹನ್ನೊಂದು ಆಟಗಾರರ ಸಂಯೋಜನೆಯು ಉತ್ತಮವಾಗಿತ್ತು ಎಂದು ಭಾರತ ತಂಡದ ಎಡಗೈ ಮಧ್ಯಮವೇಗಿ ಆರ್ಷದೀಪ್ ಸಿಂಗ್ ಸಮರ್ಥಿಸಿಕೊಂಡಿದ್ದಾರೆ.

ಗುರುವಾರ ನಡೆದ ಪಂದ್ಯದಲ್ಲಿ ವಿಂಡೀಸ್ ಬಳಗವು 4 ರನ್‌ಗಳಿಂದ ಭಾರತದ ಎದುರು ಜಯಿಸಿತ್ತು. ಐದು ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ ಸಾಧಿಸಿತ್ತು.

ತಂಡದಲ್ಲಿ ಆರನೇ ಕ್ರಮಾಂಕದವರೆಗೆ ಮಾತ್ರ ಪರಿಣತ ಬ್ಯಾಟರ್‌ಗಳು ಇದ್ದಾರೆ. ನಂತರ 'ಬಾಲಂಗೋಚಿ'ಗಳ ಸಾಲು ದೊಡ್ಡದಾಗಿತ್ತು ಎಂಬ ಚರ್ಚೆಗಳು ನಡೆಯುತ್ತಿವೆ. ಅದರಿಂದಾಗಿಯೇ ಸೋಲಬೇಕಾಯಿತು ಎಂಬ ಟೀಕೆಗಳೂ ಕೇಳಿಬಂದಿವೆ.

ಈ ಕುರಿತು ಪತ್ರಿಕಾಗೋಷ್ಠಿಯಲ್ಲಿ ಪ್ರತಿಕ್ರಿಯಿಸಿದ ಸಿಂಗ್, 'ಪಂದ್ಯದ ನಂತರ ಇಂತಹ ಮಾತುಗಳು ಕೇಳಿ ಬರುತ್ತವೆ. ಆದರೆ ನಮ್ಮ ಹನ್ನೊಂದರ ಬಳಗವು ಉತ್ತಮವಾಗಿತ್ತು ಎಂಬ ವಿಶ್ವಾಸವಿದೆ. ಆರು ಅಥವಾ ಒಂಬತ್ತು ಬೌಲರ್‌ಗಳು ತಂಡದಲ್ಲಿದ್ದರೂ ಗೆಲ್ಲುವ ವಿಶ್ವಾಸ ನಮಗಿರುತ್ತದೆ' ಎಂದರು.

'ನಮ್ಮ ಒಬ್ಬ ಬ್ಯಾಟರ್ ಕೊನೆಯ ಹಂತದವರೆಗೂ ಕ್ರೀಸ್‌ನಲ್ಲಿ ಉಳಿಯಬೇಕಿತ್ತು. ಅಂತಿಮ ಎರಡು ಓವರ್‌ಗಳಲ್ಲಿ ಐವರು ಫೀಲ್ಡರ್‌ಗಳು 30 ಯಾರ್ಡ್ ವೃತ್ತದೊಳಗೆ ಇದ್ದರು. ಇದರ ಲಾಭ ಪಡೆಯಬಹುದಿತ್ತು' ಎಂದು 24 ವರ್ಷದ ಆರ್ಷದೀಪ್ ಹೇಳಿದರು.

ಆರ್ಷದೀಪ್ ಕೊನೆಯಲ್ಲಿ ಏಳು ಎಸೆತಗಳಲ್ಲಿ 12 ರನ್ ಗಳಿಸಿದ್ದರು. ಅದರಲ್ಲಿ ಎರಡು ಬೌಂಡರಿ ಇದ್ದವು ಆದರೆ ತಂಡವನ್ನು ಗೆಲುವಿನ ದಡ ಮುಟ್ಟಿಸಲು ಅವರಿಗೆ ಸಾಧ್ಯವಾಗಲಿಲ್ಲ.

ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ್ದ ವಿಂಡೀಸ್ 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 149 ರನ್ ಗಳಿಸಿತ್ತು. ಈ ಸಾಧಾರಣ ಗುರಿಯನ್ನು ಬೆನ್ನತ್ತಿದ ಭಾರತ ತಂಡಕ್ಕೆ ನಿಗದಿಯ ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 145 ರನ್ ಗಳಿಸಲು ಮಾತ್ರ ಸಾಧ್ಯವಾಯಿತು.

ಭಾರತದ ಆರಂಭಿಕ ಜೋಡಿ ಇಶಾನ್ ಕಿಶನ್ ಮತ್ತು ಶುಭಮನ್ ಗಿಲ್ ಅವರು ಬೇಗನೆ ಔಟಾದರು. ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳಲ್ಲಿ ತಿಲಕ್ ವರ್ಮಾ (39 ರನ್) ಬಿಟ್ಟರೆ ಉಳಿದವರಿಂದ ದೊಡ್ಡ ಮೊತ್ತ ಗಳಿಕೆಯಾಗಲಿಲ್ಲ. ವರ್ಮಾ ಅವರಿಗೆ ಇದು ಚೊಚ್ಚಲ ಅಂತರರಾಷ್ಟ್ರೀಯ ಪಂದ್ಯವಾಗಿತ್ತು.

ಭಾರತ, ವೆಸ್ಟ್ ಇಂಡೀಸ್‌ಗೆ ದಂಡ

ದುಬೈ (ಪಿಟಿಐ): ಭಾರತ ಮತ್ತು ವೆಸ್ಟ್ ಇಂಡೀಸ್ ತಂಡಗಳು ನಿಗದಿತ ಸಮಯದೊಳಗೆ ಓವರ್‌ಗಳನ್ನು ಪೂರೈಸದ ಕಾರಣ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ದಂಡ ವಿಧಿಸಿದೆ.

ಗುರುವಾರ ನಡೆದ ಪಂದ್ಯದಲ್ಲಿ ಆತಿಥೇಯ ತಂಡವು ನಿಗದಿತ ವೇಳೆಯೊಳಗೆ ಎರಡು ಓವರ್ ಕಡಿಮೆ ಹಾಕಿತ್ತು. ಆದ್ದರಿಂದ ಪಂದ್ಯ ಶುಲ್ಕದ ಶೇ 10ರಷ್ಟು ಮೊತ್ತದ ದಂಡ ವಿಧಿಸಲಾಗಿದೆ.

ಭಾರತ ತಂಡವು ಒಂದು ಓವರ್ ಕಮ್ಮಿ ಮಾಡಿದ್ದರಿಂದ ಶೇ ಐದರಷ್ಟು ದಂಡ ವಿಧಿಸಲು ಐಸಿಸಿ ಪಂದ್ಯ ರೆಫರಿ ರಿಚಿ ರಿಚರ್ಡ್ಸನ್ ನಿರ್ಧಾರ ಕೈಗೊಂಡರು.

ಪಿಸಿಬಿ ಮಾಜಿ ಅಧ್ಯಕ್ಷ ಇಜಾಜ್ ಭಟ್ ನಿಧನ

ಕರಾಚಿ (ಪಿಟಿಐ): ಪಾಕಿಸ್ತಾನ ಕ್ರಿಕೆಟ್ ಮಂಡಳಿಯ ಅತ್ಯಂತ ವಿವಾದಾತ್ಮಕ ಅಧ್ಯಕ್ಷರೆನಿಸಿಕೊಂಡಿದ್ದ ಇಜಾಜ್ ಭಟ್ (85) ಬುಧವಾರ ನಿಧನರಾದರು. ಅವರು ಕೆಲಕಾಲದಿಂದ ಅನಾರೋಗ್ಯಕ್ಕೆ ತುತ್ತಾಗಿದ್ದರು.

ಎಂಟು ಟೆಸ್ಟ್ ಪಂದ್ಯಗಳನ್ನು ಆಡಿದ್ದರು. ಅವರು ತಮ್ಮ ವರ್ಣರಂಜಿತವಾದ ವ್ಯಕ್ತಿತ್ವದ ಮೂಲಕ ಚಿರಪರಿಚಿತರಾಗಿದ್ದರು. ಅಷ್ಟೇ ನಿಷ್ಠುರ ಆಡಳಿತಾಧಿಕಾರಿಯೂ ಆಗಿ, ವಿವಾದಗಳನ್ನು ಮೈಮೇಲೆಳೆದುಕೊಂಡಿದ್ದರು. 1987ರಲ್ಲಿ ನಡೆದಿದ್ದ ರಿಲಯನ್ಸ್ ವಿಶ್ವಕಪ್ ಟೂರ್ನಿಯ ಸಂಘಟನಾ ಸಮಿತಿಯ ಸದಸ್ಯರೂ ಆಗಿದ್ದರು. ಆಗಿನ ಪಾಕಿಸ್ತಾನದ ಅಧ್ಯಕ್ಷರ ಸೂಚನೆಯನ್ನೂ ಕಡೆಗಣಿಸಿ ಕೆಲವು ನಿರ್ಧಾರಗಳನ್ನು ಕೈಗೊಂಡು ಸುದ್ದಿಯಾಗಿದ್ದರು.

2008ರಲ್ಲಿ ಅವರು ಪಿಸಿಬಿ ಅಧ್ಯಕ್ಷರಾದರು. 2009ರಲ್ಲಿ ಇಜಾಜ್ ಮತ್ತು ಆಯ್ಕೆ ಸಮಿತಿ ಮುಖ್ಯಸ್ಥ ಅಬ್ದುಲ್ ಖಾದಿರ್ ನಡುವೆ ಭಿನ್ನಾಭಿಪ್ರಾಯ ತಾರಕಕ್ಕೇರಿತ್ತು.

ಅನುಭವಿ ಆಟಗಾರರಾದ ಮೊಹಮ್ಮದ್ ಯೂಸುಫ್, ಯೂನಿಸ್ ಖಾನ್, ಶೋಯಬ್ ಮಲಿಕ್, ಶಾಹೀದ್ ಆಫ್ರಿದಿ ಮತ್ತು ಕಮ್ರನ್ ಅಕ್ಮಲ್ ಅವರನ್ನು ಅಮಾನತು ಮಾಡಲೂ ಹಿಂಜರಿದಿರಲಿಲ್ಲ. ಇದರಿಂದಾಗಿ ಪಾಕ್ ಕ್ರಿಕೆಟ್ ಅಭಿಮಾನಿಗಳ ಕೆಂಗಣ್ಣಿಗೂ ಅವರು ಗುರಿಯಾಗಿದ್ದರು.

ಬ್ಯಾಡ್ಮಿಂಟನ್: ಸೆಮಿಗೆ ರಾಜಾವತ್, ಪ್ರಣಯ್

ಪ್ರಿಯಾನ್ಶು ರಾಜಾವತ್

ಸಿಡ್ನಿ (ಪಿಟಿಐ): ಅನುಭವಿ ಎಚ್.ಎಸ್. ಪ್ರಣಯ್ ಮತ್ತು ಉದಯೋನ್ಮುಖ ಆಟಗಾರ ಪ್ರಿಯಾನ್ಶು ರಾಜಾವತ್ ಅವರು ಭಿನ್ನ ಶೈಲಿಯಲ್ಲಿ ಜಯಗಳಿಸಿ ಆಸ್ಟ್ರೇಲಿಯಾ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿದರೆ, ಪ್ರಮುಖ ಆಟಗಾರ್ತಿ ಪಿ.ವಿ.ಸಿಂಧು ಕ್ವಾರ್ಟರ್‌ಫೈನಲ್‌ನಲ್ಲೇ ನಿರ್ಗಮಿಸಿದರು.

ಆರ್ಲಿನ್ಸ್ ಮಾಸ್ಟರ್ಸ್ ಚಾಂಪಿಯನ್ ಆಗಿರುವ ರಾಜಾವತ್ 21–13, 21–8 ರಿಂದ ಸ್ವದೇಶದ ಕಿದಂಬಿ ಶ್ರೀಕಾಂತ್ ಅವರನ್ನು ನೇರ ಆಟಗಳಿಂದ ಹಿಮ್ಮೆಟ್ಟಿಸಿ ಮೊದಲ ಬಾರಿ ಸೂಪರ್ 500 ಹಂತದ ಟೂರ್ನಿಯ ನಾಲ್ಕರ ಘಟ್ಟ ತಲುಪಿದರು.

ವಿಶ್ವದ ಒಂಬತ್ತನೇ ಕ್ರಮಾಂಕದ ಆಟಗಾರ ಪ್ರಣಯ್ ಹಿನ್ನಡೆಯಿಂದ ಚೇತರಿಸಿಕೊಂಡು ಎರಡನೇ ಕ್ರಮಾಂಕದ ಸಿನಿಸುಕ ಜಿಂಟಿಂಗ್ (ಇಂಡೊನೇಷ್ಯಾ) ಅವರನ್ನು 16–21, 21–17, 21–14 ರಿಂದ ಸೋಲಿಸಿದರು. ಈ ಪಂದ್ಯವನ್ನು ಗೆಲ್ಲಲು ಆರನೇ ಶ್ರೇಯಾಂಕದ ಪ್ರಣಯ್ ಅವರಿಗೆ 1 ಗಂಟೆ 13 ನಿಮಿಷ ಬೇಕಾಯಿತು.

ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಸಿಂಧು ಅವರು ಅಮೆರಿಕದ ಆಟಗಾರ್ತಿ, 33 ವರ್ಷದ ಬೀವೆನ್ ಝಾಂಗ್ ಎದುರು 12–21, 17–21 ರಿಂದ ಸೋತರು. ವಿಶ್ವ ಕ್ರಮಾಂಕದಲ್ಲಿ 12ನೇ ಸ್ಥಾನದಲ್ಲಿರುವ ಚೀನಾ ಸಂಜಾತೆ ಬೀವೆನ್ 39 ನಿಮಿಷಗಳಲ್ಲಿ ಜಯಶಾಲಿಯಾದರು. ಈ ಹಿಂದೆ ಇವರಿಬ್ಬರು 10 ಸಲ ಮುಖಾಮುಖಿ ಆದಾಗ ಸಿಂಧು ಆರು ಬಾರಿ ಜಯಗಳಿಸಿದ್ದರು.

ಇದು ಡೆನ್ಮಾರ್ಕ್‌ನ ಕೋಪೆನ್‌ಹ್ಯಾಗನ್‌ನಲ್ಲಿ ಆ.21ರಿಂದ 27ರವರೆಗೆ ನಡೆಯುವ ವಿಶ್ವ ಚಾಂಪಿಯನ್‌ಷಿಪ್ ಮುನ್ನ ಕೊನೆಯ ಟೂರ್ನಿ ಆಗಿರುವುದರಿಂದ ಸಿಂಧು ನಿರಾಶೆ ಅನುಭವಿಸಬೇಕಾಯಿತು.

21 ವರ್ಷದ ಆಟಗಾರ ರಾಜಾವತ್ ಈ ಋತುವಿನಲ್ಲಿ ಉತ್ತಮ ಪ್ರದರ್ಶನ ನೀಡುತ್ತಿದ್ದಾರೆ. ಶ್ರೀಕಾಂತ್ ವಿರುದ್ಧ ವೇಗದ ಜೊತೆಗೆ ಕರಾರುವಾಕ್ ಹೊಡೆತಗಳಿಂದ ಹಿಡಿತ ಸಾಧಿಸಿದರು.

ಅದಿತಿ ಸ್ವಾಮಿ, ಪ್ರಣೀತ್ ಮತ್ತು ಜ್ಯೋತಿ ಅವರ ಸಂಭ್ರಮ –ಟ್ವಟರ್ ಚಿತ್ರ

ಭಾರತ ಆರ್ಚರಿ ತಂಡಕ್ಕೆ ಚಿನ್ನ

ಬರ್ಲಿನ್ (ಪಿಟಿಐ): ಭಾರತದ ಮಹಿಳಾ ಆರ್ಚರಿ ತಂಡ, ವಿಶ್ವ ಆರ್ಚರಿ ಚಾಂಪಿಯನ್‌ಷಿಪ್‌ನ ಕಾಂಪೌಂಡ್ ವಿಭಾಗದ ಫೈನಲ್‌ನಲ್ಲಿ ಅಗ್ರ ಶ್ರೇಯಾಂಕದ ಮೆಕ್ಸಿಕೊ ತಂಡವನ್ನು ಸೋಲಿಸಿ ಶುಕ್ರವಾರ ಚಿನ್ನದ ಪದಕ ಗೆದ್ದುಕೊಂಡಿತು.

ಜ್ಯೋತಿ ಸುರೇಖಾ ವೆನ್ನಂ, ಅದಿತಿ ಸ್ವಾಮಿ ಮತ್ತು ಪ್ರಣೀತ್ ಕೌರ್ ಅವರನ್ನು ಒಳಗೊಂಡ ತಂಡ 235–229 ಪಾಯಿಂಟ್‌ಗಳಿಂದ ಫೈನಲ್ ಪಂದ್ಯ ಜಯಿಸಿತು. ತನ್ಮೂಲಕ ಭಾರತ ಪದಕ ಪಟ್ಟಿಯಲ್ಲಿ ಖಾತೆ ತೆರೆಯಿತು.

ಇದಕ್ಕೆ ಮೊದಲು ಭಾರತ ತಂಡ ಸೆಮಿಫೈನಲ್‌ನಲ್ಲಿ 220–216 ರಿಂದ ಕಳೆದ ಬಾರಿಯ ಚಿನ್ನ ವಿಜೇತ ಕೊಲಂಬಿಯಾ ತಂಡವನ್ನು ಸೋಲಿಸಿತ್ತು. ಕ್ವಾರ್ಟರ್‌ಫೈನಲ್‌ನಲ್ಲಿ 228–226 ರಿಂದ ಚೀನಾ ತೈಪೆ ಮೇಲೆ ಜಯಗಳಿಸಿತ್ತು.

ಭಾರತದ ಬಿಲ್ಗಾರರು ಇದೇ ಮೊದಲ ಬಾರಿ ವಿಶ್ವ ಚಾಂಪಿಯನ್‌ಗಳಾಗಿದ್ದಾರೆ. 1981ರಲ್ಲಿ ಭಾರತ ಇಟಲಿಯ ಪಂಟಾ ಅಲಾದಲ್ಲಿ ಮೊದಲ ಬಾರಿ ವಿಶ್ವ ಆರ್ಚರಿ ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸಿತ್ತು. ರೀಕರ್ವ್ ವಿಭಾಗದಲ್ಲಿ ಭಾರತದ ಬಿಲ್ಗಾರರ ಸಾಧನೆ ನಿರಾಶೆ ಮೂಡಿಸುತ್ತಿರುವ ಸಂದರ್ಭದಲ್ಲಿ ಕಾಂಪೌಂಡ್ ವಿಭಾಗದ ಪ್ರದರ್ಶನ ಸಮಾಧಾನ ಮೂಡಿಸಿದೆ.

ವೇಟ್‌ಲಿಫ್ಟಿಂಗ್ ಮಾರ್ಟಿನಾಗೆ ಬೆಳ್ಳಿ

ಗ್ರೇಟರ್ ನೋಯ್ಡಾ (ಪಿಟಿಐ): ಭಾರತದ ಮಾರ್ಟಿನಾ ದೇವಿ ಅವರು ಇಲ್ಲಿ ನಡೆಯುತ್ತಿರುವ ಏಷ್ಯನ್ ಯೂತ್ ಮತ್ತು ಜೂನಿಯರ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಮಹಿಳೆಯರ ಪ್ಲಸ್ 81 ಕೆ.ಜಿ. ವಿಭಾಗದಲ್ಲಿ ಬೆಳ್ಳಿ ಗೆದ್ದರು.

ಶುಕ್ರವಾರ ನಡೆದ ಯೂತ್ ವಿಭಾಗದ ಸ್ಪರ್ಧೆಯಲ್ಲಿ ಅವರು ಒಟ್ಟು 218 ಕೆ.ಜಿ. ಭಾರ ಎತ್ತುವಲ್ಲಿ ಯಶಸ್ವಿಯಾದರು.

ಡುರಾಂಡ್ ಕಪ್: ನಾರ್ತ್‌ಈಸ್ಟ್ ಯುನೈಟೆಡ್ ಶುಭಾರಂಭ

ಗುವಾಹಟಿ (ಪಿಟಿಐ): ಉದಯೋನ್ಮುಖ ಆಟಗಾರ ಪಾರ್ಥಿಬ್ ಗೊಗೊಯಿ ಅವರ ಹ್ಯಾಟ್ರಿಕ್ ನೆರವಿನಿಂದ ನಾರ್ತ್‌ಈಸ್ಟ್ ಯುನೈಟೆಡ್ ಫುಟ್‌ಬಾಲ್ ಕ್ಲಬ್ ತಂಡ ಡುರಾಂಡ್ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಉತ್ತಮ ಆರಂಭ ಮಾಡಿತು. ಶುಕ್ರವಾರ 'ಡಿ' ಗುಂಪಿನ ತನ್ನ ಮೊದಲ ಪಂದ್ಯದಲ್ಲಿ 4–0 ಗೋಲುಗಳಿಂದ ಶಿಲ್ಲಾಂಗ್ ಲಾಜೊಂಗ್ ತಂಡವನ್ನು ಸೋಲಿಸಿತು.

ಆರಂಭದಿಂದಲೇ ನಾರ್ತ್ ಈಸ್ಟ್ ತಂಡ ಸಂಘಟಿತ ರೀತಿ ಆಡತೊಡಗಿತು. ವಿರಾಮದ ವೇಳೆಗೆ 2–0 ಮುನ್ನಡೆ ಹೊಂದಿತ್ತು. 26ನೇ ನಿಮಿಷ ಗೊಗೊಯಿ ಮೊದಲ ಗೋಲು ಗಳಿಸಿದರು. 35ನೇ ನಿಮಿಷ ಫ್ರೆಂಚ್ ಆಟಗಾರ ರೊಮೇನ್ ಫಿಲಿಪೊಟಿಯಕ್ಸ್ 'ಪೆನಾಲ್ಟಿ' ಅವಕಾಶವನ್ನು ಗೋಲು ಆಗಿ ಪರಿವರ್ತಿಸಿದರು.

ವಿರಾಮದ ನಂತರ ಗೊಗೊಯಿ ಮತ್ತೆರಡು ಗೋಲುಗಳನ್ನು ಕ್ರಮವಾಗಿ 65 ಮತ್ತು 70ನೇ ನಿಮಿಷ ಗಳಿಸಿ ಗೆಲುವಿನ ಅಂತರ ಹೆಚ್ಚಿಸಿದರು. ಅದೇ ಹಾದಿಯಲ್ಲಿ ಹ್ಯಾಟ್ರಿಕ್ ಪೂರೈಸಿದರು.

ಪುಣೆ ರೇಸ್

ಮೊಯಿಟೊ ಗೆಲ್ಲುವ ನಿರೀಕ್ಷೆ

ಈವ್ ಚಾಂಪಿಯನ್ ಟ್ರೋಫಿ ಶನಿವಾರದ ಪುಣೆ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಮೊಯಿಟೊ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಜ್ಯೂಕೋರ್ 3, ಡೌಸಬೆಲ್ 2, ರೆಮಿ ರೆಡ್ 1
2ನೇ ರೇಸ್: ಗಿಮ್ಮಿ 4, ಫ್ರೀಡಮ್ 3, ಕಮ್ ಬ್ಯಾಕ್ ಪ್ಲೀಸ್ 9
3ನೇ ರೇಸ್: ದೌಲತ್ ಮಾಯ್ 7, ಫಿಂಚ್ 2, ಸಿಫರ್ 5
4ನೇ ರೇಸ್: ಮೊಯಿಟೊ 2, ಸೂಪರ್ ನ್ಯಾಚುರಲ್ 3, ಟ್ರೂಲಿ ಎಪಿಕ್ 8
5ನೇ ರೇಸ್: ಹಾಲ್ ಆಫ್ ಗ್ರೇಸ್ 2, ಎಕ್ಸೆಲ್‌ರಾಡ್ 6, ಡೆಮಾಕ್ರಸಿ 7
6ನೇ ರೇಸ್: ಕೀ ಟು ದಿ ಮಿಂಟ್ 7, ಬ್ರೇವ್ ಬ್ಯೂಟಿ 3, ಗ್ಯಾಂಗ್‌ಸ್ಟರ್ 2
7ನೇ ರೇಸ್: ಓಪನ್ ಡೀ 2, ಗಾಲ್ವೆ ಬೇ 6, ಮೊಮೆಂಟ್ ಆಫ್ ಮ್ಯಾಡ್‌ನೆಸ್ 8

ಉತ್ತಮ ಬೆಟ್: ದೌಲತ್ ಮಾಯ್

ಜಾಕ್‌ಪಾಟ್ **3,4,5,6,7** ಟ್ರಿಬಲ್ **4,5,6**

ಕೆನರಾ ಬ್ಯಾಂಕ್ ತಂಡಕ್ಕೆ ಪ್ರಶಸ್ತಿ

ಬೆಂಗಳೂರು: ಕೆನರಾ ಬ್ಯಾಂಕ್ ತಂಡವು ಇಲ್ಲಿ ಕೊನೆಗೊಂಡ ಹಾಕಿ ಕರ್ನಾಟಕ ಲೀಗ್ ಟೂರ್ನಿಯ ಚಾಂಪಿಯನ್ ಆಗಿ ಹೊರಹೊಮ್ಮಿದೆ. ಡಿವೈಇಎಸ್ 'ಎ' ತಂಡವು ರನ್ನರ್ ಅಪ್ ಪ್ರಶಸ್ತಿ ಪಡೆದುಕೊಂಡಿತು.

ಅಕೌಂಟೆಂಟ್ ಜನರಲ್ ಆಫೀಸ್ ರಿಕ್ರಿಯೇಷನ್ ಕ್ಲಬ್ ತಂಡವು ಮೂರನೇ ಸ್ಥಾನ ಪಡೆಯಿತು. ಮೊದಲ ಮೂರು ಸ್ಥಾನ ಪಡೆದ ತಂಡಗಳು ಟ್ರೋಫಿಯೊಂದಿಗೆ ಕ್ರಮವಾಗಿ ₹50 ಸಾವಿರ, ₹30 ಸಾವಿರ ಮತ್ತು ₹25 ಸಾವಿರ ಬಹುಮಾನ ಪಡೆದುಕೊಂಡವು.

ಭಾರತ ಅಂಧ ಮಹಿಳಾ ಕ್ರಿಕೆಟ್ ತಂಡದ ನಾಯಕಿಯ ಯಶೋಗಾಥೆ

ಕನಸುಗಳ ವಿಮಾನದಲ್ಲಿ ವರ್ಷಾ ಪಯಣ

• ಗಿರೀಶ ದೊಡ್ಡಮನಿ

ಭಾರತ ಅಂಧ ಮಹಿಳಾ ಕ್ರಿಕೆಟ್ ತಂಡದ ನಾಯಕಿ ವರ್ಷಾ ಉಮಾಪತಿ

ಬೆಂಗಳೂರು: ಚಿತ್ರದುರ್ಗ ಜಿಲ್ಲೆಯ ಆದಿವಾಲಾ ಗ್ರಾಮದ ವರ್ಷಾ ಉಮಾಪತಿಯ ಕಂಗಳ ದೃಷ್ಟಿ ಕುಂದಿದೆ. ಆದರೆ ಕನಸುಗಳಿಗೆ ಬರವಿಲ್ಲ.

ಈ ಛಲಗಾತಿ ಈಗ ಭಾರತ ಅಂಧ ಮಹಿಳಾ ಕ್ರಿಕೆಟ್ ತಂಡದ ನಾಯಕಿಯಾಗಿದ್ದಾರೆ. ಆಗಸ್ಟ್ 20 ರಿಂದ 26ರವರೆಗೆ ಇಂಗ್ಲೆಂಡ್‌ನ ಬರ್ಮಿಂಗ್‌ಹ್ಯಾಮ್‌ನಲ್ಲಿ ನಡೆಯುವ ಅಂತರರಾಷ್ಟ್ರೀಯ ಅಂಧರ ಕ್ರೀಡಾ ಫೆಡರೇಷನ್ (ಐಬಿಎಸ್‌ಎ) ವಿಶ್ವ ಕ್ರೀಡಾಕೂಟದಲ್ಲಿ ತಂಡವು ಆಡಲಿದೆ. ಮಹಿಳೆಯರ ತಂಡದಲ್ಲಿ ಕರ್ನಾಟಕದ ನಾಯಕಿ ವರ್ಷಾ, ಗಂಗವ್ವ ಹರಿಜನ ಮತ್ತು ಟಿ.ಸಿ. ದೀಪಿಕಾ ಇದ್ದಾರೆ.

ತಮ್ಮ ಸಾಧನೆಯ ಹಾದಿಯನ್ನು ವರ್ಷಾ 'ಪ್ರಜಾವಾಣಿ'ಯೊಂದಿಗೆ ಹಂಚಿಕೊಂಡರು.

'ನನಗೆ ರೆಟಿನಾ ಪಿಗ್ಮೆಂಟೊಸ ಎಂಬ ಸಮಸ್ಯೆ ಇತ್ತು. ಬಾಲ್ಯದಲ್ಲಿ ಶೇ 20ರಷ್ಟು ಮಾತ್ರ ದೃಷ್ಟಿದೋಷ ಇತ್ತು. ಪಿಯುಸಿಯವರೆಗೂ ಸೈಕಲ್, ದ್ವಿಚಕ್ರ ವಾಹನ ಓಡಿಸಿಕೊಂಡು ಇದ್ದೆ. ಆದರೂ ನಿಧಾನವಾಗಿ ಅಂಧತ್ವ ಆವರಿಸುತ್ತಿತ್ತು. ಇದರಿಂದಾಗಿ ಸಂಬಂಧಿಕರು, ನೆರೆಹೊರೆಯವರು ನನ್ನ ತಂದೆ, ತಾಯಿಗೆ ಮಗಳನ್ನು ಮನೆಯಲ್ಲಿ ಕೂರಿಸಿ. ಓದುವುದು, ಬರೆಯುವುದು ಅವಳಿಂದ ಸಾಧ್ಯವಿಲ್ಲ ಎಂದು ಹೇಳಿದ್ದರು. ಕೆಲವರಂತೂ ತೀರಾ ಅಪಮಾನ ಮಾಡಿದ್ದರು. ಆದರೆ ಅಪ್ಪ, ಅಮ್ಮ, ಬೆಂಗಳೂರಿನಲ್ಲಿರುವ ಚಿಕ್ಕಮ್ಮ ಪುಷ್ಪಾ ಮತ್ತು ಚಿಕ್ಕಪ್ಪ ರಮೇಶ್ ಬೆಂಬಲಕ್ಕೆ ನಿಂತರು. ಅದರಿಂದಾಗಿ ಇವತ್ತು ಕ್ರಿಕೆಟ್‌ನಲ್ಲಿ ಇಷ್ಟು ಬೆಳೆಯಲು ಸಾಧ್ಯವಾಯಿತು' ಎಂದು ವರ್ಷಾ ಭಾವುಕರಾದರು.

ಕೃಷಿಕರಾಗಿರುವ ಉಮಾಪತಿ ಮತ್ತು ಯಶೋಧಾ ದಂಪತಿಯ ಏಕೈಕ ಪುತ್ರಿ ವರ್ಷಾ ಅವರಿಗೆ ಈಗ ಬಹುತೇಕ ಪೂರ್ಣ ಅಂಧತ್ವ (ಬಿ 1 ಕೆಟಗರಿ) ಆವರಿಸಿದೆ. ಆದರೆ ಕ್ರಿಕೆಟ್‌ನಲ್ಲಿ ಆಲ್‌ರೌಂಡರ್ ಮಿಂಚುತ್ತಿದ್ದಾರೆ.

'ಸಣ್ಣವಳಿದ್ದಾಗಿನಿಂದಲೂ ಆಟೋಟಗಳ ಬಗ್ಗೆ ಬಹಳ ಆಸಕ್ತಿ ಇತ್ತು. ಆದರೆ ಆಡುವ ಅವಕಾಶಗಳು ಕಡಿಮೆ ಇದ್ದವು. ಅಂಧತ್ವ ಕಾಡಲು ಆರಂಭಿಸಿದಾಗ ಇನ್ನೂ ನಿರಾಶೆ ಆಗಿತ್ತು. 2019ರಲ್ಲಿ ಕ್ರಿಕೆಟ್ ಆಡಲು ಆರಂಭಿಸಿದೆ. ಕಿಣಿ..ಕಿಣಿ.. ಸದ್ದು ಮಾಡುವ ಚೆಂಡಿನಲ್ಲಿ ಕ್ರಿಕೆಟ್ ಆಡುವ ಆಸಕ್ತಿ ಮೂಡಿತು ಸಮರ್ಥನಂ ಟ್ರಸ್ಟ್ ನಡೆಸುವ ವಾರ್ಷಿಕ ಶಿಬಿರಕ್ಕೆ ಸೇರಿಕೊಂಡೆ. ಆರಂಭದಲ್ಲಿ ಭಯ ಆಗಿತ್ತು. ಕೋಚ್ ಶಿಖಾ ಮತ್ತು ಟ್ರಸ್ಟ್‌ನ ಎಲ್ಲರೂ ಧೈರ್ಯ ತುಂಬಿದರು. ಆಲ್‌ರೌಂಡರ್ ಆಗಿ ರೂಪುಗೊಂಡೆ. ಹೋದ ವರ್ಷ ರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಒಂದು ಶತಕ ಹೊಡೆದೆ. 13 ಎಸೆತಗಳಲ್ಲಿ ಅರ್ಧಶತಕ ಕೂಡ ಗಳಿಸಿದೆ. ಬಲಗೈ ಮಧ್ಯಮವೇಗದ ಬೌಲಿಂಗ್ ಕೂಡ ಮಾಡುತ್ತೇನೆ. ಒಂದು ಬಾರಿ ಹ್ಯಾಟ್ರಿಕ್ ಸಾಧನೆಯನ್ನೂ ಮಾಡಿದ್ದೆ' ಎಂದರು.

ಬಿ.ಎ ಪದವಿ ಕೂಡ ಗಳಿಸಿರುವ ವರ್ಷಾ, ಕಂಪ್ಯೂಟರ್ ಕೂಡ ಕಲಿತಿದ್ದಾರೆ. ಕೆಲವು ತಂತ್ರಾಂಶಗಳನ್ನೂ ಕಲಿಯುತ್ತಿದ್ದಾರಂತೆ.

'ಇಂಗ್ಲೆಂಡ್‌ಗೆ ಮೊದಲ ಸಲ ಹೋಗುತ್ತಿರುವೆ. ವಿಮಾನದಲ್ಲಿ ಪ್ರಯಾಣ ಮಾಡುವ ಬಾಲ್ಯದ ಕನಸು ಕೈಗೂಡುತ್ತಿದೆ. ದೇಶದ ತಂಡವನ್ನು ಮುನ್ನಡೆಸುವ ಅವಕಾಶ ಲಭಿಸಿದೆ. ಪ್ರಶಸ್ತಿ ಗೆದ್ದು ತ್ರಿವರ್ಣ ಧ್ವಜದ ಗೌರವ ಹೆಚ್ಚಿಸುವುದೇ ನನ್ನ ಗುರಿ' ಎಂದು ವರ್ಷಾ ಆತ್ಮವಿಶ್ವಾಸ ವ್ಯಕ್ತಪಡಿಸುತ್ತಾರೆ.

ಬಾಂಗ್ಲಾ ಏಕದಿನ ತಂಡದ ನಾಯಕತ್ವ ತೊರೆದ ತಮೀಮ್

ಢಾಕಾ: ಬಾಂಗ್ಲಾದೇಶದ ಎಡಗೈ ಬ್ಯಾಟರ್ ತಮೀಮ್ ಇಕ್ಬಾಲ್ ಅವರು ಏಕದಿನ ತಂಡದ ನಾಯಕತ್ವ ತ್ಯಜಿಸಲು ನಿರ್ಧರಿಸಿದ್ದಾರೆ. ಬೆನ್ನುನೋವಿನಿಂದಾಗಿ ಅವರು ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯಲ್ಲಿ ಆಡಲು ಸಾಧ್ಯವಾಗದಿರುವ ಕಾರಣ ಈ ನಿರ್ಧಾರಕ್ಕೆ ಬಂದಿದ್ದಾರೆ.

ಏಷ್ಯಾ ಕಪ್ ಏಕದಿನ ಕ್ರಿಕೆಟ್ ಟೂರ್ನಿ ಆಗಸ್ಟ್ 30 ರಿಂದ ಸೆಪ್ಟೆಂಬರ್ 17ರವರೆಗೆ ಪಾಕಿಸ್ತಾನ ಮತ್ತು ಶ್ರೀಲಂಕಾದಲ್ಲಿ ನಡೆಯಲಿದೆ.

34 ವರ್ಷದ ತಮೀಮ್, ಎರಡು ತಿಂಗಳ ಹಿಂದೆ ಅಫ್ಗಾನಿಸ್ತಾನ ವಿರುದ್ಧ ಟೆಸ್ಟ್ ಸರಣಿಯ ನಂತರ ಏಕದಿನ ಕ್ರಿಕೆಟ್‌ಗೆ ವಿದಾಯ ಹೇಳಿದ್ದರು. ನಂತರ ತಮ್ಮ ನಿರ್ಧಾರದಿಂದ ಹಿಂದೆಸರಿದಿದ್ದರು. 'ನಾನು ನಾಯಕತ್ವ ತೊರೆಯುತ್ತಿದ್ದೇನೆ. ಆಟದ ಮೇಲೆ ಗಮನಹರಿಸಿ ಸಾಧ್ಯವಾದಷ್ಟು ಉತ್ತಮ ಪ್ರದರ್ಶನ ನೀಡಲು ಯತ್ನಿಸುತ್ತೇನೆ' ಎಂದಿದ್ದಾರೆ.

ವಿಶ್ವ ಯೂನಿವರ್ಸಿಟಿ ಗೇಮ್ಸ್: ಹರ್ಡಲ್ಸ್‌ನಲ್ಲಿ ಕಂಚು

ಜ್ಯೋತಿ ಯರ‍್ರಾಜಿ ದಾಖಲೆ

ಜ್ಯೋತಿ ಯರ‍್ರಾಜಿ

ಚೆಂಗ್ಡು (ಪಿಟಿಐ): ಭಾರತದ ಭರವಸೆಯ ಅಥ್ಲೀಟ್ ಜ್ಯೋತಿ ಯರ‍್ರಾಜಿ ಇಲ್ಲಿ ನಡೆಯುತ್ತಿರುವ ವಿಶ್ವ ಯೂನಿವರ್ಸಿಟಿ ಗೇಮ್ಸ್‌ನ ಮಹಿಳೆಯರ 100 ಮೀ. ಹರ್ಡಲ್ಸ್‌ನಲ್ಲಿ ಕಂಚು ಗೆದ್ದುಕೊಂಡರು. ಈ ಹಾದಿಯಲ್ಲಿ ಅವರು ತಮ್ಮದೇ ಹೆಸರಿನಲ್ಲಿದ್ದ ರಾಷ್ಟ್ರೀಯ ದಾಖಲೆ ಉತ್ತಮಪಡಿಸಿಕೊಂಡರು.

23 ವರ್ಷದ ಜ್ಯೋತಿ, ಶುಕ್ರವಾರ ನಡೆದ ಸ್ಪರ್ಧೆಯಲ್ಲಿ 12.78 ಸೆ.ಗಳೊಂದಿಗೆ ಮೂರನೇ ಸ್ಥಾನ ಪಡೆದರು. ಕಳೆದ ವರ್ಷ ಅಕ್ಟೋಬರ್‌ನಲ್ಲಿ ತಾವು ಸ್ಥಾಪಿಸಿದ್ದ ದಾಖಲೆಯನ್ನು (12.82 ಸೆ.) ಅವರು ಮೀರಿ ನಿಂತರು.

12.72 ಸೆ.ಗಳಲ್ಲಿ ಗುರಿ ತಲುಪಿದ ಸ್ಲೊವೇಕಿಯದ ವಿಕ್ಟೋರಿಯಾ ಫಾಸ್ಟರ್ ಚಿನ್ನ ಗೆದ್ದರೆ, ಚೀನಾದ ಯಾನಿ ವು (12.76 ಸೆ.) ಬೆಳ್ಳಿಯ ಪದಕ ತಮ್ಮದಾಗಿಸಿಕೊಂಡರು.

ಅಮ್ಲಾನ್ ಬೊರ್ಗೊಹೈನ್ ಅವರು ಪುರುಷರ 200 ಮೀ. ಓಟದಲ್ಲಿ ಕಂಚು ಗೆದ್ದರು. ಋತುವಿನ ಶ್ರೇಷ್ಠ ಸಮಯ ಕಂಡುಕೊಂಡ ಅವರು 20.55 ಸೆ.ಗಳಲ್ಲಿ ಗುರಿ ತಲುಪಿದರು. ಆದರೆ ತಮ್ಮದೇ ಹೆಸರಿನಲ್ಲಿರುವ ರಾಷ್ಟ್ರೀಯ ದಾಖಲೆ (20.52 ಸೆ.) ಉತ್ತಮಪಡಿಸಿಕೊಳ್ಳುವ ಅವಕಾಶವನ್ನು ಅಲ್ಪದರಲ್ಲೇ ಕಳೆದುಕೊಂಡರು.

ದಕ್ಷಿಣ ಆಫ್ರಿಕಾದ ತ್ಸೆಬೊ ಇಸಾದೊರ್ ಮತ್ಸೊಸೊ (20.36 ಸೆ.) ಮತ್ತು ಜಪಾನ್‌ನ ಯುದಾಯ್ ನಿಶಿ (20.46 ಸೆ.) ಅವರು ಕ್ರಮವಾಗಿ ಚಿನ್ನ ಹಾಗೂ ಬೆಳ್ಳಿ ಜಯಿಸಿದರು.

ಶುಕ್ರವಾರ ಗೆದ್ದ ಎರಡು ಪದಕಗಳು ಸೇರಿದಂತೆ ಈ ಕೂಟದಲ್ಲಿ ಭಾರತವು 11 ಚಿನ್ನ, 5 ಬೆಳ್ಳಿ ಮತ್ತು 9 ಕಂಚಿನ ಪದಕಗಳೊಂದಿಗೆ ನಾಲ್ಕನೇ ಸ್ಥಾನದಲ್ಲಿದೆ. ಚೀನಾ, ಕೊರಿಯಾ ಮತ್ತು ಜಪಾನ್ ತಂಡಗಳು ಪದಕ ಪಟ್ಟಿಯಲ್ಲಿ ಕ್ರಮವಾಗಿ ಮೊದಲ ಮೂರು ಸ್ಥಾನಗಳಲ್ಲಿವೆ.

ಮೊದಲ ಪದಕ: ವಿಶ್ವ ಯೂನಿವರ್ಸಿಟಿ ಗೇಮ್ಸ್‌ನ ಹರ್ಡಲ್ಸ್‌ನಲ್ಲಿ ಭಾರತಕ್ಕೆ ಪದಕ ಗೆದ್ದುಕೊಟ್ಟ ಮೊದಲ ಅಥ್ಲೀಟ್ ಎಂಬ ಗೌರವಕ್ಕೆ ಜ್ಯೋತಿ ಪಾತ್ರರಾದರು.

ಯೂನಿವರ್ಸಿಟಿ ಗೇಮ್ಸ್‌ನ ಅಥ್ಲೆಟಿಕ್ಸ್‌ನಲ್ಲಿ ಭಾರತಕ್ಕೆ ಮೊದಲ ಪದಕವನ್ನು ಇಂದ್ರಜೀತ್ ಸಿಂಗ್ ತಂದುಕೊಟ್ಟಿದ್ದರು. 2013 ರಲ್ಲಿ ರಷ್ಯಾದ ಕಜಾನ್‌ನಲ್ಲಿ ನಡೆದಿದ್ದ ಕೂಟದ ಶಾಟ್‌ಪಟ್ ಸ್ಪರ್ಧೆಯಲ್ಲಿ ಅವರು ಬೆಳ್ಳಿ ಜಯಿಸಿದ್ದರು.

ಫೈಟ್ ಫಾರ್ ಟ್ರೋಫಿ ಇದೇ 7ರಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಸ್ವಾಭಿಮಾನಿ ಸ್ನಾತಕೋತ್ತರ ಮತ್ತು ಸಂಶೋಧನಾ ವಿದ್ಯಾರ್ಥಿಗಳ ವೇದಿಕೆಯಿಂದ ಆಗಸ್ಟ್ 7ರಿಂದ 10ರವರೆಗೆ 'ಫೈಟ್ ಫಾರ್ ಟ್ರೋಫಿ' ಅಂತರ ಕಾಲೇಜು ಕ್ರಿಕೆಟ್ ಟೂರ್ನಾಮೆಂಟ್ ಆಯೋಜಿಸಲಾಗಿದೆ.

'ಜ್ಞಾನಭಾರತಿ ಆವರಣದಲ್ಲಿರುವ ಯುಸಿಪಿಇ ಮೈದಾನದಲ್ಲಿ ಈ ಕ್ರಿಕೆಟ್ ಪಂದ್ಯಾವಳಿಗಳು ನಡೆಯಲಿವೆ. ಇದರಲ್ಲಿ ಬೆಂಗಳೂರು ವಿವಿಯ ಪದವಿ, ಸ್ನಾತಕೋತ್ತರ ಪದವಿ ಹಾಗೂ ಇತರೆ ವಿ.ವಿಯ ವಿದ್ಯಾರ್ಥಿಗಳು ಪಾಲ್ಗೊಳ್ಳಬಹುದು. ಪ್ರಥಮ ಬಹುಮಾನ ₹ 20 ಸಾವಿರ ಮತ್ತು ಟ್ರೋಫಿ, ದ್ವಿತೀಯ ಬಹುಮಾನ ₹ 10 ಸಾವಿರ ಮತ್ತು ಟ್ರೋಫಿ, ತೃತೀಯ ಬಹುಮಾನ ₹ 5 ಸಾವಿರ ಹಾಗೂ ಟ್ರೋಫಿ ಒಳಗೊಂಡಿದೆ' ಎಂದು ವಿದ್ಯಾರ್ಥಿ ಮುಖಂಡ ಶ್ರೀಧರ್ ಎಸ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಿಕ್ಷಣ ಕ್ಷೇತ್ರದಲ್ಲಿ ಸಿಎಸ್‌ಆರ್ ನಿಧಿ ಹೆಚ್ಚು ವಿನಿಯೋಗಿಸಲು ಮುಖ್ಯಮಂತ್ರಿ ಸಲಹೆ

'ಕೌಶಲ ತರಬೇತಿಗೆ ಆದ್ಯತೆ ನೀಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ (ಸಿಎಸ್‌ಆರ್) ನಿಧಿಯನ್ನು ಶಿಕ್ಷಣ ಹಾಗೂ ಕೌಶಲ ತರಬೇತಿ ಕ್ಷೇತ್ರದಲ್ಲಿ ಹೆಚ್ಚು ವಿನಿಯೋಗಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸಲಹೆ ನೀಡಿದರು.

ಶಿಕ್ಷಣ ಕ್ಷೇತ್ರದಲ್ಲಿ ಸಿಎಸ್‌ಆರ್ ಸಂಪನ್ಮೂಲ ಕ್ರೋಡೀಕರಣಕ್ಕಾಗಿ ಕಾರ್ಪೊರೇಟ್ ಕಂಪನಿಗಳ ಮುಖ್ಯಸ್ಥರೊಂದಿಗೆ ಶುಕ್ರವಾರ ನಡೆದ ಸಂವಾದದಲ್ಲಿ ಅವರು ಮಾತನಾಡಿದರು.

ಉದ್ಯಮದ ಕ್ಷೇತ್ರಕ್ಕೆ ಅಗತ್ಯವಾಗಿರುವ ಕೌಶಲ ತರಬೇತಿ ನೀಡಲು ಸರ್ಕಾರ ಬದ್ಧವಾಗಿದ್ದು, ಈ ಕ್ಷೇತ್ರಕ್ಕೆ ಕಾರ್ಪೊರೇಟ್‌ಗಳು ಹೆಚ್ಚಿನ ಒಲವು ನೀಡಿದರೆ ಅವರಿಗೆ ಅಗತ್ಯವಾದ ನೀತಿಗಳನ್ನು ರೂಪಿಸಲಾಗುತ್ತದೆ ಎಂದರು.

'ಕೌಶಲಯುತ ಯುವ ಸಮೂಹ ತಯಾರಾದರೆ ಕಂಪನಿಗಳಿಗೆ ಹೆಚ್ಚು ಅನುಕೂಲ. ಅವರಿಗೆ ಅಗತ್ಯವಾದವರು ರಾಜ್ಯದಲ್ಲಿಯೇ ಸಿಗುವುದರಿಂದ ಬೇರೆಡೆ ಹುಡುಕುವಂತಿಲ್ಲ. ಇದರಿಂದ ನಮ್ಮ ರಾಜ್ಯದವರಿಗೆ ಹೆಚ್ಚು ಉದ್ಯೋಗ ಸಿಗುವಂತಾಗುತ್ತದೆ' ಎಂದು ಹೇಳಿದರು.

'ರಾಜ್ಯದಲ್ಲಿ ಶೇ 24 ರಷ್ಟು ಅನಕ್ಷರಸ್ಥರಿದ್ದು, ಮುಂದಿನ ದಿನಗಳಲ್ಲಿ ಎಲ್ಲರನ್ನೂ ಅಕ್ಷರಸ್ಥರನ್ನಾಗಿಸಬೇಕು. ನಗರದಲ್ಲಿ ಮಾತ್ರವಲ್ಲ ಗ್ರಾಮೀಣ ಭಾಗದಲ್ಲೂ ಗುಣಮಟ್ಟದ ಶಿಕ್ಷಣ ನೀಡಲು ಕ್ರಮಕೈಗೊಳ್ಳಲಾಗುತ್ತದೆ. ಹೀಗಾಗಿ, ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡುವ ಮೂಲಕ ನೀವು ಸಮಾಜದ ಮತ್ತು ಉದ್ಯಮ ಕ್ಷೇತ್ರದ ಆರೋಗ್ಯಕರ ಪ್ರಗತಿಗೆ ಮುಂದಾಗಬೇಕು' ಎಂದು ಕರೆ ನೀಡಿದರು.

2 ಸಾವಿರ ಪಬ್ಲಿಕ್ ಶಾಲೆ: ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿ, 'ಗ್ರಾಮೀಣ ಮಕ್ಕಳು ಜಾಗತಿಕ ಮಟ್ಟದಲ್ಲಿ ಸ್ಪರ್ಧಿಸುವಂತೆ ಮಾಡಲು ಪ್ರತ್ಯೇಕ ಕಾರ್ಯಕ್ರಮ ಜಾರಿಗೆ ಆಲೋಚಿಸಿದ್ದೇವೆ. ಪ್ರತಿ ಎರಡು ಪಂಚಾಯಿತಿಗಳಿಗೆ ಒಂದು ಪಬ್ಲಿಕ್ ಶಾಲೆ ಆರಂಭಿಸಬೇಕು. ಅದಕ್ಕೆ ಬೇಕಾಗಿರುವ ಜಾಗವನ್ನು ಸರ್ಕಾರ ನೀಡುತ್ತದೆ. ನೀವು ಅಲ್ಲಿ ಶಾಲಾ ಕಟ್ಟಡ ನಿರ್ಮಾಣ ಮಾಡಿ. ಪ್ರಮುಖ ಶಿಕ್ಷಣ ಸಂಸ್ಥೆಗಳು ಸರ್ಕಾರದ ಸಹಯೋಗದಲ್ಲಿ ಈ ಶಾಲೆಗಳ ಜವಾಬ್ದಾರಿ ವಹಿಸಿಕೊಳ್ಳುವಂತೆ ನಾವು ಮಾಡುತ್ತೇವೆ' ಎಂದರು.

'ವಿಪ್ರೊ, ಇನ್ಫೊಸಿಸ್‌ನಂತಹ ಪ್ರಮುಖ ಸಂಸ್ಥೆಗಳ ಜತೆ ಮಾತನಾಡಿದ್ದು, ಅವರು ಸಾವಿರ ಕೋಟಿಗೂ ಹೆಚ್ಚು ಹಣವನ್ನು ವೆಚ್ಚ ಮಾಡಲು ಸಿದ್ಧರಿದ್ದಾರೆ. ಮುಂದಿನ ಮೂರು ವರ್ಷಗಳಲ್ಲಿ ರಾಜ್ಯದ 2 ಸಾವಿರ ಗ್ರಾಮ ಪಂಚಾಯ್ತಿಗಳಲ್ಲಿ ಈ ಪಬ್ಲಿಕ್ ಶಾಲೆಗಳು ನಿರ್ಮಾಣವಾಗಲಿವೆ. ಈ ವಿಚಾರದಲ್ಲಿ ಕಾರ್ಪೊರೇಟ್ ಸಂಸ್ಥೆಗಳ ಜವಾಬ್ದಾರಿ ಅತ್ಯಂತ ಮಹತ್ವದ್ದು' ಎಂದು ಹೇಳಿದರು.

ಸಚಿವರಾದ ಎಂ.ಬಿ.ಪಾಟೀಲ, ಮಧು ಬಂಗಾರಪ್ಪ, ಡಾ.ಎಂ.ಸಿ. ಸುಧಾಕರ್, ಜಿ.ಪರಮೇಶ್ವರ, ಶರಣಪ್ರಕಾಶ್ ಪಾಟೀಲ್, ಡಿ.ಸುಧಾಕರ್ ಇದ್ದರು.

₹2,000 ಕೋಟಿ ನಿರೀಕ್ಷೆ

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಅಂಕಿ–ಅಂಶದ ಪ್ರಕಾರ, 2023ರ ಅವಧಿಯಲ್ಲಿ ₹2 ಸಾವಿರ ಕೋಟಿ ಸಿಎಸ್‌ಆರ್ ನಿಧಿ ನಿರೀಕ್ಷಿಸಲಾಗಿದೆ. 2017ರಿಂದ 2022ರ ಅವಧಿಯಲ್ಲಿ ₹7,466 ಕೋಟಿ ಸಿಎಸ್‌ಆರ್ ನಿಧಿ ಸಂಗ್ರಹವಾಗಿದೆ. ಇದರಲ್ಲಿ ₹3,667 ಕೋಟಿಯನ್ನು ಶಿಕ್ಷಣ ಕ್ಷೇತ್ರಕ್ಕೆ ವ್ಯಯ ಮಾಡಲಾಗಿದೆ. ಉಳಿದ ಹಣ, ಪರಿಸರ, ಆರೋಗ್ಯ ಕ್ಷೇತ್ರದಲ್ಲಿ ವಿನಿಯೋಗವಾಗಿದೆ.

ಸುದ್ದಿ 2 ನಿಮಿಷ

ಕೆಪಿಸಿಸಿ ಹುದ್ದೆಯ ಆಕಾಂಕ್ಷಿ ನಾನಲ್ಲ: ಹರಿಪ್ರಸಾದ್

ಬೆಂಗಳೂರು: 'ನಾನು ಎಐಸಿಸಿ ಪ್ರಧಾನ ಕಾರ್ಯದರ್ಶಿಯಾಗಿ ಕೆಲಸ ಮಾಡಿದವನು. ಕೆಪಿಸಿಸಿ ಪದಾಧಿಕಾರಿಯ ಯಾವುದೇ ಹುದ್ದೆಯ ಆಕಾಂಕ್ಷಿಯಲ್ಲ' ಎಂದು ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಹೇಳಿದರು.

ಶುಕ್ರವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಎಐಸಿಸಿಯಲ್ಲಿ ದೀರ್ಘ ಕಾಲ ಕೆಲಸ ವಿವಿಧ ಹುದ್ದೆಗಳ ಜವಾಬ್ದಾರಿ ನಿರ್ವಹಿಸಿದವನು ನಾನು. ಈಗ ನನಗೆ ಕೆಪಿಸಿಸಿ ಉಪಾಧ್ಯಕ್ಷ, ಕಾರ್ಯಾಧ್ಯಕ್ಷ ಸ್ಥಾನ ಬೇಡ. ಕೆಪಿಸಿಸಿ ಅಧ್ಯಕ್ಷರಾಗಿ ಡಿ.ಕೆ. ಶಿವಕುಮಾರ್ ಇದ್ದಾರೆ. ಲೋಕಸಭಾ ಚುನಾವಣೆಯವರೆಗೂ ಅವರೇ ಅಧ್ಯಕ್ಷರಾಗಿ ಇರುತ್ತಾರೆ' ಎಂದರು.

'ಸಚಿವ ಸ್ಥಾನ ನೀಡಿಲ್ಲ ಎಂಬ ಕಾರಣಕ್ಕಾಗಿ ನನಗೆ ಅಸಮಾಧಾನ ಇಲ್ಲ. ನಾನು ಯಾವತ್ತೂ ಸಚಿವ ಸ್ಥಾನ ಕೇಳಿಲ್ಲ. ನನಗೆ ಅಸಮಾಧಾನ ಇರುವುದು ವ್ಯವಸ್ಥೆಯ ವಿರುದ್ಧ. ವಿಧಾನ ಪರಿಷತ್ ಅನ್ನು ನಾಲ್ವಡಿ ಕೃಷ್ಣರಾಜ ಒಡೆಯರ್ ಸ್ಥಾಪಿಸಿದ್ದು. ಆ ಸದನಕ್ಕೆ ದೊಡ್ಡ ಚರಿತ್ರೆ ಇದೆ. ಅದು ಹಾಳಾಗಬಾರದು ಎಂಬುದು ನನ್ನ ನಿಲುವು' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ನೇತೃತ್ವದಲ್ಲಿ ದೆಹಲಿಯಲ್ಲಿ ನಡೆದ ಸಭೆಯಲ್ಲಿ ಲೋಕಸಭಾ ಚುನಾವಣಾ ತಯಾರಿ ಕುರಿತು ಚರ್ಚಿಸಲಾಗಿದೆ. ಅನೇಕ ಕಾರ್ಯತಂತ್ರಗಳ ಬಗ್ಗೆ ವಿಚಾರ ವಿನಿಮಯ ನಡೆದಿದೆ. ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಮಣಿಸುವುದೇ ಕಾಂಗ್ರೆಸ್‌ನ ಎಲ್ಲರ ಗುರಿ ಎಂದರು.

'ಎಕ್ಸ್‌ಪ್ರೆಸ್ ವೇ ಅಪಘಾತ ಇಳಿಕೆ'

ರಾಮನಗರ: ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ಹೆದ್ದಾರಿಯಲ್ಲಿ ಪೊಲೀಸ್ ಇಲಾಖೆ ಕೈಗೊಂಡ ಕ್ರಮಗಳಿಂದಾಗಿ ಅಪಘಾತಗಳ ಸಂಖ್ಯೆ ಹಂತ–ಹಂತವಾಗಿ ಇಳಿಮುಖವಾಗುತ್ತಿದೆ ಎಂದು ಸಂಚಾರ ಮತ್ತು ರಸ್ತೆ ಸುರಕ್ಷತಾ ವಿಭಾಗದ ಎಡಿಜಿಪಿ ಅಲೋಕ್ ಕುಮಾರ್ ಟ್ವೀಟ್ ಮಾಡಿದ್ದಾರೆ.

ಜುಲೈ ತಿಂಗಳಲ್ಲಿ ಎಕ್ಸ್‌ಪ್ರೆಸ್ ವೇನಲ್ಲಿ ಸಂಭವಿಸಿದ ಅಪಘಾತಗಳಲ್ಲಿ 8 ಮಂದಿ ಮೃತಪಟ್ಟಿದ್ದಾರೆ. ಮೇ ತಿಂಗಳಲ್ಲಿ 29 ಮತ್ತು ಜೂನ್‌ನಲ್ಲಿ 28 ಮಂದಿ ಅಪಘಾತದಲ್ಲಿ ಮೃತಪಟ್ಟಿದ್ದರು. ಈ ಸಂಖ್ಯೆಯನ್ನು ಮತ್ತಷ್ಟು ತಗ್ಗಿಸುವ ನಿಟ್ಟಿನಲ್ಲಿ ಸಿಬ್ಬಂದಿ ಕೆಲಸ ಮಾಡುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಎಕ್ಸ್‌ಪ್ರೆಸ್ ವೇನಲ್ಲಿ ಅಪಘಾತಗಳ ಸಂಖ್ಯೆ ಹೆಚ್ಚಳವಾದ ಒಂದು ತಿಂಗಳ ಅಂತರದಲ್ಲಿ ಎಡಿಜಿಪಿ ಎರಡು ಸಲ ಹೆದ್ದಾರಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದರು. ಸಂಚಾರ ನಿಯಮ ಉಲ್ಲಂಘನೆ ವಿರುದ್ಧ ಕಾರ್ಯಾಚರಣೆ ನಡೆಸುವಂತೆ ಸೂಚನೆ ನೀಡಿದ್ದರು. ಇದರ ಬೆನ್ನಲ್ಲೇ, ಅಪಘಾತಗಳ ಸಂಖ್ಯೆ, ಸಾವು ಹಾಗೂ ಗಾಯಾಳುಗಳ ಸಂಖ್ಯೆ ಸ್ವಲ್ಪಮಟ್ಟಿಗೆ ತಗ್ಗಿದೆ.

ಎಫ್‌ಐಆರ್ ದಾಖಲಿಸದ ಪೊಲೀಸರು: ಹೈಕೋರ್ಟ್ ಕಿಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗಂಭೀರ ಸ್ವರೂಪದ ಅಪರಾಧ ಪ್ರಕರಣಗಳ ಮಾಹಿತಿ ನೀಡಿದಾಗ ತಕ್ಷಣವೇ ಎಫ್‌ಐಆರ್ ದಾಖಲು ಮಾಡಬೇಕು' ಎಂದು ನಿರ್ದೇಶಿಸಿರುವ ಹೈಕೋರ್ಟ್, ಈ ಸಂಬಂಧ ಸುಪ್ರೀಂಕೋರ್ಟ್ ನೀಡಿರುವ ಲಲಿತಾಕುಮಾರಿ ಪ್ರಕರಣದ ಸಾರಾಂಶವನ್ನು ಎಲ್ಲ ಪೊಲೀಸ್ ಠಾಣೆಗಳಿಗೆ ಕನ್ನಡ ಮತ್ತು ಇಂಗ್ಲಿಷ್ ಭಾಷೆಯಲ್ಲಿ ಒದಗಿಸುವಂತೆ ಪೊಲೀಸ್ ಮಹಾನಿರ್ದೇಶಕರಿಗೆ ನಿರ್ದೇಶಿಸಿದೆ.

ದೂರು ಸಲ್ಲಿಸಿದ್ದರೂ ಎಫ್‌ಐಆರ್ ದಾಖಲಿಸದ ಬಬಲೇಶ್ವರ ಪೊಲೀಸ್ ಠಾಣಾಧಿಕಾರಿಯ ಕ್ರಮವನ್ನು ಪ್ರಶ್ನಿಸಿ ವಿಜಯಪುರ ಜಿಲ್ಲೆಯ ಕಿಲಾರಹಟ್ಟಿಯ ವಿಠ್ಠಲ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ನಿರ್ದೇಶನ ನೀಡಿದೆ.

